ಜನಪ್ರಿಯ
ಪುಸ್ತಕ ಮಾಲೆ

ಮಹಿಳೆಯರ
ಅಲಂಕಾರ

ಶಾಂತಾದೇವಿ ಮಾಳವಾಡ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ.
ಬೆಂಗಳೂರು

ಜನಪ್ರಿಯ ಪುಸ್ತಕ ಮಾಲೆ

ಮಹಿಳೆಯರ ಅಲಂಕಾರ

ಶಾಂತಾದೇವಿ ಮಾಳವಾಡ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,

ಬೆಂಗಳೂರು - 560018

MAHILEYARA ALANKARA - Abook on costumes by Shanthadevi Malavada, published by Kannada Pustaka Pradhikara (Kannada Book Authority), Pampa Mahakavi Road, Chamrajpet, Bangalore - 560 018, Pages 134 + x

ಚಿತ್ರಗಳು	೩೨
ದ್ವಿತೀಯ ಮುದ್ರಣ :	ಫೆಬ್ರವರಿ ೧೯೯೬
ಪ್ರತಿಗಳು	೨೦೦೦
ಹಕ್ಕುಗಳು	ಕನ್ನಡ ಪುಸ್ತಕ ಪ್ರಾಧಿಕಾರ
ಬೆಲೆ	ಇಪ್ಪತ್ತೈದು ರೂಪಾಯಿಗಳು

ಮುದ್ರಣ :
ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್
ಬೆಂಗಳೂರು - 78. ಫೋ : 6642102

1922 ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ಜನಿಸಿದ ಶ್ರೀಮತಿ ಶಾಂತಾದೇವಿ ಮಾಳವಾಡ ಅವರು ಕನ್ನಡ ವಿದ್ವತ್ ಕ್ಷೇತ್ರದಲ್ಲಿ ಹೆಸರಾಗಿದ್ದ ಡಾ|| ಸಾ. ಸಾ. ಮಾಳವಾಡ ಅವರ ಧರ್ಮಪತ್ನಿ. ಗ್ರಾಮೀಣ ಜೀವನದಲ್ಲಿ ಮೂಡಿ ಬಂದ ಶಾಂತಾದೇವಿಯವರು ಸ್ವಂತ ಪರಿಶ್ರಮದಿಂದ ಸಾಹಿತ್ಯ ಕ್ಷೇತ್ರದಲ್ಲಿ ಎತ್ತರಕ್ಕೆ ಏರಿದ ವ್ಯಕ್ತಿ.

ಸಂಗೀತ ಹಾಗೂ ಸಾಹಿತ್ಯ ಇವೆರಡರಲ್ಲೂ ಹೆಚ್ಚು ಅಭಿರುಚಿಯುಳ್ಳ ಅವರು ಧಾರ್ಮಿಕ ಕ್ಷೇತ್ರದಲ್ಲೂ ಆಸಕ್ತಿಯನ್ನು ಹೊಂದಿದ್ದಾರೆ. ಇವರು ೩೩ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ನಾಡು-ನುಡಿಯ ಬಗೆಗಿನ ಅಭಿಮಾನ, ರಾಷ್ಟ್ರೀಯ ಪ್ರಜ್ಞೆ, ಭಾವೈಕ್ಯತೆ, ಸ್ವಾತಂತ್ರ್ಯ-ಸಮಾನತೆಗಳ ಸ್ವರೂಪ ಹಾಗೂ ವಸ್ತು ಸ್ಥಿತಿ, ಮಹಿಳೆ ನಡೆದು ಬಂದ ದಾರಿ ಇವು ಅವರ ಬರವಣಿಗೆಯಲ್ಲಿ ಅಡಕವಾಗಿವೆ. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಅತ್ಯುನ್ನತ ಪ್ರಶಸ್ತಿಯಾದ ಗೌರವ ಸದಸ್ಯತ್ವವನ್ನು ಪಡೆದುಕೊಂಡಿದ್ದಾರೆ

ಆಧಾರ ಗ್ರಂಥಗಳು

1. Indian Costume by *G. S. GHURYE,* Ph. D. (cantab)

2. The Chalukyan Architecture by
   HENRY COUSENS, M.R.A.S

3. ಅಜಂತಾ: (ಮರಾಠಿ ಗ್ರಂಥ)

   ಲೇಖಕರು: ಬಾಳಾ ಸಾಹೇಬ ಪಂತಪ್ರತಿನಿಧಿ ಬಿ. ಎ.,
   ಔಂಧದ ಅಧಿಪತಿ

4. ಪ್ರಾಚೀನ ಕನ್ನಡ ಕಾವ್ಯಗಳು

5. ಜಾನಪದ ಹಾಡುಗಳು

ಮುನ್ನುಡಿ

ಜ್ಞಾನಾರ್ಜನೆಗೆ ಅಕ್ಷರ ಮಾಧ್ಯಮವೇ ಪ್ರಮುಖ ಸಾಧನ. ಆಧುನಿಕ ಕಾಲದಲ್ಲಿ ತಿಳುವಳಿಕೆಯನ್ನು ನೀಡಲು ಅನೇಕ ಮಾಧ್ಯಮಗಳು ಸಿದ್ಧವಾಗಿದ್ದರೂ ಸಾಹಿತ್ಯ ಕೃತಿಗಳಿಗೆ ಮಾತ್ರ ಅಪೂರ್ವವಾದ ಅನನ್ಯತೆ ಇದೆ. ಸಾಹಿತ್ಯ, ಸಂಗೀತ, ಕಲೆ ಮುಂತಾದ ಸಾಂಸ್ಕೃತಿಕ ಅನುಭವ ಜ್ಞಾನದಿಂದ ಮಾನವನ ಹೃದಯದಲ್ಲಿ ಆತ್ಮಸೌಂದರ್ಯ ವೃದ್ಧಿಸುತ್ತದೆ. ಭವ್ಯವಾದ ಪರಂಪರೆಯನ್ನು ನಿರಂತರವಾಗಿ ಮುಂದುವರಿಸಲು ಭಾಷೆಯ ಮೂಲಕ ಅನುವಾಗುವ ಗ್ರಂಥಗಳು ಸಂಸ್ಕೃತಿಯ ಜೀವನಾಡಿಯಾಗಿ ಜೀವಂತವಾಗಿ ಸಾಗಬೇಕಾಗುತ್ತದೆ. ಈ ಸಾಗುವಿಕೆಯಲ್ಲಿ ಮಾನವರು ತಂತಮ್ಮ ನಡುವಿನ ತಿಳುವಳಿಕೆಯನ್ನು ಪರಸ್ಪರ ಅರಿಯುತ್ತ ವಿಸ್ತರಿಸುತ್ತ ಸಾಮರಸ್ಯಕ್ಕೆ ದಾರಿ ಮಾಡಿಕೊಡಬೇಕಾಗುತ್ತದೆ. ಇಂತಹ ಸ್ವರೂಪದ ಜ್ಞಾನಶಕ್ತಿಯನ್ನು ಒಳಗೊಂಡ ಸಾಹಿತ್ಯವನ್ನು ವಾಚಕರಿಗೆ ತಲುಪಿಸುವ ಜವಾಬ್ದಾರಿಯನ್ನು 'ಕನ್ನಡ ಪುಸ್ತಕ ಪ್ರಾಧಿಕಾರ' ಹೊತ್ತಿದೆ.

ಕರ್ನಾಟಕ ಸರ್ಕಾರ ಬಹುದಿನಗಳಿಂದ ಇಂತಹ ಮೌಲಿಕವಾದ ಗ್ರಂಥಗಳ ಪ್ರಕಟಣೆಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಶ್ರೀ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಸಾಹಿತ್ಯ ಸಂಸ್ಕೃತಿಯ ಪ್ರಸರಣ ಕಾರ್ಯಕ್ಕೆ ಒತ್ತಾಸೆಯಾಗಿದ್ದರು. ಕುವೆಂಪು ಮತ್ತು ಮಾಸ್ತಿ ಅವರು ಸೇರಿ ಸಂಪಾದಿಸಿಕೊಟ್ಟ ಮತ್ತು ಅತ್ಯಂತ ಕಡಿಮೆ ಬೆಲೆಯಲ್ಲಿ ಈ ಇಲಾಖೆಯಿಂದ ಪ್ರಕಟವಾದ 'ಕುಮಾರವ್ಯಾಸ ಭಾರತ' ಗ್ರಂಥ ಇಂದಿಗೂ ವಿದ್ವಾಂಸರ ಜನಸಾಮಾನ್ಯರ ಮೆಚ್ಚುಗೆಗೆ ಪಾತ್ರವಾಗಿದೆ. ಅನಂತರ 'ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ' ಕಾಲಕ್ಕೆ ಕರ್ನಾಟಕ ಸರ್ಕಾರವು ಇದೇ ಇಲಾಖೆಯ ಮೂಲಕ ಕನ್ನಡದ ಮೌಲಿಕವಾದ ಹಾಗೂ ಹಲವಾರು ವರ್ಷಗಳಿಂದ ಬೇಡಿಕೆಯಲ್ಲಿದ್ದೂ ಪುನರ್ ಮುದ್ರಣವಾಗದಿದ್ದ ನೂರಕ್ಕೂ ಹೆಚ್ಚಿನ ಗ್ರಂಥಗಳನ್ನು 'ಜನಪ್ರಿಯ ಪುಸ್ತಕ ಮಾಲೆ'ಯ ಮೂಲಕ ಪ್ರಕಟಿಸಿ ಓದುಗರ ಮೆಚ್ಚುಗೆ ಗಳಿಸಿತು.

ಕರ್ನಾಟಕ ಸರ್ಕಾರ ಇದುವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಪ್ರಕಟಿಸುತ್ತಿದ್ದ ಇಂತಹ ಅಪರೂಪದ ಕೃತಿಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಲಿದೆ. ಅಲಭ್ಯವಾದ ಕನ್ನಡದ ಗ್ರಂಥಗಳನ್ನು ಜನಸಾಮಾನ್ಯರಿಗೆ

ಎಟುಕುವ ಬೆಲೆಯಲ್ಲಿ ಮತ್ತೆ ಪ್ರಕಟಿಸಿ ತಲುಪಿಸುವುದೇ ಈ ಜನಪ್ರಿಯ ಪುಸ್ತಕ ಮಾಲೆಯ ಮುಖ್ಯ ಗುರಿ. ಹಿಂದಿನ ಪೀಳಿಗೆಗಳ ಅನೇಕ ಉತ್ತಮ ಕೃತಿಗಳು ಇಂದಿನ ಪೀಳಿಗೆಯ ಓದುಗರಿಗೆ ಲಭ್ಯಗೊಳಿಸುವುದೇ ಈ ಯೋಜನೆಯ ಆಶಯವಾಗಿದೆ. ಅಲಭ್ಯವಾಗಿರುವ ಇತ್ತೀಚಿನ ಉತ್ತಮ ಕೃತಿಗಳನ್ನೂ ಈ ಮಾಲೆಯಲ್ಲಿ ಪ್ರಕಟಿಸಲು ಉದ್ದೇಶಿಸಿದೆ.

ಈ ಮಾಲೆಯಲ್ಲಿನ ಪುಸ್ತಕಗಳನ್ನು ಪ್ರಕಟಿಸಲು ನೆರವಾದ ಜನಪ್ರಿಯ ಪುಸ್ತಕ ಮಾಲೆಯ ಉಪಸಮಿತಿಯ ಸದಸ್ಯರಿಗೆ, ಪುಸ್ತಕ ಪ್ರಾಧಿಕಾರದ ಸದಸ್ಯರಿಗೆ, ಮಹಿಳೆಯ ಅಲಂಕಾರ ಪುಸ್ತಕವನ್ನು ಪ್ರಕಟಿಸಲು ಅನುಮತಿ ನೀಡಿದ ಶಾಂತದೇವಿಮಾಳವಾಡ ಅವರಿಗೆ, ಅಂದವಾಗಿ ಮುದ್ರಿಸಿಕೊಟ್ಟ ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್ ಅವರಿಗೆ ಕೃತಜ್ಞತೆಗಳು.

ನೆಲಮನೆ ಕೆ. ದೇವೇಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ಅರಿಕೆ

ಕರ್ನಾಟಕದ ವಿವಿಧ ಸ್ಥಳಗಳಲ್ಲಿ ೮-೧೦ ವರುಷಗಳಿಂದ ನಾನು ಸಂಚರಿಸುತ್ತಿದ್ದಾಗ ಪುರಾತನ ದೇವಾಲಯಗಳನ್ನು ಅಲ್ಲಿಯ ಶಿಲ್ಪವನ್ನು ಕಂಡು ಮೆಚ್ಚಿಕೊಂಡೆ. ಪ್ರಾಚೀನ ಕರ್ನಾಟಕದ ಶಿಲ್ಪಕಲೆಯಲ್ಲಿ ಮೂಡಿಬಂದ ಮಹಿಳೆಯರ ಅಲಂಕಾರಗಳನ್ನು ನಾನು ಗಮನಿಸಿದಾಗ ಈ ಗ್ರಂಥದ ಹೊಳಹು ನನ್ನ ಮನಸ್ಸಿನಲ್ಲಿ ಮೂಡಿಬಂದಿತು. ಮಹಿಳೆಯರಿಗೆ ಅಚ್ಚುಮೆಚ್ಚಿನವಾಗಿರುವ ಕೇಶಾಲಂಕಾರ, ಸೀರೆ, ಆಭರಣಗಳ ಬಗೆಗೆ ವಿವರವಾದ ಅಭ್ಯಾಸ ಮಾಡಬೇಕೆಂಬ ಪ್ರವೃತ್ತಿ ನನ್ನಲ್ಲಿ ಬೆಳೆದು ಬಂದುದರ ಫಲವಾಗಿ ಈ ಗ್ರಂಥ ರೂಪುಗೊಂಡಿದೆ. ಈ ಪುಸ್ತಕವು ೧೯೫೫ರಲ್ಲಿಯೇ ಸಿದ್ಧವಾಗಿ ಅಚ್ಚಿನ ಮನೆಯನ್ನು ಕಂಡಿದ್ದರೂ ಕಾರಣಾಂತರಗಳಿಂದ ಅದು ಅಚ್ಚಿನ ಮನೆಯಲ್ಲಿಯೆ ಉಳಿಯಿತು. ತಡವಾಗಿಯಾದರೂ ಓದುಗರ ಕೈಗೆ ಈ ಪುಸ್ತಕವನ್ನು ಒಪ್ಪಿಸುವಲ್ಲಿ ನನಗೆ ಸಂತೋಷವೆನ್ನಿಸುತ್ತದೆ. ಆದರೆ ಇಷ್ಟೊಂದು ವಿಲಂಬದ ನಂತರವೂ ಉಳಿದಿರುವ ಅಚ್ಚಿನ ದೋಷಗಳ ಬಗೆಗೆ ಓದುಗರ ಔದಾರ್ಯವನ್ನು ಕೋರುತ್ತೇನೆ.

ಮಹಿಳೆಯರ ಅಲಂಕಾರಗಳ ಬಗೆಗೆ ಅಭ್ಯಾಸ ಕೈಕೊಳ್ಳಬೇಕೆಂಬ ನನ್ನ ಹವ್ಯಾಸಕ್ಕೆ ಪ್ರಾಚೀನ ಶಿಲ್ಪದ, ಪ್ರಾಚೀನ ಕಾವ್ಯಗಳ ಪರಿಶೀಲನೆ ಆವಶ್ಯಕವಾಗಿತ್ತು. ಅಂತಹ ಅನುಕೂಲತೆಯನ್ನು ನನ್ನ ಯಜಮಾನರು ಒದಗಿಸಿಕೊಟ್ಟರು. ಅನೇಕ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ದೊರೆಯುವ ಜಡೆ ಮುಡಿಗಳ ಆಭರಣ, ಸೀರೆಯ ವರ್ಣನೆಗಳನ್ನು ನಾನು ಕಂಡ ಶಿಲ್ಪದಲ್ಲಿಯೂ ಗುರುತಿಸಿಕೊಂಡೆ. ಕಾವ್ಯದ ವರ್ಣನೆ, ಶಿಲ್ಪದ ಮೂರ್ತಿಮಂತ ರೂಪ, ಇವೆರಡನ್ನು ಸಮನ್ವಯಿಸುವ ಪ್ರಯತ್ನವನ್ನು ನಾನು ಇಲ್ಲಿ ಮಾಡಿದ್ದೇನೆ. ಈ ಬಗೆಗೆ ಬಂದಿರುವ ಸಾಹಿತ್ಯದ ನೆರವನ್ನೂ ಪಡೆದುಕೊಂಡಿದ್ದೇನೆ. ಸುಮಾರು ಮೂವತ್ತು ವರುಷಗಳ ಹಿಂದೆ ಪರಿಚಿತವಿದ್ದ ಮಹಿಳೆಯರ ಆಭರಣ, ಸೀರೆಗಳ ಹೆಸರುಗಳು ಇಂದಿನ ಅನೇಕರಿಗೆ ಗೊತ್ತಿಲ್ಲ. ಸೀರೆಗಳಿಗೆ, ಕೇಶಾಲಂಕಾರಕ್ಕೆ, ಸಿನಿಮಾ ನಟಿಯರ ಹೆಸರನ್ನಿಡುವುದು ಇಂದು ರೂಢಿಯಲ್ಲಿ ಬಂದಿದೆ. ನಮ್ಮ ಪ್ರಾಚೀನ ಸಂಪ್ರದಾಯವನ್ನು ನಮ್ಮ ಮಹಿಳೆಯರು ಮರೆಯದೆ ಇರಲಿ ಎಂಬ ದೃಷ್ಟಿಯಿಂದ ನಾನು ಈ ಗ್ರಂಥ ರಚನೆಗೆ ತೊಡಗಬೇಕಾಯಿತು. ಪ್ರಾಗೈತಿಹಾಸಿಕ ಕಾಲದಿಂದ ಇಂದಿನವರೆಗಿನ ಮಹಿಳೆಯರ ಅಲಂಕಾರದ ಸಂಪ್ರದಾಯವನ್ನು ಸಂಕ್ಷಿಪ್ತವಾಗಿ ಇಲ್ಲಿ ನಿರೂಪಿಸಿದ್ದೇನೆ. ಈ ನಿರೂಪಣೆಯಲ್ಲಿ ಲೋಪದೋಷಗಳು ಉಳಿದಿರಬಹುದು. ಆದರೂ ಇಂತಹದೊಂದು ಪ್ರಕಟನೆಯು ಆವಶ್ಯಕವೆಂದು ತಿಳಿದು ಈ ಗ್ರಂಥವನ್ನು ಕನ್ನಡ ವಾಚಕರಿಗೆ ಒಪ್ಪಿಸುತ್ತಿದ್ದೇನೆ. ವೇಷ, ಭೂಷಣ, ಕೇಶರಚನೆ ನಾರಿಯರಿಗೆ ಮನ ಮೆಚ್ಚುವ ಸಂಗತಿಗಳಾಗಿವೆ. 'ನಾರಿಗೆ ಗುಣವೇ ಶೃಂಗಾರ' ಎಂಬ ಮಾತನ್ನು ಮರೆಯದೆ ಅಲಂಕಾರ ರಚನೆಯನ್ನು ಮಹಿಳೆಯರು ರೂಢಿಸಿಕೊಳ್ಳಲಿ ಎಂದು ಹಾರೈಸುತ್ತೇನೆ.

ಈ ಗ್ರಂಥದಲ್ಲಿ ಬಂದಿರುವ 'ಕೇಶಾಲಂಕಾರ' 'ಎಂಬ ವಿಭಾಗವನ್ನು ಪ್ರಜಾವಾಣಿಯ ಸಂಪಾದಕರು ಎರಡು ವರ್ಷಗಳ ಹಿಂದೆ ಪ್ರಕಟಿಸಿದ್ದರು. 'ಸೀರೆಯ ಸೊಬಗು' ಎಂಬ ಲೇಖನಮಾಲೆಯನ್ನು ಕರ್ಮವೀರ ವಾರಪತ್ರಿಕೆಯ ಸಂಪಾದಕರು ಪ್ರಕಟಿಸಿದರು. 'ಕೇಶಾಲಂಕಾರ', 'ಸೀರೆಯ ಸೊಬಗು' ಲೇಖನಮಾಲೆಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ

ಸಹಕಾರ ನೀಡಿದ ಸಂಪಾದಕರಿಬ್ಬರಿಗೂ ನನ್ನ ಕೃತಜ್ಞತೆಗಳು. ಪ್ರಜಾವಾಣಿಯ ಸಂಪಾದಕರು ಕೇಶಾಲಂಕಾರದ ಪಡಿಯಚ್ಚುಗಳನ್ನಿತ್ತು ಸಹಾಯ ಮಾಡಿದುದಕ್ಕಾಗಿ ವಂದನೆಗಳು.

ಕೇಶಾಲಂಕಾರಕ್ಕೆ ಬೇಕಾದ ರೇಖಾಚಿತ್ರಗಳನ್ನು ಸಿದ್ಧಗೊಳಿಸಿ ಕೊಟ್ಟ ಸರ್ವಶ್ರೀ ಎನ್. ಜಿ. ಮುತಗಿಕರ, ಆರ್. ಎಸ್. ದೇಸಾಯಿ, ಕೆ. ಉಪಾಧ್ಯೆ ಅವರಿಗೆ ಕೃತಜ್ಞತೆಗಳು. ಶ್ರೀಮಾನ್ ಉಪಾಧ್ಯೆ ಅವರು ಆಭರಣಗಳ ಛಾಯಾ ಚಿತ್ರಗಳನ್ನೂ ಪ್ರಾಚೀನ ದೇವಾಲಯಗಳ ಶಿಲಾಬಾಲಿಕೆಯರ ಛಾಯಾ ಚಿತ್ರಗಳನ್ನೂ ತೆಗೆದುಕೊಟ್ಟು ನೆರವನ್ನಿತ್ತಿದ್ದಾರೆ. ಧಾರವಾಡದ ಸುಪ್ರಸಿದ್ಧ ಮಹೇಂದ್ರಕರ ಬಂಧುಗಳು, ಶ್ರೀಮಾನ್ ಅನಂತಗಾಂವಕರ ಅವರೂ ಛಾಯಾಚಿತ್ರ ತೆಗೆಯಲು ತಮ್ಮ ಅಂಗಡಿಗಳಲ್ಲಿಯ ಆಭರಣಗಳನ್ನು ಒದಗಿಸಿಕೊಟ್ಟರು. ಅದೇ ಪ್ರಕಾರ ಅನೇಕ ಆಭರಣಗಳನ್ನು ನನ್ನ ತಾಯಂದಿರು ಸೋದರಿಯರು ಒದಗಿಸಿಕೊಟ್ಟಿದ್ದಾರೆ. ಈ ಪುಸ್ತಕದಲ್ಲಿಯ XIV, XV, XVI ಚಿತ್ರಗಳು 'ಕರ್ಮವೀರ' ಸಂಪಾದಕರ ಸೌಜನ್ಯದಿಂದ ದೊರೆತಿವೆ. ಇವರೆಲ್ಲರಿಗೆ ನನ್ನ ವಂದನೆಗಳು. ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಭಂಡಾರಿಗಳಾದ ಸೋದರ ಕೆ. ಎಸ್. ದೇಶಪಾಂಡೆ ಅವರು ಈ ಗ್ರಂಥಕ್ಕೆ ಸಹಾಯಕವಾಗಬಲ್ಲ ಗ್ರಂಥಗಳನ್ನು ಒದಗಿಸಿ ನೆರವನ್ನಿತ್ತಿದ್ದಾರೆ. ಅವರನ್ನಿಲ್ಲಿ ನೆನೆಯುವುದು ನನ್ನ ಕರ್ತವ್ಯ.

ಪಠ್ಯಪುಸ್ತಕಗಳ ಸ್ಪರ್ಧೆಯ ಈ ಕಾಲದಲ್ಲಿಯೂ ಜಿ. ಕೆ. ಅಂಡ್ ಬ್ರದರ್ಸ ಪ್ರಕಾಶ ಸಂಸ್ಥೆಯ ಶ್ರೀ ಕಲ್ಲಯ್ಯನವರು ಈ ಪುಸ್ತಕದ ಪ್ರಕಟನೆಯ ಹೊಣೆಯನ್ನು ಹೊತ್ತುಕೊಂಡರು. ಲಾಭದಾಯಕವಲ್ಲದ ಈ ಪ್ರಕಟನೆಯ ಭಾರವನ್ನು ವಹಿಸಿದ ಬಂಧು ಕಲ್ಲಯ್ಯನವರಿಗೆ ಕೃತಜ್ಞತೆಗಳು.

೮-೫-೧೯೬೧

ಧಾರವಾಡ

ಶಾಂತಾದೇವಿ ಮಾಳವಾಡ

ಎರಡನೆಯ ಮುದ್ರಣಕ್ಕೆ ಅರಿಕೆ

'ಮಹಿಳೆಯರ ಅಲಂಕಾರ' ಪ್ರತಿಗಳು ತೀರಿ ಬಹಳ ವರ್ಷಗಳಾಗಿದ್ದವು, ಇತ್ತೀಚಿಗೆ ಮಹಿಳೆಯರ ಆಭರಣ ಇತ್ಯಾದಿಗಳನ್ನು ಕುರಿತು ಡಾಕ್ಟರೇಟ್ ಪಡೆಯುವ ವಿದ್ಯಾರ್ಥಿನಿಯರು-ಸಂಶೋಧಕರು ಅಭ್ಯಾಸಿಗಳು 'ಮಹಿಳೆಯರ ಅಲಂಕಾರ' ಪುಸ್ತಕವನ್ನು ಕೇಳುತ್ತಲಿದ್ದರು, ಅಂಥವರಿಗೆ ಅವಶ್ಯಕವಾದ ಪುಸ್ತಕವನ್ನು ಪ್ರಕಟಿಸಲು 'ಕನ್ನಡ ಪುಸ್ತಕ ಪ್ರಾಧಿಕಾರ'ದ ಹಿಂದಿನ, ಇಂದಿನ ಅಧ್ಯಕ್ಷರು, ಸದಸ್ಯರು ಕಾರಣರಾಗಿದ್ದೀರಿ ಅಲ್ಲದೆ 'ಕನ್ನಡ ಪುಸ್ತಕ ಪ್ರಾಧಿಕಾರ'ದ ಸಂಚಾಲಕರು ಸಹಕಾರ್ಯಕರ್ತರು ಆಸೆಯಿಂದ ಪುಸ್ತಕವನ್ನು ಅಚ್ಚುಕಟ್ಟಾಗಿ ಪ್ರಕಟಿಸಿದುದಕ್ಕಾಗಿ ನಿಮ್ಮೆಲ್ಲರಿಗೆ ಅಭಿನಂದನೆ.

ತಮ್ಮ ವಿಶ್ವಾಸದ

ಶಾಂತಾದೇವಿ ಮಾಳವಾಡ

ಒಳಪಿಡಿ

ಚಿತ್ರಗಳು

೧

ಕೇಶಾಲಂಕಾರ

ಕನ್ನಡನಾಡು ಕಲೆಗಳ ಬೀಡು. ಈ ಮಾತನ್ನು ನಾವು ಕನ್ನಡ ನಾಡಿನ ಇತಿಹಾಸ, ಶಿಲ್ಪ, ಸಾಹಿತ್ಯಗಳಿಂದ ಅರಿಯಬಹುದು. ಚಾಲುಕ್ಯ, ಹೊಯ್ಸಳ, ವಿಜಯನಗರಗಳ ಅರಸರ ಕಾಲಕ್ಕೆ ಕನ್ನಡನಾಡು ಘನತೆವೆತ್ತಿತ್ತು. ನಾಡಿನಲ್ಲಿ ಸಮೃದ್ಧಿ ತುಂಬಿತ್ತು. ಜನರು ನೆಮ್ಮದಿಯಿಂದ ಬಾಳುತ್ತಿದ್ದರು. ಜನತೆ ಸುಖದಿಂದ ಇದ್ದಾಗಲೇ ಕಲೆಯ ಅಭಿವೃದ್ಧಿ ಸಾಧ್ಯವಷ್ಟೆ. ಎಲ್ಲ ಬಗೆಯ ಲಲಿತಕಲೆ, ಶಿಲ್ಪಕಲೆ, ಸಾಹಿತ್ಯಗಳಿಗೆ ಆಗ ಹೆಚ್ಚಿನ ಮನ್ನಣೆಯಿತ್ತು. ಹಾಗಿದ್ದುದರಿಂದಲೇ ಮಹಿಳೆಯರು ಲಲಿತಕಲಾಪ್ರಿಯೆಯರಾಗಿದ್ದರು; ಸುಸಂಸ್ಕೃತರಾಗಿದ್ದರು. ಅವರಲ್ಲಿ ಅಲಂಕಾರಪ್ರಿಯತೆ ಬೆಳೆದು ಬಂದಿತ್ತು. ವೇಷವೈವಿಧ್ಯ, ಕೇಶರಚನಾ ವೈವಿಧ್ಯಗಳಲ್ಲಿ ಕನ್ನಡತಿಯರು ಬಲ್ಲಿದರಾಗಿದ್ದರು. ಈ ಮಾತಿಗೆ ಐಹೊಳೆ, ಪಟ್ಟದಕಲ್ಲು, ಕಲ್ಯಾಣ, ಹಳೇಬೀಡು, ಬೇಲೂರು, ವಿಜಯನಗರಗಳ ದೇವಾಲಯಗಳಲ್ಲಿ ಕೆತ್ತಿರುವ ಬೆಡಗುಗಾತಿಯರ ಪ್ರತಿಮೆಗಳೇ ಸಾಕ್ಷಿ. ಪ್ರಾಚೀನ ದೇವಾಲಯಗಳು ಆಗಿನ ಕಾಲದ ಜನಜೀವನದ ಪ್ರತಿಬಿಂಬವಾಗಿವೆ;ಸಂಸ್ಕೃತಿಯ ದ್ಯೋತಕವಾಗಿವೆ. ಶಿಲ್ಪಕಲೆಯಲ್ಲಿ ಮೈವೆತ್ತು ಬೆಳೆದ ಶಿಲಾಬಾಲಿಕೆಯರ ವಿವಿಧ ಅಲಂಕಾರಗಳಲ್ಲಿ ಕೇಶಾಲಂಕಾರ ವೊಂದನ್ನೇ ನಾವು ಗಮನಿಸಿದರೂ ಅಂದಿನ ಮಹಿಳೆಯರ ರಸಿಕ ಜೀವನದ ಅರಿವಾಗುತ್ತದೆ. ಶಿಲ್ಪಕಲೆಯಲ್ಲಿಯ ಕೇಶಾಲಂಕಾರದ ಜೊತೆಗೆ ಪ್ರಾಚೀನ ಕನ್ನಡ ಕಾವ್ಯ ಭಂಡಾರದಲ್ಲಿ ದೊರೆಯುವ ನಾನಾಬಗೆಯ ಕೇಶಾಲಂಕಾರಗಳನ್ನೂ ರಚನೆಗಳನ್ನೂ ಅವುಗಳ ಕಾವ್ಯಮಯವಾದ ಹೆಸರುಗಳನ್ನೂ ಅರಿತರೆ ಅಂದಿನ ಮಹಿಳೆಯರಿಗೆ ಕೇಶಾಲಂಕಾರದ ಬಗೆಗಿದ್ದ ಆಸಕ್ತಿಯನ್ನು ತಿಳಿಯಬಹುದು. ಆಗಿನ ಕಾಲದ ಕನ್ನಡತಿಯರಿಗಿದ್ದ ಕೇಶಾಲಂಕಾರ ಪ್ರಿಯತೆಯನ್ನು ಗಮನಿಸಿದಾಗ ಇಂದು ಚಲನಚಿತ್ರ ಪ್ರಪಂಚದಲ್ಲಿ ಪ್ರಚುರವಾಗಿರುವ ಹೊಸ ಹೊಸ ಬಗೆಯ ಕೇಶಾಲಂಕಾರ ವೈಖರಿ ಕನ್ನಡತಿಯರಿಗೆ ಹೊಸತೇನೂ ಅಲ್ಲವೆಂದು ತೋರುತ್ತದೆ. ನೂರಾರು ವರ್ಷಗಳ ಹಿಂದೆಯೇ ಈ ಕಲೆಯಲ್ಲಿ ಕನ್ನಡತಿಯರು ಮುಂದುವರೆದಿದ್ದರು.

ಷೋಡಶಾಲಂಕಾರ ಪ್ರಿಯರು

ವಿವಿಧ ಬಗೆಯ ಕೇಶತೈಲಗಳನ್ನು ಹಚ್ಚಿಕೊಂಡು ನಾನಾ ಬಗೆಯಾಗಿ ಅಲಂಕಾರ ಮಾಡಿಕೊಳ್ಳುವ ಇಂದಿನ ಕನ್ನಡತಿಯರು ಮಾತ್ರವೇ ಅಲಂಕಾರ ಪ್ರಿಯರಲ್ಲ. ನಮ್ಮ ಮೊದಲಿನ ಮಹಿಳೆಯರು ಸ್ನಾನ, ವಿಲೇಪನ, ವಸ್ತ್ರ, ಶಿರೋಭೂಷಣ, ತಿಲಕ, ಕಜ್ಜಲ, ನಾಸಾಭೂಷಣ, ಮಕರಪತ್ರ, ಕೇಯೂರಮಣಿ ಭೂಷಣ, ಅಂಗುಲೀಯಕ, ಕಾಂಚೀಧಾಮ, ನೂಪುರ ಅಲಕ್ತಕರಸ ಮೊದಲಾದ ಹದಿನಾರು ಬಗೆಯ ಅಲಂಕಾರ ಸಾಧನಗಳನ್ನು ಉಪಯೋಗಿಸುತ್ತಿದ್ದರು ಎಂಬುದನ್ನು ಪ್ರಾಚೀನ ಕಾವ್ಯಗಳಿಂದ, ಶಿಲ್ಪಕಲೆಗಳಿಂದ ಅರಿಯಬಹುದಾಗಿದೆ. ಈ ಎಲ್ಲ ಅಲಂಕಾರಗಳಲ್ಲಿ ಕೇಶಾಲಂಕಾರಕ್ಕೆ ಕನ್ನಡತಿಯರು ಹೆಚ್ಚಿನ ಗಮನ ಕೊಟ್ಟಿದ್ದರೆನ್ನಬಹುದು.

ಶಿಲಾಬಾಲೆಯರ ಕೇಶಶೃಂಗಾರ

ಚಾಲ್ಯುಕರ ರಾಜಧಾನಿಗಳಾದ· ಐಹೊಳೆ ಪಟ್ಟದಕಲ್ಲುಗಳಲ್ಲಿಯ ದೇವಾಲಯಗಳು ಭಾರತದಲ್ಲಿಯೇ ಅತಿ ಪ್ರಾಚೀನ ದೇವಾಲಯಗಳಾಗಿವೆ. ಪಟ್ಟದಕಲ್ಲಿನ ವಿರೂಪಾಕ್ಷನ ಗುಡಿ, ಮಲ್ಲಿಕಾರ್ಜುನಗುಡಿಗಳಲ್ಲಿಯ ಕೆಲವು ವಿಗ್ರಹಗಳ ಜಡೆ-ಮುಡಿಗಳನ್ನು ಸುಂದರವಾಗಿ ಕೆತ್ತಿದ್ದಾರೆ. ಐಹೊಳೆಯ ಅನೇಕ ಗುಡಿಗಳಲ್ಲಿಯ, ವಿಗ್ರಹಗಳಲ್ಲಿಯೂ ವಿವಿಧ ಬಗೆಯ ಮುಡಿಗಳನ್ನು ಕಾಣಬಹುದಾಗಿದೆ. ಐಹೊಳೆಯ ದುರ್ಗಾಗುಡಿಯಲ್ಲಿ ನೃತ್ಯದ ನಾನಾಭಂಗಿಗಳನ್ನು ಕೆತ್ತಿದ್ದಾರೆ. ಅದರಲ್ಲಿಯ ಕೆಲವು ಶಿಲಾಬಾಲಿಕೆಯರಿಗೆ "ಬಿಡಿಮುಡಿ, ಸೋರ್ಮುಡಿ ಜೋಲ್ಮುಡಿ, ಪೂಮುಡಿ ಸೋಗೆದುರುಬು"ಗಳಿದ್ದುದನ್ನು ಕಾಣಬಹುದಾಗಿದೆ. ಅಲ್ಲದೆ ಗ್ರೀಕ್ ಪದ್ಧತಿಯ ಮುಡಿಗಳೂ ಕೆಲವೆಡೆ ಗೋಚರಿಸುತ್ತವೆ. ಪಶ್ಚಿಮ ಚಾಲುಕ್ಯರ ರಾಜಧಾನಿಯಾದ ಕಲ್ಯಾಣದ ಬಳಿಯಿರುವ ನಾರಾಯಣಪುರದ ದೇವಾಲಯದ ಹೊರಭಾಗದಲ್ಲಿ ಓರ್ವ ಶಿಲಾಬಾಲಿಕೆಯನ್ನು ನಿಲ್ಲಿಸಿದ್ದಾರೆ. ಆ ವಿಗ್ರಹದ ಮುದ್ದು ಮುಖ, ನಗೆಗಣ್ಣು, ಅವಳು ನಿಂತಭಂಗಿ, ಮಾಡಿಕೊಂಡ ಅಲಂಕಾರ ಇವುಗಳನ್ನು ಕಂಡಾಗ ಕೆಲನಿಮಿಷ ಮುಗ್ಧರಾಗಿ ಆ ಮೂರ್ತಿಯನ್ನು ಹಾಗೆಯೇ ನೋಡುತ್ತ ಅಲ್ಲಿಯೇ ನಿಲ್ಲಬೇಕೆನಿಸುವದು. ಅವಳ ಮುಡಿ ತಲೆಗಿಂತಲೂ ನಾಲ್ಕಾರು ಬೊಟ್ಟು ಎತ್ತರವಾಗಿದೆ. ಮುಡಿಯ ಸುತ್ತಲೂ ಎರಡು ಬಗೆಯ ಹೂಮಾಲೆಗಳಿವೆ. ನೆತ್ತಿಯ ಮೇಲಿಂದ ತಲೆಯ ಸುತ್ತಲೂ ಮುತ್ತಿನ

ಜಾಲರಿಯಿದೆ. ಆ ಶಿಲಾಬಾಲಿಕೆ ತಲೆಯ ಮೇಲೆ ಕೈಹೊತ್ತು ಅಲಂಕಾರಯುಕ್ತಳಾಗಿ ನಿಂತಿದ್ದಾಳೆ.

ಬೇಲೂರು, ಹಳೇಬೀಡುಗಳಲ್ಲಿಯ ಶಿಲಾಬಾಲಿಕೆಯರ ಕೇಶಾಲಂಕಾರವನ್ನಂತೂ ನೋಡಿಯೇ ಸಂತಸಪಡಬೇಕು. ಬೇಲೂರ ಚೆನ್ನಕೇಶವ ದೇವಾಲಯದ ಒಳಭಾಗದಲ್ಲಿಯೂ ಬೇಲೂರು ಹಳೇಬೀಡು ದೇವಾಲಯಗಳ ಹೊರಭಾಗದಲ್ಲಿಯೂ ನಿಂತ ಆ ಶಿಲಾಬಾಲಿಕೆಯರ ನೋಟವೇನು? ನೃತ್ಯದ ಸೊಬಗೇನು? ಆಭರಣಗಳ ಅಂದವೇನು? ಕೇಶಾಲಂಕಾರದ ಬೆಡಗೇನು? ಎಲ್ಲವೂ ವೈಶಿಷ್ಟ್ಯಪೂರ್ಣವಾಗಿವೆ. ಉಳಿದೆಲ್ಲ ಅಲಂಕಾರಗಳನ್ನುಳಿದು, ಕೇಶಾಲಂಕಾರವೊಂದನ್ನೇ ನೋಡುತ್ತ ಹೊರಟರೂ ಕಣ್ಣಿಗೆ ಹಬ್ಬ, ಮನಕೆ ಸಂತಸ ದೊರೆಯುವವು. ಕವಿ ಡಿ.ವಿ.ಜಿ. ಯವರು ಬೇಲೂರ ಚೆನ್ನಕೇಶವ ದೇವಾಲಯವನ್ನು ನೋಡಿ ಅಂತಃಪುರಗೀತೆಗಳನ್ನು ರಚಿಸಿದ್ದಾರೆ. ಅದರ ಪ್ರಸ್ತಾವನೆಯಲ್ಲಿ

"ಬೇಲೂರು ಶಿಲಾಬಾಲಾಮಣಿಯರ್
ಶ್ರೀಲಾಕೃತಿಲಾವಣ್ಯೋಜ್ಜ್ವಲೆಯರ್॥
ಲೋಲಾವಯವೋದಾರಾಂಗನೆಯರ್
ಕಾಲಾಪಗೆಯಾ ಕೂಲಂಬೊಲಿಹರ್ ॥

ಎಂದಿದ್ದಾರೆ. ಅಲ್ಲದೆ 'ಕಲ್ಪನ ಪ್ರತಿಭಾ ಸಮುದ್ರ'ದಿಂದ ಹುಟ್ಟಿಬಂದ "ಭಾವ ಭಂಗಿಯ ಬಾಲೆಯರ್ ಸುಖಲೋಲೆಯರ್"ಎಂದೂ

ಕೇಶವನ ರಾಣಿಯರ್ ಶುಕವಾಣಿಯರ್ ಫಣಿವೇಣಿಯರ್
ಹಾಸ ಸಂಜ್ಞೆಯ ನೀರೆಯರ್ ಸುಶರೀರೆಯರ್ ಸ್ಮರವೀರೆಯರ್॥
ಲಾಸ ಗಾಯನ ವಾದನಂಗಳ ಜಾಣೆಯರ್ ದೃಗುಬಾಣೆಯರ್
ರಾಸಲೀಲೆಯೊಳಾಡುವರ್ ಸಲೆ ಪಾಡುವರ್ ಕುಣಿದಾಡುವರ್॥

ಎಂದೂ ಹೇಳಿದ್ದಾರೆ. ಆ ಶಿಲಾಬಾಲಿಕೆಯರನ್ನು ನೋಡಿದಾಗ ಈ ಮೇಲಿನ ಮಾತುಗಳು ಕವಿಯ ಕಲ್ಪನೆಯೂ ಅಲ್ಲ, ಅತಿಶಯೋಕ್ತಿಯೂ ಅಲ್ಲ, ಸತ್ಯವಾದ ಮಾತೆಂದು ಅನ್ನಿಸದೆ ಇರಲಾರದು.

ವಿಜಯನಗರದ ದೇವಾಲಯಗಳಲ್ಲಿ ವಿಜಯವಿಠ್ಠಲನ ಗುಡಿಯಲ್ಲಿ ಮಹಾನವಮಿ ದಿಬ್ಬಗಳಲ್ಲಿ ಬೇಟೆಗೆ, ನೃತ್ಯಕ್ಕೆ, ಯುದ್ಧಕ್ಕೆ ಹೊರಟ ಮಹಿಳೆಯರು ಹೆಣೆದು ಕಟ್ಟಿದ ನಾನಾ ಬಗೆಯ ಮುಡಿಗಳಲ್ಲಿ ಎಡಕ್ಕೆ, ಬಲಕ್ಕೆ ಕಟ್ಟಿದ ಮುಡಿಗಳೂ, ಬಂಬಲ್ಮುಡಿ, ಜೋಲ್ಮುಡಿಗಳೂ 'ರಿಬ್ಬನ್'ಕಟ್ಟಿದ ಮುಡಿಗಳೂ ಕಾಣುತ್ತವೆ.

ಕಾವ್ಯಗಳಲ್ಲಿ ಉಲ್ಲೇಖ

ಪ್ರಾಚೀನ ಸಾಹಿತ್ಯದಲ್ಲಿ, ಕಾವ್ಯಗಳಲ್ಲಿ ಹಲವು ಬಗೆಯ ಜಡೆ- ಮುಡಿಗಳ ಹೆಸರುಗಳು ದೊರೆಯುತ್ತವೆ. ಅಲ್ಲಿಯ ವರ್ಣನೆಗಳ ನೆರವಿನಿಂದ ಐಹೊಳೆ, ಪಟ್ಟದಕಲ್ಲು, ನಾರಾಯಣಪುರ, ಬೇಲೂರು, ಹಳೇಬೀಡು, ವಿಜಯನಗರಗಳ ದೇವಾಲಯಗಳಲ್ಲಿ ಕೆತ್ತಿದ ಶಿಲಾಬಾಲಿಕೆಯರ ಜಡೆ- ಮುಡಿಗಳಿಗೆ ಆ ಹೆಸರುಗಳನ್ನು ಹೊಂದಿಸಿಕೊಳ್ಳಲು ಸಾಧ್ಯವಾಗುತ್ತದೆ. ಜಡೆಗಳನ್ನೂ, ಮುಡಿಗಳನ್ನೂ ಕಟ್ಟುವ ವಿಧಾನಗಳನ್ನು ಶಿಲಾವಿಗ್ರಹಗಳಿಂದ ಅವುಗಳಿಗೆ ಸರಿಹೋಗುವ ಹೆಸರುಗಳನ್ನು ಪ್ರಾಚೀನ ಕನ್ನಡ ಕಾವ್ಯಭಂಡಾರದಿಂದ ಸಂಗ್ರಹಿಸಿಕೊಂಡು ಈ ಬರೆಹವನ್ನು ಸಿದ್ಧಗೊಳಿಸಲಾಗಿದೆ. ಈ ಎರಡರ ಪ್ರಯೋಜನ ಇಂದಿನ ಕನ್ನಡತಿಯರಿಗೆ ದೊರೆಯಬೇಕೆಂಬುದು ಈ ಬರೆಹದ ಉದ್ದೇಶವಾಗಿದೆ.

ತೈಲಲೇಪನ ಕಲೆ

ಇಂದಿನವರಾದ ನಾವು ಪೇಟೆಗಳಲ್ಲಿ ದೊರೆಯುವ ವಿವಿಧ ಬಣ್ಣದ ವಿವಿಧ ಹೆಸರಿನ ಸುಗಂಧ ತೈಲಗಳನ್ನು ಹಚ್ಚಿಕೊಂಡರೆ ನಮ್ಮ ಪೂರ್ವದ ಮಹಿಳೆಯರು ಮನೆಯಲ್ಲಿಯೇ ತೆಗೆದ ಗಂಧದೆಣ್ಣೆ, ಸಂಪಿಗೆ ಎಣ್ಣೆ, ಕೇದಿಗೆ ಎಣ್ಣೆ, ಮಲ್ಲಿಗೆ ಎಣ್ಣೆಗಳನ್ನೂ, ಕಸ್ತೂರಿ, ಪುನುಗು, ಜವಾಜಿಗಳನ್ನು ಕೂದಲಿಗೆ ಪೂಸಿಕೊಳ್ಳುತ್ತಿದ್ದರು. ಅಲ್ಲದೆ ಬಗೆಬಗೆಯ ಸುವಾಸನೆಯ ಹೂಗಳನ್ನು ಮುಡಿದುಕೊಂಡು ಕೂದಲುಗಳನ್ನು ಸುವಾಸಿತಗೊಳಿಸಿಕೊಳ್ಳುತ್ತಿದ್ದರು. ಇದಕ್ಕೆ ಕಾವ್ಯಗಳಲ್ಲಿ ದೊರೆಯುವ ಈ ಕೆಳಗಿನ ಮಾತುಗಳು ಸಾಕ್ಷಿಯಾಗಿವೆ: "ಇಂಪುಳಿಗೊಳುತಿರ್ಪ ಸೋರ್ಮುಡಿಯೊಳೊತ್ತಿದ ಕತ್ತುರಿಯಂ" ಎಂದೂ "ಕುಡುವುಗುರಿಂದಳಲ್ಮುಡಿಯ ಗಂಟು ಸಡಲ್ಚಿಸಿ ಗಂಧತೈಲಮಂ! ಕುಡಿತೆಯೊಳಾಂತು ನೆತ್ತಿಯೊಳಗೊತ್ತಿ ಬಿದಿರ್ಚುತ ಕೇಶಪಾಶಮಂ"ಎಂಬ ವರ್ಣನೆಗಳು ಕಾವ್ಯಗಳಲ್ಲಿವೆ. ಅಲ್ಲದೆ "ಸಹಜದಿವ್ಯಸುಗಂಧದ ಕೇಶಪಾಶಮಂ

ಮೃಗಗಂಧಿ ಪೂಸಿದಳು ಪಾಸಿತ ಚಂಪಕ ಗಂಧ ತೈಲಮಂ" ಹಾಗೂ "ಸೋರ್ಮುಡಿಯೆಡೆಯಲ್ಲಿ ತಾಳ ಮೃಗನಾಭಿಜ ಪುಷ್ಪರಜಃಪ್ರತಾನಮೊರ್ಗುಡಿಸಿರೆ ಬೀದಿಯಲ್ಲಿ" ಎಂಬಿತ್ಯಾದಿ ವರ್ಣನೆಗಳೂ ಅನೇಕ ಕನ್ನಡ ಕಾವ್ಯಗಳಲ್ಲಿ ದೊರೆಯುತ್ತವೆ.

ಕಲ್ಯಾಣದ ಕೋಟೆಯೊಳಗಿನ ಅರಮನೆಯ ರಾಣೀವಾಸದಲ್ಲಿ ರಾಣಿಯರು ಎರೆದುಕೊಂಡ ಮೇಲೆ ಕೂದಲುಗಳನ್ನು ಒಣಗಿಸಿಕೊಳ್ಳಲೋಸುಗ ಗಚ್ಚು ಸಿಮೆಂಟಿನಿಂದ ಕಟ್ಟಿದ, ಮಲಗಲು ಬರುವಷ್ಟು ಅಗಲವಾದ ಕಟ್ಟೆಯಿದೆ. ಆ ಕಟ್ಟೆಯ ಕೆಳಗಡೆ ಭಾಗವನ್ನು ಪೊಳ್ಳಾಗಿಟ್ಟಿದ್ದಾರೆ. ಮೇಲ್ಗಡೆ ಕಟ್ಟೆಯ ತುಂಬ ಬೆರಳಗಲ ರಂಧ್ರಗಳನ್ನು ಮಾಡಿದ್ದಾರೆ. ಕೆಳಗೆ ಬೆಂಕಿಯ ಬುಟ್ಟಿಗಳನ್ನಿಟ್ಟು, ಕವಡಿಲೋಬಾನ, ದಶಾಂಗ, ಗುಗ್ಗಳ ಮೊದಲಾದ ಧೂಪಗಳನ್ನು ಹಾಕಿ ಕಟ್ಟೆಯ ಮೇಲೆ ಮಲಗಿಕೊಂಡು ಕಾಸಿಕೊಳ್ಳುವುದು ಪದ್ಧತಿ. ಎರೆದುಕೊಂಡ ಕೂದಲುಗಳನ್ನು ಆ ಸುವಾಸಿತ ಹೊಗೆಯಿಂದ ಒಣಗಿಸಿಕೊಳ್ಳುವುದರಿಂದ ಕೂದಲುಗಳೆಲ್ಲ ಸುವಾಸಿತವಾಗುತ್ತಿದ್ದವಂತೆ. ಮೊದಲಿನ ಮಹಿಳೆಯರು ತಮ್ಮ ಕೂದಲುಗಳ ಬೆಳವಣಿಗೆಗೆ, ಅಂದಚೆಂದಕ್ಕೆ, ಸುವಾಸಿತಗೊಳಿಸುವುದಕ್ಕೆ ಹೆಚ್ಚಿನ ಮಹತ್ವವನ್ನು ಕೊಡುತ್ತಿದ್ದರು. ನಾರಿಯರಿಗೆ ಕೂದಲೇ ಶೃಂಗಾರವೆನ್ನುವಂತಿದ್ದರು.

ಮಣಿಬಲೆ

ಇತ್ತೀಚಿಗೆ ತುರುಬಿಗೆ 'ನೆಟ್' ಹಾಕುವುದು ಫ್ಯಾಶನ್ ಎನಿಸಿದೆ. ಆದರೆ ಮೊದಲಿನ ಕನ್ನಡತಿಯರಿಗೆ ಅದೇನೂ ಅಪರಿಚಿತವಾಗಿರಲಿಲ್ಲ. "ಸುರಯಿಯರೆವಿರದಲರ ಮುಡಿಯ ಮುತ್ತಿನ ಬಲೆ, " "ತುರುಬಿನ ಮಣಿಬಲೆ, " "ತುರುಬಿನ ಮುತ್ತಿನ ಬಲೆ," "ತೋರಮುಡಿಯೊಳೆಳೆಮುತ್ತಿನ ಬಲೆಯ ಶೃಂಗಾರವೊಪ್ಪಿರೆ" ಎಂಬ ಮಾತುಗಳು ಕಾವ್ಯಗಳಲ್ಲಿ ದೊರೆಯುವುದರಿಂದ ಶಿಲಾಬಾಲಿಕೆಯರ ಮುಡಿಗಳಲ್ಲಿ ಕಾಣುವುದರಿಂದ "ನೆಟ್" ಮೊದಲಿನವರೂ ಉಪಯೋಗಿಸುತ್ತಿದ್ದರೆಂಬುದು ಸ್ಪಷ್ಟವಾಗಿದೆ. ನೆಟ್ಟಿಗೆ 'ಮಣಿಬಲೆ' ಎಂಬ ಶುದ್ಧ ಕನ್ನಡ ಶಬ್ದವನ್ನು ಬಳಸಲಾಗಿದೆ. ಸಣ್ಣ ಮುತ್ತು ದೊಡ್ಡ ಮುತ್ತು ಮಣಿಗಳಿಂದಲೂ ಸುರಗಿ, ಬಕುಲಗಳಂಥ ನಾಜೂಕಾದ ಹೂವುಗಳಿಂದಲೂ ಈ ಮುಡಿಬಲೆಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರೆಂದು ತಿಳಿಯುತ್ತದೆ.

ಇಂದಿನವರು ಪೇಟೆಯಲ್ಲಿ ದೊರೆಯುವ ಪ್ಯಾಡ್ (ಡೊನೆಟ್) ಇಲ್ಲವೆ ಉಲ್ಲನ್ನಿನಿಂದ ಹೆಣೆದು ಕೂದಲಿನಿಂದ ಸಿದ್ಧಪಡಿಸಿದ ಪ್ಯಾಡುಗಳನ್ನು ಹಾಕಿ ವಿವಿಧಾಲಂಕಾರದ ತುರುಬುಗಳನ್ನು ಕಟ್ಟುವಂತೆ ಮೊದಲಿನವರೂ ಸಹ ಇದೇ ರೀತಿಯಾಗಿ ಪ್ಯಾಡ್ ತರಹ ಗಂಗಾವನ ಇಲ್ಲವೆ ಬಟ್ಟೆಯ ಪ್ಯಾಡ್ ಹಾಕಿ ನಾನಾ ಬಗೆಯ ತುರುಬುಗಳನ್ನು ಕಟ್ಟಿಕೊಳ್ಳುತಿದ್ದರೆಂಬುದನ್ನು ಶಿಲಾಬಾಲಿಕೆಯರ ಕೇಶಾಲಂಕಾರಗಳಿಂದ ಅರಿಯಬಹುದಾಗಿದೆ. ಪ್ಯಾಡ್ ಹಾಕಿದ ಮುಡಿಗೆ ಸಿಂಬೆಯ ಮುಡಿಯೆನ್ನುತ್ತಿದ್ದರು.

ಶಿಲ್ಪಿಯ ಶಿಲೆ; ಕವಿಯ ವಾಣಿ

ಕನ್ನಡನಾಡಿನ ಮಹಿಳೆಯರು ಅಲಂಕಾರಪ್ರಿಯರೂ, ರಸಿಕರೂ ಆಗಿದ್ದರು. ಪರಕೀಯರ ದಾಳಿಗಳಿಂದ ಕನ್ನಡನಾಡು ತನ್ನ ಅಸ್ತಿತ್ವವನ್ನು ಕಳೆದುಕೊಂಡ ಮೇಲೆ ಕನ್ನಡತಿಯರ ಅಲಂಕಾರಪ್ರಿಯತೆಯೂ ಮೂಲೆ ಗುಂಪಾಯಿತು. ಮಹಿಳೆಯರು ಮನೆಬಿಟ್ಟು ಹೊರಗೆ ಹೋಗದಂತಹ ಪರಿಸ್ಥಿತಿಯೊದಗಿದ ಮೇಲೆ ಅಲಂಕಾರಪ್ರಿಯತೆ ಮಾಯವಾಗುವುದು ಸಹಜ.

ವಿಜಯನಗರ ಸಾಮ್ರಾಜ್ಯದ ಪತನದ ಅನಂತರ ಕನ್ನಡನಾಡಿನ ಎಲ್ಲ ಬಗೆಯ ಕಲೆಗಳೂ ನಿರ್ಜೀವವಾಗಿದ್ದವು. ೧೯ ನೆಯ ಶತಮಾನದಲ್ಲಿ ಪಾಶ್ಚಾತ್ಯರ ಪ್ರಭಾವದಿಂದ ಮತ್ತೆ ಮಹಿಳೆಯರ ಅಲಂಕಾರಪ್ರಿಯತೆ ಕುದುರತೊಡಗಿತು. ಅಲಂಕಾರದ ವಿವಿಧ ವಿಧಾನಗಳು ಚಲನಚಿತ್ರ ಜಗತ್ತಿನಿಂದಾಗಿ ಪ್ರಚಾರವಾಗತೊಡಗಿದುವು. ಬೇಲೂರಿನ ಶಿಲ್ಪಕನ್ನೆಯರು, ಅಜಂತದ ಚಿತ್ರ ನಾರಿಯರು ಕೇಶಾಲಂಕಾರದ ವಿಷಯದಲ್ಲಿ ಚಲನಚಿತ್ರ ನಟಿಯರ, ಫ್ಯಾಶನ್ ಪ್ರಿಯ ಹೆಂಗಳೆಯರ ಚಿತ್ತವನ್ನು ಸೆಳೆದರು. ಇತ್ತೀಚೆಗೆ ಅಲಂಕಾರ ಪ್ರಿಯರಾದ ಮಹಿಳೆಯರೆಲ್ಲರ ಮೇಲೆ ಅವು ಪ್ರಭಾವ ಬೀರಿವೆ. ಅವರು ಅದನ್ನು ಅನುಸರಿಸುತ್ತಿದ್ದಾರೆ.

ಲಲಿತ ಕಲೆಗಳಲ್ಲಿ ಅಲಂಕಾರಕಲೆಯೂ ಒಂದಾಗಬಲ್ಲುದು. ಕಾವ್ಯಗಳಲ್ಲಿ ದೊರೆಯುವ ಆಧಾರಗಳಿಂದ ಶಿಲ್ಪಕಲೆಯಲ್ಲಿ ಕಾಣುವ ಸೌಂದರ್ಯಸಾಧನಗಳಿಂದ ಅಲಂಕಾರ ವಿಧಾನವೂ ಒಂದು ದೊಡ್ಡ ಕಲೆಯೆಂದು ವೇದ್ಯವಾಗುತ್ತದೆ. ಆ ಅಲಂಕಾರಗಳಲ್ಲಿ ಕೇವಲ ಕೇಶಾಲಂಕಾರದ ಬಗೆಗೆ ಮಾತ್ರ ಇಲ್ಲಿ ಪ್ರಾಶಸ್ತ್ಯವನ್ನಿತ್ತು ವಿವೇಚಿಸಲಾಗಿದೆ.

ಅಲಂಕಾರ ಪ್ರಿಯತೆ ಮಹಿಳೆಯರಲ್ಲಿ ರಕ್ತಗತವಾಗಿಯೇ ಬಂದಿದೆ. ನಮ್ಮ ಕನ್ನಡ ಮಹಿಳೆಯರು ಹೂವಿನಲ್ಲಿ, ಚಿನ್ನದಲ್ಲಿ, ದೈವೀಶಕ್ತಿಯಲ್ಲಿ ಇಟ್ಟ ಆದರದ ಭಾವವನ್ನು ಜಾನಪದ ಗೀತೆಯ ಈ ನುಡಿಯಿಂದ ಅರಿಯಬಹುದಾಗಿದೆ.

ಶರಣರ ನೆನೆದರ ಸರಗೀಯ ಇಟ್ಟಂಗ್ಯ
ಸೇರ ಮಲ್ಲಿಗಿ ಮುಡಿದ್ಹಾಂಗ।
ಸೇರ ನೀ ಮಲ್ಲಿಗಿ
ಮುಡಿದ್ಹಂಗ್ಯ ಕಲ್ಯಾಣ ಶರಣರ ನೆನೆ
ಮನವೆ।

ಎಂದು ಕನ್ನಡ ಗರತಿಯೊಬ್ಬಳು ಕಲ್ಯಾಣದ ಶರಣರನ್ನು ನೆನೆದಿದ್ದಾಳೆ. ದೈವಭಕ್ತಳಾದ ಕನ್ನಡತಿಗೆ ಶರಣರನ್ನು ನೆನೆದರೆ ಸಂತಸ. ಅದೇ ಸಂತಸವನ್ನವಳು ಸರಿಗೆಯನ್ನು ಕೊರಳಿಗೆ ಹಾಕಿಕೊಂಡಾಗಲೂ ಅನುಭವಿಸಿದ್ದಾಳೆ. ಹೆಣ್ಣಿಗೆ ಚಿನ್ನವೆಂದರೆ ಬಲು ಪ್ರೀತಿ. ಅದೇ ಪ್ರೀತಿಯನ್ನು ಸೇರು ಮಲ್ಲಿಗೆ ಹೂವನ್ನು ಮುಡಿಗೆ ಮುಡಿದುಕೊಂಡು ಅನುಭವಿಸಬಲ್ಲಳೆಂಬ ಮಾತಿನಿಂದಲೂ ಕನ್ನಡತಿಯರ ಅಲಂಕಾರ ಪ್ರಿಯತೆಯನ್ನು ಅರಿಯಬಹುದಾಗಿದೆ.

ಕಾವ್ಯ ಶಿಲಾಬಾಲಿಕೆಯರು

ಬೇಲೂರು ಹಳೇಬೀಡುಗಳ ದೇವಾಲಯಗಳಲ್ಲಿ ಭರತನಾಟ್ಯದ ೬೪ ವಿಧಾನಗಳನ್ನು ಕೆತ್ತಲಾಗಿದೆ ಎಂದು ಬಲ್ಲವರು ಹೇಳುತ್ತಾರೆ. ಆ ನೃತ್ಯದ ನಾನಾ ಭಂಗಿಗಳನ್ನು ನೋಡುವಾಗ ಅವರ ಕೇಶರಚನಾವೈವಿಧ್ಯವನ್ನು ಅರಿಯಬಹುದಾಗಿದೆ. ಪ್ರಾಚೀನ ಕರ್ನಾಟಕದ ರಾಜಧಾನಿಗಳಲ್ಲಿರುವ ದೇವಸ್ಥಾನಗಳಲ್ಲಿ ದೊರೆಯುವ ಶಿಲಾಬಾಲಿಕೆಯರು ಅಂದಿನ ಮಹಿಳೆಯರ ಅಲಂಕಾರಗಳನ್ನು ಪ್ರತಿಬಿಂಬಿಸುತ್ತಿದ್ದಾರೆ. ಒಂದೊಂದು ಶಿಲಾವಿಗ್ರಹದ ಕೇಶರಚನೆಯೂ ಒಂದೊಂದು ತೆರನಾಗಿದೆ. ಕಲಾನಿಪುಣತೆಯಿಂದ ಕಂಗೊಳಿಸುತ್ತಿದೆ, ಬೆಡಗು ಬಿನ್ನಾಣ ಬೀರುತ್ತಿದೆ.

ಓರ್ವ ಶಿಲಾಬಾಲಿಕೆ "ಕುರುಳ ಪಂತಿಗಳಂ ಮನಂಬಿಡೆ । ಕನ್ನಡಿಯನು ನೋಡಿ ,"ತಿದ್ದಿಕೊಳುತ್ತಿದ್ದಾಳೆ. ಇನ್ನೊಬ್ಬಳ "ಸೋರ್ಮುಡಿ ಬೆನ್ನನಪ್ಪಳಿಸುತ್ತಿದೆ. ಮುತ್ತಿನ ಬೊಟ್ಟು, ಮುತ್ತಿನಸರ, ತುರುಬಿನ ಮುತ್ತಿನ ಬಲೆ, ಮುತ್ತಿನೋಲೆಗಳಿಂದ" ಅಲಂಕೃತಳಾಗಿ ಪತಿಯ ಮಾರ್ಗನಿರೀಕ್ಷಣೆ ಮಾಡುವಂತೆ ತೋರುತ್ತಿದ್ದಾಳೆ. ಅವಳ ಬಳಿಯಲ್ಲಿ ನಿಂತವಳು "ಇಳಿವ ಜಡೆ, ಕಳಕೇಕೀಕೇಶಪಾಶಂ ಸುಳಿಗುರುಳಾಡೆ ಸೋರ್ಮುಡಿ ಲಂಬಿಸೆ" ಎನ್ನುವಂತಿದ್ದಾಳೆ. ಮುಡಿಯ ಭಾರಕ್ಕೆ ಮತ್ತೋರ್ವ ಮುಗ್ಧೆಯ ಕೊರಲ್ ಕೊಂಕಿದೆ. ಅವಳ ಗೆಳತಿ "ಬಿಡುಮುಡಿ ಸೂಸೆ ಮುಂತಳೆದ ಪೂಗಳ ನೀಗಳೆ ನವ್ಯಪುಷ್ಪಮಂ ಮುಡಿಸೆನಗೆ " ಎಂಬಂತೆ ನೋಡುತ್ತ ನಿಂತಿದ್ದಾಳೆ. ಮತ್ತೋರ್ವ ಬೇಲೂರ ಶಿಲಾಬಾಲಿಕೆ "ಮಲ್ಲಿಗೆಯ ಸರಗಳಂ ಮುಡಿದು" "ಅರೆಬಿರಿದಚ್ಚ ಮಲ್ಲಿಗೆಯ ಚೊಲ್ಲೆಹಮಿಕ್ಕಿದ ಮಿಂಚಿನೋಲೆಗಳಿಂದಲಂಕೃತ" ಳಾಗಿದ್ದಾಳೆ. ಬಿಡಿಮುಡಿ, ಬಳಲ್ಮುಡಿ, ಎಳಲ್ಮುಡಿ, ಸೋರ್ಮುಡಿ, ಪದಿರ್ಮುಡಿ, ಸಿರಿಮುಡಿ, ತೆಳಿರ್ಮುಡಿ, ಜೋಲ್ಮುಡಿ, ಸಡಿಲ್ಮುಡಿ, ಮುತ್ತಿನ ಮುಡಿ, ಗೋಡಂಬಿಮುಡಿ, ತಕ್ಕೆದುರಿಂಬು, ಕಿರೀಟಮುಡಿ, ಪೂಮುಡಿ, ಸೋಗೆದುರುಂಬುಗಳನ್ನು ಕಟ್ಟಿದ ಜಡೆ-ಮುಡಿಯ ಜಾಣೆಯರನ್ನು ಶಿಲಾಬಾಲಿಕೆಯರಲ್ಲೂ, ಕಾವ್ಯ ವರ್ಣನೆಗಳಲ್ಲಿಯೂ ಕಾಣಬಹುದು. ವಾರಿದುರುಬು ಕಟ್ಟಿದ ಗರತಿಯರ ಉಲ್ಲೇಖಗಳೂ ದೊರೆಯುತ್ತವೆ. "ಚಳವೇಣಿ ಭಾರದಿಂದೋಸರಿಸುವ ಮುಸುಕಂ ಸಾರ್ಚುತಂ" ನಿಂತ ಲಜ್ಜಾವತಿಯೂ ಇದ್ದಾಳೆ. "ಸೋರ್ಮುಡಿಯಂ ಕೈತೊತ್ತು"ತ್ತಿದ್ದಾಳೆ. ಮುಗುದೆಯೊಬ್ಬಳು- "ಇಂಪುಳಿಗೊಳುತಿರ್ಪ ಸೋರ್ಮುಡಿಯೊಳೊತ್ತಿದ ಕತ್ತುರಿಯ" ವಾಸನೆಗೆ ಮಂದಹಾಸ ಬೀರಿದ್ದಾಳೆ, ರಸಿಕ ಮಹಿಳೆ. "ವನಿತಾ ಕೇಶಕಲಾಪ ನವ್ಯಕುಸುಮಾ ಮೋದಂಗಳೊಳ್"ನಲಿಯುತಿಹಳು, ಮತ್ತೋರ್ವ ಚದುರೆ. ಆಕೆಯ ಸಖಿ,

"ಸುರಗಿ ಸುರಹೊನ್ನೆ ಕೇದಗೆ
ಯಿರುವಂತಿಗೆ ಜಾಜಿ ಪುಷ್ಪ ಮಲ್ಲಿಗೆಯಲರಂ
ತುರುಬಿನೊಳು ತುಂಬಿ ಮೆರೆಯುತ"ನಿಂತಿದ್ದಾಳೆ.

ನಿಸರ್ಗಪ್ರಿಯೆ

ನಿಸರ್ಗಪ್ರಿಯೆಯೊಬ್ಬಳು ಹೂವು, ಎಲೆ, ಚಿಗುರೆಲೆಗಳಿಂದಲೇ ಸರ್ವಾಲಂಕೃತಳಾಗಿದ್ದಾಳೆ:

"ನನೆಗೊನೆಯನಲರ್ದಲರ ಕೊನರ್ಗಳಂ ಕೊಯ್ದೊಯ್ದು। ವನಜದಳ ದೊಳ್ಕದಳಿಯೆಲೆಗಳೊಳ್ಕೊಯ್ದು । ಕುಳಿರ್ವ ಹಿಮಜಳದೆ ಚಳಿಯಂಗೊಟ್ಟು ಬೇರಾಯ್ದು ।ನಳಿನದೆಳ ಎಳೆಗಳಿಂಗಳಿಲನೆ ಸರಂಗೆಯ್ದು । ಸುಯ್ಗಂಪು ಕೆಂದಾವರೆಯಸಿರಿಯನೊರಸುತಿರೆ । ಮಲ್ಲಿಗೆಯ ಹಾರಮಂ । ಪಲ್ಲವದ ಪದಕಮಂ । ಸಲ್ಲಲಿತ ಮಂಜರಿಯ ಕರ್ಣಾವತಂಸಮಂ ಸುರಯಿಯರೆವಿರಿದಲರ ಮುಡಿಯ ಮುತ್ತಿನ ಬಲೆಯನುರುತರದ ಸರಸಿಜದ ಕರ್ಣಿಕೆಯ ಮುದ್ರಿಕೆಯಂತೆ" ಎಲೆ ಹೂವುಗಳಿಂದ ಅಲಂಕಾರ ಮಾಡಿಕೊಂಡ ಬೆಡಗಿಯೊಬ್ಬಳಿದ್ದಾಳೆ.

ಆಕೆ ಗಾಳಿಯ ಕಂಪು, ಮೈಗಂಪು, ಬಾಯ್ಗಂಪು, ತಲೆಯ ಕಂಪುಗಳಿಂದ ಕಮಲದ ದೇಟಿನ ನಾರಿನಿಂದ ಮಲ್ಲಿಗೆಯ ಹಾರಕ್ಕೆ ಚಿಗುರೆಲೆಯ ಪದಕವನ್ನು ಮಾಡಿಕೊಂಡು, ಮಂಜರಿಯ (ಗುಚ್ಛ) ಕಿವಿಯೋಲೆಗಳನ್ನು ಹಾಕಿಕೊಂಡು ಸುರಗಿಯ ಹೂವಿನಿಂದಲೇ ಮುತ್ತಿನ ಮಣಿಬಲೆಯಂತೆ ಹೆಣೆದುಕೊಂಡು ಮುಡಿಗೆ ಹಾಕಿಕೊಳ್ಳುವ ಸೊಗಸುಗಾತಿಯಾಗಿದ್ದಾಳೆ. ಈ ರೀತಿಯಾಗಿ ಹೂವುಗಳಿಂದ ಅಲಂಕೃತಳಾದವಳ ಬಗೆಗೆ "ಗಂಧಮಂ ನೆರೆತೆಗೆ ವಚ್ಚಜೌವ್ವನೆಯ ಸೋರ್ಮುಡಿ ತಾಂ ನವಿಲಂತೆ ನರ್ತಿಕುಂ" ಎಂದು ಓರ್ವ ಕವಿ ವರ್ಣಿಸಿದ್ದಾನೆ. ಹೂವುಗಳಿಂದ ಶೃಂಗರಿಸಿಕೊಂಡವಳು ಹೊರಟರೆ " ಸೋರ್ಮುಡಿಯೆಡೆಯಲ್ಲಿ ತಾಳ್ದ ಮೃಗನಾಭಿಜ ಪುಷ್ಪರಜಃಪ್ರತಾನ ಮೊರ್ಗುಡಿಸಿ" ಬೀದಿಯಲ್ಲೆಲ್ಲ ಸುವಾಸನೆ ಹರಡುತ್ತಿತ್ತಂತೆ. ಒಬ್ಬಳು ತನ್ನ ಸಖಿಗೆ

"ಬಂಬಲ್ಗುರುಳೊಡನಾಡಿಗೆ।
ತುಂಬಿಗೆ ಪಗೆಯೆಂದು ಮುಳಿದು ಸಂಪಗೆಯೆಸಳಂ॥
ತುಂಬಿಗುರುಳ್ಗೊಪ್ಪಿದಪ।
ಳೆಂಬಿನ ಮೆಸಳ್ಗಳನೆ ತಿರಿದು ಸೂಡಿದಳೋರ್ವಳ್॥ "

ಅವಳ "ಪೂಮುಡಿಯ ಕಂಪೊಂದೊಂದನೊಟ್ಟಯಿಸಿರುವದ"ನ್ನು ಕಂಡು ಎಲ್ಲರೂ ಉಲ್ಲಸಿತರಾಗಿದ್ದರಂತೆ.

"ಕುಸುಮಕರ ಭಂಡಾರವನು ಕಾ
ದೆಸವ ಕಾಳೋರಗನಿದೆಂಬ ಪೊ।
ಲೆಸೆದುದಾ ಮಾಯಾಂಗನೆಯ ನಿಡುಜಡೆ ವಿರಾಜಿಸುತ । "

ನಿಡುಜಡೆಯ ನೀರೆಯರು

ಓರ್ವ ಬಾಲಿಕೆ "ತನ್ನ ಬೆನ್ನೊಳು ಪರೆದೊಪ್ಪಲ್ ಕೇಶಪಾಶಮಂ" ನೋಡಿ ನಗುತಿರ್ದಳು. ಅವಳ ಸಖಿಯಾದ ಮೃಗಗಂಧಿಯೊರ್ವಳು ತನ್ನ ಕೂದಲಿಗೆ "ಪೂಸಿದಳುಪಾಸಿತ ಚಂಪಕ ಗಂಧ ತೈಲವನ್ನು." ಅನಂತರ "ಸುಕ್ಕುಗೆಟ್ಟುರುಳಿಗುರುಳ್ಗ"ಳನ್ನು ಚಂಪಕತೈಲ ಹಚ್ಚಿ ಬಾಚಿಕೊಂಡು ಸುಂದರವಾದ ಮುಡಿಯನ್ನು ಕಟ್ಟಿಕೊಂಡಳು. "ಮುಡಿ ಮಕರಧ್ವಜಂ ಬೊಲೆವಿರುತ್ತಿರೆ"ಸಂತಸದಿಂದ ಮುಡಿದುಕೊಂಡ ಹೂವುಗಳು ನಯನ ಮನೋಹರವಾಗಿ ಕಾಣುತ್ತಿದ್ದವು. "ಮತ್ತೋರ್ವಳ ಮುಡಿಯೊಳ್ ಜೋಲ್ದಿರ್ದುದಂ ಮಲ್ಲಿಗೆಯ ಕಿರಿಮುಗುಳ್ಮಾಲೆಯಂ ಸನ್ಮೃಣಾಳಂ"

"ಮುಡಿಗೆ ನವಿಲ್ಗಳಂದವನೆ ಪೋಲ್ತ"ಕೇಶಾಲಂಕಾರ ಮಾಡಿಕೊಂಡು ನಿಂತಿಹಳೊರ್ವ ಬೆಡಗಿನ ಬಾಲಿಕೆ. ಅವಳ ಎಡಭಾಗಕ್ಕೆ "ಜಡೆಯ ಬೆಡಂಗಿ"ಯೊರ್ವಳು ನಸುನಗುತ್ತ ನಿಂತಿಹಳು. ಬಲಭಾಗಕ್ಕೆ ನಿಂತವಳ "ನಿಡುಜಡೆಯಿಂದಲರ್ ಜಗಳುತ್ತಿರಲು "ಮತ್ತೋರ್ವಳು "ಜಡೆಗಳ ಬಂಬಲೇ ತಲೆದಳಿರಾಗಿರಲು, ನಿಡುಜಡೆಯ ಬಿಟ್ಟಿಹಳು." ಅವಳೊಂದಿಗೆ ಹೊರಟಿಹರು "ನೆಲಕ್ಕೆಸೆವ ನಿಡುಜಡೆಯ ನೀಟಿನ ನೀರೆಯರು "ದೇವಸನ್ನಿಧಿಗೆಂದು.

ನರ್ತಿಸುವ ಸೋರ್ಮುಡಿ

ಇನ್ನೊಂದು ದೇವಾಲಯದಲ್ಲಿ ಓರ್ವ ಕನ್ನೆ "ಕೊಂಕಳಿದು ನಿಮಿರ್ದ ನೀಳಾಳಕಂ ಜೋಲ್ದ ಬಂಬಲ್ಮುಡಿಯ" ಭಾರಕ್ಕೆ ಕೊರಳನ್ನು ಕೊಂಕಿಸಿದಳಂತೆ. ಮತ್ತೋರ್ವಳಕೇಶಕಲಾಪ "ಕನಕ ಚಂಪಕದ ಪುಷ್ಪದಂತೆ ಪೊಳೆದು ನರುಗಂಪ

ಬೀರಿದುದಿಂದ್ರ ನೀಲಮಣಿಯೊಳಗಣ ತಿರುಳಿ ತೋಣೆಯಾದುವಾಕುರುಳ್ಗಳು" ಎಂಬಂತಿರುವ ಕವಿವಾಣಿಗೆ ಉದಾಹರಣೆಯಾಗಿದೆ. ಸುಂದರವಾದ ಕೂದಲಿಗೆ "ಅಲರ್ಗೊಂಚಲಂ ಮುಡಿದು ಸೋರ್ಮುಡಿಗಟ್ಟಿಕೊಂಡು ಆನಂದದಿಂದ ನಲಿಯುವಾಗ ಸೋರ್ಮುಡಿ ನರ್ತಿಸುತ್ತಿರುವಂತೆ"ಕಾಣಬಲ್ಲದು. "ಮುಡಿಗಟ್ಟಿ ಪರಿದಿರ್ದ ಮುಂಗುರುಳ್ ತಿರ್ದಿ" ಕೊಂಡು

ಕಾರಿರುಳು ಮಿನುಮಿನುಗಿ ಕಾಣಿಸುತಿಹ।
ತಾರೆಗಳ ಬಂಬಲಂತೆ॥
ತೋರ ಮುಡಿಯೊಳಿಳಿ ಮುತ್ತಿನ ಒಲೆಯ
ಶೃಂಗಾರವೊಪ್ಪಿರಲು॥

ಕನ್ನಡಿಯಲ್ಲಿ ನೋಡುತ್ತ ಮೈಮರೆತು ನಿಂತಿರುವ ಸುದತಿಯ ವರ್ಣನೆ ಕಾವ್ಯದಲ್ಲಿ ಬರುತ್ತದೆ. ಇಂತಹ ಮಾದರಿಗಳನ್ನು ಶಿಲ್ಪಗಳು ಮೂಡಿಸಿದಂತಿದೆ. "ಹೊಸನಡೆ, ಹೊಸನುಡಿ, ಹೊಸ ಮುಡಿಯಿಂದೊರ್ವಳು " ಕಂಗೊಳಿಸುತ್ತಾಳೆ. ಆಕೆಯ "ಬಳಲ್ಮುಡಿ ತಾನಲರಂಬು ಪಾರುವಂತಿರೆ" ಅಲಂಕರಿಸಿಕೊಂಡಿದ್ದಾಳೆ. ಮತ್ತೊರ್ವಳು "ಕೇಶಭಾರಮಂ ಪೊತ್ತಿರಲಾರ್ಪಳೇ ಕುಸುಮಕೋಮಳೆ" ಎನ್ನುವಂತೆ ಪೊಸದಳಿರ್ ಪೂಮಾಲೆಯನ್ನು ಮುಡಿದುಕೊಂಡು ನಿಂತಿದ್ದಾಳೆ. ಅವಳ ಬಳಿನಿಂತವಳು "ಕಾಂತೆಯೋ, ಸೋರ್ಮುಡಿ ಬಿಟ್ಟು ಬೆನ್ನನಪ್ಪಳಿಸಿದ ಸೈಪಿನಬ್ಬಿನಿಯೋ" ಎಂದು ವಿನೋದದಿಂದ ಕೇಳುತ್ತಾಳೆ, ಇನ್ನೊಬ್ಬಳ "ಬಳಲ್ಮುಡಿಯಿಂದಲರ್ಗಳಲುಗೆ ಸಂತಸದಿಂದಿಹಳು." "ಕಸ್ತೂರಿ ಪುನುಗು ಜವ್ವಾಜಿ ಮುಂತಾದ ಸುವಸ್ತುವ ತೊಡೆದು ಪೂದುರುಬಿ"ಗೆಳತಿಯ ಬಳಿ ಹೊರಟಂತಿದೆ. ಅವಳ " ಹೂಮುಡಿಯನಿಂಬುಗೊಂಡುದು ಮಕರಕೇತನಂ." ಮತ್ತೊರ್ವಳು "ನಸುಬಿರಿದಚ್ಚಮಲ್ಲಿಗೆಯ ಸೋರ್ಮುಡಿ ಪೆರ್ಮೆಯನೀಯೆ" ಗಾಂಭೀರ್ಯದಿಂದಿಹಳು.

"ಸುರ್ಕುಂಗುರುಳ ಸುಳಿಗುರುಳ ನಿಡುಗುರುಳುರುಳಿಗುರುಳ ತುಂಬಿ ಗುರುಳ ಗೋಪಸ್ತ್ರೀಯರ" ಕಂಡು ಓರ್ವ ಚದುರೆ "ಅಂಬುಜನೇತ್ರೆ ನಿನ್ನ ಮೊಗಮಂ ಕವಿದುದೀ ಕುರುಳೀಳಿ" ಎಂದು ಹಾಸ್ಯಮಾಡುತ್ತಿದ್ದಾಳೆ. ಮತ್ತೋರ್ವಳು "ಕಟ್ಟಿ

ಬಿಟ್ಟೆಸೆವ ಕುರುಳ್ ಮೊಗಕೆ" ಒಡಿಯುತ್ತಿರಲು, "ತುದಿವುಗರಿಂದೆಳಲ್ಮುಡಿಯ ಗಂಟು ಸಡಲ್ಚಿಸಿ ಗಂಧತೈಲಮಂ। ಕುಡಿತೆಯೊಳಾಂತು ನೆತ್ತಿಯೊಳಗೊತ್ತಿ ಬಿದಿರ್ಚುತೆ ಕೇಶಪಾಶಮಂ"ನಿಂತಿಹಳು. ಅವಳ "ಸೋರ ಮುಡಿಯೊಳೊತ್ತಿದ ಕಸ್ತೂರಿಯಂ ಕಲಂಕಿ" ಹೋದನಂತೆ, ಮಂದಮಾರುತ.

ನಾಗವೇಣಿ

ಕಾವ್ಯಗಳಲ್ಲಿಯ ಇನ್ನು ಕೆಲವು ಚಿತ್ರಗಳು ಹೀಗಿವೆ : "ಅರ್ಧ ಮುಡಿಯ, ಸೋರಮುಡಿಯ, ಸೊನ್ನಾರದ ದೊಡ್ಡ ಮುಡಿಯ ತೆಕ್ಕೆದುರುಂಬ ಒಡುದೋರದೆ ಬಿಟ್ಟು ಬೇಸರ ಮುಡಿಗಟ್ಟಿ ಖಿದ್ದಳಿದೆಯ್ತಂದರ್". ಅಲ್ಲದೆ ತಲೆ ಬಾಚಿಕೊಂಡು ನಾಗವೇಣಿಯನ್ನು ಹೆಣದುಕೊಂಡವಳಿಗೆ "ಬಾಲೆಯೊಬ್ಬಳು ಜಡೆಯ ಸರ್ಪನ ಮೇಲೆ ಸಂಪಿಗೆಯಲರ ತುಂಬಿ" ಅಲಂಕಾರ ಮಾಡಿದಳು. "ನೀಲವೇಣಿಯೊಳಿರ್ಪ ಪಾರಿಜಾತವನ್ನೂ, ಸರ್ಪವೇಣಿಯೊಳಿರ್ಪ ಪುಷ್ಪವನ್ನೂ ಕುರುಳ ಮುಗಳ್ನಗೆಯನ್ನೂ, ಜಾತ ಮಲ್ಲಿಗಿ ಜಾಳಿಗೆ ದಂಡಿ ವಾಲ್ಯಾಡು ತುರುಬ ಒನಪಿಲಿ"ಕಟ್ಟಿದವಳನ್ನೂ, ಹೆಳಲು ಬಂಗಾರ ಹಾಕಿಕೊಂಡವಳನ್ನೂ, ಹೊಂದಾವರೆಯಂತಿರುವ ಮುಡಿಗೆ ಮಂಗಳಮಪ್ಪ ಮಣಿದೊಂಡಿಲಿಟ್ಟುಕೊಂಡ ಒನಪುಗಾರ್ತಿಯರನ್ನೂ, ನೀಳ ನೀಲ ಕುಂತಲವನ್ನು ಸುಂದರವಾಗಿ ಹೆಣೆದು ಸೊಬಗಿನ ಮುಡಿಗಟ್ಟಿ ಸುರಗಿ ಪುಷ್ಪಗಳ ದಂಡೆಯಿಂದ ಕಬರಿಯನ್ನು ಅಲಂಕರಿಸಿಕೊಂಡ ಸೊಗಸುಗಾರ್ತಿಯರನ್ನೂ, ನಿಡುಜಡೆ, ಬಿಡುಜಡೆಯ ನೀರೆಯರನ್ನೂ, ತಳಿರ ತಲೆಗಟ್ಟನ್ನು ಹಾಕಿಕೊಂಡ ನಿಸರ್ಗಪ್ರಿಯೆಯರನ್ನೂ, ಶಿಥಿಲ ವೇಣಿಯರನ್ನೂ, ಜಡೆಮುಡಿಯ ಜಾಣೆಯರನ್ನೂ ಶಿಲಾಬಾಲಿಕೆಯರಲ್ಲಿ ಕವಿಗಳ ವರ್ಣನೆಗಳಲ್ಲಿ ಕಾಣಬಹುದು. ಕವಿವಾಣಿಯ ವರ್ಣನಾವಿನ್ಯಾಸವನ್ನು ರೂಪಿಸುವ ಶಿಲ್ಪಿಯ ಕಲೆ, ಶಿಲ್ಪಿಯ ಮೂರ್ತಿರಚನಾವೈಖರಿಯನ್ನು ವರ್ಣಿಸುವ ಕವಿವಾಣಿ ಒಂದಕ್ಕೊಂದು ಪೋಷಕವಾಗಿ ನಮ್ಮ ಪ್ರಾಚೀನ ಕೇಶಾಲಂಕಾರದ ಸೊಗಸನ್ನು ಬಗೆಬಗೆಯಿಂದ ಬಿತ್ತರಿಸಿವೆ.

ಕೇಶಾಲಂಕಾರ ವೈವಿಧ್ಯ

ಮಹಿಳೆಯರ ವೈವಿಧ್ಯಪೂರ್ಣ ಕೇಶಾಲಂಕಾರಗಳನ್ನು ಮೂರು ರೀತಿಯಲ್ಲಿ ವಿಂಗಡಿಸಬಹುದಾಗಿದೆ :

1. ೫-೬ ನೇ ಶತಮಾನಗಳಲ್ಲಿ ಐಹೊಳೆ, ಪಟ್ಟದಕಲ್ಲುಗಳಲ್ಲಿ ದೊರೆಯುವ ಶಿಲಾಬಾಲಿಕೆಯರ ಕೇಶಾಲಂಕಾರದಿಂದ ಪ್ರಾರಂಭಿಸಿ ವಿಜಯನಗರ ಸಾಮ್ರಾಜ್ಯದ ಕಾಲಕ್ಕೆ ದೊರೆಯುವ ಶಿಲಾಬಾಲಿಕೆಯರ ಕೇಶಾಲಂಕಾರದವರೆಗೆ ದೊರೆಯುವ ವೈವಿಧ್ಯಪೂರ್ಣವಾದ ಪ್ರಾಚೀನ ಕೇಶಾಲಂಕಾರಗಳು.

2. ೧೧ ನೇ ಶತಮಾನದಿಂದ ೧೯ ನೇ ಶತಮಾನಗಳವರೆಗೆ ರೂಢಿಯಲ್ಲಿ ಇದ್ದ ಮಧ್ಯಂತರ ಕಾಲದ ಕೇಶಾಲಂಕಾರ.

3. ೨೦ ನೇ ಶತಮಾನದ ಹೊಸ ಬಗೆಯ ಕೇಶಾಲಂಕಾರ.

ಹೀಗೆ ಸ್ಥೂಲವಾಗಿ ಮೂರು ವಿಭಾಗಗಳನ್ನು ನಾವು ಮಾಡಿಕೊಂಡು ಕೆಲವು ಜಡೆಮುಡಿಗಳ ಹೆಸರುಗಳು - ಅವುಗಳ ರಚನೆಯ ವಿಧಾನಗಳು- ಇವುಗಳ ಸ್ಥೂಲ ಪರಿಚಯವನ್ನು ನಾವೀಗ ಮಾಡಿಕೊಳ್ಳೋಣ.

ಬಿಡುಮುಡಿ: ಪ್ರಾಚೀನ ಕೇಶಾಲಂಕಾರಗಳಲ್ಲಿಯ ಬಿಡುಮುಡಿ ಸುಂದರವೂ ವೈಶಿಷ್ಟ್ಯಪೂರ್ಣವೂ ಆಗಿದೆ.

ಬಿಡುಮುಡಿ ಕಟ್ಟುವುದು ಕಠಿಣವೆನಿಸುವದೇನೋ ನಿಜ; ಆದರೆ ಅದು ಕಲಾಪೂರ್ಣವಾಗಿದೆ, ಈಗ ಪೇಟೆಗಳಲ್ಲಿ ದೊರೆಯುವ ಚಕ್ರಾಕಾರದ ಪ್ಯಾಡ್‌ಗಳಂತೆ ಬಿರುಸಾಗಿರುವ ಅರ್ಧಚಂದ್ರಾಕೃತಿಯ ವಸ್ತುವನ್ನು ಅಲ್ಲಿ ಬಳಸಲಾಗಿದೆ.



ಬಿಡು ಮುಡಿ

ಮೊದಲು ಕೂದಲನ್ನು ಗಂಟಿನಂತೆ ತುರುಬು ಕಟ್ಟಿ , ಅದರ ಕೆಳಗೆ ಅರ್ಧಚಂದ್ರಾಕಾರದ ಪ್ಯಾಡ್ ಇಟ್ಟು ಅದು ತುರುಬಿನ ಮುಂದೆ ಬರುವಂತೆ ಮಾಡಿ ಅದಕ್ಕೆ ಕೂದಲನ್ನು ಸುತ್ತಿದ್ದಾರೆ. ತುರುಬಿನ ಮುಂದೆ ಸ್ವಲ್ಪ ಸ್ಥಳವನ್ನು ಬಿಟ್ಟು ಮುಂದೆ ಬಾಗಿದಂತೆ ಕಾಣುವ ಈ ಮಾದರಿಯನ್ನೇ "ಬಿಡುಮುಡಿ" ಎಂದು ಕರೆಯಬಹುದು. ಇಂಥ ಬಿಡುಮುಡಿಯ ಮಾದರಿ ಪಟ್ಟದಕಲ್ಲಿನ ದೇವಾಲಯಗಳ ಶಿಲಾವಿಗ್ರಹಗಳಲ್ಲಿ ಕಂಡುಬರುತ್ತದೆ.

ಸೋಗೆದುರುಂಬು : ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಹೆಣ್ಣುಮಕ್ಕಳ ವರ್ಣನೆಯಲ್ಲಿ "ಮುಡಿ ನವಿಲಂತೆ ನರ್ತಿಕುಂ" ಎಂಬ ಮಾತು ಬರುತ್ತದೆ. ಅಲ್ಲದೆ "ಸೋಗೆದುರುಂಬು" ಎಂಬ ಪ್ರಯೋಗ ಅನೇಕ ಕಾವ್ಯಗಳಲ್ಲಿ ದೊರೆಯುತ್ತದೆ. ಅಂತಹ ಸೋಗೆದುರುಂಬಿನ ಮಾದರಿ ಐಹೊಳೆಯ ದೇವಾಲಯಗಳಲ್ಲಿ ಕಂಡುಬರುತ್ತದೆ. ಆ ದೇವಾಲಯಗಳಲ್ಲಿ ಶಿಲಾಬಾಲಿಕೆ ಕಟ್ಟಿದ ಸೋಗೆದುರುಂಬಿನ ಚಿತ್ರವನ್ನು ಇಲ್ಲಿ ನೋಡಬಹುದಾಗಿದೆ.



ಸೋಗೆದುರುಂಬು

"ಸೋಗೆದುರುಂಬು"ಕಲಾಪೂರ್ಣವಾಗಿದೆ. ೨೦ ನೇ ಶತಮಾನದವರು ಆ ರೀತಿ ತುರುಬು ಕಟ್ಟಬೇಕಾದರೆ ಬಹಳ ಪ್ರಯತ್ನಪಡ ಬೇಕಾಗುವುದು. ಆ ತುರುಬನ್ನು ನೋಡಿದೊಡನೆ ನವಿಲು ಗರಿ ಕೆದರಿಕೊಂಡು ಕುಣಿಯಲು-ಆಟವಾಡಲು- ನಿಂತಂತೆ ತೋರುವುದು. ನೆತ್ತಿಯ ಮೇಲಿನ ಕೂದಲುಗಳನ್ನು ಮಾತ್ರ ತೆಗೆದುಕೊಂಡು ಸಣ್ಣ ತುರಬನ್ನು ನೆತ್ತಿಯ ಮೇಲೆ ಕಟ್ಟಲಾಗಿದೆ. ಹಿಂಭಾಗದ ಕೂದಲುಗಳನ್ನು ಚೆನ್ನಾಗಿ ಬಾಚಿ ಅನೇಕ ವಿಭಾಗ ಮಾಡಿ ನವಿಲಗರಿಯಂತೆ ಒಂದರ ಮೇಲೊಂದು ಬರುವಂತೆ ಎಲೆಯ ಆಕಾರದಲ್ಲಿ ತಲೆಯ ಸುತ್ತಲೂ ಕಟ್ಟಲಾಗಿದೆ. ಈ ಸೋಗೆದುರುಂಬನ್ನು ನೋಡಿದರೆ ಮೊದಲಿನ ಮಹಿಳೆಯರು ಕೇಶಾಲಂಕಾರ ನಿಪುಣೆಯರಾಗಿದ್ದರೆಂಬುದು ಸ್ಪಷ್ಟವಾಗುತ್ತದೆ.

ಬಳಲ್ಮುಡಿ: ಬೇಲೂರು ಹಳೇಬೀಡುಗಳ ಶಿಲ್ಪದಲ್ಲಿ ನೃತ್ಯದ ನಾನಾ ಭಂಗಿಗಳೊಂದಿಗೆ ಕೇಶಾಲಂಕಾರದ ವಿವಿಧ ಮಾದರಿಗಳೂ ಇವೆ. ಅಲ್ಲಿ ಒಂದು ಮುಡಿಯಂತೆ ಮತ್ತೊಂದು ಮುಡಿಯಿಲ್ಲ. ಪ್ರತಿಯೊಂದು ಮುಡಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅವುಗಳಲ್ಲಿರುವ ವೈವಿಧ್ಯ, ಕಲಾ ಕುಸುರಿಯ ಪರಿಚಯವಾಗುತ್ತದೆ. ಹಳೇಬೀಡಿನ ಶಿಲಾಬಾಲಿಕೆ ಕಟ್ಟಿದ ಬಳಲ್ಮುಡಿಯ ಮಾದರಿಯ ಚಿತ್ರವಿದು.

ಬಳಲ್ಮುಡಿ ಎಂದರೆ ಸಡಿಲಾದ ಮುಡಿ ; ಇಲ್ಲವೆ ಸಡಿಲಾದ ಕೂದಲಿನ ಗಂಟು ಎಂದು ಅರ್ಥ. ಕುತ್ತಿಗೆಯ ಕೆಳಭಾಗದಲ್ಲಿ ಒಂದು ದೊಡ್ಡ ಕೂದಲಿನ ಗಂಟು, ಅದರ ಮೇಲೆ ಮತ್ತೊಂದು ಸಣ್ಣ ಗಂಟನ್ನು ಚಮತ್ಕಾರವಾಗಿ ಕಟ್ಟಿದುದನ್ನು ಈ ಚಿತ್ರದಲ್ಲಿ ನೋಡಬಹುದು. ಅಲ್ಲದೆ ಮುಂಗುರುಳೂ "ಕುರುಳೋ ತುಂಬಿಯ ಬಂಬಲೊ" ಎನ್ನುವಂತಿವೆ. ನೆತ್ತಿಯಮೇಲೆ ಸ್ವಲ್ಪ ಕೂದಲುಗಳನ್ನು ಬಿಟ್ಟು ಸುತ್ತಲೂ ಹೂವುಗಳಿಂದ ಅಲಂಕರಿಸಲಾಗಿದೆ.



ಬಳಲ್ಮುಡಿ

ಮುತ್ತಿನ ಮುಡಿ : ಪಟ್ಟದಕಲ್ಲಿನ ತ್ರಿಲೋಕೇಶ್ವರ ಗುಡಿಯಲ್ಲಿರುವ ಶಿಲ್ಪಸುಂದರಿ "ಮುತ್ತಿನ ಮುಡಿ" ಕಟ್ಟಿದ್ದಾಳೆ. ತಲೆಯ ಸುತ್ತ ಮೂರೆಳೆ ಮುತ್ತಿನ ಸರವನ್ನು ಕಟ್ಟಲಾಗಿದೆ. ನೆತ್ತಿಯ ಮೇಲೆ ಮುತ್ತಿನ ಗೊನೆಯನ್ನಿಟ್ಟು, ಎಲ್ಲ ಕೂದಲನ್ನು ತಲೆಯ ಎಡಭಾಗದಿಂದ ಮುರಿಗೆ ಮಾಡಿ ಮುತ್ತಿನ ಸುತ್ತಲೂ ಸುತ್ತಿದ್ದಾರೆ. ಕೂದಲಿಗೆ ಎರಡು ಎಳೆ ಮುತ್ತನ್ನು ಸುತ್ತಿದ್ದಾರೆ. ಮುತ್ತಿನ ಮುಡಿಗೆ "ತೋರಮುಡಿಯೊಳೆಳೆ ಮುತ್ತಿನ ಶೃಂಗಾರವೊಪ್ಪಿತು" ಎಂಬಂತೆ ಕಾಣುತ್ತಿದೆ, ಈ ಮುಡಿ.



ಮುತ್ತಿನ ಮುಡಿ

ಗೋಡಂಬಿ ಮುಡಿ: ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದಲ್ಲಿಯ ಓರ್ವ ಸುಂದರಿ ಗೋಡಂಬಿ ಮುಡಿಯನ್ನು ಕಟ್ಟಿದ್ದಾಳೆ. ಓರಣವಾಗಿ ಕಟ್ಟಿದ ಮುಡಿಗೆ ಹೂವಿನ ಅಲಂಕಾರವೂ ಬೇಡ ;ಚಿನ್ನಾಭರಣಗಳ ಅಲಂಕಾರವೂ ಬೇಡ. ನಿರಾಭರಣವಾದ ಆ ಮುಡಿ ಎಷ್ಟು ಆಕರ್ಷವಾಗಿದೆ !



ಗೋಡಂಬಿ ಮುಡಿ

ಮುಖಕ್ಕೆ ಮುಡಿಯೆ ಶೃಂಗಾರವೆನ್ನುವಂತಿದೆ ಗೋಡಂಬಿ ಮುಡಿ. ಕೂದಲರಾಶಿಯ ಮಧ್ಯದಲ್ಲಿ ಗೋಡಂಬಿಯ ತುದಿಯಾಕಾರದ ದಪ್ಪ ತಂತಿಯ ಪ್ಯಾಡನ್ನು ಇಟ್ಟು ಅದಕ್ಕೆ ಕೂದಲುಗಳನ್ನು ಸುತ್ತಿ ತಲೆಯ ಮೇಲ್ಭಾಗದಲ್ಲಿ ಎದ್ದು ನಿಲ್ಲುವಂತೆ ಕಟ್ಟಲಾದ ಮುಡಿ ಬಹಳ ಆಕರ್ಷಕವಾಗಿದೆ.

ತೆಕ್ಕೆದುರುಂಬು: ಪಟ್ಟದ ಕಲ್ಲಿನಲ್ಲಿರುವ ಪಾಪನಾಥ ದೇವಾಲಯದ ಇನ್ನೋರ್ವ ಶಿಲಾಸುಂದರಿಗೆ "ತೆಕ್ಕೆದುರುಂಬು" ಇದೆ.

ಈ "ತೆಕ್ಕೆದುರುಂಬು" ಹೆಸರು ರತ್ನಾಕರವರ್ಣಿಯ "ಭರತೇಶ ವೈಭವ" ಕಾವ್ಯದಲ್ಲಿ ದೊರೆಯುತ್ತದೆ. ಭರತೇಶನ ರಾಣಿಯರಲ್ಲಿ ಒಬ್ಬಳು ತೆಕ್ಕೆದುರುಂಬು ಕಟ್ಟಿದ್ದಳಂತೆ. ಅರ್ಧಚಂದ್ರಾಕೃತಿಯ ಸಿಂಬೆಗೆ ಕೂದಲನ್ನು ಸುತ್ತಿದ್ದಾರೆ. ತಲೆಯ ಹಿಂಭಾಗದಲ್ಲಿ ಮುತ್ತಿನ ಗೊನೆಯನ್ನಿಟ್ಟಿದ್ದಾರೆ. ಈ ಗೊನೆಯ ಸುತ್ತಲೂ ಕೂದಲ ರಾಶಿಯನ್ನು ಅರ್ಧಚಂದ್ರಾಕೃತಿಯಾಗಿ ಸುತ್ತಿದ್ದಾರೆ. ತೆಕ್ಕೆದುರುಂಬಿಗೆ ಯಾವ ಅಲಂಕಾರವೂ ಇಲ್ಲ. ಮುತ್ತಿನ ಗೊನೆಯೊಂದಿದೆ.



ತೆಕ್ಕೆದುರುಂಬು

ಕಿರೀಟ ಮುಡಿ: ಐಹೊಳೆಯ ದುರ್ಗಾಗುಡಿ ಬಹಳ ಪ್ರಾಚೀನವಾದುದು. ಕಲಾಪೂರ್ಣವಾದುದೂ ಆಗಿದೆ. ಅಲ್ಲಿ ಅನೇಕ ಶಿಲ್ಪಸುಂದರಿಯರಿದ್ದಾರೆ. ಅವರಲ್ಲಿ ಓರ್ವ ಸುಂದರಿ "ಕಿರೀಟಮುಡಿ" ಯನ್ನು ಕಟ್ಟಿದ್ದಾಳೆ. ಇಂಥ ಮುಡಿಯನ್ನು ಹೆಚ್ಚಾಗಿ ರಾಣಿಯರು ಕಟ್ಟುತ್ತಿದ್ದರೆಂದು ತೋರುತ್ತದೆ. ಈ ಕಿರೀಟಮುಡಿಯನ್ನು ಕಟ್ಟಬೇಕಾದರೆ, ಕೂದಲನ್ನು ಸುತ್ತಿ ಮುರಿಗೆ ಮಾಡಿ ತಲೆಯ ಸುತ್ತಲೂ ಕಟ್ಟುತ್ತಾರೆ. ಅದರ ಮುಂಬದಿಯಲ್ಲಿ ಬಂಗಾರದ, ವಜ್ರದ, ರತ್ನಗಳ ಹೂವುಗಳನ್ನೂ, ಎಲೆಗಳನ್ನೂ ಹೆಣೆದು ಬಂಗಾರದ ಕಿರೀಟಾಕಾರ ಮಾಡಿ ತಲೆಯ ಸುತ್ತಲೂ ಕಟ್ಟುತ್ತಾರೆ. ಈ ಕಿರೀಟಮುಡಿ ವಜ್ರಾಭರಣಗಳಿಂದ ಅಲಂಕೃತವಾಗಿರುತ್ತದೆ.



ಕಿರೀಟ ಮುಡಿ

ಸೋಮುರ್ಡಿ: ಸೋಮುರ್ಡಿ ಎಂಬ ಶಬ್ದ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಬಹಳ ಕಡೆಗೆ ದೊರೆಯುತ್ತದೆ.



ಸೋಮುರ್ಡಿ

"ಸೋಮುರ್ಡಿ" ಎಂದರೆ ಜೋಲಾಡುವ ತುರುಬು, ಎಂದು ಅರ್ಥವಾಗುವುದು. ಕುತ್ತಿಗೆಯ ಕೆಳಗಡೆ ಸಡಿಲಾದ, ಜೋಲಾಡುವ ಕೂದಲಿನ ಗಂಟನ್ನು ಪಕ್ಕದ ಚಿತ್ರದಲ್ಲಿ ಕಾಣಬಹುದಾಗಿದೆ.

ಈ ಸುಂದರವಾದ ಸೋಮುರ್ಡಿ ಬೆನ್ನನ್ನು ಅಲಂಕರಿಸುತ್ತದೆ. ಈ ಸೋಮುರ್ಡಿಯ ಮೇಲೆ ಸುಂದರವಾದ

ಹೂವು ಎಲೆಗಳ ಮಾಲೆಗಳನ್ನು ಹಾಕಲಾಗಿದೆ. ಬೈತಲಮಣಿಯನ್ನು ಹಾಕಿ, ತಲೆಯ ಸುತ್ತಲೂ ಮುತ್ತಿನ ಜಾಲರಿಯನ್ನು ಅಳವಡಿಸಲಾಗಿದೆ. "ಲೋಲ ಕುರುಳ್ಗಳನೊಕ್ಕಲಿಕ್ಕಿ" ಕಟ್ಟಿದ ಸೋರ್ಮುಡಿಗೆ ಮುಂದೆ ಮುತ್ತಿನ ಎಳೆಗಳು, ಹಿಂದೆ ಎಲೆ ಹೂಗಳ ಮಾಲೆಗಳು ಒಪ್ಪುತ್ತಿವೆ ಕರಿಯ ಕೂದಲಿನಲ್ಲಿ ಬಿಳಿಯ ಮುತ್ತಿನ ಎಳೆಗಳು ಸುಂದರವಾಗಿ ಕಾಣುತ್ತವೆ. ಇಂಥ ಸೋರ್ಮುಡಿಯ ಮಾದರಿಯನ್ನು ಹಳೇಬೀಡಿನ ಕೆಲವು ಶಿಲಾಬಾಲಿಕೆಯರು ನಮಗೆ ತೋರುತ್ತಾರೆ.


ಜಡೆಮುಡಿ : ಬೇಲೂರ ಶಿಲಾವಿಗ್ರಹಗಳಲ್ಲಿ ಜಡೆಮುಡಿಯ ಮಾದರಿಗಳನ್ನು ನೋಡಬಹುದು. ಅಲ್ಲದೆ ಅವುಗಳ ವರ್ಣನೆ ಕಾವ್ಯದಲ್ಲಿಯೂ ದೊರೆಯುತ್ತದೆ.

ಈ ಚಿತ್ರದಲ್ಲಿ ಕಾಣುವ ಜಡೆಮುಡಿಯನ್ನು ಬೇಲೂರ ಮುಡಿ ಎಂದೂ ಹೇಳಬಹುದು. ಈ ಮುಡಿ ತಲೆಗಿಂತಲೂ ಎತ್ತರವಾಗಿ ಕಟ್ಟಲ್ಪಟ್ಟಿದೆ. ಒಂದು ಸುತ್ತು ಜಡೆ ಚಕ್ರಾಕಾರವಾಗಿ ಸುತ್ತಲ್ಪಟ್ಟಿದೆ. ಅದರ ಸುತ್ತಲೂ ನಸುಬಿರಿದಚ್ಚ ಮಲ್ಲಿಗೆಯ ಮಾಲೆಯನ್ನು ಸುತ್ತಲಾಗಿದೆ. ಆ ಮಾಲೆಯ ಮೇಲೆ ಮತ್ತೊಂದು ಜಡೆಯನ್ನು ಸುತ್ತಿದ್ದಾರೆ. ಅದರ ಮೇಲೆ ಅಡಿಕೆಯ ಹೂವಿನ ಮಾಲೆಯನ್ನು ಹಾಕಿ ಅನಂತರ ಜಡೆಯ ಸುತ್ತನ್ನು ಸುತ್ತಲಾಗಿದೆ. ಈ ರೀತಿಯಾಗಿ ಕೂದಲಿನ ಕರಿಬಣ್ಣ, ಮಲ್ಲಿಗೆಯ ಬಿಳಿಬಣ್ಣ, ಕೂದಲಿನ ಕರಿಬಣ್ಣ, ಅಡಿಕೆಯ ಕೆಂಪು ಬಣ್ಣವು, ಕೂದಲಿನ ಕರಿಬಣ್ಣಗಳು ಒಂದರ ಮೇಲೊಂದು ಚಕ್ರಾಕಾರವಾಗಿ ಬಂದು ವಿವಿಧ ವರ್ಣಗಳ ಶೋಭೆಯನ್ನು ತರುತ್ತಿವೆ. ಜಡೆಮುಡಿಯಲ್ಲಿ ಜಡೆಗೆ ಕಟ್ಟಿದ ಗೊಂಡೆ, ಜಡೆಮುಡಿಯ ಕೆಳಗೆ ಜೋಲಾಡುತ್ತಿದೆ. ಹೂವಿನ ಬಣ್ಣಗಳ ಹೊಂದಿಕೆ, ಜಡೆಯ ಚಂದ ಎಲ್ಲವೂ ಸೇರಿ ಜಡೆಮುಡಿ ಮನೋಹರವಾಗುತ್ತದೆ.



ಜಡೆಮುಡಿ

ತಳಿರ್ಮುಡಿ : ಇದು ಹೆಸರಿಗೆ ತಕ್ಕಹಾಗೆ ಚಿಗುರೆಲೆಗಳಿಂದ ತುಂಬಿಕೊಂಡ ಹೂಗಳ ಮುಡಿಯಾಗಿರುತ್ತದೆ. ಮೊದಲು ಅರ್ಧ ಕೂದಲುಗಳಿಂದ ತುರುಬು ಕಟ್ಟಿ, ಹೂಮಾಲೆಯನ್ನು ಹಾಕುವುದು. ಅನಂತರ ಉಳಿದರ್ಧ ಕೂದಲುಗಳನ್ನು ಮಾಲೆಯ ಸುತ್ತಲೂ ಸುತ್ತಿ "ನನೆಗೊನೆಯ ನಲರ್ದಲರ ಕೊನರ್ಗಳಂ ಕೊಯ್ಕೊಯ್ದು" ಕಮಲದ ದೇಟಿನ ನಾರಿನಿಂದ ಬಣ್ಣ ಬಣ್ಣದ ಚಿಗುರೆಲೆಗಳನ್ನು ಕಟ್ಟಿ ಮುಡಿಗೆ ಮುಡಿಯವುದು - ಹೀಗೆ ಇದರ ವಿಧಾನವೆಂದು ತೋರುತ್ತದೆ. ಇಂತಹ ಆ ಪೊಸದಳಿರ ಪೂಮಾಲೆ ಶೋಭಿಸುತ್ತಿದೆ, ಬೇಲೂರ ಶಿಲಾ ವಿಗ್ರಹದಲ್ಲಿ.



ತಳಿರ್ಮುಡಿ


"ಸುರಯಿಯರೆವಿರಿದಲರ ಮುಡಿಯ ಮುತ್ತಿನ ಬಲೆಯ"ನ್ನು ಇಲ್ಲಿ ಮುಡಿಗೆ ಕಟ್ಟಲಾಗಿದೆ. "ಮುಡಿದ ತಳಿರ ತೊಂಗಲ್ ಜೋಲ್ದು ಬಂದಗ್ರದೋಳ್ ತಾಂ ತೊಡರೆ" ಈ ತಳಿರ್ಮುಡಿ ಆಕರ್ಷಕವಾಗಿ ಕಾಣುತ್ತದೆ. ಈ ಮುಡಿಯ ವಿಧಾನದಲ್ಲಿ ಜಾಣ್ಮೆಯೂ ಸೊಗಸೂ ಬೆರೆತುಕೊಂಡಿವೆ.

ಈ ಮೊದಲು ವಿವರಿಸಿದ ತಳಿರ್ಮುಡಿ ಮುಂದೆ ವಿವರಿಸಲಾಗುವ ಪೂಮುಡಿ, ಸಿರಿಮುಡಿಗಳ ಅನೇಕ ಮಾದರಿಗಳನ್ನು ಬೇಲೂರು, ಹಳೇಬೀಡುಗಳ ಶಿಲ್ಪಕಲೆಯು ನಮಗೆ ಒದಗಿಸುತ್ತದೆ.

ಪೂಮುಡಿ : ಪೂಮುಡಿ ಎಂದೊಡನೆ ಹೂವಿನ ಸೌಂದರ್ಯದೊಂದಿಗೆ ಕೇಶಾಲಂಕಾರದ ಸೌಂದರ್ಯ ಕಣ್ಣೆದುರು ಕಟ್ಟುವುದು. ಈ ಮಾತಿಗೆ ಮುಂದಿನ ಚಿತ್ರದಲ್ಲಿರುವ ಪೂಮುಡಿ ಸಾಕ್ಷಿಯಾಗಿದೆ :

ಇಲ್ಲಿ ಕೂದಲಿನ ಕೆಳಗೆ ಗಂಗಾವನವನ್ನೋ ಬೇರೆ ಕೂದಲಿನ ಗಂಟನ್ನೋ ಇಟ್ಟು, ಅರ್ಧಕೂದಲಿನಿಂದ ದೊಡ್ಡ ತುರುಬನ್ನು ಕಟ್ಟಲಾಗಿದೆ. ಅರ್ಧಕೂದಲನ್ನು ಕೆಳಗೆ ಹಾಗೆಯೇ ಬಿಟ್ಟು, ಬಕುಲದ ಹೂವಿನಿಂದ ಮಾಡಿದ ಮಣಿಬಲೆಯನ್ನು

ತುರುಬಿಗೆ ಕಟ್ಟಲಾಗಿದೆ. ಅದರ ಮೇಲೆ ಅರ್ಧಕೂದಲನ್ನು ವರ್ತುಲಾಕಾರವಾಗಿ ಸುತ್ತಲಾಗಿದೆ. ಅನಂತರ ಸುಂದರವಾದ ಹಳದಿ ಸೇಂವತಿಗೆ ಹೂವಿನ ದೊಡ್ಡ ಮಾಲೆಯನ್ನು ಕಟ್ಟಲಾಗಿದೆ. ಅದರ ಮೇಲೆ ಉಳಿದ ಕೂದಲುಗಳನ್ನು ಮತ್ತೆ ವರ್ತುಲಾಕಾರವಾಗಿ ಸುತ್ತಿ ಸಂಪಿಗೆಯ ಮಾಲೆಯನ್ನು ಮುಡಿಸಲಾಗಿದೆ. ಆ "ಪೂಮುಡಿಯ ಕದಪೊಂದೊಂದನೊಟ್ಟೈಸೆ" ಕಸ್ತೂರಿ, ಪುನುಗು, ಜವಾಜಿ ಮುಂತಾದ ಸುವಸ್ತುವ ತೊಡೆದು ಪೂದುರುಬಿ"ನಿಂತಿರುವುದನ್ನು ಕಾವ್ಯ ವರ್ಣಿಸುತ್ತಿದೆ. ಬೇಲೂರಿನ ಶಿಲಾಬಾಲಿಕೆಯರಲ್ಲಿ ಇಂತಹ ಮಾದರಿ ದೊರೆಯುತ್ತದೆ.



ಪೂಮುಡಿ

ಸಿರಿಮುಡಿ : ಅರ್ಧಕೂದಲಿನ ಕೆಳಗೆ ಗಂಗಾವನವನ್ನಿಟ್ಟು ತುರುಬು ಕಟ್ಟುವದು. ಅನಂತರ ಸ್ವಲ್ಪ ಕೂದಲನ್ನು ತೆಗೆದುಕೊಂಡು ಸುರುಳಿ ಸುತ್ತಿ ತುರುಬಿಗೆ ಸುತ್ತುವದು. ಆಮೇಲೆ ಮುತ್ತಿನ ಮಣಿಜಾಲೆಯನ್ನು ಅಳವಡಿಸುವುದು. ಇನ್ನರ್ಧ ಕೂದಲನ್ನು ಸುರುಳಿ ಸುತ್ತಿ ಅದಕ್ಕೆ ಸಣ್ಣ ಮುತ್ತಿನ ಎಳೆಗಳನ್ನು ತುರುಬಿನ ಸುತ್ತ ಹೊಂದಿಸುವುದು. ಆಮೇಲೆ ಮತ್ತೆ ಕೂದಲುಗಳನ್ನು ಸುತ್ತುವುದು. ಅದರ ಮೇಲೆ ಬಂಗಾರದ ಹೂಮಾಲೆಯನ್ನು ಹಾಕಿ ಇನ್ನೊಂದು ಸುತ್ತು ಮುತ್ತಿನ ಎಳೆಗಳಿಂದ ಕೂದಲನ್ನು ಅಲಂಕರಿಸಿ



ಸಿರಿಮುಡಿ

ಸುತ್ತುವುದು. ಮಧ್ಯದಲ್ಲಿ ತುರುಬಿಗೆ ಬಂಗಾರದ ಕಮಲವನ್ನು ಹಾಕುವುದು. ಆ ಬಂಗಾರದ ಕಮಲಕ್ಕೆ ಸಣ್ಣ ಮುತ್ತಿನ ಗೊನೆಗಳನ್ನು ಜೋತುಬಿಡುವುದು. ಈ ರೀತಿಯಾಗಿ ಮುತ್ತು, ಬಂಗಾರ, ಕೂದಲುಗಳ ಸಾಮರಸ್ಯವೇ ಸಿರಿಮುಡಿಯಾಗಿದೆ.

ಬಂಬಲ್ಮುಡಿ : ವಿಜಯನಗರಧ ದೇವಾಲಯಗಳ ಹೊರಭಾಗದಲ್ಲಿ ಕೆತ್ತಿರುವ ಮಹಿಳೆಯರು ಬಂಬಲ್ಮುಡಿಯನ್ನು ಕಟ್ಟಿದ್ದಾರೆ. ಬಂಬಲ್ಮುಡಿಯೆಂದರೆ ದೊಡ್ಡ ತುರುಬು ಎಂದು ಅರ್ಥವಾಗುವುದು. ಗಂಗಾವನವನ್ನಿಟ್ಟು ಕಟ್ಟಿರುವ ಬಂಬಲ್ಮುಡಿ ಸುಂದರವಾಗಿ ಕಾಣುವುದು. ಕೂದಲಿನ ಕೆಳಗೆ ಗಂಗಾವನದ ಗಂಟನ್ನಿಟ್ಟು, ಅದರ ಮೇಲೆ ಕೂದಲುಗಳನ್ನು ಹರವಿ ದೊಡ್ಡ ಗಂಟನ್ನು ಕಟ್ಟಿದರೆ ಬಂಬಲ್ಮುಡಿಯಾಗುವುದು. "ಕೇಶಭಾರಮಂ ಪೊತ್ತಿರಲಾರ್ಪಳೇ ಜೋಲ್ದ ಬಂಬಲ್ಮುಡಿಯ ಕುಸುಮ ಕೋಮಳೆ " ಎನ್ನುವ ಕಾವ್ಯದ ವರ್ಣನೆಗೆ ಸರಿಹೋಗುವಂತೆ ವಿಜಯನಗರದ ಶಿಲಾವಿಗ್ರಹಗಳಿವೆ.



ಬಂಬಲ್ಮುಡಿ

ಬಂಬಲ್ಮುಡಿಗೆ ಸರಿಯಾಗಿ ಹೊಂದಿಕೊಳ್ಳುವಂತೆ ಕಮಲದ ಹೂವನ್ನು ಅಲ್ಲಿ ಮುಡಿಯಲಾಗುತ್ತದೆ. ಮುಡಿಯ ಭಾರಕ್ಕೆ ಕೊರಲ್ ಕೊಂಕಿದಂತೆ ಮೂರ್ತಿಯಲ್ಲಿ ತೋರಿಸಲಾಗಿದೆ.

ಜೋಲ್ಮುಡಿ : ಜೋಲ್ಮುಡಿ ಉಳಿದ ಮುಡಿಗಳಿಗಿಂತ ಭಿನ್ನವಾಗಿದೆ. ಬಿಡುಮುಡಿಯೊಂದನ್ನುಳಿದು ಉಳಿದೆಲ್ಲ ಮುಡಿಗಳು ತಲೆಯ ಸುತ್ತಲೂ ಚಕ್ರಾಕಾರವಾಗಿ ಬಂದರೆ ಈ ಜೋಲ್ಮುಡಿ ಕುತ್ತಿಗೆಯ ಕೆಳಗಿನಿಂದ ಮೇಲೆ ತಲೆಯ ಮಧ್ಯಭಾಗದವರೆಗೆ ಚಕ್ರಾಕಾರವಾಗಿ ಬಂದು ತಲೆಗೆ ಹೊಂದಿನಿಲ್ಲುವುದು. ತಲೆಗೂ ಮುಡಿಗೂ ಮಧ್ಯದಲ್ಲಿ ಅರ್ಧ ಚಂದ್ರಾಕಾರದಂತೆ ಸ್ಥಳ ಪೊಳ್ಳಾಗಿ ಉಳಿಯುವುದು.

ಪ್ಯಾಡಿನ ತರಹ ಇದ್ದುದನ್ನು ಕೂದಲಿನ ಕೆಳಭಾಗದಲ್ಲಿಟ್ಟು ತಲೆಯ ಮಧ್ಯಭಾಗದವರೆಗೆ ಬರುವಂತೆ ಬಾಗಿಸಿ ಕೂದಲನ್ನು ಬಿಗಿಯಾಗಿ ಸುತ್ತಿದ್ದಾರೆ. ಕೇವಲ ತಲೆಯ ಮಧ್ಯಭಾಗದಲ್ಲಿ ನಿಂತಿರುವ ಈ ಜೋಲ್ಮುಡಿ ಯಾವಾಗಲೂ ಜೋತಾಡುತ್ತಿರುತ್ತದೆ. ಇಂಥ ಜೋಲ್ಮುಡಿಯವರು ವಿಜಯನಗರದ ಶಿಲ್ಪದಲ್ಲಿ ಕಾಣಿಸಿಕೊಳ್ಳುತ್ತಾರೆ. ಅಲ್ಲದೆ ಹಳೆಯ ಕಾಲದ ವರ್ಣ ಚಿತ್ರಗಳಲ್ಲಿ



ಜೋಲ್ಮುಡಿ

ಮಹಿಳೆಯರು ಈ ಬಗೆಯಾಗಿ ಮುಡಿ ಕಟ್ಟಿದುದನ್ನು ಕಾಣಬಹುದಾಗಿದೆ. ಅಂಥ ಜೋಲ್ಮುಡಿಯ ಚಿತ್ರವನ್ನು ಮೇಲೆ ಕೊಡಲಾಗಿದೆ.

ಈಗ ಪ್ಯಾಡ್ ಹಾಕಿ ಕಟ್ಟುವ ಸೊಬಗಿನ ತುರುಬಿನ ಮಾದರಿಗಳು ಅಜಂತಾದಲ್ಲಿ, ಗ್ರೀಕ್ ಪದ್ಧತಿಯ ತುರುಬುಗಳು ಐಹೊಳೆಯಲ್ಲಿ ಕಂಡು



ಗ್ರೀಕ್ ಪದ್ಧತಿಯ ಮುಡಿ (ಐಹೊಳೆ)



ಅಜಂತಾ ಮುಡಿ

ಬರುತ್ತವೆ. ಇದುವರೆಗೆ ವಿವರಿಸಿದ ಮುಡಿಗಳು ಪ್ರಾಚೀನ ಕಾಲದವುಗಳಾಗಿವೆ. ಇನ್ನು ಮಧ್ಯಂತರ ಕಾಲದ ಜಡೆಮುಡಿಗಳಲ್ಲಿ ಕೆಲವನ್ನು ನೋಡೋಣ.

ಮಾಣಿಕ ಜಡೆ : ವಿಶೇಷ ಸಂದರ್ಭಗಳಲ್ಲಿ ಕನ್ನಡತಿಯರು ಹಾಕುವ ಜಡೆಗಳಲ್ಲಿ ಮಾಣಿಕ ಜಡೆ ಬಹಳ ಅಂದವಾಗಿ ಕಾಣುತ್ತದೆ. ಮಾಣಿಕ ಜಡೆಯೆಂದೊಡನೆ ಮಾಣಿಕಗಳನ್ನೇ ಬಂಗಾರದಲ್ಲಿ ಕೂಡಿಸಿ ಜಡೆಗೆ ಹಾಕುವರೆಂದು ಭಾವಿಸಬೇಕಾಗಿಲ್ಲ. ದೊಡ್ಡ ದಾಳಿಂಬ ಹಣ್ಣಿನ ಕೆಂಪು ಬೀಜಗಳನ್ನು ತೆಗೆದುಕೊಂಡು ಜಡೆಯ ಮಧ್ಯ ಭಾಗದಲ್ಲಿ ಒಂದರ ಮೇಲೊಂದು ಕೂಡುವಂತೆ ಜಡೆಯ ತುದಿಯವರೆಗೆ ಹೆಣೆಯುತ್ತಾರೆ. ಕಪ್ಪು ಕೂದಲಿನಲ್ಲಿ ದವನದ ಹಸುರು ಎಲೆಗಳ ಮಧ್ಯದಲ್ಲಿ ಮಿರಿಮಿರಿ ಮಿಂಚುವ ಕೆಂಪು ಬಣ್ಣದ ದಾಳಿಂಬರದ ಬೀಜಗಳು ಮಾಣಿಕಕ್ಕಿಂತ ಸುಂದರವಾಗಿ ಕಾಣುತ್ತವೆ. ಈ ರೀತಿಯಾಗಿ ಹೆಣೆದ ಜಡೆಗೆ ಮಾಣಿಕ ಜಡೆ ಎನ್ನುವರು.

ಕೇದಗೆ ಜಡೆ : ಕೇದಗೆಯ ಜಡೆಗಳೂ ವಿವಿಧವಾಗಿವೆ. ಕೇದಗೆಯ ಬಂಗಾರ ಬಣ್ಣದ ಗರಿಗಳನ್ನು ಕೆಲವರು ಕೂದಲ ಮೇಲ್ಭಾಗದಲ್ಲಿಟ್ಟು ಜಡೆ ಹಾಕುವರು. ಕೂದಲಿನೊಡನೆ ಹೊಂದಿಕೊಂಡ ಕೇದಗೆಯ ಬಂಗಾರ ಬಣ್ಣವು ಕೂದಲಿನ ಕಪ್ಪುಬಣ್ಣವನ್ನೆಲ್ಲ ಅಡಗಿಸಿ ಬಂಗಾರದ ಬಣ್ಣವನ್ನು ಮೆರೆಯುವುದು. ಗರಿಯ ಮುಂಭಾಗವನ್ನು ಮಾತ್ರ ಕತ್ತರಿಸಿ ಜಡೆಯ ಎಡಬಲ ಭಾಗಗಳಲ್ಲಿ ಒಂದಾದಮೇಲೊಂದು ಗರಿಗಳನ್ನು ಹೊಂದಿಸಿ ಸುಂದರವಾದ ಜಡೆಗಳನ್ನು ಹೆಣೆಯುವುದುಂಟು. ಅಲ್ಲದೆ ರಟ್ಟನ್ನು ನಾನಾ ಆಕಾರದ ಹೂವಿನಂತೆ ಕತ್ತರಿಸಿ ಕೇದಗೆಯನ್ನು ಮೊಗ್ಗೆಯ ಆಕಾರದಂತೆ ಮಾಡಿ ರಟ್ಟಿಗೆ ಹೆಣೆದು, ಜಡೆಯ ಮೇಲ್ಭಾಗದಿಂದ ತುದಿಯವರೆಗೆ ಹೆಣೆಯುವರು. ಕೆಳಗೆ ಬಂಗಾರದ ಜಡೆಯ ಗೊಂಡೆಗಳನ್ನು ಜೋತು ಬಿಡುವರು. ಕನ್ನಡತಿಯರಿಗೆ ಕೇದಗೆಯ ಜಡೆಯು ಬಹಳ ಪ್ರೀತಿಯದೆಂದು ತೋರುತ್ತದೆ. ರಸಿಕರಾದವರು ಮಲ್ಲಿಗೆಯ ಹೂವು, ಸೇವಂತಿಗೆ ಹೂವು, ಅಬೋಲಿ (ಕನಕಾಂಬರ), ಅಡಿಕೆ ಹೂಗಳನ್ನೂ ಮಧ್ಯದಲ್ಲಿ ಮರುಗ ಪಚ್ಚೆದವನಗಳನ್ನೂ ಇಟ್ಟು ಜಡೆ ಹೆಣೆಯುವರು. ಅಲ್ಲದೆ ಬಂಗಾರದ ಗುಲಾಬಿಹೂ, ಮೊಗ್ಗೆಯಮಾಲೆ, ನಾಗರ, ತಿರುಪಿನ ಹೂ, ಹರಳಿನ ಹೂಗಳನ್ನು

ಮಾಡಿಸಿ ಜಡೆಗೆ ಹಾಕುವರು. ಸಿರಿವಂತರು ಹೆಳಲಬಂಗಾರ, ಬಂಗಾರದ ಜಡೆಯ ಗೊಂಡೆಗಳನ್ನು ಹಾಕುತ್ತಾರೆ.

ಜಡೆಹಾಕುವ ಕ್ರಮಗಳು ಅನೇಕವಾಗಿವೆ : ಮೂರು ಕಾಲಿನ ಜಡೆ, ಒಂಭತ್ತು ಕಾಲಿನ ಜಡೆ. ಇರುವೆ ಕಾಲಿನ ಜಡೆ, ಪೆಟ್ಟಿಗೆ ಜಡೆ, ನಾಗ ಜಡೆಗಳು ಇತ್ಯಾದಿ. ಮುಡಿಗಳಲ್ಲೂ ನಾನಾ ವಿಧಾನಗಳಿವೆ. ಎರಡು ಜಡೆ, ಮೂರು ಜಡೆಗಳನ್ನು ಹಾಕಿ ಏಳು ಹೆಡೆಯ ನಾಗರ ಹಾವಿನ ಹೆಡೆಯಂತೆ ಮುಡಿ ಕಟ್ಟುವರು. ತುರುಬುಕಟ್ಟಿ ಸುತ್ತಲೂ ಜಡೆ ಹಾಕುವರು. ಸಿಂಬೆದುರುಂಬು ಎಂಬ ಮಾದರಿಯನ್ನೂ ಕಾಣಬಹುದು. ಈ ಜಡೆ ಮುಡಿಗಳೆಲ್ಲ ಮಧ್ಯ ಕಾಲಕ್ಕೆ ಸೇರಿದವುಗಳಾಗಿವೆ.

ಸಿನಿಮಾ ಜಗತ್ತಿನಲ್ಲಿ : ಇತ್ತೀಚೆಗೆ ಸಿನಿಮಾ ಪ್ರಪಂಚದಿಂದ ಕೇಶಾಲಂಕಾರಪ್ರಿಯೆಯರಿಂದ ಅನೇಕ ಬಗೆಯ ಜಡೆ ಮುಡಿಗಳು ರೂಢಿಯಲ್ಲಿ ಬರುತ್ತಿವೆ. ಅವುಗಳಲ್ಲಿಯ ಅನೇಕ ಮುಡಿಗಳನ್ನು ಪ್ರಾಚೀನ ವರ್ಣಚಿತ್ರಗಳ, ಶಿಲ್ಪಕಲೆಯ ಅನುಕರಣದಿಂದ ಹಾಕಲಾಗುತ್ತದೆ. ಅಜಂತಾ ಹಾಗೂ ಬೇಲೂರ ಮುಡಿಗಳ ಅನುಕರಣೆ ಬಹಳ ಪ್ರಚಾರದಲ್ಲಿದೆ. ಇಂದಿನ ಮಹಿಳೆಯರು ಪೇಟೆಯಲ್ಲಿ ದೊರೆಯುವ ಚಕ್ರಾಕಾರದ, ಅರ್ಧಚಕ್ರಾಕಾರದ ಪ್ಯಾಡುಗಳು, ಮನೆಯಲ್ಲೇ ಉಲನ್ ಅಥವಾ ಕೂದಲುಗಳಿಂದ ಮಾಡಿದ ಪ್ಯಾಡ್ ಇವುಗಳನ್ನು ಉಪಯೋಗಿಸಿ ಚಿತ್ತಾಕರ್ಷಕವಾಗಿ, ವೈವಿಧ್ಯಪೂರ್ಣವಾಗಿ ಮುಡಿಗಳನ್ನು ಕಟ್ಟುತ್ತಿದ್ದಾರೆ. ಕೆಲವರು ಒಳಗೆ ಪ್ಯಾಡ್ ಹಾಕಿ ಬಂಬಲ್ಮುಡಿಯಂತೆ ಕಟ್ಟಿದರೆ, ಇನ್ನು ಕೆಲವರು ಪ್ಯಾಡಿನ ಒಳಗೆ ಕೂದಲನ್ನು ಹಾಯಿಸಿ ಚಕ್ರಾಕಾರವಾಗಿ ಕಟ್ಟುತ್ತಾರೆ. ಹಾಗೂ ಅರ್ಧಚಂದ್ರಾಕೃತಿಯ ಮುಡಿಯನ್ನು ಕಟ್ಟಿ, ಜಡೆ ಸುತ್ತುವುದನ್ನೂ ನೋಡುತ್ತೇವೆ. ಈ ರೀತಿ ಜಡೆ ಮುಡಿಗಳನ್ನು ಹಾಕುವದಲ್ಲದೆ ಇಂದಿನ ಸೋದರಿಯರು ಮುಡಿಗೆ ಹೂವಿನ ಅಲಂಕಾರ ಮಾಡುವಲ್ಲಿ ಜಾಣ್ಮೆಯನ್ನು ತೋರುತ್ತಿದ್ದಾರೆ.

ಇಂದಿನ ಕೇಶಾಲಂಕಾರ

ಇಂದು ನಮ್ಮ ಸೋದರಿಯರು ಕೇಶಾಲಂಕಾರದಲ್ಲಿ ಪರಿಣತರಾಗುತ್ತಿದ್ದಾರೆ. ಹೆಣ್ಣುಮಕ್ಕಳ ಸೌಂದರ್ಯಾಭಿವೃದ್ಧಿಗೆ ಕೇಶಾಲಂಕಾರಕ್ಕೆ ಹೂವಿನ ಬಣ್ಣಗಳ ಹೊಂದಿಕೆ ಅತ್ಯಾವಶ್ಯಕವಾಗಿದೆ. ಅಸ್ತವ್ಯಸ್ತವಾಗಿ ಮುಡಿಕಟ್ಟಿದ ಮಹಿಳೆ ಮುಖಹೀನಳಾಗಿ ಕಾಣುತ್ತಾಳೆ. ಅದೇ ಕೇಶಾಲಂಕಾರದಲ್ಲಿ

ಬಲ್ಲಿದಳಾದವಳು ಅಚ್ಚುಕಟ್ಟಾಗಿ ತಲೆಬಾಚಿಕೊಂಡು ಮುಖಕ್ಕೆ ತಕ್ಕಂತಹ ಮುಡಿಯನ್ನು ಕಟ್ಟಿಕೊಂಡರೆ ಅವಳ ವ್ಯಕ್ತಿತ್ವ ಎದ್ದು ಕಾಣುತ್ತದೆ. ಅಲಂಕಾರ ಮಾಡಿಕೊಳ್ಳುವಾಗ, ಪ್ರಾಚೀನಕಾಲದ್ದು ಆಧುನಿಕಕಾಲದ್ದು, ಎಂಬ ಭಾವನೆಗೆ ಎಡೆಗೊಡಬಾರದು. ಸುಂದರವಾಗಿ ಕಾಣುವಂಥದನ್ನು ಸ್ವೀಕರಿಸಬೇಕು. ಪ್ರಾಚೀನತೆ, ಆಧುನಿಕತೆಗಳಿಗಿಂತ ವಯಸ್ಸಿಗೆ ತಕ್ಕಂತೆ ಕೇಶಾಲಂಕಾರ ಮಾಡಿಕೊಳ್ಳುವುದೂ ಒಂದು ಕಲೆಯಾಗಿದೆ. ಹೊಸದೆಲ್ಲ ಒಳ್ಳೆಯದೆಂಬ ಹವ್ಯಾಸಕ್ಕೆ, ಆಕರ್ಷಣೆಗೆ ಬಲಿಬೀಳಬಾರದು. ಪ್ರಾಚೀನ ಕಾಲದ ಕೇಶಾಲಂಕಾರವನ್ನು ತೆಗೆದುಕೊಂಡು ಇಂದಿನ ಯುಗಕ್ಕೆ ಒಪ್ಪುವಂತಹ ಸಂಸ್ಕಾರವನ್ನು ಕೇಶರಚನೆಗೆ ಕೊಡಬೇಕಾಗಿದೆ.

ಸ್ತ್ರೀಯರ ಸೌಂದರ್ಯಾಭಿವೃದ್ಧಿಯ ಕಾರ್ಯದಲ್ಲಿ ಬಡವ ಬಲ್ಲಿದರೆಲ್ಲರಿಗೆ ಅನುಕೂಲವಾಗುವ ಅಲಂಕಾರವೆಂದರೆ ಕೇಶಾಲಂಕಾರ. ಕೇಶಾಲಂಕಾರಕ್ಕೆ ಒಪ್ಪುವಂತಹ ಪುಷ್ಪಾಲಂಕಾರ ಜೊತೆಯಾದರೆ ಅತಿ ಸುಂದರವಾಗುತ್ತದೆ. ರತ್ನಾಭರಣಗಳ ಭೂಷಣಕ್ಕಿಂತ, ಅರಳಿದ ನಿಸರ್ಗಸುಂದರವಾದ ಹೂವುಗಳು ಕೇಶಾಲಂಕಾರಕ್ಕೆ ಚೆನ್ನಾಗಿ ಒಪ್ಪುತ್ತವೆ. ಸುಗಂಧಭರಿತವಾದ ಅರಳಿದ ಹೂವುಗಳು ರತ್ನಾಭರಣಗಳನ್ನು ನಾಚಿಸುವಂತಿರುತ್ತವೆ. ಆದರೆ ಕೇಶಾಲಂಕಾರದ ಜೊತೆಗೆ ಯಾವ ರೀತಿಯಾಗಿ ಹೂವುಗಳನ್ನುಪಯೋಗಿಸಬೇಕೆಂಬ ಕಲೆಯಲ್ಲಿ ನಮ್ಮ ಸೋದರಿಯರು ಬಲ್ಲಿದರಾಗಬೇಕು. ಸೀರೆಯ ಬಣ್ಣಕ್ಕೆ, ಮೈಬಣ್ಣಕ್ಕೆ ಒಪ್ಪುವಂತಹ ಹೂಮಾಲೆಯನ್ನು ಹಾಕುವುದೂ ಒಂದು ಕಲೆಯಾಗಿದೆ.

ಇಂದು ಕನ್ನಡನಾಡಿನಲ್ಲಿ ತರುಣಿಯರು ಒಂದು ಇಲ್ಲವೇ ಎರಡು ಜಡೆ ಹೆಣೆದುಕೊಳ್ಳುತ್ತಾರೆ. ಬಹಳ ಮುಂದುವರೆದವರು ಕೂದಲರಾಶಿಗೆ ೨-೩ ಬಗೆಯಾಗಿ ರಿಬ್ಬನ್ ಕಟ್ಟಿಕೊಳ್ಳುತ್ತಾರೆ. ಮಧ್ಯಮವಯಸ್ಸಿನ ಗೃಹಿಣಿಯರು ಗಂಟುಮುಡಿಯನ್ನು ಕಟ್ಟುತ್ತಾರೆ. ಇಲ್ಲವೆ ಜಡೆಹೆಣೆದುಕೊಂಡು ಚಕ್ರಾಕಾರವಾಗಿ ಮುಡಿಯನ್ನು ಕಟ್ಟುತ್ತಾರೆ. ಇತ್ತೀಚೆಗೆ ಪ್ಯಾಡ್ ಹಾಕಿ ಮುಡಿಯನ್ನು ಕಟ್ಟುತ್ತಾರೆ. ನಮ್ಮ ಸೋದರಿಯರು ಪ್ರಾಚೀನ ದೇವಾಲಯಗಳಲ್ಲಿರುವ ಶಿಲಾಕನ್ಯೆಯರ ಜಡೆಮುಡಿಗಳನ್ನು ನೋಡಿ, ಕಾವ್ಯಸುಂದರಿಯರನ್ನು ಕಂಡು ಕೇಶಾಲಂಕಾರದಲ್ಲಿ ವೈವಿಧ್ಯವನ್ನು ಬೆಳೆಸಿಕೊಳ್ಳಬಹುದಾಗಿದೆ. ವಿಶೇಷ ಸಂದರ್ಭಗಳಲ್ಲಿ ವಿವಿಧ ಬಗೆಯ

ಮುಡಿಗಳನ್ನು ಕಟ್ಟಬಹುದಾಗಿದೆ. ಬಡವ ಬಲ್ಲಿದರೆಲ್ಲರೂ ಕೇಶಾಲಂಕಾರ ಕಲೆಯನ್ನು ಬೆಳೆಸಿಕೊಳ್ಳಬಹುದಾಗಿದೆ. ಕೇಶರಚನೆಗೆ ಹಣದ ಅವಶ್ಯಕತೆಯಿಲ್ಲ. ಅರಳಿ ಮುಗುಳುನಗೆ ಬೀರುತ್ತಿರುವ ಕೆಲವು ಹೂವುಗಳು, ೧ ಡಜನ್ ಆಕಡಾ (ಹೇರ್‌ಪಿನ್) ಒಂದು ಉಲನ್ ಪ್ಯಾಡ್, ಕರೀರೇಶಿಮೆಯದಾರ, ಇಷ್ಟು ಸಾಮಗ್ರಿಗಳಿಂದ ಬೇಕಾದಷ್ಟು ಬಗೆಯ ಕೇಶಾಲಂಕಾರವನ್ನು ಮಾಡಬಹುದಾಗಿದೆ.

ಕೂದಲು ಉದ್ದವಿಲ್ಲದವರು ಯಾವ ಬಗೆಯ ಕೇಶಾಲಂಕಾರ ಮಾಡಿಕೊಳ್ಳುವುದೂ ಸಾಧ್ಯವಿಲ್ಲವೆಂದು ಬೇಸರಿಸಬಾರದು. ಕೂದಲು ಕಡಿಮೆಯಿದ್ದವರು ಅಲಕ್ಷ್ಯಮಾಡಬಾರದು. ಗಂಗಾವನ, ಪ್ಯಾಡ್‌ಗಳನ್ನು ಹಾಕಿ ಕೇಶಾಲಂಕಾರ ಮಾಡಿಕೊಳ್ಳಬಹುದಾಗಿದೆ.

ಪುಷ್ಪಾಲಂಕಾರ

ಕೇಶಾಲಂಕಾರ ಪುಷ್ಪಾಲಂಕಾರ ಜೊತೆಯಾದರೆ ಅತಿ ಸುಂದರವಾಗಿ ಕಾಣುತ್ತದೆ. ಪ್ರಾಚೀನ ಕಾಲದ ಋಷಿಪತ್ನಿಯರು, ಋಷಿಕನ್ಯೆಯರು ಹೂವಿನಿಂದ ಅಲಂಕಾರ ಮಾಡಿಕೊಳ್ಳುತ್ತಿದ್ದರೆಂದು ತಿಳಿದು ಬರುತ್ತದೆ. ಅವರು ನಿಸರ್ಗದ ಮಡಿಲಲ್ಲಿ ಬೆಳೆಯುತ್ತಿದ್ದರು. ಸುತ್ತಲಿನ ಗಿಡಬಳ್ಳಿಗಳು ಸುಂದರವಾದ, ಸುವಾಸಿತವಾದ ಹೂವುಗಳನ್ನು ಹೊತ್ತು ಬಳುಕುತ್ತ ನಿಂತಿರುವುದನ್ನು ಕಂಡು ತಾವೂ ಆ ಲತೆಗಳಂತೆ ಅಲಂಕರಿಸಿಕೊಳ್ಳಬೇಕೆಂಬ ಕಲ್ಪನೆ ಅವರ ಮನಸ್ಸಿನಲ್ಲಿ ಮೂಡಿರಬೇಕು. ಶಕುಂತಲೆ ಸೀತೆ ಮೊದಲಾದವರು ಹೂವಿನಿಂದ ಕೈಬಳೆ, ರಟ್ಟೆಬಳೆ, ಕೊರಳಹಾರ, ಕಟಿಸೂತ್ರಗಳನ್ನು ಮಾಡಿ ಧರಿಸಿಕೊಳ್ಳುತ್ತಿದ್ದರಂತೆ.

ಪ್ರಾಚೀನ ಕಾಲದಿಂದ ಕನ್ನಡತಿಯರು ಹೂವಿನ ಅಲಂಕಾರವನ್ನು ಬಲ್ಲವರಾಗಿದ್ದರೆಂಬ ಮಾತು ಕಾವ್ಯಗಳಿಂದ ತಿಳಿದುಬರುತ್ತದೆ. ನಮ್ಮ ಮಹಿಳೆಯರು ಅನೇಕ ಬಗೆಯಾಗಿ ಹೂಮಾಲೆ ಮಾಡುವುದರಲ್ಲಿ ಪರಿಣತರಾಗಿದ್ದರು. ಭಾರತೀಯರಿಗೆ ಹೂವು ಪವಿತ್ರವಾಗಿವೆ ; ಸೌಭಾಗ್ಯದ ಚಿಹ್ನೆಗಳಾಗಿವೆ. ನಾಮಕರಣ, ಪೂಜೆ, ಅರಿಷಿಣ ಕುಂಕುಮ, ವಿವಾಹ ಮೊದಲಾದ ಸಂದರ್ಭಗಳಲ್ಲಿ ಹೂವಿಗೆ ಅಗ್ರಸ್ಥಾನವಿದೆ. ಕೇಶಾಲಂಕಾರ ಮಾಡಿಕೊಳ್ಳುವಾಗ

ಹೂವುಗಳ ಬಣ್ಣದೆಡೆ ಲಕ್ಷ್ಯವಿರಬೇಕಾಗುತ್ತದೆ. ಉಟ್ಟಸೀರೆಯ ಬಣ್ಣ, ತೊಟ್ಟ ಕುಪ್ಪಸದ ಬಣ್ಣ ಮುಡಿದ ಹೂವಿನ ಬಣ್ಣಗಳಲ್ಲಿ ಹೊಂದಿಕೆಯಾಗುವಂತೆ ನೋಡಿಕೊಳ್ಳಬೇಕು. ಸೀರೆ ಕುಪ್ಪಸಗಳ ಬಣ್ಣ ಒಂದೇ ಆಗಿದ್ದರೆ ಹೂಮಾಲೆಯೂ ಅದೇ ಬಣ್ಣದ್ದಾಗಿರಬೇಕು. ಕುಪ್ಪಸದ ಬಣ್ಣ ಬೇರೆಯಾಗಿದ್ದರೆ ಕುಪ್ಪಸದ ಬಣ್ಣ ಇಲ್ಲವೇ ಸೀರೆಯ ಬಣ್ಣದ ಹೂವನ್ನೇ ಮುಡಿದುಕೊಳ್ಳುವುದು ಕಲಾಭಿರುಚಿಯ ದ್ಯೋತಕವಾಗಿದೆ. ಹಸಿರು ಬಣ್ಣದ ಸೀರೆಯನ್ನುಟ್ಟು ಹಳದಿ ಕುಪ್ಪಸ ತೊಟ್ಟಾಗ ಹಳದಿ ಸೇವಂತಿಗೆಯ ಮಾಲೆ ಒಪ್ಪುತ್ತದೆ. ಗುಲಾಬಿ ಇಲ್ಲವೆ ಕನಕಾಂಬರ ಬಣ್ಣದ ಸೀರೆಗೆ ಕೆಂಪು ಕುಪ್ಪಸ ಕೆಂಪು ಗುಲಾಬಿ ಹೂವು ಒಪ್ಪುತ್ತವೆ. ಬಿಳಿಬಣ್ಣದ ಹೂವುಗಳಲ್ಲಿ ಬಹಳ ಬಗೆಯ ಹೂವುಗಳು ದೊರೆಯುತ್ತವೆ. ಸೀರೆ ಕುಪ್ಪಸಗಳಿಗೆ ಹೊಂದಿಕೆಯಾಗಬಲ್ಲ ಹೂವುಗಳು ದೊರೆಯದೆ ಇದ್ದರೆ ಬಿಳಿ ಬಣ್ಣದ ಹೂವುಗಳನ್ನೇ ಉಪಯೋಗಿಸಬಹುದು. ವಿಶೇಷ ಸಮಾರಂಭಗಳಲ್ಲಿ ಭಾಗವಹಿಸಬೇಕಾದಾಗ ಬಣ್ಣ ಬಣ್ಣದ ಹೂಮಾಲೆಗಳನ್ನೂ, ಸಭೆ ಸಮ್ಮೇಳನಗಳಿಗೆ ಹೋಗಬೇಕಾದಾಗ ಬಿಳಿ ಬಣ್ಣದ ಹೂವುಗಳನ್ನೂ ಧರಿಸುವುದು ಯೋಗ್ಯ.

ಹೂವನ್ನು ಹಾಕಿಕೊಳ್ಳುವಾಗ ಅವುಗಳ ಗಾತ್ರವನ್ನೂ ಲಕ್ಷ್ಯದಲ್ಲಿರಿಸಬೇಕು. ಜಾಜಿ, ಮಲ್ಲಿಗೆ, ಬಕುಳ, ಸುರಗಿ, ಸುರಹೊನ್ನೆ ಹೂವುಗಳು ಬಹಳ ನಾಜೂಕಾಗಿರುತ್ತವೆ. ಅಂಥ ಹೂವುಗಳ ಮಾಲೆಗಳನ್ನು ಮಾಡಬೇಕಾಗುತ್ತದೆ. ಹಾಗೇ ಬಿಡಿಹೂವುಗಳನ್ನು ಹಾಕಿಕೊಳ್ಳಲು ಬರುವುದಿಲ್ಲ. ಗುಲಾಬಿ, ಸಂಪಿಗೆ, ನಾಗಸಂಪಿಗೆ, ದೊಡ್ಡಸೇವಂತಿಗೆ ಹೂವುಗಳ ಮಾಲೆ ಚೆನ್ನಾಗಿ ಕಾಣುವುದಿಲ್ಲ. ಅಂಥ ಹೂವುಗಳಿಗೆ ಹೊಂದಿಕೆಯಾಗುವಂತಹ ಸಣ್ಣ ಎಲೆಗಳನ್ನು ಜೋಡಿಸಿ ಒಂದೊಂದೇ ಹೂವುಗಳನ್ನು ಮುಡಿದುಕೊಂಡರೆ ಸುಂದರವಾಗಿ ಕಾಣುತ್ತದೆ. ರಾತ್ರಿ ರಾಣಿ, ಸಣ್ಣಸೇವಂತಿಗೆ, ಬೋಗೆನ್‌ವಿಲ್ಲಾ ಮೊದಲಾದ ಹೂವುಗಳು ನೈಸರ್ಗಿಕವಾಗಿಯೆ ಗೊಂಚಲು ಗೊಂಚಲಾಗಿರುತ್ತವೆ. ಇಂಥ ಒಂದು ಸಣ್ಣ ಹೂಗೊಂಚಲನ್ನು ಮುಡಿಯ ಬಲಬದಿಗೆ ಹಾಕಿಕೊಂಡರೆ ಚೆನ್ನಾಗಿ ಕಾಣುತ್ತದೆ. ತೆಳ್ಳಗಿನ ರಟ್ಟನ್ನು ವಿವಿಧಾಕಾರವಾಗಿ ಕತ್ತರಿಸಿ ರಟ್ಟು ಕಾಣದಂತೆ ಸಣ್ಣ ಎಲೆ, ಹೂವುಗಳಿಂದ ಹೆಣೆದು ಮುಡಿಯ ಮಧ್ಯದಲ್ಲಿ ಕಟ್ಟಿದರೆ ಸುಂದರವಾಗಿ ಕಾಣುತ್ತದೆ.

ಕೆಲವರು ಚಿಕ್ಕಮುಡಿಗೆ ದೊಡ್ಡಮಾಲೆಯನ್ನು ಮುಡಿಕಾಣದಂತೆ ಕಟ್ಟಿಕೊಳ್ಳುತ್ತಾರೆ. ಮೂಗಿಗಿಂತ ಮೂಗುತಿಭಾರ ಎನ್ನುವಂತೆ, ಮುಡಿಗಿಂತ ಮಾಲೆಯೇ ದೊಡ್ಡದಾಗಿ ಅಸಹ್ಯವಾಗಿ ಕಾಣಿಸುತ್ತದೆ. ಇನ್ನು ಕೆಲವರು ತರತರದ ಬಣ್ಣದ ಹೂವುಗಳನ್ನು ಒಮ್ಮೆಲೆ ತಲೆಯಲ್ಲಿಯೇ ಒಂದು ಹೂದಾನಿ (ಫ್ಲಾವರ್ ಪಾಟ್)ಇಟ್ಟಂತೆ ಮುಡಿದುಕೊಳ್ಳುವುದೂ ಉಂಟು. ಇಲ್ಲವೆ ಚಿಕ್ಕ ಜಡೆಯಮೇಲೆ ದೊಡ್ಡ ಹೂವಿನ ಗೊಂಚಲನ್ನೋ, ಬಣ್ಣ ಬಣ್ಣದ ಮಾಲೆಗಳನ್ನೋ ಹಾಕಿಕೊಳ್ಳುವವರೂ ಇದ್ದಾರೆ. ಸಣ್ಣಮುಡಿ ಗಿಡ್ಡ ಜಡೆಯುಳ್ಳವರು ಕೆಲವೇ ಹೂವುಗಳನ್ನು ಇಟ್ಟುಕೊಂಡು ತೃಪ್ತರಾಗಬೇಕು. ಇಲ್ಲವೆ ಗಂಗಾವನ ಹಾಕಿ ಜಡೆಮುಡಿಗಳನ್ನು ಕಟ್ಟಿಕೊಳ್ಳಬೇಕು. ಆಭಾಸವಾಗುವಂತೆ ಹೂವನ್ನು ಮುಡಿದುಕೊಳ್ಳಬಾರದು.

ವಿವಿಧ ವರ್ಣಗಳ ಮುಡಿ

ಯುವತಿಯರು ತಲೆ ಬಾಚಿಕೊಂಡು ಕೂದಲ ಕೆಳಗೆ ಪ್ಯಾಡ್ ಇಟ್ಟು ಕರಿಯರೇಶಿಮೆದಾರ ಕಟ್ಟಬೇಕು. ಉಳಿದ ಕೂದಲನ್ನು ಎರಡು ಭಾಗಮಾಡಿ ಜಡೆಹಾಕಬೇಕು. ಪ್ಯಾಡ್ ಇಟ್ಟು ಕಟ್ಟಿದ ಮುಡಿಯ ಸುತ್ತಲೂ ಜಡೆಗಳನ್ನು ಸುತ್ತಬೇಕು. ಇಲ್ಲವೆ ಜಡೆಯ ಬದಲು ಕೂದಲನ್ನು ಹಾಗೇ ಮುರಿಗೆಮಾಡಿ ಮುಡಿಗೆ ಸುತ್ತಿದರೂ ಸರಿಯೆ. ಈ ಬಗೆಯಾಗಿ ಕಟ್ಟಿದ ಮುಡಿಯ ಬಲಬದಿಗೆ ಅರಳಿದ ಬಿಳಿಯ ಸೇವಂತಿಗೆ, ಇಲ್ಲವೆ ಗುಲಾಬಿಯ ಒಂದೇ ಒಂದು ಹೂವನ್ನು ಮುಡಿದುಕೊಂಡರೆ ಚೆನ್ನಾಗಿರುತ್ತದೆ. ಅಥವಾ ಮಲ್ಲಿಗೆಯ ಮಾಲೆ ಧರಿಸಿಕೊಳ್ಳಬೇಕು.

ಇನ್ನೊಂದು ಬಗೆಯ ಮುಡಿಯನ್ನು ಕಟ್ಟಿಕೊಳ್ಳುವದಾದರೆ ಮೊದಲು ಪ್ಯಾಡ್ ಹಾಕಿ ಮುಡಿಯನ್ನು ಕಟ್ಟಬೇಕು. ಉಳಿದ ಕೂದಲಿನಿಂದ ದೊಡ್ಡ ಮುಡಿಯ ಕೆಳಭಾಗದಲ್ಲಿ ಒಂದು ಸಣ್ಣ ಮುಡಿಯನ್ನು ಕಟ್ಟಬೇಕು. ದೊಡ್ಡ ಮುಡಿಗೆ ಹಾಗೂ ಸಣ್ಣ ಮುಡಿಗೆ ಪ್ರತ್ಯೇಕವಾಗಿ ಎರಡು ಮಾಲೆಗಳನ್ನು ಮುಡಿಯ ಸುತ್ತಲೂ ಕಟ್ಟಬೇಕು. ದೊಡ್ಡ ಮುಡಿಯ ಮೇಲ್ಭಾಗದಲ್ಲಿ ಮುತ್ತಿನಸರದ ಪದಕವನ್ನು ಇಟ್ಟು ಆ ಸರದ ಮುತ್ತಿನ ಎಳೆಗಳನ್ನು ತ್ರಿಕೋನಾಕಾರವಾಗಿ ಬರುವಂತೆ ಮಾಡಬೇಕು. ಕರಿಯ ಕೂದಲಿನ ಸುತ್ತಲೂ ಬಿಳಿಯ ಮಲ್ಲಿಗೆಮಾಲೆ. ಮಧ್ಯದಲ್ಲಿ ಮುತ್ತಿನ ಪದಕ

ಎರಡೂಬದಿಗೆ ಮುತ್ತಿನ ಎಳೆಗಳಿರುವ ಇಂತಹ ಮುಡಿ ಕಲಾತ್ಮಕವಾಗಿ ಆಕರ್ಷಕವಾಗಿ ಕಾಣುತ್ತದೆ.

ತ್ರಿವರ್ಣಮುಡಿ : ಪ್ಯಾಡ್ ಹಾಕಿ ಅರ್ಧ ಕೂದಲಿನಿಂದ ಮುಡಿಯನ್ನು ಕಟ್ಟಿ, ಅದರ ಸುತ್ತಲೂ ಕನಕಾಂಬರ ಹೂವಿನ ಮಾಲೆ ಹಾಕಿ ಮತ್ತೆ ಕೂದಲನ್ನು ಸುರುಳಿ ಸುತ್ತಿ, ಮಲ್ಲಿಗೆಯ ಹೂವಿನ ಮಾಲೆ ಕಟ್ಟುವರು. ಆಮೇಲೆ ಕೂದಲನ್ನು ಸುತ್ತಿ ದವನದ ಮಾಲೆ ಹಾಕುವರು. ಮುಡಿಯನ್ನು ನೋಡಿದಾಗ ನಮ್ಮ ರಾಷ್ಟ್ರಧ್ವಜಕ್ಕಿರುವ ಬಿಳಿ, ಹಸಿರು, ಕೇಸರಿ ಬಣ್ಣಗಳ ಜ್ಞಾಪಕಬರುತ್ತದೆ. ಇನ್ನೊಂದು ಬಗೆಯೆಂದರೆ, ಜಡೆಯನ್ನು ಹಾಕಿ ದೊಡ್ಡ ಹಳದಿಯ ಸೇವಂತಿಗೆ ಹೂವನ್ನಿಟ್ಟು ಸುತ್ತಲೂ ಚಕ್ರಾಕಾರವಾಗಿ ಮಲ್ಲಿಗೆಯ ಎಳೆಗಳನ್ನು ಹಾಕುತ್ತಾರೆ. ಹಾಗೂ ಎರಡು ಜಡೆಗಳನ್ನು ಹಾಕಿ ಎಡಕ್ಕೊಂದು ಬಲಕ್ಕೊಂದು ಮುಡಿಯನ್ನು ಕಟ್ಟಿ ಅದರ ಸುತ್ತಲೂ ಮಲ್ಲಿಗೆಯ ಮೊಗ್ಗುಗಳ ಮಾಲೆಗಳನ್ನು ಕಟ್ಟುತ್ತಾರೆ. ಮುಡಿಯ ಸುತ್ತಲಿನ ಕೂದಲಿನಿಂದ ಸುರುಳಿ ಸುತ್ತಿ ಅದಕ್ಕೆ ಬಕುಲ ಹೂವಿನ ಎಳೆಯನ್ನು ಸುತ್ತಿ ಮುಡಿಗೆ ಸುತ್ತಿದರೆ ಬಹಳ ಅಂದವಾಗಿ ಕಾಣುತ್ತದೆ. ಪ್ಯಾಡ್ ಹಾಕಿ ದೊಡ್ಡ ತುರುಬನ್ನು ಕಟ್ಟಿ, ಮಲ್ಲಿಗೆಯ ಮೊಗ್ಗುಗಳಿಂದ, ಕೇದಗೆಯ ಗರಿಗಳ ಮೊಗ್ಗಿನಿಂದ, ರಾತ್ರಿ ರಾಣಿ ಹೂವಿನಿಂದ ರಂಗವಲ್ಲಿ ತೆಗೆದಂತೆ ತಮಗೆ ಬೇಕಾದ ವಿಧದಲ್ಲಿ ಹೂವನ್ನು ಹೆಣೆಯಬಹುದು.

ಕಾಮನ ಬಿಲ್ಲು: ಕೇಶರಾಶಿಯನ್ನು ಎಂಟು ಭಾಗವಾಗಿ ವಿಂಗಡಿಸಿ ಸುರುಳಿಸುತ್ತಿ, ಎಂಟು ಸಣ್ಣ ಸಣ್ಣ ತುರುಬುಗಳನ್ನು ಕಮಲದ ಆಕಾರದಲ್ಲಿ ಕಟ್ಟಿ, ಪ್ರತಿಯೊಂದರ ಸುತ್ತಲೂ ಗುಲಾಬಿ ಹೂವಿನ ಮಾಲೆಯನ್ನು ಮುಡಿದುಕೊಂಡು ನೋಡಬೇಕು, ಆ ಕೇಶಾಲಂಕಾರದ ಸೊಬಗನ್ನು. ಇನ್ನೊಂದು ಬಗೆಯ ತುರುಬು ಕಟ್ಟುವಾಗ ಅರ್ಧಕೂದಲಿನ ಗಂಟು ಹಾಕಿ, ಇನ್ನುಳಿದ ಅರ್ಧ ಕೂದಲನ್ನು ಆ ಗಂಟಿನೊಳಗಿಂದ ಹಾಯಿಸಿ ಹಾಗೇ ಕೆಳಗೆ ಅಲೆದಾಡುವಂತೆ ಬಿಡಬೇಕು. ಆ ಅಲೆದಾಡುವ ಕೂದಲ ರಾಶಿಗೊಂದು ಮಾಲೆಯನ್ನು ಹಾಕಿ ತುರುಬಿನ ಸುತ್ತಲೂ ಒಂದು ಮಾಲೆ ಹಾಕಿದರೆ ಬಾಣವನ್ನು ಹೂಡಿದ ಕಾಮನಬಿಲ್ಲಿನಂತೆ ಕಂಗೊಳಿಸುವುದು ಮುಡಿ. ತಮಗೆ ಬೇಕಾದ ಆಕಾರದಲ್ಲಿ ಮುಡಿಯನ್ನು ಕಟ್ಟಿ,

ಮುಡಿಯ ಮಧ್ಯದಲ್ಲಿ ಕೇದಗೆಯ ಹೂವನ್ನು ಮಾಡಿ ಹಾಕಬೇಕು. ಮುಡಿಯ ಸುತ್ತಲೂ ಸಂಪಿಗೆಯ ಮಾಲೆಯನ್ನು ಹಾಕಬೇಕು.

ಪ್ಲ್ಯಾಸ್ಟಿಕ್ ಮಣಿಗಳ ಸರಗಳಿಂದಲೂ ಅನೇಕ ರೀತಿಯ ಅಲಂಕಾರವನ್ನಿಂದು ಮುಡಿಗೆ ಮಾಡುತ್ತಾರೆ. ಇಂಥ ಅನೇಕಾನೇಕ ಸುಂದರವಾದ ಅಲಂಕಾರ ಯುಕ್ತವಾದ ಕೇಶಾಲಂಕಾರಗಳನ್ನು ನೋಡಿದಾಗ ಲಲಿತಕಲೆಗಳಲ್ಲಿ ಕೇಶಾಲಂಕಾರವೂ ಒಂದು ಶ್ರೇಷ್ಠ ಕಲೆಯಾಗಿದೆಯೆಂಬುದು ಸ್ಪಷ್ಟವಾಗುತ್ತದೆ.

ಇಂದಿನ ಕನ್ನಡತಿಯರು ಐಹೊಳೆ, ಪಟ್ಟದಕಲ್ಲು, ಬೇಲೂರು, ಹಳೇಬೀಡು, ವಿಜಯನಗರಗಳ ದೇವಾಲಯಗಳ ಶಿಲ್ಪಕಲಾಕೃತಿಗಳಲ್ಲಿ ದೊರೆಯುವ ಕೇಶಾಲಂಕಾರವನ್ನು ಅನುಸರಿಸಿದರೆ ತಮ್ಮ ಪೂರ್ವಜರ ಕೇಶಾಲಂಕಾರ ಕಲೆಯನ್ನು ಉಳಿಸಿದಂತಾಗುವುದಲ್ಲದೆ ತಮ್ಮ ಸೌಂದರ್ಯ ಪ್ರಸಾಧನೆಯ ವೈವಿಧ್ಯವೂ ಹೆಚ್ಚುವುದು. ಅಲ್ಲದೆ ಪ್ರಾಚೀನ ಸಾಹಿತ್ಯದಲ್ಲಿ ದೊರೆಯುವ ಮುಡಿಗಳ ಹೆಸರುಗಳನ್ನು ರೂಢಿಯಲ್ಲಿ ತರುವುದು ಯೋಗ್ಯವಾಗುತ್ತದೆ. ಸೀನೇಮಾ ನಟಿಯರ ಹೆಸರುಗಳನ್ನು ಮುಡಿಗಳಿಗೆ ಇಡುವ ಬದಲು, ಮೊದಲು ರೂಢಿಯಲ್ಲಿದ್ದ ಎಳಲ್ಮುಡಿ, ಬಳಲ್ಮುಡಿ, ಸೋರ್ಮುಡಿ, ಪೂಮುಡಿ ಎಂದು ಕರೆಯುವದು ನಮ್ಮ ಸಂಪ್ರದಾಯಕ್ಕೂ ಸಂಸ್ಕೃತಿಗೂ ಸರಿಹೋಗುವುದು. ಮತ್ತು ಹೆಸರುಗಳಿಗೆ ಒಂದು ಬಗೆಯ ಸಾಹಿತ್ಯಿಕ ಸ್ವಾರಸ್ಯವೂ ಉಂಟಾಗುವುದು.

೨

ಆಭರಣಗಳ ಅಂದ

ಪೀ ಠಿ ಕೆ

ಭಾರತದ ಮಹಿಳೆಯರ ಆಭರಣಗಳು ಪುರಾತನ ಕಾಲದಿಂದ ಜಗತ್ಪ್ರಸಿದ್ಧವಾಗಿಯೆ ಇವೆ. ಪ್ರಾಗೈತಿಹಾಸಿಕ ಕಾಲದಿಂದ ಇಲ್ಲಿಯ ಸ್ತ್ರೀಯರು ಆಭರಣದ ಅಂದವನ್ನರಿತವರಾಗಿದ್ದಾರೆ. ಆಭರಣಗಳು ಮಹಿಳೆಯರ ಸೌಂದರ್ಯವನ್ನು ಹೆಚ್ಚಿಸಲು ಕಾರಣವಾಗಿವೆ. ಸಮಾಜದ ಆರ್ಥಿಕ ಭದ್ರತೆಯ ತಳಹದಿಯಾಗಿವೆ. ಹಲವು ಆಭರಣಗಳು ದೇಹದ ಕ್ರಮಬದ್ಧತೆಯನ್ನು ಕಾಯ್ದುಕೊಳ್ಳಲು ಅವಶ್ಯಕವಾಗಿವೆ. ಸೌಂದರ್ಯವರ್ಧನೆಗಾಗಿ, ಸಾಮಾಜಿಕ ಗೌರವಕ್ಕಾಗಿ ಆಭರಣಗಳನ್ನು ಧರಿಸುವ ಸಂಪ್ರದಾಯ ಭಾರತದಲ್ಲಿ ಬೆಳೆದುಬಂದಿತು. ಮೊದಲು ಬ್ಯಾಂಕ್ ವ್ಯವಹಾರ ರೂಢಿಯಲ್ಲಿರಲಿಲ್ಲ. ಮನೆತನದ ಆಸ್ತಿಯನ್ನು ಸುರಕ್ಷಿತವಾಗಿ ಕಾಯ್ದಿಟ್ಟುಕೊಳ್ಳುವದಕ್ಕೋಸ್ಕರ ಬಂಗಾರದ ಆಭರಣಗಳನ್ನು ಮಾಡಿಸಿ ಮೈಮೇಲೆ ಧರಿಸಿಕೊಂಡು ಕಾಯುತ್ತಿದ್ದರು. ಇದರಿಂದಾಗಿ ನಮ್ಮ ಮಹಿಳೆಯರಲ್ಲಿ ಆಭರಣಪ್ರಿಯತೆಯು ಬೆಳೆಯಿತು. ಮೊದಲಿನ ಕಾಲದಲ್ಲಿ ಮಹಿಳೆಯರಿಗೆ ತಮ್ಮದೆಂಬ ಸ್ಥಿರ ಆಸ್ತಿ ಇರಲಿಲ್ಲ. ಪತಿ ಇಲ್ಲವೆ ಮಕ್ಕಳು ಆಸ್ತಿಯ ಅಧಿಕಾರಿಗಳಾಗಿದ್ದರು. ಹೆಣ್ಣು ಮಕ್ಕಳು ಅವರ ಅಧೀನದಲ್ಲಿ ಇರಬೇಕಾಗಿತ್ತು. ವಿವಾಹ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ತಂದೆಯ ಮನೆಯವರು ಕೊಟ್ಟ ಆಭರಣಗಳು ಅವರ ಸ್ವಂತ ಆಸ್ತಿಯಾಗುತ್ತಿದ್ದವು. ಅತ್ತೆಯ ಮನೆಯವರಿಗೆ ಆ ಆಭರಣಗಳ ಮೇಲೆ ಯಾವ ಬಗೆಯ ಹಕ್ಕು ಬಾಧ್ಯತೆಗಳೂ ಇರುತ್ತಿರಲಿಲ್ಲ. ಆಭರಣಗಳು ಸ್ತ್ರೀಧನವಾಗಿದ್ದವೆಂದು ತಿಳಿಯಬಹುದು.

ಆಭರಣಗಳು ಸ್ತ್ರೀಯರಿಗೆ ಆಪದ್ಧನದಂತೆ ಪ್ರಯೋಜನಕಾರಿಯಾಗಿದ್ದವು. ಅನುಕೂಲತೆಯಿದ್ದಾಗ ಕೊಂಡುಕೊಂಡ ಬೆಳ್ಳಿ ಬಂಗಾರಗಳು ಆರ್ಥಿಕ ದುಃಸ್ಥಿತಿಯೊದಗಿದಾಗ ಸಹಾಯಕವಾಗುತ್ತಿದ್ದುವು. ಕಾಯ್ದಿಟ್ಟ ಹಣ ಕೈ ನೆರವಿಗೆ ದೊರೆಯುತ್ತಿತ್ತು. ಕೂಡಿಟ್ಟ ಹಣ ಕೈಯಲ್ಲಿ ಉಳಿಯುವುದಿಲ್ಲ, ಖರ್ಚಾಗಿ ಹೋಗುತ್ತದೆ. ಅದೇ ಬೆಳ್ಳಿ ಬಂಗಾರದ ಒಡವೆಗಳಿದ್ದರೆ ಖರ್ಚಾಗಿ ಹೋಗುವದಿಲ್ಲವೆಂಬ ಭಾವನೆಯಿಂದ ಭಾರತೀಯರು ಹೆಚ್ಚಾಗಿ ಆಭರಣಗಳನ್ನು ಮಾಡಿಸುತ್ತಿದ್ದರು. ಈ ಕಾರಣದಿಂದಾಗಿ ನಮ್ಮ ಸೋದರಿಯರು ಅಡಿಯಿಂದ ಮುಡಿಯವರೆಗೆ ಆಭರಣ ಧರಿಸಹತ್ತಿದರು. ಹೊರಲಾರದಷ್ಟು ಆಭರಣ ಹಾಕಿಕೊಳ್ಳುವುದರಿಂದ ನಿತ್ಯದ ಕೆಲಸಕ್ಕೆ ಅನನುಕೂಲವೆನಿಸಿದರೂ ಸಂಪ್ರದಾಯಪ್ರಿಯಳೂ, ಆಭರಣಪ್ರಿಯಳೂ ಆದ ಭಾರತೀಯ ಸ್ತ್ರೀಯು ಅವುಗಳ ಭಾರವನ್ನು ಸಂತೋಷದಿಂದ ಸಹಿಸುತ್ತಿದ್ದಳು.

ಪುರಾತನಕಾಲದಿಂದ ಆಭರಣಗಳು ಹೆಣ್ಣುಮಕ್ಕಳನ್ನು ಆಕರ್ಷಿಸಿವೆ. ಭಾರತೀಯರು ಮಗುವನ್ನು ತೊಟ್ಟಿಲಿಗೆ ಹಾಕುವ ದಿನದಿಂದಲೇ ಆಭರಣಗಳನ್ನು ತೊಡಿಸಲು ಪ್ರಾರಂಭಿಸುತ್ತಾರೆ. ಅಲಂಕೃತಳಾದ ನಾರಿ ಮಾನವನ ಹೃದಯದಲ್ಲಿ ಹಿರಿಯಸ್ಥಾನಗಳಿಸಿದ್ದಾಳೆ. ಭಾರತ ಸಿರಿಯ ನಾಡಾಗಿದ್ದಾಗ ನಾರಿಯರು ಹೆರಳು ಬಂಗಾರ, ಬೈತಲಮಣಿ, ಕೊರಳಹಾರ ಸ್ವರ್ಣಮಾಲೆಗಳನ್ನೂ ಕಿವಿಯಲ್ಲಿ ಕುಂಡಲ, ಮಣಿಕುಂಡಲ, ಕರ್ಣಪೂರಗಳನ್ನೂ, ರಟ್ಟೆಗೆ ಕೇಯೂರಗಳನ್ನೂ ಭುಜಗಬಂಧಗಳನ್ನೂ, ಕೈಗೆ ಹಸ್ತಾಭರಣಗಳನ್ನೂ ಧರಿಸುತ್ತಿದ್ದರು. ನಡುವಿನಲ್ಲಿ ಒಡ್ಯಾಣ ಕಾಂಚೀಧಾಮಗಳನ್ನೂ, ಕಾಲ್ನೂಪುರಗಳನ್ನೂ ಹಾಕಿಕೊಳ್ಳುತ್ತಿದ್ದರು. ಅಲ್ಲದೆ ಕೊರಳಲ್ಲಿ ಮುತ್ತು, ಮಾಣಿಕ, ವಜ್ರ, ಹವಳ , ಪಚ್ಚೆ, ನೀಲ, ಮೊದಲಾದ ನವರತ್ನಗಳ ಹಾರಗಳನ್ನೂ ಬಂಗಾರದ ಬಗೆಬಗೆಯ ಹಾರಗಳನ್ನೂ ಧರಿಸುತ್ತಿದ್ದರು. ಹೀಗೆ ಅಡಿಯಿಂದ ಮುಡಿಯವರೆಗೆ ಆಭರಣಗಳು ನಮ್ಮಲ್ಲಿ ರೂಢಿಯಲ್ಲಿದ್ದವು.

ವೇದ, ರಾಮಾಯಣ, ಮಹಾಭಾರತಗಳಲ್ಲಿ, ಸಂಸ್ಕೃತಕಾವ್ಯ ನಾಟಕಗಳಲ್ಲಿ, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ , ಜಾನಪದ ಗೀತೆಗಳಲ್ಲಿ ಆಭರಣಗಳ ವರ್ಣನೆ ಹೇರಳವಾಗಿ ದೊರೆಯುತ್ತವೆ. 'ಪಿಲ್ಲೆ ಕಾಲುಂಗುರ, ಲುಲ್ಲುಪೈಜಣರುಳಿ, ಘಿಲ್ಲು ಘಿಲ್ಲೆಂದ್ಹೆಜ್ಜೆಯನಿಡುತ, ಎಂಬ ನವ ವಧುವಿನ

ವರ್ಣನೆಯಿದೆ. ಹರಪ್ಪ ಮೊಹೆಂಜೋದಾರೊಗಳಲ್ಲಿ ಲಭಿಸಿದ ಅವಶೇಷಗಳಿಂದ ಆಭರಣಗಳ ಪ್ರಾಚೀನತೆಯನ್ನು ಅರಿಯಬಹುದಾಗಿದೆ. ಸಾಂಚಿ, ಬಾರಾಹತ್, ಅಜಂತಾ, ಬದಾಮಿ, ಐಹೊಳೆ, ಪಟ್ಟದಕಲ್ಲು, ಬೇಲೂರು, ಹಳೇಬೀಡು ವಿಜಯನಗರಗಳ ಶಿಲ್ಪದಿಂದ ಆಭರಣಗಳ ಸೊಗಸನ್ನು ಅರಿಯಬಹುದಾಗಿದೆ.

ಆಭರಣಗಳ ವಿಕಾಸ ಕ್ರಮದಲ್ಲಿ ಬೇರೆ ಬೇರೆ ಅವಸ್ಥೆಗಳೂ ಇವೆ. ಬಹಳ ಪುರಾತನ ಕಾಲದಲ್ಲಿ ಎಲುಬಿನ ಆಭರಣಗಳನ್ನು ಧರಿಸುತ್ತಿದ್ದರಂತೆ. ಕಲ್ಲಿನಿಂದ ಸಣ್ಣ ಗುಂಡುಗಳನ್ನು ಕಡೆದು ಮಾಡಿದ ಹಾರಗಳು ರೂಢಿಯಲ್ಲಿದ್ದವು. ಅನಂತರ ಸಮುದ್ರದಲ್ಲಿ ದೊರೆತ ಶಂಖ, ಸಿಂಪು, ಕವಡೆಗಳಿಂದ ಕೈಬಳೆ, ಹಾರ ಮಾಡುತ್ತಿದ್ದರು. ಕಟ್ಟಿಗೆಯ ಮಣಿಗಳಿಂದ ಮಾಡಿದ ಆಭರಣಗಳನ್ನು ಉಪಯೋಗಿಸುತ್ತಿದ್ದರು. ಇಂದಿಗೂ ಕಾಡು ಜನಾಂಗಗಳಲ್ಲಿ ಇವುಗಳನ್ನು ಕಾಣಬಹುದು. ಮಾನವರಲ್ಲಿ ಬುದ್ಧಿಶಕ್ತಿ ಬೆಳೆದಂತೆ ಸೌಂದರ್ಯದ ಕಲ್ಪನೆಯೂ ಬೆಳೆಯಹತ್ತಿತು. ಆಗ ಕಬ್ಬಿಣ, ತ್ರಾಮ, ಬಿದಿರು, ಬೆಳ್ಳಿ, ಬಂಗಾರ, ಮುತ್ತು, ರತ್ನಗಳ ಆಭರಣಗಳನ್ನು ಧರಿಸುವ ಸಂಪ್ರದಾಯ ಬೆಳೆದುಬಂದಿತು. ಆಭರಣಗಳು ಕೇವಲ ಸಿರಿವಂತಿಕೆಯ ಪ್ರದರ್ಶನದ ಸಾಧನ ಮಾತ್ರವಲ್ಲ, ಅವು ಸೌಂದರ್ಯವರ್ಧಕ ಸಾಧನಗಳೆಂದೂ ಬೆಳೆದು ಬಂದಿವೆ. ಮೊದಲಿನ ಕಾಲದಲ್ಲಿ ಸಿರಿವಂತರು ಬಂಗಾರ, ಮುತ್ತು, ವಜ್ರಗಳ ಆಭರಣಗಳನ್ನು ಧರಿಸುತ್ತಿದ್ದರು. ಇಂದಿಗೂ ಗುಡ್ಡಗಾಡಿನ ಮಹಿಳೆಯರು ಕುತ್ತಿಗೆಯಿಂದ ಸೊಂಟದವರೆಗೆ ಒಂದರಮೇಲೊಂದು ಮಣಿಗಳ ಸರಗಳನ್ನು ಹಾಕಿಕೊಳ್ಳುತ್ತಾರೆ. ಆಭರಣಗಳ ಆಕರ್ಷಣೆ ಬಡವರು ಸಿರಿವಂತರೆಂಬ ಭೇದವಿಲ್ಲದೆ ಎಲ್ಲರಲ್ಲಿಯೂ ಇದೆ. ಆಭರಣಗಳಿಂದ ಶೃಂಗರಿಸಿಕೊಳ್ಳುವ ಹವ್ಯಾಸ ಎಲ್ಲ ಹೆಣ್ಣು ಮಕ್ಕಳಲ್ಲಿಯೂ ಇದೆ. ಕಣ್ಣಿಲ್ಲದ ಕುರುಡರು ಕೂಡ ಆಭರಣ ಧರಿಸಿ ಆನಂದಪಡುವುಂಟು.

ಭಾರತದ ಬೇರೆ ಬೇರೆ ಪ್ರಾಂತಗಳಲ್ಲಿ ಬೇರೆ ಬೇರೆ ಬಗೆಯ ಆಭರಣಗಳನ್ನು ಧರಿಸುವ ರೂಢಿ ಬೆಳೆದು ಬಂದಿದೆ. ರಾಜಸ್ಥಾನದ ಮಹಿಳೆಯರು, ಹಸ್ತಿದಂತದ ಆಭರಣಗಳನ್ನು ಧರಿಸುತ್ತಾರೆ. ಅವುಗಳಿಂದ ತೊಂದರೆಯಾದರೂ ಸಹಿಸಿಕೊಳ್ಳುತ್ತಾರೆ. ಬೇರೆ ಕೆಲವು ಪ್ರಾಂತಗಳಲ್ಲಿ ಭಾರವಾದ ಆಭರಣಗಳನ್ನೂ

ಕಾಲಲ್ಲಿ ಹಾಕಿಕೊಳ್ಳುತ್ತಾರೆ. ಉತ್ತರ ಪ್ರದೇಶದಲ್ಲಿ ಕೆಲವರು ಬಳೆಯಾಕಾರದ ದೊಡ್ಡ ನತ್ತುಗಳನ್ನು ಮೂಗಿನಲ್ಲಿ ಧರಿಸುತ್ತಾರೆ. ದಕ್ಷಿಣ ಭಾರತದಲ್ಲಿ ಕಿವಿಗಳು ಹರಿದು ಹೋಗುವಷ್ಟು ಭಾರವಾದ ಹರಳಿನೋಲೆಗಳನ್ನು ಧರಿಸುತ್ತಾರೆ. ಗುಜರಾಥ ಕಾಠೇವಾಡಗಳ ಸ್ತ್ರೀಯರು ಕೂದಲಿಗೂ ಆಭರಣ ಹಾಕಿಕೊಳ್ಳುತ್ತಾರೆ. ನಮ್ಮಲ್ಲಿಯ ಲಂಬಾಣಿ ಸ್ತ್ರೀಯರು ಕೂದಲಿಗೆ ಬೆಳ್ಳಿಗುಂಡು ಹಚ್ಚಿದ ಸರಪಳಿಗಳನ್ನೂ ಕವಡಿಗಳನ್ನೂ ಕಟ್ಟಿಕೊಳ್ಳುತ್ತಾರೆ.

"ಆಭರಣವಿಲ್ಲದ ನಾರಿ ನೀರಿಲ್ಲದ ಹೊಲದಂತೆ" ಎಂಬ ಗಾದೆ ಹಿಂದಿಯಲ್ಲಿದೆ. ಈ ಮಾತಿನಿಂದ ಆಭರಣಕ್ಕೂ ಹೆಣ್ಣು ಮಕ್ಕಳಿಗೂ ಇರುವ ನಿಕಟ ಸಂಬಂಧವನ್ನೂ ಜನರಲ್ಲಿದ್ದ ಮನೋಭಾವವನ್ನೂ ಅರಿತುಕೊಳ್ಳಬಹುದು. "Put gold on a woman and see ; Put mud plaster on a wall and see"ಎಂಬ ಆಂಗ್ಲ ಗಾದೆಯನ್ನು ಇಲ್ಲಿ ನೆನೆಯಬೇಕು. ಸಹಜ ಲಾವಣ್ಯವತಿಗೆ ಆಭರಣಗಳನ್ನಿಟ್ಟರೆ ಇನ್ನೂ ಅಂದ ಹೆಚ್ಚಬಹುದು. ರೂಪವತಿಯಲ್ಲದವಳ ಸೌಂದರ್ಯ ಹೆಚ್ಚದಿದ್ದರೂ ಶೋಭೆ ಹೆಚ್ಚುವುದರಲ್ಲಿ ಸಂದೇಹವಿಲ್ಲ.

ಪ್ರಾಗೈತಿಹಾಸಿಕ ಕಾಲದ ಆಭರಣಗಳು

ಇತಿಹಾಸ ಪೂರ್ವಕಾಲದ ಅವಶೇಷಗಳು ಮೊಹೆಂಜೋದಾರೊ, ಹರಪ್ಪಗಳಲ್ಲಿ ದೊರೆತಿವೆ. ಆ ಅವಶೇಷಗಳಿಂದ ಆಗಿನ ಕಾಲದ ವೇಷಭೂಷಣಗಳ ಕಲ್ಪನೆ ಬರುತ್ತದೆ. ಆ ಕಾಲದಲ್ಲಿ ಎಲ್ಲ ಜನರೂ ಆಭರಣಗಳನ್ನು ಉಪಯೋಗಿಸುತ್ತಿದ್ದರು. ಮಹಿಳೆಯರು ಕೊರಳಲ್ಲಿ ಹಾರಗಳನ್ನೂ ಕೈಯಲ್ಲಿ ಬಳೆಗಳನ್ನೂ, ತೋಳು ಬಳೆಗಳನ್ನೂ, ಬೆರಳಿಗೆ ಉಂಗುರಗಳನ್ನೂ, ಸೊಂಟಕ್ಕೆ ಒಡ್ಯಾಣವನ್ನೂ ಧರಿಸುತ್ತಿದ್ದರು. ಕಿವಿಯಲ್ಲಿ ಓಲೆಗಳನ್ನು ಹಾಕಿಕೊಳ್ಳುತ್ತಿದ್ದರು. ಸಿರಿವಂತರು ಬೆಳ್ಳಿ, ಬಂಗಾರ, ದಂತ, ವಜ್ರಗಳ ಆಭರಣಗಳನ್ನು ಧರಿಸುತ್ತಿದ್ದರು. ಬಡವರು ಶಂಖ, ಸಿಂಪುಗಳ ಆಭರಣಗಳನ್ನೂ, ಧರಿಸುತ್ತಿದ್ದರು. ಸೊಂಟದ ಆಭರಣಗಳಿಗೆ ಉದ್ದವಾದ ಮಣಿಗಳು ಹೆಚ್ಚು ಉಪಯುಕ್ತವಾಗುತ್ತಿದ್ದವು. ವಿವಿಧ ಆಕಾರದ ಮಣಿಗಳನ್ನು ಉಪಯೋಗಿಸುತ್ತಿದ್ದರು. ಆರು ಸುತ್ತಿನ ಬಂಗಾರದ ಪೊಳ್ಳು ಬಳೆಗಳನ್ನು ಕೈಗೆ ಧರಿಸುತ್ತಿದ್ದರು. ನೀಲ ಬಣ್ಣದ ಮಿಂಚಿನ ಬಳೆಗಳನ್ನು

ಮುಂಗೈಯಿಂದ ಮೊಳಕೈಯವರೆಗೆ ಹಾಕಿಕೊಳ್ಳುತ್ತಿದ್ದರು. ಉಂಗುರ, ಓಲೆಗಳು ಸಾದಾ ಇರುತ್ತಿದ್ದವು. ದೊಡ್ಡ ಶಂಖಗಳನ್ನು ಕೊರೆದು ಮಾಡಿದ ಬಳೆಗಳನ್ನು, ಮಿಂಚುಳ್ಳ ಮಣ್ಣಿನ ಬಳೆಗಳನ್ನೂ ಹಾಕಿಕೊಳ್ಳುತ್ತಿದ್ದರು.

•

ಅತಿಪ್ರಾಚೀನ ಕಾಲದವರು ಎಡಗೈಯಲ್ಲಿ ರಟ್ಟೆಯಿಂದ ಮುಂಗೈವರೆಗೆ ಬಳೆಗಳನ್ನು ಧರಿಸುತ್ತಿದ್ದರು. ಆ ಕಾಲಕ್ಕೆ ಬೆಳ್ಳಿ ಬಂಗಾರಗಳಿಗಿಂತ ತಾಮ್ರ ಕಂಚುಗಳ ಆಭರಣಗಳು ಹೆಚ್ಚು ಜನಪ್ರಿಯವಾಗಿದ್ದವು. ನಾನಾ ಆಕಾರದ ಕಲ್ಲಿನ ಮಣಿಗಳನ್ನೂ ಸುಣ್ಣದ ಹರಳಿನ ಮಣಿಗಳನ್ನೂ ಉಪಯೋಗಿಸುತ್ತಿದ್ದರು. ಮಣಿಗಳನ್ನು ತಯಾರಿಸುವುದು ಭಾರತದ ಪ್ರಾಚೀನ ಕಲೆಯಾಗಿದೆ. ಮೋಹೆಂಜೋದಾರೋದ ಜನ ಕೆಂಪು, ನೀಲಿ, ಹಸಿರು ಛಾಯೆಗಳುಳ್ಳ ಬೆಣಚುಗಲ್ಲುಗಳಿಂದ ಕೊರಳಹಾರ ಒಡ್ಯಾಣ ಮಾಡಿಸಿ ಧರಿಸಿಕೊಳ್ಳುತ್ತಿದ್ದರು. ಮೋಹೆಂಜೋದಾರೋದ ಅವಶೇಷಗಳಲ್ಲಿ ದೊರೆತ ಕೆಲವು ಗೊಂಬೆಗಳ ಕೊರಳಲ್ಲಿ ಅಗಲವಾದ ಪಟ್ಟಿಯ ಆಕಾರದ ಕೊರಳ ಹಾರಗಳಿವೆ. ಅದರ ಮಧ್ಯದಲ್ಲಿ ಎಲೆಯ ಆಕಾರದ ಮೂರು ಪದಕಗಳಿವೆ. ಇನ್ನು ಕೆಲವೆಡೆ ದುಂಡಗಿನ ಮಣಿಗಳ ೩ ಇಲ್ಲವೆ ೪ ಎಳೆಗಳ ಹಾರಗಳನ್ನು ಹಾಕಿದ್ದು ಕಂಡು ಬರುತ್ತದೆ. ಬಲಗೈಗೆ ಎರಡು ಸುತ್ತಿನ ದುಂಡಗಿನ ಮುಂಗೈಬಳೆಗಳನ್ನು ಎರಡು ಸುತ್ತಿನ ತೋಳುಬಳೆಗಳನ್ನು ಹಾಕಿದ್ದಾರೆ. ಅವು ಬೆಳ್ಳಿ, ಬಂಗಾರ, ಸಿಂಪು, ಕವಡೆಗಳಿಂದ ಮಾಡಿದವುಗಳಾಗಿವೆ. ತಲೆಗೆ ಬಂಗಾರದ್ದೊ, ಬೇರೆ ಧಾತುವಿನದೊ ಆದ ತಲೆಪಟ್ಟಿಯನ್ನು ಹಾಕಿದ್ದಾರೆ, ಸೊಂಟಕ್ಕೆ ಅಗಲವಾದ ಸುತ್ತಿನ ಪಟ್ಟಿಯಿದೆ. ಈಗಿನ ಜೋರಮಾಳದ ಆಕಾರದ ಮಣಿಸರ, ಚಪ್ಪಟೆಯಾದ ಗುಂಡು ಕೊಳವೆಯಾಕಾರದ ಮಣಿಗಳನ್ನು ಕೂಡಿಸಿ ಮಾಡಿದ ಹಾರಗಳು ಆ ಅವಶೇಷಗಳಲ್ಲಿ ನೋಡಲು ದೊರೆಯುತ್ತವೆ. ಹೊಳಪಾದ ಮಣ್ಣಿನ ಪೊಳ್ಳು ಬಳೆ, ಶಂಖಗಳನ್ನು ಕೊರೆದು ಮಾಡಿದ ಬಳೆಗಳು ಸುಂದರವಾಗಿ ಕಾಣುತ್ತವೆ. ಪ್ರಾಗೈತಿಹಾಸಿಕ ಕಾಲದ ಭಾರತದ ಹೆಂಗಳೆಯರು ವಿವಿಧ ಬಗೆಯ ಆಭರಣಗಳನ್ನು ಧರಿಸುತ್ತಿದ್ದರೆಂಬ ಮಾತನ್ನು ಹರಪ್ಪಾ ಮೊಹೆಂಜೋದಾರೋದ ಅವಶೇಷಗಳಿಂದ ಅರಿಯಬಹುದಾಗಿದೆ.

ಮೌರ್ಯಯುಗದ ಆಭರಣಗಳು

ಪ್ರಾಚೀನ ದೇವಾಲಯಗಳಲ್ಲಿಯ ಶಿಲ್ಪದಿಂದ, ಕಾವ್ಯಗಳಿಂದ, ಪೂರ್ವಜರ ವೇಷಭೂಷಣಗಳ ಕಲ್ಪನೆಯು ನಮ್ಮ ಕಣ್ಣೆದುರು ನಿಲ್ಲುತ್ತದೆ. ಭಾರತದ ದೊಡ್ಡ ಸಾಮ್ರಾಜ್ಯಗಳಲ್ಲಿ ಒಂದಾಗಿ ಮೌರ್ಯ ಸಾಮ್ರಾಜ್ಯ ಕೀರ್ತಿ ಪಡೆದಿದೆ. ಚಂದ್ರಗುಪ್ತ, ಅಶೋಕರ ಕಾಲಕ್ಕೆ ಮೌರ್ಯರಾಜ್ಯ ಕಾಶ್ಮೀರದಿಂದ ದಕ್ಷಿಣ ಭಾರತದವರೆಗೆ ಹಬ್ಬಿತ್ತು. ಆಗಿನ ಆಭರಣಗಳನ್ನು ಅರಿಯಬೇಕಾದರೆ ಅಂದಿನ ಶಿಲ್ಪಕಲೆ, ಹಾಗೂ ಸಾಹಿತ್ಯದ ಸಹಾಯ ಪಡೆಯಲೇ ಬೇಕಾಗುತ್ತದೆ. ಈ ಯುಗದ ಅಂತಿಮ ಕಾಲದ ಯಕ್ಷಿಣಿಯ ಮೂರ್ತಿಗಳಿಂದ ಆಗಿನವರು ಸೊಂಟಕ್ಕೆ ಬಂಗಾರದ ಕಿರುಗಂಟೆಗಳನ್ನೂ, ಮೇಖಲೆಗಳನ್ನೂ ಧರಿಸುತ್ತಿದ್ದರೆಂದು ತಿಳಿಯುತ್ತಿದೆ. ದಕ್ಷಿಣ ಭಾರತದ ಗುಂಟೂರ ಜಿಲ್ಲೆಯ ಒಂದು ಯಕ್ಷಿಣಿಯ ಮೂರ್ತಿಯನ್ನು ನೋಡಿದಾಗ ಕಾಲುಗಳಲ್ಲಿಯೂ ಆಭರಣ ಧರಿಸಿದ್ದು ಕಂಡು ಬರುತ್ತಿದೆ. ಕೈತುಂಬ ಬಳೆ, ಕೊರಳಲ್ಲಿ ಆರೆಳೆಯ ಹಾರ ಕಿವಿಯಲ್ಲಿ ದೊಡ್ಡ ದೊಡ್ಡ ಓಲೆಗಳಿವೆ. ಬಂಗಾರದ ಗುಂಡಿನ ನಾಲ್ಕು ಸಾಲಿನ ಒಡ್ಯಾಣವಿದೆ. ಕಟಿಸೂತ್ರ, ಕಾಂಚಿ, ಅಥವಾ ಮೇಖಲೆ, ರಾಸನ, ಮೊದಲಾದ ಸೊಂಟದ ಆಭರಣಗಳನ್ನು ಮೌರ್ಯ ಕಾಲದಲ್ಲಿ ಮಹಿಳೆಯರು ಉಪಯೋಗಿಸುತ್ತಿದ್ದರು. ಬಂಗಾರದ ಗೆಜ್ಜೆಗಳನ್ನೂ, ಕಿರುಗಂಟೆಗಳನ್ನೂ ಹಚ್ಚಿದ ಕಟಿಸೂತ್ರಗಳು ಹೆಣ್ಣು ಮಕ್ಕಳು ಓಡಾಡುವಾಗ ಮಂಜುಳ ನಿನಾದವನ್ನು ಹೊರಹೊಮ್ಮಿಸುತ್ತಿರಬೇಕು. "ರನ್ನಮಣಿ ಮೇಖಲೆ ಅರುಣರತಗ್ರಂಥಿ ಕಾಂಚೀಕಲಾಪ" ಎಂಬ ವರ್ಣನೆ ಕಾವ್ಯಗಳಲ್ಲಿ ಬರುತ್ತದೆ. ಮೇಖಲೆ ಎಂಬ ಸೊಂಟದ ಆಭರಣವನ್ನು ಬಂಗಾರದಿಂದ ಮಾಡಿ ಮಧ್ಯದಲ್ಲಿ ವಜ್ರಗಳನ್ನು ಕೂಡಿಸುತ್ತಿದ್ದರು. ಈ ರೀತಿಯಾಗಿ ಆಭರಣಗಳು ಸೊಂಟದಿಂದ ಮೊಳಕಾಲವರೆಗೆ ಇರುತ್ತಿದ್ದವು.

ಗುಪ್ತರ ಕಾಲದ ಆಭೂಷಣಗಳು

"ಅಜಂತಾದ ವರ್ಣಚಿತ್ರಗಳು ಗುಪ್ತರ ಕಾಲದ ವೇಷಭೂಷಣಗಳ ಕೋಶದಂತಿದೆ"ಎಂದು ಪಂಡಿತರು ಅಭಿಪ್ರಾಯಪಟ್ಟಿದ್ದಾರೆ. ಭಾರತದ ಎಲ್ಲ

ಪ್ರಾಂತಗಳ ವೇಷಭೂಷಣಗಳನ್ನು ಅಜಂತಾದ ಚಿತ್ರಗಳಿಂದ ಅರಿಯಬಹುದಾಗಿದೆ. ಈ ಚಿತ್ರಗಳು ರೂಪಗೊಂಡ ಅವಧಿಯು ೨ ನೆಯ ಶತಮಾನದಿಂದ ೮ ನೆಯ ಶತಮಾನವೆಂದು ತಿಳಿದು ಬರುತ್ತದೆ. ಕಾರಣ ಆ ಐದು ಶತಮಾನಗಳ ಕಾಲದಲ್ಲಿ ರೂಢಿಯಲ್ಲಿದ್ದ ಆಭರಣಗಳು ಚಿತ್ರದಲ್ಲಿ ಮೂಡಿವೆ. ಉತ್ತರ ದಕ್ಷಿಣ ಭಾರತಗಳ ಆಭರಣಗಳ ಮಾದರಿಯನ್ನು ಅಜಂತಾದಲ್ಲಿ ಕಾಣಬಹುದಾಗಿದೆ. ಆ ವರ್ಣಚಿತ್ರಗಳಲ್ಲಿಯ ಆಭರಣಗಳು ಕಲಾಪೂರ್ಣವಾಗಿವೆ, ಸುಂದರವಾಗಿವೆ. ಅಂದಿನ ಜನರು ಬಟ್ಟೆಗಿಂತ ಆಭರಣಕ್ಕೆ ಹೆಚ್ಚು ಮಹತ್ವ ಕೊಡುತ್ತಿದ್ದಂತೆ ತೋರುತ್ತದೆ.

ಅಜಂತಾದ ಸುಂದರಿಯರ ತಲೆಯ ಆಭರಣಗಳು

ಅಜಂತಾದ ಸುಂದರಿಯರು ತಲೆಯನ್ನು ಮುತ್ತಿನ ಎಳೆಗಳಿಂದ ವಿವಿಧ ಬಗೆಯಿಂದ ಅಲಂಕರಿಸಿಕೊಂಡಿದ್ದಾರೆ. ಮುತ್ತಿನ ಕಿರೀಟ ಹಾಕಿಕೊಂಡಿದ್ದಾರೆ. ಮುಂದಲೆಗೆ ಹರಳಿನ ಹೂಗಳು ಶೋಭಿಸುತ್ತವೆ. ಮುತ್ತಿನ ಬೈತಲೆಮಣಿ ಕಂಗೊಳಿಸುತ್ತದೆ. ಕೆಲವು ಚಿತ್ರಗಳಲ್ಲಿ ಹೆಂಗಳೆಯರು ಮುಡಿಗೆ ಮುತ್ತಿನ ಎಳೆಗಳನ್ನು ಚಕ್ರಾಕಾರವಾಗಿ ಮುರಿಗೆ ಮುರಿಗೆಯಾಗಿ ಸುತ್ತಿದ್ದಾರೆ.

ಮುತ್ತಿನ ಝೂಲರಿಗಳನ್ನು ತಲೆಯ ಸುತ್ತಲೂ ಕಟ್ಟಿಕೊಂಡಿದ್ದಾರೆ. ಕೆಲವರು ಬೈತಲ ಮಣಿಗೆ ಪಚ್ಚೆ, ಮಾಣಿಕಗಳನ್ನು ಕೂಡಿಸಿ, ಸುಂದರವಾಗಿ ಕೆತ್ತನೆಯ ಕೆಲಸ ಮಾಡಿದ ಪದಕಗಳನ್ನು ಹಾಕಿಕೊಂಡಿದ್ದಾರೆ. ಆ ಪದಕಗಳಿಗೆ ಸುತ್ತಲೂ ಮುತ್ತುಗಳನ್ನು ಹಚ್ಚಿದ್ದಾರೆ. ಥಳಥಳ ಹೊಳೆಯುವ ಪದಕಗಳು ವಿಶಾಲವಾದ ಹಣೆಯಲ್ಲಿ ಅಂದವಾಗಿ ಕಾಣಿಸುತ್ತವೆ. ಕೆಲವೆಡೆ ಅಂದವಾದ ಸುವರ್ಣ ಪಟ್ಟಿಯ ಎರಡೂ ಬದಿಗೆ ಮುತ್ತನ್ನು ಹಚ್ಚಿದ್ದಾರೆ. ಅಂಥ ಪಟ್ಟಿಯನ್ನು ತಲೆಗೆ ಕಟ್ಟಿಕೊಳ್ಳುತ್ತಿದ್ದರು ಮುಡಿಯಿಂದ ಮುಂದಲೆಯವರೆಗೆ ಸುಂದರವಾಗಿ ಸುತ್ತಿದ ಮುತ್ತಿನ ಎಳೆಗಳು ನೀಲಾಕಾಶದಲ್ಲಿ ಹೊಳೆಯುವ ನಕ್ಷತ್ರಗಳಂತೆ ಹೊಳೆಯುತ್ತವೆ. ಮುಡಿಗೆ ನಾನಾ ಬಣ್ಣದ ವಸ್ತ್ರಗಳನ್ನೂ, ರಿಬ್ಬನ್‌ಗಳನ್ನೂ ಕಟ್ಟಿದ ಹೆಂಗಳೆಯರ ಚಿತ್ರಗಳಿವೆ. ಅಜಂತೆಯ ಚಿತ್ರಗಳಲ್ಲಿ ಸುಮಾರು ೧೫೦ ಬಗೆಯ ಕೇಶಾಲಂಕಾರಗಳಿವೆ. ಅವುಗಳಿಗೆ ವಿವಿಧ ಬಗೆಯಾಗಿ ಮುತ್ತಿನ ಎಳೆಗಳಿಂದ ಅಲಂಕಾರಮಾಡಿದ್ದಾರೆ. 'ಕಾರಿರುಳು ಮಿನುಮಿನುಗಿ ಕಾಣಿಸುತಿಹ ತಾರೆಗಳ

ಬಂಬಲಂತೆ ತೋರಮುಡಿಯೊಳೆಳೆ ಮುತ್ತಿನ ಶೃಂಗಾರ ಎಂಬ ವರ್ಣನೆಗನುಗುಣವಾದ ಅಲಂಕಾರವನ್ನು ಅಲ್ಲಿ ಕಾಣಬಹುದು. ಅಜಂತಾ ಚಿತ್ರಗಳಲ್ಲಿ "ಮುತ್ತಿನಬೊಟ್ಟು, ಮುತ್ತಿನಸರ, ಮುಡಿಯ ಮುತ್ತಿನಬಲೆ, ಮುತ್ತಿನೋಲೆಗಳು"ಕಂಗೊಳಿಸುತ್ತವೆ. ಆ ಕಾಲದ ಮಹಿಳೆಯರಿಗೆ ಮುತ್ತಿನ ಶಿರೋಭೂಷಣಗಳ ಮೇಲೆ ಬಲುಪ್ರೀತಿಯಿದ್ದಂತೆ ತೋರುತ್ತದೆ. ಸಮುದ್ರದಿಂದ ಮುತ್ತನ್ನು ತೆಗೆಯುವದರಲ್ಲಿ ಭಾರತೀಯರು ನಿಪುಣರಾಗಿದ್ದರು.

ಅಜಂತಾ ಕರ್ಣಾಭರಣಗಳು

ಅಜಂತೆಯ ಕರ್ಣಾಭರಣಗಳು ಸುಂದರ, ಹಾಗೂ ವೈವಿಧ್ಯಪೂರ್ಣವಾಗಿವೆ. ಮುತ್ತಿನೋಲೆ, ವಜ್ರದೋಲೆ, ಬಂಗಾರದ ನಾನಾ ಬಗೆಯ ಕರ್ಣಾಭರಣಗಳು ವಿವಿಧಾಕಾರಗಳನ್ನು ಹೊಂದಿವೆ. ಕಿವಿಯ ಆಭರಣಗಳಲ್ಲಿ ನಾನಾ ಮಾದರಿಗಳಿವೆ. ಅಂತಹವುಗಳಲ್ಲಿ ಮುತ್ತು, ಬಂಗಾರದೋಲೆಗಳು ಹೆಚ್ಚಾಗಿವೆ. ಗಾಲಿಯಾಕಾರದ ಓಲೆಗಳು, ಅಂತಹವುಗಳಿಗೆ ಮುತ್ತಿನ ಎಳೆಗಳನ್ನು ಇಳಿ ಬಿಟ್ಟ ಓಲೆಗಳು, ವಜ್ರಕೆತ್ತಿದೋಲೆಗಳು, ಮಧ್ಯದಲ್ಲಿ ಪಚ್ಚೆ, ನೀಲಗಳನ್ನು ಕೂಡಿಸಿ ಎರಡೂ ಬದಿಗೆ ಮುತ್ತಿನ ಗೊಂಚಲುಗಳನ್ನು ಹಚ್ಚಿದ ಗಾಲಿಯಾಕಾರದ ಓಲೆಗಳು-ಹೀಗೆ ಹಲವಾರು ತೆರದ ಕಿವಿಯೊಡವೆಗಳು ಅಲ್ಲಿಯ ಚಿತ್ರಗಳಲ್ಲಿ ನಮಗೆ ದೃಗ್ಗೋಚರವಾಗುವವು. ಒಳಗೆ ಪೊಳ್ಳಾಗಿರುವ ಗಾಲಿಯಾಕಾರದ ದೊಡ್ಡ ದೊಡ್ಡ ಓಲೆಗಳನ್ನು ಹೆಚ್ಚಾಗಿ ಹಾಕಿದುದು ಕಂಡು ಬರುತ್ತದೆ. ಪಚ್ಚದ ಸುತ್ತಲೂ ಮುತ್ತನ್ನು ಸುತ್ತಿಸಿದ ದುಂಡಗಿನ ಓಲೆಗಳಿವೆ;ನೀಲ ಹಾಗೂ ಮಾಣಿಕಗಳ ಸುತ್ತಲೂ ವಜ್ರಗಳನ್ನು ಕೂಡಿಸಿದ ಓಲೆಗಳಿವೆ;ಮುತ್ತು ರತ್ನಗಳನ್ನು ದುಂಡಾಗಿ ಕೂಡಿಸಿದ ಮುತ್ತಿನೋಲೆಗಳಿವೆ. ಬಂಗಾರದ ದುಂಡೋಲೆಗಳ ಮಧ್ಯದಲ್ಲಿ ನೀಲಗಳನ್ನೂ ಮಾಣಿಕಗಳನ್ನೂ ಕೆತ್ತಿದ್ದಾರೆ. ಕೆಲವು ಓಲೆಗಳಿಗೆ ಸಣ್ಣ ಮುತ್ತಿನ ಗೊನೆಗಳನ್ನು ಇಳಿಬಿಟ್ಟಿದ್ದಾರೆ. ಅಜಂತಾದ ಚಿತ್ರಗಳಲ್ಲಿ ೩೦ -೪೦ ಬಗೆಯ ಓಲೆಗಳನ್ನು ಕಾಣಬಹುದಾಗಿದೆ. ಇವೆಲ್ಲವುಗಳಿಂದ ಆಗಿನ ಕಾಲದ ಕರ್ಣಾಭರಣಗಳು ಬಹಳ ದೊಡ್ಡವೂ ವರ್ತುಳಾಕಾರದವೂ ಆಗಿದ್ದವೆಂದು ತಿಳಿದು ಬರುತ್ತದೆ.

ಅಜಂತಾ ಕಂಠಾಭರಣಗಳು

ಅಜಂತಾ ಚಿತ್ರಗಳಲ್ಲಿ ಕಂಡು ಬರುವ ಆಗಿನ ಕಾಲದ ಕಂಠಾಭರಣಗಳು ಕುಸುರು ಕುಸುರಿನವಾಗಿ ಕಲಾಪೂರ್ಣವಾಗಿವೆ; ಸುಂದರವಾಗಿವೆ. ಆ ಕಾಲದ ಮಹಿಳೆಯರು ಕುತ್ತಿಗೆಯಿಂದ ಸೊಂಟದವರೆಗೆ ಹಾರವನ್ನು ಹಾಕಿಕೊಳ್ಳುತ್ತಿದ್ದರು. 'ಒರಳಸುತ್ತಲು ಅಕ್ಕಿ; ಕೊರಳ ಸುತ್ತಲು ಮುತ್ತು'' ಎಂಬ ಜನಪದಗೀತೆಯಂತೆ ಕೊರಳಸುತ್ತಲು ಮುತ್ತಿನ ಹಾರವನ್ನು ಹಾಕಿಕೊಳ್ಳುತ್ತಿದ್ದರು. ಹಾರದ ನಡುವೆ ಒಂದು ದೊಡ್ಡ ಮಾಣಿಕವನ್ನು ಇಲ್ಲವೆ ಪಚ್ಚೆಯನ್ನು ಹಾಕುತ್ತಿದ್ದರು. ದೊಡ್ಡ ಮುತ್ತಿನ ಎಳೆಯ ಮಧ್ಯದಲ್ಲಿ ಕೆಂಪು ಇಲ್ಲವೆ ಹಸಿರು ಬಣ್ಣದ ಹಾರಗಳು ಬಹಳ ಸುಂದರವಾಗಿ ಒಪ್ಪುತ್ತವೆ. ಇಂಥ ಹಾರಗಳನ್ನು ಪ್ರತಿಯೊಬ್ಬರು ಹಾಕಿಕೊಳ್ಳುತ್ತಿದ್ದರು ಕೆಲವರು ದೊಡ್ಡ ಹಾರಗಳ ಕೆಳಗೆ ಸಣ್ಣ ಮುತ್ತಿನ ಹಾರಗಳನ್ನು ಧರಿಸುತ್ತಿದ್ದರು. ಇಂಥ ಹಾರಗಳ ಮಧ್ಯದಲ್ಲಿ ನವರತ್ನಗಳ ದೊಡ್ಡ ಪದಕವಿರುತ್ತಿತ್ತು. ಈ ಹಾರಗಳ ಕೆಳಗೆ ಎಂಟು ಇಲ್ಲವೆ ಹತ್ತು ಎಳೆಯ ಮುತ್ತಿನ ಹಾರ ಸೊಂಟದವರೆಗೆ ಇರುತ್ತದೆ. ಇನ್ನು ಕೆಲವು ಹಾರಗಳ ಮಧ್ಯದಲ್ಲಿರುವ ವಜ್ರದ ಪದಕಗಳ ಸುತ್ತಲೂ ಮುತ್ತಿನ ಎಳೆಗಳನ್ನು ವರ್ತುಳಾಕಾರವಾಗಿ ಜೋತು ಬಿಡಲಾಗಿದೆ. ಕುತ್ತಿಗೆಯ ಕೆಳಭಾಗದಲ್ಲಿರುವ ಮುತ್ತಿನ ಹಾರದಿಂದ ಎರಡು ಮುತ್ತಿನ ಎಳೆ, ಎದೆಯ ಮಧ್ಯ ಭಾಗದಿಂದ ಬೆನ್ನವರೆಗೆ ಸುತ್ತುವರಿದಿದೆ. ಇನ್ನು ಕೆಲವರ ಕೊರಳಲ್ಲಿ ದೊಡ್ಡ ದೊಡ್ಡ ಮುತ್ತುಗಳಿಂದ ಕೂಡಿದ ಒಂದೆಳೆ ಹಾರವಿದೆ. ಒಬ್ಬ ಮಹಿಳೆ ಸುಂದರವಾದ ನೀಲ ಮಣಿಗಳ ಹಾರವನ್ನು ಹಾಕಿದ್ದಾಳೆ. ಬಂಗಾರದ ಮಧ್ಯದಲ್ಲಿ ನೀಲ ಮಣಿಯನ್ನು ಕೂಡಿಸಿ ಸುತ್ತಲೂ ಕುಸುರಿನ ಕೆಲಸ ಮಾಡಿದ್ದಾರೆ. ಅದರ ಸುತ್ತಲೂ ಸಣ್ಣ ಮುತ್ತಿನ ಝೂಲರಿಯನ್ನು ಅಂದವಾಗಿ ಕಾಣುವಂತೆ ಇಳಿ ಬಿಟ್ಟಿದ್ದಾರೆ. ಅಜಂತಾದ ಕೆಲವು ವರ್ಣಚಿತ್ರಗಳಲ್ಲಿ ಕೆಲವು ಮಹಿಳೆಯರು ಬಟ್ಟೆಗಳನ್ನು ಧರಿಸಿಲ್ಲ, ಬಟ್ಟೆಯ ಬದಲು ಮೈ ತುಂಬ ಮುತ್ತಿನ ಆಭರಣಗಳನ್ನು ಹಾಕಿಕೊಂಡಿದ್ದಾರೆ. ಕೆಲವರು ಮುತ್ತಿನ ಎಳೆಯ ಎದೆಕಟ್ಟುಗಳನ್ನು ಕಟ್ಟಿಕೊಂಡಿದ್ದಾರೆ.

ಅಜಂತಾದ ಬಾಹುಪೂರಗಳು

ಅಜಂತಾದ ಮಹಿಳೆಯರ ಚಿತ್ರಗಳಲ್ಲಿ ಕಂಡುಬರುವ ಕೊರಳ ಹಾರಗಳ ವಿವಿಧತೆ ರಟ್ಟೆಯ ಬಳೆಗಳಲ್ಲಿಯೂ ಇದೆ. ಬಂಗಾರದ ರಟ್ಟೆಯ ಬಳೆಗಳಲ್ಲಿ ವಜ್ರಮಾಣಿಕಗಳನ್ನು ಕೂಡಿಸಿ ಸುತ್ತಲೂ ಸುಂದರವಾಗಿ ಕುಸುರಿನ ಕೆಲಸ ಮಾಡಿದ್ದಾರೆ. ಅದರ ಸುತ್ತಲೂ ದುಂಡೆಗೆ ಮುತ್ತನ್ನು ಸುತ್ತಿದ್ದಾರೆ. ಕೆಳಗೆ ಮುತ್ತಿನ ಎಳೆಗಳನ್ನು ಬಿಟ್ಟಿದ್ದಾರೆ. ಇನ್ನು ಕೆಲವು ರಟ್ಟೆ ಬಳೆಗಳಿಗೆ ಮಧ್ಯದಲ್ಲಿ ಮಾಣಿಕವನ್ನಿಟ್ಟು ಸುತ್ತಲೂ ಚಕ್ರಾಕಾರವಾಗಿ ಪಚ್ಚೆಗಳನ್ನು ಕೆತ್ತಿದ್ದಾರೆ. ರಟ್ಟೆಗೆ ಕಟ್ಟಲೋಸುಗ ಅದರ ಎರಡೂ ಬದಿಗೆ ಮುತ್ತಿನ ಎಳೆಗಳನ್ನು ಮಾಡಿದ್ದಾರೆ. ಬಂಗಾರ ಮತ್ತು ಮಾಣಿಕಗಳಿಂದ ಮಾಡಿದ ನಾಲ್ಕು ಬೆರಳಗಲ ಪಟ್ಟಿಗಳನ್ನು ರಟ್ಟೆ ಬಳೆಗಳನ್ನಾಗಿ ಉಪಯೋಗಿಸಿದ್ದಾರೆ. ನವರತ್ನಗಳನು ಅಂದವಾಗಿ ಬಂಗಾರದಲ್ಲಿ ಕೂಡಿಸಿ ಸುತ್ತಲೂ ಮುತ್ತಿನ ಗೊಂಚಲುಗಳನ್ನು ಇಳಿಬಿಟ್ಟ ರಟ್ಟೆ ಬಳೆಗಳು ಕಂಗೊಳಿಸುತ್ತವೆ. ಕೆಲವರು ಭುಜಗಳಿಗೆ ಭುಜ ಕೀರ್ತಿಯನ್ನು ಧರಿಸಿದ್ದಾರೆ. ವಜ್ರಗಳನ್ನು ಕೆತ್ತಿದ ಕೇಯೂರಗಳಿಗೆ ಸುತ್ತಲೂ ಮುತ್ತಿನ ಅಲಂಕಾರವಿರುತ್ತಿತ್ತು. ಒಂದು ದೊಡ್ಡ ಮುತ್ತಿನ ಸಾಲಿನ ಎರಡೂ ಬದಿಗೆ ಸಣ್ಣ ಮುತ್ತಿನ ಸಾಲುಗಳಿರುವ ರಟ್ಟೆ ಬಳೆಗಳನ್ನು ಕಾಣಬಹುದಾಗಿದೆ. ನಾಲ್ಕು ಮುತ್ತಿನ ಸಾಲಿನ ಪಟ್ಟಿಗೆ ಸಣ್ಣ ಮುತ್ತಿನ ಎಳೆಗಳನ್ನು ವಿವಿಧಾಕಾರವಾಗಿ ಇಳಿಬಿಟ್ಟ ರಟ್ಟೆ ಬಳೆಗಳನ್ನು ಕೆಲವರು ಹಾಕಿಕೊಂಡಿದ್ದಾರೆ. ಬಂಗಾರದಲ್ಲಿ ಸುಂದರವಾಗಿ ಕೆತ್ತನೆಯ ಕೆಲಸಮಾಡಿದ ವಜ್ರದ ರಟ್ಟೆಬಳೆಗಳಿಗೆ ಮುತ್ತಿನ ಎಳೆಗಳು ಅಂದವಾಗಿ ಕಾಣುತ್ತವೆ. ನೀಲಮಣಿಗಳನ್ನು ಕೂಡಿಸಿದ ಚೌಕೋನಾಕೃತಿಯ ಮುತ್ತಿನ ಬಾಹುಪೂರಗಳಿವೆ. ಅಲ್ಲದೆ ಬಂಗಾರ, ವಜ್ರ, ನೀಲ, ಪಚ್ಚೆಗಳಿಂದ ಮಾಡಿದ ರಟ್ಟೆ ಬಳೆಗಳು ಕುಸುರು ಕುಸುರಿನವಾಗಿವೆ. ಅರಳಿದ ಹೂವಿನಂತೆ ಕೆತ್ತಿರುವ ಕೇಯೂರಗಳು ಮನೋಹರವಾಗಿವೆ. ವಿವಿಧ ಬಗೆಯ ರಟ್ಟೆ ಬಳೆಗಳಿಗೆ ಮುತ್ತಿನ ಎಳೆಗಳನ್ನು, ಮುತ್ತಿನ ಗೊಂಚಲುಗಳನ್ನು ಆಕರ್ಷಕವಾಗುವಂತೆ ಕಟ್ಟಿದ್ದಾರೆ. ಈ ರಟ್ಟೆಬಳೆಗಳಿಗೆ ಆಗ ತೋಳಬಳೆ, ತೋಳ ಬಾಪುರಿ, ತೋಳಬಂದಿ, ತೋಳತೊಡಿಗೆ, ಬಾಹುಪೂರ, ಕೇಯೂರಗಳೆಂದು ಕರೆಯುತ್ತಿದ್ದರು.

ಅಜಂತಾ ಕಂಕಣಗಳು

ಅಜಂತಾದ ವರ್ಣಚಿತ್ರಗಳಲ್ಲಿ ಕಂಡುಬರುವ ಕೆಲವು ಮಹಿಳೆಯರ ಕೈಬಳೆಗಳು ಸುಂದರವಾಗಿವೆ. ಕೆಲವರು ದೊಡ್ಡ ಮುತ್ತಿನ ಬಳೆಗಳನ್ನು ಹಾಕಿದ್ದಾರೆ. ಕೆಲವರ ಕೈಯಲ್ಲಿಯ ಮುತ್ತಿನ ಬಳೆಗಳ ಮಧ್ಯದಲ್ಲಿ ದೊಡ್ಡ ನೀಲ ಮಣಿಗಳನ್ನು ಕೂಡಿಸಲಾಗಿದೆ. ಇಂಥ ಬಳೆಗಳ ಮೇಲೂ ಕೆಳಗೂ ಮಾಣಿಕದ ಬಳೆಗಳಿವೆ. ಮುತ್ತಿನ ಕಂಕಣಗಳಿವೆ. ಒಬ್ಬ ಸುಂದರಿ ಬಂಗಾರದಲ್ಲಿ ದೊಡ್ಡ ನೀಲಮಣಿಗಳನ್ನು ಕೂಡಿಸಿ ಕುಸುರಿನ ಕೆಲಸ ಮಾಡಿದ ಮುಂಗೈ ಬಳೆಗಳನ್ನು ಹಾಕಿದ್ದಾಳೆ. ಅದರ ಹಿಂದೆ ನೀಲಮಣಿಗಳ ಬಳೆಗಳನ್ನು ಧರಿಸಿದ್ದಾಳೆ. ಎರಡು ಮುತ್ತಿನ ಬಳೆಗಳ ಮಧ್ಯದಲ್ಲಿ ನೀಲ ಇಲ್ಲವೆ ಮಾಣಿಕಗಳ ಬಳೆಗಳನ್ನು ಹಾಕಿದ್ದಾರೆ. ಕೆಲವರು ದೊಡ್ಡ ದೊಡ್ಡ ಮುತ್ತಿನ ಇಲ್ಲವೆ ವಜ್ರದ ಒಂದೊಂದೇ ಬಳೆಗಳನ್ನು ಧರಿಸಿದವರಿದ್ದಾರೆ. ಅಜಂತಾದ ಸುಂದರಿಯರು ೧ ರಿಂದ ೮ ಇಲ್ಲವೆ ೧೦ ಬಳೆಗಳನ್ನು ಹಾಕಿದುದು ಕಂಡುಬರುತ್ತದೆ. ಮುತ್ತಿನ ಬಳೆ, ಕಂಕಣ, ಕುಸುರಿನ ಕೆಲಸದ, ನವರತ್ನದ ವಿವಿಧ ಬಗೆಯ ಬಳೆಗಳು, ಹರಡಿ ಕಂಕಣ, ಬಂಗಾರ ಬಳೆ, ಕಾಜಿನ ಬಳೆಗಳನ್ನು ಧರಿಸಿದ್ದಾರೆ.

ಅಜಂತಾ ಒಡ್ಯಾಣಗಳು

ನೂರಾರು ಬಗೆಯ ಸೊಂಟದ ಆಭರಣಗಳನ್ನು ಅಜಂತಾದ ಚಿತ್ರಗಳಲ್ಲಿ ಕಾಣಬಹುದಾಗಿದೆ. ಒಡ್ಯಾಣಬಂಧ, ಕಟಿಸೂತ್ರಗಳು, ಝಣ ಝಣಿಸುವ ಮಣಿ ಮೇಖಲೆಗಳು ಅಂದವಾಗಿವೆ. ಕಾಂಚೀದಾಮಗಳು ಕಂಗೊಳಿಸುತ್ತಿವೆ. ಬಂಗಾರದ ಪಟ್ಟಿಗೆ ಮಧ್ಯದಲ್ಲಿ ನವರತ್ನಗಳನ್ನು ಕೂಡಿಸಿ ಸುತ್ತಲೂ ಮುತ್ತಿನ ಎಳೆಗಳನ್ನು ಜೋತು ಬಿಟ್ಟ 'ಮೇಖಲಾ' ಸುಂದರವಾಗಿದೆ. ಜೋಡು ಮುತ್ತಿನ ಒಡ್ಯಾಣಗಳಿವೆ. ಒಂದೆಳೆಯ ದೊಡ್ಡ ಮುತ್ತಿನಸರಕ್ಕೆ ಸುತ್ತಲೂ ಸಣ್ಣ ಮುತ್ತಿನ ಝೂಲರಿಗಳನ್ನು ಹಚ್ಚಿದ ಒಡ್ಯಾಣ, ಅರಳಿದ ಕಮಲದ ಹೂವಿನಾಕಾರದ ಬಂಗಾರದ ಕಟಿಸೂತ್ರ, ಮುತ್ತಿನ ಗೊಂಚಲಿನ ಸೊಂಟದಾಭರಣ ಬಂಗಾರದ ಕಿರುಗಂಟೆಗಳನ್ನೂ, ಗೆಜ್ಜೆಗಳನ್ನೂ ಹಚ್ಚಿದ ಕಾಂಚೀದಾಮಗಳೂ ಅಂದವಾಗಿ ಕಾಣುತ್ತವೆ. ಕಾಂಚೀದಾಮವನ್ನು ಹೆಣ್ಣುಮಕ್ಕಳು ಧರಿಸಿದರೆ ಬಂಗಾರದ ಗಂಟೆಗಳ ಸಿನಾದ ಕೇಳಿ

ಬರುತ್ತದೆ, ಎಂಬ ವರ್ಣನೆ ಕಾವ್ಯದಲ್ಲಿ ದೊರೆಯುತ್ತದೆ. ನವರತ್ನಗಳಿಂದ ಮಾಡಿದ 'ನಿಗಿನಿಗಿಪ'' ಒಡ್ಯಾಣವನ್ನು ಉಪಯೋಗಿಸುತ್ತಿದ್ದರು.

ಕಾಲಿಗೆ ಕಡಗದ ತರಹದ ಆಭರಣಗಳನ್ನು ಹಾಕಿಕೊಳ್ಳುತ್ತಿದ್ದರು. ದೊಡ್ಡ ದೊಡ್ಡ ಗುಂಡು ಹಚ್ಚಿದ ಅಂದುಗೆ, ನೂಪುರ, ಗೆಜ್ಜೆಸರಗಳನ್ನು ಕಾಲಿಗೆ ಹಾಕಿಕೊಳ್ಳುತ್ತಿದ್ದರು.

ಭಾರತೀಯರು ವರ್ಣಸಮನ್ವಯದಲ್ಲಿ ಪ್ರವೀಣರಾಗಿದ್ದರೆನ್ನುವುದಕ್ಕೆ ಅಜಂತಾ ಚಿತ್ರಗಳು ತಮ್ಮ ಆಭರಣಗಳಲ್ಲಿ ತೋರುತ್ತಿರುವ ಬಣ್ಣದ ಹೊಂದಿಕೆಯಿಂದ ಮೂಕ ಸಾಕ್ಷ್ಯ ನುಡಿಯುತ್ತಿವೆ. ಬಿಳಿಯ ಮುತ್ತಿನ ಸಾಲಿನ ಮಧ್ಯದಲ್ಲಿ ಪಚ್ಚ ನೀಲ ಮಾಣಿಕ್ಯಗಳನ್ನು ಕೂಡಿಸುತ್ತಿದ್ದರು. ಬಂಗಾರದ ಮಧ್ಯದಲ್ಲಿ ಮಾಣಿಕ್ಯವನ್ನು ಕೂಡಿಸಿ ಆಭರಣಗಳನ್ನು ಮಾಡುತ್ತಿದ್ದರು. ಈ ವರ್ಣ ಸಮನ್ವಯದೃಷ್ಟಿ ಕಲಾಪೂರ್ಣವಾಗಿದೆ.

ನೂರಾರು ಬಗೆಯ ಕರ್ಣಾಭರಣಗಳನ್ನೂ ಕೊರಳಹಾರಗಳನ್ನೂ ಸುಂದರವಾದ ಬಾಹುಪೂರಗಳನ್ನೂ, ಮುತ್ತಿನ ಎದೆಕಟ್ಟನ್ನೂ ಚಿತ್ತಾಕರ್ಷಕವಾದ ಕಟಿಸೂತ್ರಗಳನ್ನೂ ವಿವಿಧ ಬಗೆಯ ಬಳೆಗಳನ್ನೂ ಕಾಲಿಗೆ ನೂಪುರಗಳನ್ನೂ ಆ ಕಾಲದ ಮಹಿಳೆಯರು ಹಾಕಿಕೊಳ್ಳುತ್ತಿದ್ದರೆಂದು ಇಂದಿಗೂ ಆ ಚಿತ್ರಗಳಿಂದ ನಾವು ಅರಿಯಬಹುದಾಗಿದೆ. ಅಜಂತಾ ಚಿತ್ರಕಲೆಯ ಕಾಲದ ಮಹಿಳೆಯರು ಆಭರಣಪ್ರಿಯರೂ ಕಲಾಪ್ರಿಯರೂ ಆಗಿದ್ದರು. ಅಜಂತಾದ ಮಹಿಳೆಯರು ವಸ್ತ್ರಕ್ಕಿಂತ ಆಭರಣಕ್ಕೆ ಮಹತ್ವ ಕೊಟ್ಟಿದ್ದರೆಂಬುದಕ್ಕೆ ವರ್ಣಚಿತ್ರಗಳೇ ಸಾಕ್ಷಿ.

ಚಾಲುಕ್ಯ ಯುಗದ ಆಭರಣಗಳು

ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿರುವ ಅಷ್ಟದಿಕ್ಪಾಲಕರ ಚಿತ್ರದಲ್ಲಿರುವ ಹೆಂಗಳೆಯರು ಕಿವಿಯಲ್ಲಿ ದೊಡ್ಡ ಕರ್ಣಕುಂಡಲಗಳನ್ನು ಹಾಕಿದ್ದಾರೆ. ಕೊರಳಲ್ಲಿ ಟೀಕಿಯಂಥ ಕಂಠಾಭರಣವಿದೆ. ವಜ್ರದ ಹಾರವೂ ಇದೆ.

ತಲೆಗೆ ಉದ್ದವಾದ ಕಿರೀಟವಿದೆ. ರಟ್ಟೆಬಳೆ, ಭುಜಕೀರ್ತಿಗಳಿವೆ. ಕೈಯಲ್ಲಿ ಬಳೆ, ಕಾಲಲ್ಲಿ ಅಂದುಗೆಗಳಿವೆ.

ಚಾಲುಕ್ಯರ ಶಿಲ್ಪಕಲೆ ಭಾರತದಲ್ಲಿ ಪುರಾತನವಾದುದು. ೬ ನೆಯ ಶತಮಾನದಿಂದ ೧೨ನೆ ಶತಕದವರೆಗೆ ಚಾಲುಕ್ಯ ದೇವಾಲಯಗಳನ್ನು ಭಾರತದ ಅನೇಕ ಭಾಗಗಳಲ್ಲಿ ಕಟ್ಟಲಾಯಿತು. ಚಾಲುಕ್ಯ ರಾಜರು ಕರ್ನಾಟಕದ ಕಲೆ ಹಾಗೂ ಸಂಸ್ಕೃತಿಗಳನ್ನು ಬೆಳೆಯಿಸಿ 'ಶಿಲ್ಪಕಲೆಯಲ್ಲಿ ಸುವರ್ಣಯುಗ'' ವನ್ನು ಆರಂಭಿಸಿದರೆಂದು ಫ್ರಾನ್ಸಿನ ಕಲಾವಿದರೂ ಅಭಿಪ್ರಾಯಪಟ್ಟಿದ್ದಾರೆ.

ಬಾದಾಮಿಯು ಚಾಲುಕ್ಯರ ರಾಜಧಾನಿಯಾಗಿತ್ತು. ಐಹೊಳೆ ಪಟ್ಟದಕಲ್ಲುಗಳು ಚಾಲುಕ್ಯರ ರಾಜಧಾನಿಯಾಗಿರಬೇಕು. ಆ ಕಾಲಕ್ಕೆ ಚಾಲುಕ್ಯರ ಪ್ರಸಿದ್ಧ ಅರಸರು ಕಟ್ಟಿಸಿದ ಗುಡಿಗಳು ಅಂದಿನ ಸಂಸ್ಕೃತಿಯ ಕುರುಹನ್ನು ಇಂದಿಗೂ ತೋರುತ್ತವೆ. ಬಾದಾಮಿಯಲ್ಲಿ ಚಾಲುಕ್ಯರು ಕೊರೆಯಿಸಿದ ಗುಹೆಗಳು ಜಗತ್ಪ್ರಸಿದ್ಧವಾಗಿದೆ. ೧೩೦೦ ವರ್ಷಗಳಿಂದಲೂ ಈ ರಾಜರ ಕೀರ್ತಿಯನ್ನು ಸಾರುತ್ತ ನಿಂತಿವೆ. ಬಾದಾಮಿಯ ಗುಹಾಶಿಲ್ಪದಿಂದ ಆ ಕಾಲದ ಆಭರಣಗಳ ಅಂದವನ್ನು ಅರಿಯಬಹುದಾಗಿದೆ. ಒಂದನೆಯ ಗವಿಯಲ್ಲಿರುವ ಪಾರ್ವತಿಯ ಮೂರ್ತಿಯ ಮುಡಿಗೆ, ಮುಂದಲೆಗೆ, ಮುತ್ತಿನ ಎಳೆಗಳನ್ನು ಸುತ್ತಲಾಗಿದೆ. ಕೊರಳಲ್ಲಿ ೩ ಬಗೆಯ ಸುಂದರ ಮುತ್ತಿನ ಹಾರಗಳಿವೆ. ಕಿವಿಯಲ್ಲಿ ಕುಸುರಿನ ಬಂಗಾರದ ಓಲೆಗಳಿವೆ. ರಟ್ಟೆಗೆ ಮೂರು ಸಾಲು ಮುತ್ತನ್ನು ಕಟ್ಟಲಾಗಿದೆ. ಕೈಯಲ್ಲಿ ಬಹಳ ಬಳೆಗಳಿವೆ. ಸೊಂಟಕ್ಕೆ ಸುಂದರ ಒಡ್ಯಾಣ ಹಾಕಲಾಗಿದೆ. ಕಾಲಲ್ಲಿ ಅಂದುಗೆಗಳಿವೆ.

ಆ ಗವಿಯಲ್ಲಿಯ ಮಹಿಷಾಸುರಮರ್ದಿನಿಯ ರಟ್ಟೆಗೆ ಮೂರು ಸುತ್ತಿನ ದುಂಡಾದ ರಟ್ಟೆಬಳೆಗಳನ್ನು ಹಾಕಿದ್ದಾರೆ. ಅದಕ್ಕೆ ಮಧ್ಯದಲ್ಲಿ ಮುತ್ತಿನಿಂದ ಅಲಂಕಾರಮಾಡಿದ್ದಾರೆ. ಕಿವಿಯಲ್ಲಿ ಓಲೆಗಳಿವೆ. ಕೈಯಲ್ಲಿ ಆರು ಬಳೆಗಳಿವೆ. ಅವುಗಳ ಬದಿಗೆ ಮುತ್ತಿನ ಬಳೆಗಳಿವೆ. ಕೊರಳಲ್ಲಿ ಎರಡೆಳೆಯ ಮುತ್ತಿನ ಸರವಿದೆ. ಬಾದಾಮಿಯ ಗುಹೆಗಳಲ್ಲಿ ಮಹಿಳೆಯರ ಮೂರ್ತಿಗಳ ಮೈಮೇಲೆ ಹೆಚ್ಚಿನ ಆಭರಣವಿಲ್ಲ. ಸುಂದರವಾದ ಕೆಲವು ಮಾತ್ರ ಆಭರಣಗಳಿವೆ.

ಐದನೆಯ ಶತಮಾನದಿಂದ ಐಹೊಳೆ, ಕೆಲವು ಕಾಲ ಚಾಲುಕ್ಯರ ರಾಜಧಾನಿಯಾಗಿರಬೇಕು. ವಿಕ್ರಮಾದಿತ್ಯ ಮೊದಲಾದ ಅರಸರ ಕಾಲಕ್ಕೆ ಸುಮಾರು



ಐಹೊಳೆಯ ದೇವಾಲಯದ ಶಿವ - ಪಾರ್ವತಿ

೬೦೦-೭೦೦ ದೇವಾಲಯಗಳು ಇಲ್ಲಿ ಇದ್ದವೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಐಹೊಳೆಯಲ್ಲಿ ರಾವಣಪಡಿ ಎಂಬ ಗುಹೆಯಿದೆ. ಇಲ್ಲಿ ಶಿವ ಪಾರ್ವತಿ, ಭೂದೇವಿ ಮಹಿಷಾಸುರಮರ್ದಿನಿಯರ ಭವ್ಯ ಮೂರ್ತಿಗಳನ್ನು ಕೆತ್ತಿದ್ದಾರೆ. ಈ ಎಲ್ಲ ದೇವತೆಗಳ ಕೈ- ಕೊರಳು, ಸೊಂಟ, ಕಾಲುಗಳಲ್ಲಿ ದುಂಡಗಿನ ೩-೪ ಸುತ್ತಿನ ಆಭರಣಗಳಿವೆ. ಇಲ್ಲಿ ಶಿವನ ಮೇಳದವರು ನೃತ್ಯ ಮಾಡುತ್ತಿದ್ದಾರೆ. ಅವರ ಕೈಯ್ಯಲ್ಲಿ ೧೦-೧೨ ದುಂಡಾದ ಬಳೆಗಳಿವೆ. ಕಿವಿಯಲ್ಲಿ ದೊಡ್ಡ, ದುಂಡಾದ ಓಲೆಗಳಿವೆ. ಕೆಲವರ ಕೊರಳಲ್ಲಿ ಉದ್ದ ಹಾಗೂ ಅಗಲವಾದ ಗುಂಡಿನ ಸರಗಳಿದ್ದರೆ ಇನ್ನು ಕೆಲವರ ಕೊರಳಲ್ಲಿ ಉದ್ದ ಹಾಗೂ ಚಪ್ಪಟೆಯಾದ ಗುಂಡಿನ ಸರಗಳಿವೆ. ಮತ್ತು ಕೆಲವರ ಕೊರಳಲ್ಲಿ ಎರಡೆಳೆಯ ಮುತ್ತಿನ ಸರ ಎದೆಯವರೆಗಿದೆ; ಚೌಕಾದ ಪದಕವಿದೆ. ಅಲ್ಲಿಂದ ಎರಡು ಮುತ್ತಿನ ಎಳೆಗಳು ಎದೆಯನ್ನು ಬಳಸಿ ಬೆನ್ನಿನವರೆಗೆ ಬಂದಿವೆ.

ಐಹೊಳೆಯ ಇನ್ನೊಂದು ಶಿವಾಲಯದಲ್ಲಿ ಶಿವಪಾರ್ವತಿಯರು ಕುಳಿತಿದ್ದಾರೆ. ಶಿವನ ಕೊರಳ ಹಾರ ಬಹಳ ಸುಂದರವಾಗಿದೆ. ಶಿವನ ಬಳಿ ನಗುಮುಖದಿಂದ ಕುಳಿತ ಪಾರ್ವತಿಯ ತಲೆಗೆ ಮುತ್ತಿನ ಎಳೆಗಳಿವೆ. ಕೊರಳಲ್ಲಿ ರತ್ನಹಾರವಿದೆ. ಅದರ ಕೆಳಗೆ ಕೊರಳಿನಲ್ಲಿರುವ ಮತ್ತೊಂದು ಮುತ್ತಿನ ಸರ ಸೊಂಟವನ್ನು ಸುತ್ತುವರಿದಿದೆ. ಸೊಂಟದಲ್ಲಿ ಒಡ್ಯಾಣವಿದೆ. ಹರಳು ಹಚ್ಚಿದ ಬಾಹುಪೂರಗಳಿವೆ. ಕಾಲಲ್ಲಿ ಅಂದವಾದ ನೂಪುರಗಳಿವೆ. ಕೈಯಲ್ಲಿ ನಾಲ್ಕು ಸುತ್ತಿನ ದುಂಡಗಿನ ಬಳೆಗಳಿವೆ.

ಲಾಡಖಾನ ದೇವಾಲಯದ ಶಿಲ್ಪಸುಂದರಿಯರ ಕೊರಳಲ್ಲಿ ಮುತ್ತಿನ ಜೋಡೆಳೆಯ ಸರಗಳಿವೆ; ಒಡ್ಯಾಣವಿದೆ; ಕರ್ಣಾಭರಣಗಳಿವೆ.

ಇನ್ನೊಂದು ದೇವಾಲಯದಲ್ಲಿರುವ ಹೆಂಗಳೆಯರ ಕೊರಳಲ್ಲಿ ವಜ್ರದ ಹಾರವಿದೆ. ಸೊಂಟದಲ್ಲಿ ವಜ್ರ, ಪಚ್ಚೆ, ಮಾಣಿಕಗಳನ್ನು ಕೆತ್ತಿದ ಮುತ್ತಿನ ಝಾಲರಿಯ ಒಡ್ಯಾಣವಿದೆ. ಕೈತುಂಬ ಬಳೆ, ಕಾಲಲ್ಲಿ ಅಂದುಗೆ ಕಂಡು ಬರುತ್ತವೆ.

ಐಹೊಳೆಯ ಒಂದು ದೇವಾಲಯದಲ್ಲಿ ಶಿವನ ಬಳಿ ಇರುವ ಸ್ಮಿತವದನೆಯಾದ ಪಾರ್ವತಿಯ ಕೈಯಲ್ಲಿ ಮೂರು ದುಂಡು ಬಳೆಗಳಿವೆ. ಕೊರಳಲ್ಲಿ ಎರಡು ಹಾರಗಳಿವೆ. ಆ ಹಾರಗಳಿಗೆ ವಜ್ರದ ಪದಕಗಳಿವೆ. ಕಿವಿಯಲ್ಲಿ ಅಂದವಾದ

ಓಲೆಗಳಿವೆ. ತಲೆಯಲ್ಲಿ ಸೀಮಂತಮಣಿಯಿದೆ. ತಲೆಯ ಮುಂಭಾಗದಲ್ಲಿ ಬಂಗಾರದ ಹೂಗಳಿವೆ. ಮುಡಿಗೆ ಮುತ್ತಿನ ಎಳೆಗಳನ್ನು ಕಲಾಪೂರ್ಣವಾಗಿ ಸುತ್ತಲಾಗಿದೆ.

ಚಾಲುಕ್ಯ ವಿಕ್ರಮಾದಿತ್ಯನು ಕಂಚಿಯ ಪಲ್ಲವರನ್ನು ಗೆದ್ದು ಮರಳಿ ಬರುವಾಗ ಅಲ್ಲಿಯ ನಿಪುಣ ಶಿಲ್ಪಿಗಳನ್ನು ಕರೆದುಕೊಂಡು ಬಂದನು. ಆತನ ರಾಣಿಯರಾದ ಲೋಕಮಹಾದೇವಿ ತ್ರೈಲೋಕ್ಯ ಮಹಾದೇವಿಯರು ಗಂಡನ ಜಯದ ಗುರುತಿಗಾಗಿ ಸುಂದರವಾದ ಮಲ್ಲಿಕಾರ್ಜುನ ಹಾಗೂ ವಿರೂಪಾಕ್ಷ ದೇವಾಲಯಗಳನ್ನು ಪಟ್ಟದಕಲ್ಲಿನಲ್ಲಿ ಕಟ್ಟಿಸಿದರು. ಮಲ್ಲಿಕಾರ್ಜುನ ದೇವಾಲಯದಲ್ಲಿರುವ ಒಬ್ಬ ಸುಂದರಿಯ ವಿಗ್ರಹದ ಕೈಯಲ್ಲಿ ಸುಂದರ ಬಳೆಗಳಿವೆ. ಕೊರಳಲ್ಲಿ ವಜ್ರಾಭರಣಗಳಿವೆ. ಬದಿಗಳಿಗೆ ಗುಂಡು ಹಚ್ಚಿವೆ. ಒಡ್ಯಾಣವಿದೆ. ವಿರೂಪಾಕ್ಷ ದೇವಾಲಯದಲ್ಲಿಯ ಪಾರ್ವತಿ ರಟ್ಟೆಬಳೆ, ಕೊರಳಹಾರ, ಬಳೆಗಳನ್ನು ಹಾಕಿಕೊಂಡಿದ್ದಾಳೆ. ಇನ್ನೊಬ್ಬಳು ಮುತ್ತಿನ ಎಳೆಗಳಿಂದ ತಲೆ ಸಿಂಗರಿಸಿಕೊಂಡಿದ್ದಾಳೆ.

ಐಹೊಳೆ ಪಟ್ಟದಕಲ್ಲುಗಳಲ್ಲಿಯ ಶಿಲಾಸುಂದರಿಯ ಆಭರಣಗಳು ದುಂಡಗಿವೆ. ಕೈಗೆ ಒಂದೊಂದು ದುಂಡಾದ ಸಣ್ಣ ಬಳೆ, ರಟ್ಟೆಗೆ ಹಾವಿನಾಕಾರದ ರಟ್ಟೆ ಬಳೆ, ಕೊರಳಲ್ಲಿ ಮೂರು ಎಳೆಗೆ ವಜ್ರದ ಪದಕಗಳಿರುವ ಹಾರ, ಕಿವಿಯಲ್ಲಿ ದುಂಡಾದ ಗಾಲಿಯಾಕಾರದ ಓಲೆಗಳಿವೆ. ಇಲ್ಲಿ ಆಭರಣಗಳಲ್ಲಿ ವೈವಿಧ್ಯ ಕಂಡು ಬರುವುದಿಲ್ಲ. ೭ನೆಯ ಶತಮಾನದಲ್ಲಿಯ ಆಭರಣಗಳ ಮಾದರಿಗಳನ್ನು ಕಂಡುಕೊಳ್ಳಲು ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳ ದೇವಾಲಯಗಳ ಶಿಲ್ಪಕಲೆಯು ಒಳ್ಳೆಯ ಸಾಧನವಾಗಿದೆ.

ಕಲ್ಯಾಣದ ಚಾಲುಕ್ಯರ ಕಾಲದ ದೇವಾಲಯ ಬೀದರ ಜಿಲ್ಲೆಯ ನಾರಾಯಣಪುರದಲ್ಲಿದೆ. ಆ ದೇವಾಲಯದ ಶಿಲಾಸುಂದರಿಯ ಪ್ರತಿಯೊಂದು ಆಭರಣಗಳು ವೈಶಿಷ್ಟ್ಯಪೂರ್ಣವಾಗಿವೆ. ತಲೆತುಂಬ ಮುತ್ತಿನ ಹಾರಗಳಿವೆ. ಮುಡಿಗೆ ಮುತ್ತಿನ ಎಳೆಯನ್ನು ಸುತ್ತಿದ್ದಾರೆ. ಬಂಗಾರದ ಮಾಲೆ ಧರಿಸಲಾಗಿದೆ. ಕೊರಳಲ್ಲಿ ಅಡ್ಡಿಕೆ, ರತ್ನಹಚ್ಚಿದ ದೊಡ್ಡಪದಕವುಳ್ಳ ಮೂರು ಎಳೆಯ ಹಾರ ಬಹಳ ಚಿತ್ತಾಕರ್ಷಕವಾಗಿವೆ. ಇಷ್ಟೊಂದು ಕಲಾಪೂರ್ಣವಾದ ಹಾರ ಬೇರೆ ಕಡೆಗೆ ನೋಡಲು ದೊರೆಯುವುದಿಲ್ಲ. ರತ್ನಹಚ್ಚಿದ ಹಾರದ ಕೆಳಗೆ ಮತ್ತೊಂದು ದೊಡ್ಡ

ಹಾರವಿದೆ. ಎದೆಯ ಮಧ್ಯದಿಂದ ಬೆನ್ನಿನವರೆಗೆ ಮುತ್ತಿನ ಎಳೆ ಸುತ್ತುವರೆದಿದೆ. ಸುಂದರವಾದ ಬಾಹುಪೂರಗಳು, ಸೊಂಟದಿಂದ ಮೊಣಕಾಲವರೆಗೆ ಅಂದವಾಗಿ ನೇತಾಡುತ್ತಿರುವ ಒಡ್ಯಾಣ ಒಳ್ಳೆಯ ಕಲೆಯ ದ್ಯೋತಕಗಳಾಗಿವೆ. ಕಲ್ಯಾಣ ಚಾಲುಕ್ಯರ ಕಾಲದ ಘನತೆ, ವೈಭವಗಳನ್ನು ಸಾರಿ ಹೇಳಲು ನಿಂತಿದ್ದಾಳೆ, ಈ ಕಲಾಸುಂದರಿ.

ಬಳ್ಳಿಗಾವಿಯ ತ್ರಿಪುರಾಂತಕ ದೇವಾಲಯದ ಒಳಭಾಗದಲ್ಲಿ ಕೆತ್ತಲ್ಪಟ್ಟ ಮಹಿಳೆಯರ ಚಿತ್ರದಲ್ಲಿ ಕೇಶಾಲಂಕಾರ ದರ್ಶನೀಯವಾಗಿದೆ. ಕೊರಳಲ್ಲಿ ನಾಲ್ಕು ಬಗೆಯ ಹಾರಗಳಿವೆ. ಸೊಂಟದಲ್ಲಿ ಒಡ್ಯಾಣವಿದೆ. ಕೈಯಲ್ಲಿ ಬಳೆಗಳಿವೆ. ಕಾಲಲ್ಲಿ ಎಂಟು ಸುತ್ತಿನ ದುಂಡಗಿನ ಕಡಗಗಳಿವೆ.

ಚೌಡದಾನಪುರದಲ್ಲಿಯ ದೇವಿಯ ಮೂರ್ತಿಯ ಕೊರಳಲ್ಲಿ ಕುತ್ತಿಗೆಯಿಂದ ಸೊಂಟದವರೆಗೆ ಎಂಟು ಬಗೆಯ ಹಾರಗಳಿವೆ. ನಾಲ್ಕಾರು ಬಗೆಯ ಒಡ್ಯಾಣ ಸೊಂಟದಿಂದ ಮೊಳಕಾಲವರೆಗೆ ನೇತಾಡುತ್ತಿದೆ; ಕೈಯಲ್ಲಿ ಬಂಗಾರದ ಗುಂಡಿನಿಂದ ಮಾಡಲ್ಪಟ್ಟ ಎಂಟು ಬಳೆಗಳಿವೆ. ಅವುಗಳ ಎರಡೂ ಬದಿಗೆ ಸಾದಾ ದುಂಡಗಿನ ಬಳೆಗಳು ಕಂಗೊಳಿಸುತ್ತಿವೆ. ಕಾಲಲ್ಲಿ ಬಗೆಬಗೆಯ ಕಡಗಗಳಿವೆ.

ಹಾವೇರಿ ಸಿದ್ಧೇಶ್ವರಗುಡಿಯಲ್ಲಿರುವ ಪಾರ್ವತಿಯ ವಿಗ್ರಹ ಅಂದವಾಗಿದೆ. ಮುಡಿಗೆ ಎತ್ತರವಾದ ಮುತ್ತಿನ ಹೂಗಳ ಅಲಂಕಾರ ಮಾಡಿದ್ದಾರೆ. ಈ ಮುಡಿಯು ಕೇಶಾಲಂಕಾರದಲ್ಲಿ ಒಂದು ನವೀನ ಮಾದರಿ. ತಲೆಯ ಮುಂಭಾಗದಿಂದ ಮುಡಿಯವರೆಗೆ ಮುತ್ತಿನ ಎಳೆಗಳನ್ನು ಕುಶಲತೆಯಿಂದ ಕೆತ್ತಿದ್ದಾರೆ. ಕಿವಿಯಲ್ಲಿ ನಾಲ್ಕುಸುತ್ತಿನ ಬಂಗಾರದ ಓಲೆಗಳಿವೆ. ಅವುಗಳ ಮಧ್ಯದಲ್ಲಿ ಚಿಕ್ಕೆಯಾಕಾರದ ಬಂಗಾರದ ಹೂವಿದೆ. ಕೊರಳಲ್ಲಿ ಮುತ್ತಿನ, ವಜ್ರದ ಹಾಗೂ ಬಂಗಾರದ ಹಾರಗಳಿವೆ. ನಾಗಮುರಿಗೆ ಕುಸುರುಕುಸುರಿನದಾಗಿದೆ. ಭುಜಕೀರ್ತಿ ಕೈಬಳೆಗಳಿವೆ. ಅಂದವಾದ ಒಡ್ಯಾಣವಿದೆ. ಕಾಲಲ್ಲಿ ತೋಡೆಗಳಿವೆ.

ಕುರವತ್ತಿ ಮಲ್ಲಿಕಾರ್ಜುನ ದೇವಾಲಯದ ಕಂಬಗಳಲ್ಲಿ ಕೆತ್ತಿದ ಸುಂದರಿಯರ ಮೂರ್ತಿಗಳು ಚಿತ್ತಾಕರ್ಷಕವಾಗಿವೆ. ಅಲ್ಲಿಯ ಶಿಲಾಬಾಲಿಕೆಯರು ಬೇಲೂರಿನ ಶಿಲಾಬಾಲಿಕೆಯರ ಸೋದರಿಯರಂತಿದ್ದಾರೆ. ಕಲಾಪೂರ್ಣವಾದ ಅವರ ಹೂಮುಡಿ ಸುಂದರವಾಗಿದೆ. ಬೈತಲೆಮಣಿ ವಿವಿಧಬಗೆಯ ರತ್ನಹಾರಗಳು

ಭುಜಕೀರ್ತಿ, ಕುಸುರಿಗೆಲಸ ಮಾಡಿದ ಬಾಹುಪೂರಗಳು, ಕೈಯಲ್ಲಿ ಹರಳು ಹಚ್ಚಿದ ಬಳೆಗಳು, ಸೊಂಟಕ್ಕೆ ಮುತ್ತಿನ ಎಳೆಗಳ ಕಟಿಸೂತ್ರಗಳಿವೆ. ಕಟಿಸೂತ್ರಗಳ ಮಧ್ಯದಲ್ಲಿ ದೊಡ್ಡ ಹರಳಿನ ಪದಕವಿದೆ. ಅದರ ಮಧ್ಯದಿಂದ ಪಾದದವರೆಗೆ ನೇತಾಡುವ ಮುತ್ತಿನ ಗೊಂಚಲಿದೆ. ಕಾಲಲ್ಲಿ ತೋಡೆ, ತೋಡೆಯ ಕೆಳಗೆ ಅಂದವಾದ ಚೈನು. ಬೆರಳಿಗೆ ಕಾಲುಂಗರಗಳಿವೆ.


ಲಕ್ಕುಂಡಿಯ ಪ್ರಸಿದ್ಧ ದೇವಾಲಯದಲ್ಲಿ ಕೆತ್ತಿರುವ ಶಿಲಾಬಾಲಿಕೆಯರು ಕೊರಳಲ್ಲಿ ಬಂಗಾರ, ಮುತ್ತಿನ, ನವರತ್ನದ ಹಾರಗಳನ್ನು ಕುತ್ತಿಗೆಯಿಂದ ಸೊಂಟದವರೆಗೆ ಹಾಕಿಕೊಂಡಿದ್ದಾರೆ. ವಜ್ರಕೆತ್ತಿದ ಒಡ್ಯಾಣವಿದೆ. ಕಾಲುಂಗುರ, ಕಾಲಂದುಗೆಗಳಿವೆ. ಕೈಗಳಲ್ಲಿ ನಾಲ್ಕು ನಾಲ್ಕು ಬಳೆಗಳಿವೆ. ಬೆರಳಿಗೆ ಉಂಗುರಗಳಿವೆ.

೧೦ ನೆಯ ಶತಮಾನದ ಚಾಲುಕ್ಯ ಪದ್ಧತಿಯಂತೆ ಕಟ್ಟಿದ ಸರಸ್ವತೀ ದೇವಾಲಯವು ಗದುಗಿನಲ್ಲಿದೆ. ಇಲ್ಲಿಯ ಶಿಲ್ಪಕಲೆ ಚಾಲುಕ್ಯ ಕಲೆಯ ಶ್ರೇಷ್ಠ ಮಾದರಿಯಾಗಿದೆ. ಈ ದೇವಾಲಯದ ಸುತ್ತಲಿನ ಗೋಡೆಯಲ್ಲಿ ವಿವಿಧಭಂಗಿಗಳಲ್ಲಿ ನಿಂತ ಹೆಂಗಳೆಯರ ಚಿತ್ರಗಳು ಸುಂದರವಾಗಿವೆ. ಅವುಗಳ ಕೈಯಲ್ಲಿ ಬಳೆಗಳನ್ನೂ ರಟ್ಟೆಬಳೆಗಳನ್ನೂ, ಓಲೆ ಮೊದಲಾದ ಅನೇಕ ಆಭರಣಗಳನ್ನೂ ಕಲಾಪೂರ್ಣವಾಗಿ ನಾಜೂಕಾಗಿ ಕೆತ್ತಿದ್ದಾರೆ. ಪ್ರತಿಯೊಂದು ಆಭರಣವನ್ನೂ ಬಹಳ ಜೋಕೆಯಿಂದ ಅಂದವಾಗಿ ಹೊಂದುವಂತೆ ರೂಪಿಸಿದ್ದಾರೆ.

೧೧ ನೆಯ ಶತಮಾನದಿಂದ ೧೪ ನೆಯ ಶತಮಾನದವರೆಗೆ ಹೊಯ್ಸಳ ಅರಸರು ಕರ್ನಾಟಕದಲ್ಲಿ ಕಲೆ, ಶಿಲ್ಪಗಳನ್ನು ಅಭಿವೃದ್ಧಿಗೊಳಿಸಿದರು. ಶಿಲ್ಪಕಲೆ ಇವರ ಕಾಲಕ್ಕೆ ಅತ್ಯುನ್ನತ ಮಟ್ಟವನ್ನು ಮುಟ್ಟಿತು. ಹಳೇಬೀಡು, ಬೇಲೂರು, ದೇವಾಲಯಗಳಲ್ಲಿ ಶಿಲ್ಪಕಲೆಯ ಸುಗ್ಗಿಯಾಗಿದೆ. ಈ ದೇವಾಲಯಗಳ ಶಿಲಾಬಾಲಿಕೆಯರ ಮತ್ತು ಇತರ ಸ್ತ್ರೀವಿಗ್ರಹಗಳ ಕೇಶಾಲಂಕಾರಗಳು, ಆಭರಣಗಳು ಅಪ್ರತಿಮವಾಗಿವೆ. ನಯವಾದ ಕೆತ್ತನೆಯ ಕುಸುರು ಕೆಲಸದಲ್ಲಿ ಬೇಲೂರು ಹಳೇಬೀಡುಗಳ ದೇವಾಲಯಗಳಷ್ಟು, ಕಲಾಪೂರ್ಣವಾದ ದೇವಾಲಯಗಳು ಜಗತ್ತಿನಲ್ಲಿಯೇ ಇಲ್ಲವೆಂದು ತಜ್ಞರು ಹೇಳಿದ್ದಾರೆ. ಬೇಲೂರಿನಲ್ಲಿ ಹೊಯ್ಸಳ ವಿಷ್ಣುವರ್ಧನನ ಕಾಲಕ್ಕೆ ಕಟ್ಟಿಸಿದ ಚನ್ನಕೇಶವ ದೇವಾಲಯ, ಹಳೇಬೀಡಿನ ಹೊಯ್ಸಳೇಶ್ವರ ಶಾಂತಲೇಶ್ವರ ದೇವಾಲಯಗಳು ಶಿಲ್ಪಕಲೆಯ ಆಗರಗಳಾಗಿವೆ.

ಬೇಲೂರ ಶಿಲಾಕನ್ನಿಕೆಯರು ನೃತ್ಯದ ವಿವಿಧ ಭಂಗಿಗಳನ್ನು ತೋರಿದ್ದಾರೆ. ಆ ದೇವಾಲಯದಲ್ಲಿರುವ ೪೨ ಮದನಿಕಾ ಪ್ರತಿಮೆಗಳು ಶಿಲ್ಪ ಸೌಂದರ್ಯವೇ ಮೂರ್ತಿಗೊಂಡಂತಿವೆ. ಬೇಲೂರ ಶಿಲಾಬಾಲಿಕೆಯರ ಸೌಂದರ್ಯಾಭಿವೃದ್ಧಿಗೆ ಕಾರಣವಾದ ಆಭರಣಗಳು ಅಂದವಾಗಿವೆ. ಓರ್ವ ಶಿಲಾಬಾಲಿಕೆ ಸರ್ವಾಭರಣಭೂಷಿತೆಯಾಗಿ ತನ್ನ ಸೊಬಗನ್ನು ಕನ್ನಡಿಯಲ್ಲಿ ನೋಡುತ್ತಿದ್ದಾಳೆ. ಕೇಶಾಲಂಕಾರ ಸುಂದರವಾಗಿದೆ. ಮುಖದ ಸೌಂದರ್ಯಕ್ಕಿಂತ ಮುಡಿಯ ಸೌಂದರ್ಯ ಶೋಭಾಯಮಾನವಾಗಿದೆ. ಗುಂಗುರುಕೂದಲು ತಲೆ ತುಂಬ ಗುಲಾಬಿಯ ಮೊಗ್ಗನ್ನು ಮುಡಿದಂತೆ ತೋರುತ್ತದೆ. ಬೈತಲೆಮಣಿಯನ್ನು ಕಟ್ಟಿದ್ದಾರೆ. ಮುಡಿಗೆ ಮುತ್ತಿನ ಸಾಲನ್ನು ಸುತ್ತಿದ್ದಾರೆ. ಮುತ್ತಿನ ಸಾಲಿನ ಸುತ್ತಲೂ ಒಂದು ಸುತ್ತು ಹಳಳು ಬಂದಿದೆ. ಹೆರಳಿನ ಮೇಲೆ ಹೂಮಾಲೆ, ಮತ್ತೆ ಅದರ ಮೇಲೆ ಒಂದು ಸುತ್ತು ಕೂದಲು, ಅದರ ಮೇಲೆ ಬಂಗಾರದ ಹೂಮಾಲೆ. ಹೀಗೆ ಅಲಂಕಾರಯುಕ್ತವಾಗಿ ರಂಜಿಸುವ ಸಿರಿಮುಡಿಯಾಗಿದೆ ಅದು. ಈ ಮುಡಿ ತಲೆಗಿಂತ ನಾಲ್ಕು ಬೆರಳು ಎತ್ತರವಾಗಿದೆ, ಅಗಲವಾಗಿದೆ.

ದೂರದಿಂದ ನೋಡಿದರೆ ತಲೆಯ ಹಿಂಭಾಗದಲ್ಲಿ ಅಂದವಾದ ಬೀಸಣಿಕೆಯನ್ನು ಇಟ್ಟಂತೆ ತೋರುತ್ತದೆ. ಮತ್ತೋರ್ವ ಶಿಲಾಕನ್ನೆಗೆ ಪೂಮುಡಿ, ಕಿವಿಯಲ್ಲಿ ಗಾಲಿಯಾಕಾರದ ದುಂಡಿನ ಓಲೆಗಳಿವೆ. ಓಲೆಗಳಿಗೆ ಸುತ್ತಲೂ ಮುತ್ತು ಹಚ್ಚಿದ್ದಾರೆ. ಕೊರಳಲ್ಲಿ ಅಂದವಾದ ನವರತ್ನಗಳ ಹಾರವಿದೆ. ಆ ಹಾರಕ್ಕೆ ಮುತ್ತಿನ ಝೂಲರಿಯಿದೆ. ಅದರ ಕೆಳಗೆ ಎರಡು ಎಳೆಯ ಮುತ್ತಿನ ಹಾರ ಸೊಂಟದವರೆಗೆ ನೇತಾಡುತ್ತಿದೆ. ವಜ್ರ, ಮಾಣಿಕ, ಪಚ್ಚೆಗಳಿಂದ ಮಾಡಿದ ಸುಂದರವಾದ ಕುಸುರುಗೆಲಸದ ಬಾಹುಪೂರಗಳು ಮೋಹಕವಾಗಿವೆ. ಕೈಯಲ್ಲಿ ಬಂಗಾರದ ಎರಡು ತೋಡೆಗಳಿವೆ. ಹತ್ತು ಬೆರಳುಗಳಲ್ಲಿಯೂ ಉಂಗುರಗಳಿವೆ. ಒಂದೊಂದು ಬೆರಳಿಗೆ ಎರಡೆರಡು ಉಂಗುರಗಳನ್ನು ಕೆಲವರು ಇಟ್ಟಿದ್ದಾರೆ. ಹರಳು ಕೆತ್ತಿದ ಒಡ್ಯಾಣದ ಸುತ್ತಲೂ ಮುತ್ತಿನ ಎಳೆಗಳನ್ನು ಜೋತು ಬಿಟ್ಟಿದ್ದಾರೆ. ಮುಂಭಾಗದಲ್ಲಿ ರತ್ನಪದಕಗಳೂ ಪಾದದವರೆಗೆ ನೇತಾಡುತ್ತಿವೆ ಕಾಲಲ್ಲಿ ಸುಂದರವಾದ ತೋಡೆ, ಅದರ ಕೆಳಗೆ ಗೆಜ್ಜೆ ಹಚ್ಚಿದ ಚೈನುಗಳಿವೆ. ಬೆರಳಲ್ಲಿ ಕಾಲುಂಗುರಗಳು ಶೋಭಿಸುತ್ತಿವೆ. 'ಕನ್ನಡಿಯಲ್ಲಿ ಕಾಣ್ಬುದೇಂ, ಮುನ್ನಮೇ ತೊಟ್ಟ ಚಿನ್ನರನ್ನಗಳಂದವೇಂ'' ಎಂಬಂತೆ ನಿಂತಿದ್ದಾಳೆ ಕನ್ನಡಿ ಹಿಡಿದ ಶಿಲಾಸುಂದರಿ.



ಬೇಲೂರು ಹಳೇಬೀಡುಗಳ ಶಿಲಾಬಾಲಿಕೆಯರ ಆಭರಣಗಳು ಒಂದೇ ಮಾದರಿಯವಿವೆ. ಅನೇಕ ಜನ ಬಾಲಿಕೆಯರು ಚಕ್ರಾಕಾರವಾಗಿ ಕೇಶಾಲಂಕಾರ ಮಾಡಿಕೊಂಡಿದ್ದಾರೆ, ಅರ್ಧಕೂದಲಿನಿಂದ ಮುಡಿಯನ್ನು ಕಟ್ಟಿದ್ದಾರೆ. ಉಳಿದ ಕೂದಲನ್ನು ಮೂರು ಭಾಗವಾಗಿ ವಿಂಗಡಿಸಿ ಮೊದಲ ಭಾಗದ ಕೂದಲುಗಳನ್ನು ದುಂಡುಗೆ ತಿರುವಿ, ಅದಕ್ಕೆ ಮುತ್ತಿನ ಎಳೆಯನ್ನು ಸುತ್ತಿ ಮುಡಿಗೆ ಸುತ್ತಿದ್ದಾರೆ. ಅದರ ಮೇಲೆ ಬಂಗಾರದ ಹೂಮಾಲೆ ಹಾಕಿದ್ದಾರೆ. ಕೂದಲಿನ ಎರಡನೆಯ ಭಾಗವನ್ನು ಮಾಲೆಯ ಮೇಲೆ ಸುತ್ತಿದ್ದಾರೆ. ಅದರ ಮೇಲೆ ಮತ್ತೊಂದು ಮಾಲೆಯಿದೆ. ಆ ಮಾಲೆಯ ಮೇಲೆ ಕೂದಲಿನ ಮೂರನೆಯ ಭಾಗವನ್ನು ಸುತ್ತಿದ್ದಾರೆ. ಅದರ ಸುತ್ತಲೂ ಕೇದಗೆಯ ಮಾಲೆ ಕಂಗೊಳಿಸುತ್ತಿದೆ. ಬೈತಲೆಗೆ ಮುತ್ತಿನ ಬೈತಲಮಣಿ. ಅದರ ಎರಡೂ ಬದಿಗೆ ಬಂಗಾರದ, ವಜ್ರದ ವಿವಿಧ ಬಗೆಯ ಹೂವುಗಳಿವೆ. ಹಲವರ ಜಡೆಗಳಿಗೆ ಜಡೆಬಿಲ್ಲೆ, ಗೊಂಡೆಗಳಿವೆ. ಕಿವಿಯಲ್ಲಿ ದುಂಡಗಿನ ದೊಡ್ಡ ದೊಡ್ಡ ಓಲೆಗಳಿವೆ.

ಮತ್ತೋರ್ವ ಶಿಲಾಸುಂದರಿ ಕೊರಳಲ್ಲಿ ಅಡ್ಡಿಕೆಯನ್ನು ಹಾಕಿಕೊಂಡಿದ್ದಾಳೆ. ಅಡ್ಡಿಕೆ ಕರ್ನಾಟಕದ ವೈಶಿಷ್ಟ್ಯಪೂರ್ಣವಾದ ಹಾರವಾಗಿದೆ. ಅಡ್ಡಿಕೆಯ ಕೆಳಭಾಗದಲ್ಲಿ ಎರಡು ಉದ್ದವಾದ ಹಾರಗಳನ್ನು ಹಾಕಿದ್ದಾಳೆ. ಸುಂದರವಾದ ಬಾಹುಪೂರಗಳು ಕುಸುರು ಕುಸುರಿನವಾಗಿವೆ; ಹರಳು ಹಚ್ಚಿದವಾಗಿವೆ. ಸೊಂಟದಿಂದ ಮೊಣಕಾಲವರೆಗಿನ ದೇಹವನ್ನೆಲ್ಲ ಮುಚ್ಚಿರುವ ಹಳೇಬೀಡು ಬೇಲೂರಿನ ಶಿಲಾಬಾಲಿಕೆಯರ ಒಡ್ಯಾಣಗಳು ಅಂದವಾಗಿವೆ. ಅಕ್ಕಸಾಲೆ ಬಂಗಾರದಲ್ಲಿ ತೋರುವ ಜಾಣ್ಮೆಯನ್ನು ಇಲ್ಲಿ ಮೂರ್ತಿಶಿಲ್ಪಿ ಕಲ್ಲಲ್ಲಿ ತೋರಿದ್ದಾನೆ. ಇಷ್ಟು ಕುಸುರಿಗೆಲಸದ ಆಭರಣಗಳು ಭಾರತದಲ್ಲಿ ಎಲ್ಲಿಯೂ ನೋಡಲು ದೊರೆಯುವುದಿಲ್ಲ. ಕಾಲಲ್ಲಿ ಹರಳು ಹಚ್ಚಿದ ತೋಡೆ ನೂಪುರಗಳಿವೆ. ಕೈಯಲ್ಲಿ ಮುತ್ತು ವಜ್ರಗಳ ಒಂದೊಂದೇ ಕಡಗಗಳಿವೆ. ಕೈಬೆರಳಿಗೆ ಎರಡೆರಡು ಉಂಗುರಗಳಿವೆ. ಉಂಗುರಗಳಿಂದ ಸುಂದರವಾದ ಬೆರಳಿನ ಚೆಲುವು ಇಮ್ಮಡಿಸಿದೆ. ಆ ಸಜೀವ ಮುಖ ಮುದ್ರೆಯ ಶಿಲಾಬಾಲಿಕೆಯರ ಮುಖ ಚೆಂದ, ಮುಖಕ್ಕಿಂತ ಆಭರಣ ಅಂದ. ಆಭರಣಗಳಿಂದ ಸುಶೋಭಿತೆಯರಾದ ಶಿಲಾಸುಂದರಿಯರ ಸೌಂದರ್ಯ ನೋಡಿದಾಗೊಮ್ಮೆ ಹೊಸ ಸಂದೇಶವನ್ನೇ ಬೀರುತ್ತಿವೆ.

ಕೊರಳ ಹಾರ

ಕೊರಳಲ್ಲಿ ಟೀಕಿ, ಬಂಗಾರದ ಅಂದವಾದ ಹಾರ, ಆ ಹಾರಕ್ಕೆ ವಜ್ರದ ಪದಕ. ನೀಲ ಪದಕ, ಮಾಣಿಕ ಪದಕಗಳಿವೆ. ಪದಕದ ಸುತ್ತಲೂ ಮುತ್ತಿನ ಎಳೆಗಳಿವೆ. ಇಂಥ ಹಾರಗಳು ಕುತ್ತಿಗೆಯಿಂದ ಎದೆಯವರೆಗಿವೆ. ಅದರ ಕೆಳಗೆ ಎರಡು ಎಳೆಯ ಮುತ್ತಿನ ಹಾರ ಸೊಂಟದವರೆಗಿದೆ. ಕೆಲವರ ಕೊರಳಲ್ಲಿ ಬಂಗಾರದ ನೆಲ್ಲಿಯಕಾಯಿ ಸರವಿದೆ. ಈ ಬಗೆಯ ಕೊರಳ ಹಾರಗಳನ್ನು ಬೇಲೂರು ಹಳೇಬೀಡುಗಳ ಶಿಲಾಸುಂದರಿಯರು ಹಾಕಿದ್ದಾರೆ.

ರಟ್ಟೆಯ ಬಳೆ

ಕುಸುರಿಗೆಲಸ ಮಾಡಿದ ಸುಂದರವಾದ ರಟ್ಟೆಬಳೆಗಳನ್ನು ಬೇಲೂರು ಹಳೇಬೀಡುಗಳ ಶಿಲಾಕನ್ನೆಯರು ಧರಿಸಿದ್ದಾರೆ. ಮಧ್ಯದಲ್ಲಿ ಹಚ್ಚಿದ ನವರತ್ನಗಳಿಂದ ಶೋಭಿಸುವ ನಾಲ್ಕು ಮುತ್ತಿನೆಳೆಗಳ ವಿವಿಧಾಕಾರವಾಗಿ ಕೆತ್ತಿದ ರಟ್ಟೆ ಬಳೆಗಳಿವೆ. ರುದ್ರಾಕ್ಷಿಯಾಕಾರದ ದೊಡ್ಡ ದೊಡ್ಡ ಗುಂಡಿನ ರಟ್ಟೆ ಬಳೆಗಳಿವೆ. ಕೆಲವರ ಬಾಹುಪೂರಗಳು ಹೆಸರಿಗೆ ತಕ್ಕಂತೆ ಇರುತ್ತವೆ. ಮಾಣಿಕ ವಜ್ರ ಹಚ್ಚಿದ ಕೇಯೂರಗಳ ಮೇಲೆ ಕಡಗದಂತೆ ದುಂಡಗಿರುವ ರಟ್ಟೆ ಬಳೆಗಳನ್ನು ಕೆಲವರು ಹಾಕಿದ್ದಾರೆ. ಕೆಲವರು ಹಾಕಿದ ರಟ್ಟೆ ಬಳೆಗಳನ್ನು ಬಂಗಾರದಲ್ಲಿ ನವರತ್ನಗಳನ್ನು ಕೂಡಿಸಿ ಸೂಕ್ಷ್ಮವಾಗಿ ಕೆತ್ತಿದ್ದಾರೆ. ವಿವಿಧ ಬಗೆಯ ರಟ್ಟೆ ಬಳೆಗಳನ್ನು, ಹಳೇಬೀಡು, ಬೇಲೂರು ದೇವಾಲಯಗಳಲ್ಲಿ ಕಾಣಬಹುದಾಗಿದೆ.

ಬಳೆ

ಶಿಲಾಬಾಲೆಯರ ಉಳಿದ ಆಭರಣಗಳಲ್ಲಿಯಂತೆ ಕೈಯ ಬಳೆಗಳಲ್ಲಿ ವೈವಿಧ್ಯ ಕಂಡುಬರುವುದಿಲ್ಲ. ಕೆಲವರು ಒಂದೊಂದೇ ಬಂಗಾರದ ತೋಡೆಗಳನ್ನು ಹಾಕಿದ್ದಾರೆ. ಇನ್ನು ಕೆಲವರ ಕೈಯ್ಯಲ್ಲಿ ಹರಡಿಕಂಕಣ, ಮುಳ್ಳು ಕಂಕಣಗಳಿವೆ. ಕೆಲವರು ಕೈತುಂಬ ಬಳೆ ಹಾಕಿಕೊಂಡು ಎರಡೂ ಬದಿಗೆ ತೋಡೆಗಳನ್ನಿಟ್ಟುಕೊಂಡಿದ್ದಾರೆ.

ಒಡ್ಯಾಣ

ಬೇಲೂರ ಮೂರ್ತಿಶಿಲ್ಪದ ಆಭರಣಗಳಲ್ಲಿ ಒಡ್ಯಾಣಗಳು ಬಹಳ ಸುಂದರವಾಗಿವೆ; ಕುಸುರು ಕುಸುರಿನವಾಗಿವೆ. ಬಂಗಾರದ ಪಟ್ಟಿಯ ಎರಡೂ ಬದಿಗೆ



ಹಳೇಬೀಡು ದೇವಾಲಯದ ಸರ್ವಾಲಂಕಾರಭೂಷಿತೆ ಶಿಲಾಕನ್ಯೆ

ಗುಂಡು ಹಚ್ಚಿದ ಎರಡು ಸಾಲು ಪಟ್ಟಿಗಳು ಆ ಶಿಲಾಬಾಲಿಕೆಯರ ಸೊಂಟದಲ್ಲಿ ಕಂಗೊಳಿಸುತ್ತವೆ. ಮಧ್ಯದಲ್ಲಿ ವಿವಿಧಾಕಾರದ ರತ್ನದ ಅಲಂಕಾರಗಳಿವೆ. ಪ್ರತಿಯೊಬ್ಬ ಮಹಿಳೆಯ ವಿವಿಧ ಬಗೆಯ ಒಡ್ಯಾಣಗಳು ಸೊಂಟದಿಂದ ಮೊಳಕಾಲವರೆಗಿನ ದೇಹವನ್ನು ಮುಚ್ಚಿವೆ.

ಕಾಲಲ್ಲಿ ಎಲ್ಲರೂ ತೋಡೆ ಹಾಕಿಕೊಂಡಿದ್ದಾರೆ. ಅದರ ಕೆಳಗೆ ಗೆಜ್ಜೆಯ ಹಾಗೂ ಕಿರುಗಂಟೆಗಳ ನೂಪುರಗಳಿವೆ.

ಕೈಬೆರಳಿಗೆ, ಕಾಲಬೆರಳಿಗೆ ಉಂಗುರಗಳಿವೆ. ಬೇಲೂರು ಹಳೇಬೀಡುಗಳ, ಶಿಲಾಕನ್ನೆಯರ ಆಭರಣಗಳಲ್ಲಿ ಕೊರಳ ಹಾರಗಳಲ್ಲಿ ಸೂಕ್ಷ್ಮ ಕೆಲಸದ ಚೆಲುವಿದೆ. ರಟ್ಟೆಯ ಬಳೆ, ಒಡ್ಯಾಣಗಳು ಕಲಾಪೂರ್ಣ ಒಡವೆಗಳಾಗಿವೆ. ನೂಪುರಗಳು ಅಂದವಾಗಿವೆ. ಕೈಯಬಳೆಗಳು ಒಂದೇ ಮಾದರಿಯವಿವೆ. ನಂದಿಗ್ರಾಮದಲ್ಲಿರುವ ಭೋಗನಂದೀಶ್ವರ ದೇವಾಲಯದ ಕಲ್ಯಾಣ ಮಂಟಪವನ್ನು ಹೊಯ್ಸಳರು ಕಟ್ಟಿಸಿದ್ದಾರೆ. ಅದು ಶಿಲ್ಪಕಲೆಯ ನೆಲೆವೀಡಾಗಿದೆ. ಅಲ್ಲಿಯ ನಾಲ್ಕು ಕಂಬಗಳಲ್ಲಿ ಇಬ್ಬರು ಹೆಂಗಳೆಯರನ್ನು ಕೆತ್ತಿದ್ದಾರೆ. ಅವರು ಬೇಲೂರ ಶಿಲಾಬಾಲಿಕೆಯರಿಗಿಂತ ಮಿಗಿಲಾಗಿ ಅಲಂಕೃತರಾಗಿದ್ದಾರೆ. ಮುಡಿಗೆಲ್ಲ ಮಾಲೆ, ಬೈತಲಮಣಿಯಿದೆ. ಕೊರಳಲ್ಲಿ ೩-೪ ಬಗೆಯ ಹಾರಗಳ ಅಂದವನ್ನು ಕಣ್ಮುಟ್ಟ ನೋಡಿಯೇ ಅರಿಯಬೇಕು. ಅಡ್ಡಿಕೆ ಇದೆ; ರಟ್ಟೆಯ ಬಳೆ ವಜ್ರ ಹಚ್ಚಿದ್ದಾಗಿದೆ. ಕೆಳಗೆ ವಜ್ರಗಳನ್ನು ಇಳಿಬಿಟ್ಟಿದ್ದಾರೆ. ಕೈಯಲ್ಲಿ ನಾಲ್ಕು ಸುತ್ತಿನ ದುಂಡುಬಳೆ, ವಜ್ರದ ಕಂಕಣ, ಮುರುಗಿತೋಡೆ, ಈಗಿನ ಹೊಸಬಗೆಯ ಐಸ್‌ಕ್ರೀಮ್ ತೋಡೆಯ ಮಾದರಿಯ ತೋಡೆಗಳು, ಮುಂಗೈವರೆಗೆ ಇಳಿಬಿದ್ದ ಮುತ್ತಿನ ಬಳೆ, ಬಂಗಾರದ ಚೇನುಗಳಿವೆ. ಕಾಲಲ್ಲಿ ಕಡಗ, ಚೇನು, ಕಾಲುಂಗುರಗಳಿವೆ. ಕೈಯ ಬೆರಳಲ್ಲಿ ನಾನಾ ಬಗೆಯ ಉಂಗುರಗಳಿವೆ. ಈ ಆಭರಣಗಳನ್ನು ನೋಡಿದಾಗ ೧೧ನೆಯ ಶತಮಾನದ ವೈಭವ ಕಣ್ಣೆದುರು ನಿಲ್ಲುತ್ತದೆ. ಕನ್ನಡಿಗರ ಕಲಾಪ್ರಿಯತೆ, ರಸಿಕತೆ ಎದ್ದು ತೋರುತ್ತದೆ. ಆಗಿನ ಮಹಿಳೆಯರು ಮುಡಿಯಿಂದ ಅಡಿಯವರೆಗೆ ಆಭರಣ ಧರಿಸಿಕೊಳ್ಳುತ್ತಿದ್ದರೆಂದು ತಿಳಿದು ಬರುತ್ತದೆ:

'ಉಲಿವ ನೇವುರ ಪಾಯವಟ್ಟದ
ಲಲಿತ ಕಂಕಣ ತೋಳಬಂದಿಯ



ಮೈತುಂಬ ಆಭರಣ ಧರಿಸಿರುವ ಬೇಲೂರ ಶಿಲಾಬಾಲಿಕೆ

ಲುಳಿಯ ಪದಕದ ತೋರ ಮುತ್ತಿನ ಸರದ ಮೂಕುತಿಯ ।

ತಳಿತ ಹೂವಿನ ಮುಡಿಯ''

ಬಾಲೆಯರನ್ನು ಶಿಲೆಯಲ್ಲಿ ಕಂಡು ಬೆರಗಾಗಿ ನಿಲ್ಲದವರಿಲ್ಲ.

ಹೊಯ್ಸಳರ ತರುವಾಯ ಕನ್ನಡ ರಾಜ್ಯದ ಸಂಸ್ಕೃತಿಯ, ಕಲಾ ವೈಭವದ ಉನ್ನತಿಯನ್ನು ಮೆರೆಯಿಸಿದವರು ವಿಜಯನಗರದ ಅರಸರು. ಅವರ ಕಾಲದ ವೇಷಭೂಷಣಗಳ ಬಗೆಗೆ ಶಿಲ್ಪದಿಂದಲೂ ಅಲ್ಲದೆ ಪರದೇಶದ ಪ್ರವಾಸಿಗರ ವರ್ಣನೆಗಳಿಂದಲೂ ತಿಳಿದುಕೊಳ್ಳಬಹುದು. ಚೀನ ಹಾಗೂ ಅಫಗಾನಿಸ್ಥಾನದ ಯಾತ್ರಿಕರು ವಿಜಯನಗರದ ಸಾಮ್ರಾಜ್ಯ ವೈಭವವನು ಕುರಿತು ಬರೆದಿದ್ದಾರೆ :

ವಿಜಯನಗರದ ಅರಸರ ಅರಮನೆಯಲ್ಲಿ ೧೨೦೦೦ ಮಹಿಳೆಯರು ಕೆಲಸ ಮಾಡುತ್ತಿದ್ದರಂತೆ. ಅವರು ಬಂಗಾರ ಮುತ್ತುರತ್ನಗಳ ವಿವಿಧ ಆಭರಣಗಳನ್ನು ಕೈಗೆ, ರಟ್ಟೆಗೆ, ಕೊರಳಿಗೆ, ಸೊಂಟಕ್ಕೆ, ಕಾಲಿಗೆ ಹಾಕಿಕೊಳ್ಳುತ್ತಿದ್ದರಂತೆ. ರಾಣಿಯರ ಬಳಿ ಹೇರಳವಾದ ವಜ್ರಾಭರಣಗಳಿದ್ದವಂತೆ. ಅವರ ಕೈಯಲ್ಲಿ ವಜ್ರ, ಮುತ್ತು ರತ್ನಗಳ ಬಳೆ, ರಟ್ಟೆಯ ಬಳೆಗಳು ಕಂಗೊಳಿಸುತ್ತಿದ್ದವಂತೆ. ಮೂಗಿನಲ್ಲಿ ಬಂಗಾರದ ತಂತಿಯಿಂದ ಮಾಡಿದ ಮುತ್ತು ವಜ್ರಗಳ ಮೂಗುತಿಯನ್ನು, ಕಿವಿಯಲ್ಲಿ ಅಂದವಾದ ಮುತ್ತು ರತ್ನಗಳ ಓಲೆಗಳನ್ನು, ವಿವಿಧ ಬಗೆಯ ಕರ್ಣಾಭರಣಗಳನ್ನು ಹಾಕಿಕೊಳ್ಳುತ್ತಿದ್ದರು. ಕೈಯಲ್ಲಿ ವಜ್ರಕೆಚ್ಚಿದ, ಮುತ್ತಿನ ಬಳೆ, ಗಾಜಿನ ಬಳೆಗಳನ್ನು ಧರಿಸುತ್ತಿದ್ದರು. ವಿಜಯನಗರದ ಬೀದಿಗಳಲ್ಲಿ ಮುತ್ತು ರತ್ನಗಳ ದೊಡ್ಡ ರಾಶಿಗಳನ್ನು ಒಟ್ಟಿಕೊಂಡು ವ್ಯಾಪಾರಮಾಡುತ್ತಿದ್ದರಂತೆ. ಕಾಳುಕಡಿಗಳ ಹಾಗೆ ರಾಶಿರಾಶಿಯಾಗಿ ಮುತ್ತುರತ್ನಗಳ ವ್ಯಾಪಾರ ಆ ಕಾಲಕ್ಕೆ ಆಗುತ್ತಿತ್ತೆಂದಮೇಲೆ ಆಗಿನವರು ಯಾವ ಪ್ರಮಾಣದಲ್ಲಿ ಆಭರಣಗಳನ್ನು ಧರಿಸುತ್ತಿದ್ದರೆಂಬುದನ್ನು ಊಹಿಸಿಕೊಳ್ಳಬಹುದು.

ಅಚ್ಯುತರಾಯನ ಕಾಲದಲ್ಲಿ ವಿಜಯನಗರಕ್ಕೆ ಬಂದಿದ್ದ ನೂನೀಜನೆಂಬ ಪ್ರವಾಸಿ ಅಲ್ಲಿಯ ಮಹಾನವಮಿಯ ವರ್ಣನೆ ಬರೆದಿದ್ದಾನೆ. ಅದರಲ್ಲಿ ರಾಜನ ಮಹಾನವಮಿಯ ಉತ್ಸವ ಮುಗಿದ ಮೇಲೆ ಅರಮನೆಯಲ್ಲಿ 'ರಾಣೀನಿವಾಸದಿಂದ ಅತಿ ಸುಂದರಿಯರಾದ ೩೬ ಜನ ರಾಣಿಯರು ಮೈತುಂಬ ಮುತ್ತು ರತ್ನ

ವಜ್ರಾಭರಣಗಳಿಂದ ಅಲಂಕೃತರಾಗಿ ಬಂಗಾರದ ಕಲಶಗಳನ್ನು ಹಿಡಿದು ರಾಯನೆದುರಿಗೆ ಬರುತ್ತಿದ್ದರು'' ಎಂದು ಬರೆದಿದ್ದಾನೆ. ಹಾಗೂ 'ವಿಜಯನಗರದ ಮಹಿಳೆಯರು ತಲೆಗೆ ಎತ್ತರವಾದ ಟೊಪ್ಪಿಗೆಗಳನ್ನು ಧರಿಸುತ್ತಾರೆ. ಈ ಟೊಪ್ಪಿಗೆಯ ಮೇಲೆ ಮುತ್ತಿನಿಂದ ಮಾಡಿದ ಹೂವುಗಳನ್ನು ಧರಿಸುತ್ತಾರೆ ಎಂದೂ ಬರೆದಿದ್ದಾನೆ.

ವಿಜಯನಗರದ ಶಿಲಾಕನ್ನೆಯರ ಆಭರಣಗಳು ಕುಸುರಿಗೆಲಸದವುಗಳೆಂದು ತೋರುವುದಿಲ್ಲ. ಕೈಯಲ್ಲಿ ದುಂಡಗಿನ ಬಳೆ, ರಟ್ಟೆಯ ಬಳೆಗಳಿವೆ. ಕೊರಳಲ್ಲಿ ಎರಡು ಮೂರು ಬಗೆಯ ಹಾರಗಳಿವೆ. ಕಿವಿಯಲ್ಲಿ ಮುತ್ತು ವಜ್ರಗಳ ಓಲೆಗಳಿವೆ. ಕೆಲವರು ಬೈತಲಮಣಿಯನ್ನು ಹಾಕಿದ್ದಾರೆ. ಒಡ್ಯಾಣ ಕಾಲಂದುಗೆಗಳಿವೆ. ಮುತ್ತಿನ ಭುಜಕೀರ್ತಿಯಿದೆ. ವಿಜಯನಗರದ ಮಹಿಳೆಯರು ಬೆಲೆಯುಳ್ಳ ರತ್ನಾಭರಣಗಳನ್ನು ಧರಿಸುತ್ತಿದ್ದರು.

ವಿಜಯನಗರ ಕಾಲದ ಆಭರಣ

ನಂದೀಗ್ರಾಮದಲ್ಲಿರುವ ಭೋಗನಂದೀಶ್ವರ ದೇವಾಲಯದಲ್ಲಿ ವಿಜಯನಗರದರಸರು ಕಟ್ಟಿಸಿದ ಮುಖಮಂಟಪವಿದೆ. ಅದರಲ್ಲಿ ೮ ಕಂಬಗಳಲ್ಲಿ ೩॥ ಫೂಟು ಎತ್ತರದ ಹಸನ್ಮುಖಿಯರಾದ ಹೆಂಗಳೆಯರನ್ನು ಕೆತ್ತಿದ್ದಾರೆ. ಅವರು ಕಟ್ಟಿದ ಮುಡಿ ಮುಖಕ್ಕಿಂತ ದೊಡ್ಡದಾಗಿದೆ. ತಲೆಯಲ್ಲಿ ಅಂದವಾದ ಹೂಮಾಲೆಯಿದೆ. ಬೈತಲಮಣಿ ಕಂಗೊಳಿಸುತ್ತಿದೆ. ತಲೆಯ ಸುತ್ತಲೂ ಬಂಗಾರದ ಹಾರವಿದೆ. ಕಿವಿಯಲ್ಲಿ ದೊಡ್ಡ ಹರಳಿನ ಓಲೆ ಬುಗುಡಿಗಳಿವೆ. ಕೊರಳಲ್ಲಿ ಅಡ್ಡಿಕೆ ಕೊರಳ ಹಾರ, ವಜ್ರದ ದೊಡ್ಡ ಪದಕವಿರುವ ಚೈನು ಇದೆ. ಎದೆಯ ಕೆಳಭಾಗದಲ್ಲಿ ಕೆತ್ತನೆಯ ಕೆಲಸ ಮಾಡಿದ ಬಂಗಾರದ ಪಟ್ಟಿಯಿದೆ. ಒಡ್ಯಾಣ ಸೊಂಟದಿಂದ ಮೊಣಕಾಲವರೆಗೆ ಇಳಿಬಿದ್ದಿದೆ. ರಟ್ಟೆಯ ಬಳೆಗಳಿವೆ. ಕೈಯಲ್ಲಿ ಹರಳಿನ ಜೋಡುಕಂಕಣ, ಮುತ್ತಿನ ಬಳೆಗಳಿವೆ. ಒಬ್ಬೊಬ್ಬರ ಕೈಯಲ್ಲಿ ಒಂದೊಂದು ಬಗೆಯ ಕಂಕಣ ತೋಡೆಗಳಿವೆ. ಕೈಯಲ್ಲಿ ಮಧ್ಯದ ಬೆರಳೊಂದನ್ನು ಬಿಟ್ಟು ಉಳಿದ ಬೆರಳುಗಳಿಗೆಲ್ಲ ಸಾದಾ ಉಂಗುರ, ವಜ್ರಕೆಚ್ಚಿದ ಉಂಗುರ, ಮುತ್ತಿನ ಉಂಗುರಗಳು ಅಂದವಾಗಿವೆ. ಕಾಲಲ್ಲಿ ತೋಡೆ, ಕಡಗಗಳಿವೆ, ಕಾಲುಂಗುರವಿದೆ. ಅಲಂಕೃತರಾದ

ಈ ಮಹಿಳೆಯರನ್ನು ಬಹಳ ಅಂದವಾಗಿ ಕೆತ್ತಿದ್ದಾರೆ. ವಿಜಯನಗರದ ಶಿಲ್ಪಕಲೆಯಲ್ಲಿ ಶ್ರೇಷ್ಠವಾಗಿದೆ, ಈ ಮುಖಮಂಟಪ.


ಮೋಹೆಂಜೋದಾರೋದ ಅವಶೇಷಗಳಿಂದ, ಅಜಂತಾದ ಚಿತ್ರಕಲೆಗಳಿಂದ, ಪ್ರಾಗೈತಿಹಾಸಿಕ ಹಾಗೂ ಐತಿಹಾಸಿಕ ಕಾಲದ ಆಭರಣಗಳ ವೈವಿಧ್ಯತೆಯನ್ನು ಅರಿತೆವು. ಕರ್ನಾಟಕದ ಚಾಲುಕ್ಯರ ಶಿಲ್ಪಕಲೆಯಿಂದ ಪ್ರಾರಂಭಿಸಿ ವಿಜಯನಗರದ ಶಿಲ್ಪದವರೆಗಿನ ಆಭರಣಗಳ ಅಂದವನ್ನು ತಿಳಿದೆವು. ಈ ಎಲ್ಲ ಕಾಲದ ಶಿಲ್ಪಕನ್ನೆಯರ ಆಭರಣಗಳನ್ನು ಪರಿಶೀಲಿಸಿ, ನಮ್ಮ ಸೋದರಿಯರು ಅತಿ ಪ್ರಾಚೀನ ಕಾಲದಿಂದ ಮುಡಿಯಿಂದ ಅಡಿಯವರೆಗೆ ಆಭರಣಗಳನ್ನು ಧರಿಸುತ್ತಿದ್ದರೆಂಬುದನ್ನು ಕಂಡುಕೊಂಡೆವು. ಬೇರೆ ಬೇರೆ ಕಾಲದ, ಬೇರೆ ಬೇರೆ ಆಭರಣಗಳ ವೈಶಿಷ್ಟ್ಯವನ್ನು, ಅಭಿರುಚಿಯ ವೈವಿಧ್ಯವನ್ನು ಅನಂತ ಶಿಲಾಸುಂದರಿಯರ ಮೂಲಕ ಅರಿತುಕೊಂಡೆವು.

ಕಾವ್ಯಸುಂದರಿಯರು


ಶಿಲ್ಪಕಲೆಯ ಆಗರವಾಗಿರುವ ದೇವಾಲಯಗಳಲ್ಲಿರುವ ಶಿಲ್ಪಸುಂದರಿಯರಿಂದ ಆಭರಣದ ಅಂದವನ್ನು ಅರಿತೆವು. ಅದರಂತೆ ಪ್ರಾಚೀನ ಕನ್ನಡ ಕಾವ್ಯಗಳಿಂದ, ಜಾನಪದ ಗೀತೆಗಳಿಂದ ನಮ್ಮ ಪೂರ್ವದ ಮಹಿಳೆಯರ ಆಭರಣಗಳ ವರ್ಣನೆಯಲ್ಲಿಯೂ ಮುಡಿಯಿಂದ ಅಡಿಯವರೆಗಿನ ಆಭರಣಗಳ ವರ್ಣನೆ ದೊರೆಯುತ್ತವೆ. ಮೊದಲು ಮುಡಿಯ ವರ್ಣನೆಯನ್ನು ನೋಡೋಣ.

ಮುಡಿಯ ಆಭರಣ


ಮಹಿಳೆಯರಿಗೆ ಮುಡಿಯೇ ಶೃಂಗಾರ. ವರ್ಣನೆಗಳಲ್ಲಿ ಅದೇ ಪ್ರಾಮುಖ್ಯ. 'ಮುತ್ತಿನ ಸೊಂಡಿಲ ಮುಡಿಯೊಳೊಪ್ಪಿತು.'' ಎನ್ನುವ ಕಾವ್ಯವಾಣಿಯಿದೆ. 'ಕಾರಿರುಳು ಮಿನಮಿನುಗಿ, ಕಾಣಿಸುತಿಹ ತಾರೆಗಳ ಬಂಬಲಂತೆ। ತೋರಮುಡಿಯೊಳೆಳೆ ಮುತ್ತಿನ ಶೃಂಗಾರ ವೊಪ್ಪಿರೆ ನಿಟ್ಟಿಸಿದರು.'' ಎಂಬ ವರ್ಣನೆ ದೊರೆಯುತ್ತದೆ. 'ಕಾಳಿಂದಿಯಿದಿರೊಳು ಸುರಗಂಗೆ ಹರಿವುದ । ಕೇಳಿತಿಲ್ಲದೆ ಕಂಡೆವೆಂದು । ನೀಲಕುಂತಳದೆಳೆ ಮುತ್ತಿನ ಬೈತಲೆಗಾಲಲನೆಯರು ಮೆಚ್ಚಿದರು'' ಎಂಬ ಕವಿಯ ಕಲ್ಪನೆ ಹಿರಿದಾಗಿದೆ. ಕಾವ್ಯಸುಂದರಿಯ ಮುಡಿಗೆ 'ಮುತ್ತಿನ ಬಲೆ' ಅಲಂಕಾರವಾಗಿದೆ. 'ಬೈತಲೆಯನ್ನು ಸರಿಗೊಳಿಸಿ ಕೋಮಲೆಯರು



ಕಲಾಪೂರ್ಣವಾದ ಡಾಬು



ನಾಗಮುರಿಗೆ



1. ಮುಳ್ಳುಗಂಕಣ 2. ಕೈಯೊಳಗೆ ಹಾಕಿಕೊಳ್ಳು ತೋಡೆ
3. ನಾಗಮುರಿಗೆ 4. ವಂಕಿ

ಸೀಮಂತಮಣಿಯನ್ನು ಧರಿಸಿದರು. ಓರ್ವ ಸಖಿಗೆ, 'ಬೈತಲೆ ಬಟ್ಟೆಯೊಳೆಸೆದುದು ಮುತ್ತು ಮಣಿಯ ಸಾಲ್ ರತ್ನಮಾಲೆ.'' ಗರತಿಯೊಬ್ಬಳು ಹರಳು ರಾಗುಟಿ ಚೌರಿ, ಜಡೆಬಂಗಾರ, ದೊಡ್ಡ ಜಡೆಯ ಹೂವು, ಅಡ್ಡಕೇದಿಗೆ ಹೂವು, ಗೊಂಡೆ ಪೆಂಡೆಗಳು ಜಡೆಯಲ್ಲಿ ಕಂಗೊಳಿಸುವಂತೆ ಧರಿಸಿದಳು. 'ಕುರುಳ್ಗೆ ಮುತ್ತಿನ ಜೂಳೆಯವಂ' ಕಟ್ಟಿಕೊಂಡ ಕನ್ನೆಗೆ ಅವಳ ಸಖಿಯರು 'ಅರಳೆಲೆ ನೊಸಲೊಳ್ ಚಲಿಸುತ್ತಿರೆ ಪೊಸಮುತ್ತಿನ ಘನನಕ್ಷತ್ರ ಮಾಲೆಯಂ ತೆಗೆದಿಟ್ಟು'' ''ಕುರುಳ್ಗೆ ಮುತ್ತಿನ ಬಲೆಯನೊಲ್ದು ಕೈಗೊಳಿಸಿ । ಮಾಲತಿಯ ಮಾಲೆಯಂ ನಿಡುಜಡೆಯೊಳಳವಡಿಸಿದರು''.''ಅರಳು ಮಲ್ಲಿಗಿ ದಂಡಿ ಸರವು ರಾಗುಟಿ ಚೌರಿ, ಜರದಗೊಂಡೇವು, ಕೇತಕಿಗರಿಯ ಪೇಳೆನಲ್ ಕಿರಿಯಮುತ್ತಿನ ಜೋಡು'' ಎಳೆಯು ಬೈತಲೆಯನ್ನುಬೆಳಗಿತು. ಮುತ್ತಿನ ಮುಡಿಯ ಭಾರಕ್ಕೆ ಓರ್ವ ಸುಂದರಿಯ ಕೊರಳು ಸೆಳೆಯಿತು. ವಜ್ರಮಾಣಿಕಗಳ ತಿರಪಣಿಹೂ, ಬಂಗಾರದ ತಿರಪಣಿಹೂ, ಬೈತಲಮಣಿ, ಪಿಂಪಣಿ, ಅಡ್ಡಕ್ಯಾದಗಿಗಳನ್ನು ಮೊದಲಿನ ಮಹಿಳೆಯರು ಕೇಶಾಲಂಕಾರಕ್ಕೆ ಉಪಯೋಗಿಸುತ್ತಿದ್ದರು. ' ನಂದಿಬಟ್ಟಲು ಹೂವು ದುಂಡುಮಲ್ಲಿಗೆ ದಂಡೆ, ಚಂದ್ರಮನ ಬೈತಲೆಗೆ ಮುತ್ತು ತುಂಬೆ' ಅಂದವಾಗಿ ಕಾಣಿಸಿತು. ಓರ್ವ ಜಾನಪದಗೀತದ ನಾರಿಗೆ 'ಸರಸಿಜಾಕ್ಷಿ ಜಡೆ ಹಾಕಿದಳು. ರ‍್ಯಾಗುಟಿ ಅದರ ಮ್ಯಾಗೆ! ಭರದಿ ಜಡೆಬಿಲ್ಲೆ ಕೇದಿಗೆ ಕುಚ್ಚು ಬಿಟ್ಟಳು ಹಣೆ ಮೇಗೆ, ಮುಂಗುರುಳೊತ್ತಿದ ಬೈತಲೆ ಬಿಟ್ಟಳು ವಾರಿ ಚಂದ್ರನ್ಹಂಗ' ಇನ್ನೋರ್ವಳು ಜಾಲದ ಹೂವಿನ ಜಡೆಯೋಳು 'ಕರುಳ್ಗೆ ಮುತ್ತಿನ ಜೂಳೆಯವಂ' ಕಟ್ಟಿಕೊಂಡಿದ್ದಳು. 'ಹೆಳಲು ಬಂಗಾರಗಳ ಕಾಂತಿಯು ಅಣೆದುದ್ಯೆ ಶತಕೋಟಿ ಸೂರ್ಯರ' 'ಮಣಿಮುಕುಟ ಮುತ್ತುಗಳ ದಂಡೆ'ಯನ್ನು ದೇವಿಯ ಮೂರ್ತಿಗೆ ಹಾಕುತ್ತಿದ್ದರು. ಪುರಾತನ ಕಾಲದಲ್ಲಿ ಮುತ್ತಿನೆಳೆಯ ಬೈತಲೆಯನ್ನು ಮಹಿಳೆಯರು ತೆಗೆಯುತ್ತಿದ್ದರು. 'ಜಾತಿವಡೆದ ಪೆರ್ದುರುಬಿನ ಮೇಲೆ ತಣ್ಸ್ವಾತಿ ಮಾಣಿಕವನ್ನು ಕಟ್ಟಿದರಂತೆ.' ''ಕೇಳಾ ಕುವರಿಯ ನೊಸಲಿನರ್ಧೇಂದುಸಂ। ಮೇಳಕ್ಕೆ ಬರುವ ತಾರಕೆಯ ಜಾಳವೆಂಬಂತೆ ಮುತ್ತಿನ ಬೈತಲೆಯ, ಸುಢಾಳ ಮಾಲಿಕೆಯ'' ಕಟ್ಟಿದರು. ಕಾವ್ಯ ಕನ್ನಿಕೆಯರಿಗೆ ಈ ರೀತಿಯಾಗಿ ಕನ್ನಡ ಕಾವ್ಯ ಸೃಷ್ಟಿಯಲ್ಲಿಯ ಸುಂದರಿಯರು ಮುಡಿಯಿಂದ ಮುಂದಲೆಯವರೆಗೆ ಮುತ್ತು ರತ್ನಗಳಿಂದ ಅಲಂಕಾರ


ಮಾಡಿಕೊಳ್ಳುತ್ತಿದ್ದರು. ಮುತ್ತಿನ ಮುಡಿಗಳನ್ನು ಕಟ್ಟಿಕೊಳ್ಳುತ್ತಿದ್ದರು. ಆ ಮುಡಿಗೆ ಹೊಂದಿಕೆಯಾಗುವಂತೆ ಮುತ್ತು, ರತ್ನಾಭರಣಗಳನ್ನು ಮುಡಿದುಕೊಳ್ಳುತ್ತಿದ್ದರು.

ಓಲೆ

ಹೆಂಗಳೆಯರಿಗೆ ಓಲೆಯ ಮೇಲೆ ಬಲುಪ್ರೀತಿ. ಅತಿಪೂರ್ವಕಾಲದಿಂದಲೂ ವಿವಿಧ ಬಗೆಯ ಓಲೆಗಳನ್ನು ಹಾಕಿಕೊಳ್ಳುತ್ತ ಬಂದಿದ್ದಾರೆ. ಆ ಓಲೆಗಳ ಅಂದವನ್ನು ಕಾವ್ಯಸುಂದರಿಯರಲ್ಲಿ ಕಾಣಬಹುದಾಗಿದೆ. ಹರಳೋಲೆ, ಮುತ್ತಿನೋಲೆ, ರನ್ನದೋಲೆ, 'ಕೆಂಬರಲೋಲೆಯಿಂದೊಗೆವ ಕಾಂತಿ'', ''ಮಿಳಿರ್ವ ಕೆಂಬರಲೋಲೆಯಿಂ ಕಿವಿಗೆ ಸಾರ್ಚೆ''ಸಂತಸ ಪಡುತ್ತಿದ್ದರು. ಕೆಲವರು ಹೊನ್ನೋಲೆ ನೀಲಮುತ್ತಿನೋಲೆಗಳನ್ನು ಧರಿಸುತ್ತಿದ್ದರು. ನೀಲದೆಕ್ಕಸರದೋಲೆ ಕದಂಪಿನೊಳಾಡೆ'' ನಲಿಯುತ್ತಿದ್ದರು. ಚಳತುಂಬ್ಬಚ್ಚಿದ ಚೌಕುಳಿ, ಮುತ್ತಿನ ಜೋಳಜೊಳಿಯ ರತ್ನದೋಲೆ, ವಜ್ಜರ್ಧಚ್ಚಿದ ವಾಲಿ, ಹೊಳೆವ ಬಾವುಲಿ, ಬುಗುಡಿ ಚೆಳತುಂಬುಗಳು, ಸರಪಣಿ, ಜಮಕಿ, ಪೊಂಬರಲಿನೋಲೆಗಳು ಮೊದಲಿನವರ ಕರ್ಣಾಭರಣಗಳಾಗಿದ್ದವು.

ಹೊಳೆವ ಮುತ್ತಿನ ವಾಲಿ, ನವರತ್ನ ಕೆತ್ತಿಸಿದೋಲೆ, ಶಂಖದೋಲೆಗಳು, ಹರಳೋಲೆ, ಕೊಪ್ಪು ಮಿಂಚಿನೋಲೆ, ತೆಂಗಿನ ತಿರುಳೋಲೆ, ಕರ್ಣಪೂರಂ, ಬಿಚ್ಚೋಲೆ, ತೂಗುವ ದಂತದೋಲೆ, ಕೇದಿಗೆಯೋಲೆ, ತಾಳೋಲೆ, ಕುಂಕುಮಿಕ್ಕಿದ ತೆಂಗಿನೋಲೆಗಳನ್ನು ವಿವಿಧಕಾಲದಲ್ಲಿ, ವಿವಿದ ಶ್ರೇಣಿಯ ಹೆಂಗಳೆಯರು ಹಾಕಿಕೊಳ್ಳುತ್ತಿದ್ದರು.

'ನೀಲಂಗಳಿಂತಳ್ತ ಕರ್ಣಾಭರಣಂ ಮಿಳಿರ್ದಾಡುತ್ತಿರೆ ಕುಂಡಲಂ'ಗಳನ್ನು ಧರಿಸಿದ ಕಾವ್ಯಸುಂದರಿಯರನೇಕರು ಕನ್ನಡ ಕಾವ್ಯಗಳಲ್ಲಿ ದೊರೆಯುತ್ತಾರೆ. 'ಕಿವಿಯ ಹಾಲೆಗಳಲ್ಲಿ ಹೊಳೆಯುವ ಪತ್ರಗಳುಳ್ಳ ಮಕರಮಾಣಿಕ್ಯಕುಂಡಲ, ರತ್ನಕುಂಡಲಗಳು ಶೋಭಿಸಿದವು.'' 'ಎಳೆವೆರೆ ಸುತ್ತಿದಂತೆ ಮಿರುಗುತ್ತಿದೆ ಕೇದಗೆಯೋಲೆ. ಚೆಂದನೊಳ್ಳೆಳಗವೊಲೊಪ್ಪಿತೋರುತ್ತಿದೆ.' ಅಂದರೆ ತಾಳೆ ಹೂವಿನ ಗರಿಯಿಂದ ಮಾಡಲ್ಪಟ್ಟ ಓಲೆಗಳು ಬಾಲಚಂದ್ರನನ್ನು ಕೇದಗೆಯಿಂದ ಸುರುಳಿಮಾಡಿ ಕಿವಿಯಲ್ಲಿ ಇಟ್ಟಂತೆ ತೋರಿತಂತೆ ಕವಿಗೆ. ಇನ್ನೋರ್ವ ಸುಂದರಿ ಕರ್ಣದೋಲೆಯ



1. ವಾಲಿ 2. ಬುಗುಡಿ 3. ನತ್ತು 4. ಗಾಡೆ 5. ಗಾಡೆ 6. ನತ್ತು

ಧರಿಸಿ, ಮೋಹನಾಲಿಯುಳ್ಳವಳಾಗಿದ್ದಳು. ಸೊಗಯಿಸುವ ಕರ್ಣಾವತಂಸಗಳು, ಕನಕ ಕುಂಡಲಗಳು, ಅರ್ಧಮುತ್ತಿನ ಓಲೆಗಳು, 'ನಾನಾವರ್ಣದಲಿ ಕರ್ಣಪತ್ರಿಕೆ ಪ್ರತಿಬಿಂಬಿಸಿದವು. ಕೊಪ್ಪನಿಕ್ಕಿದರು ಕಿವಿಯಲಿ'. ಈ ರೀತಿಯಾದ ಆಭರಣಗಳನ್ನು ಕಿವಿಮುಚ್ಚುವಂತೆ ಹಾಕಿಕೊಳ್ಳುತ್ತಿದ್ದರು. ಕೆಲವರು 'ಬುಗಡಿಬಾವಲಿ ವಾಲಿನಿಟ್ಟು' ಕೊಳ್ಳುತ್ತಿದ್ದರು. 'ಮೀನಬಾವಲಿ, ವಾಲಿಜೋಡು ಬುಗಡಿ ಜೋಡು ಝುಮಕಿಗಳು ಕಿವಿಯನ್ನಲಂಕರಿಸುತ್ತಿದ್ದವು. 'ಅಚ್ಚ ಮುತ್ತಿನ ಮೂರೆಳೆ, ಮುತ್ತಿನ ವಾಲಿಗೆ ಜತ್ತಾಗಿರುವದು ಮಾತಾಡುವ ಅರಗಿಳಿ' ವಾಲಿಯ ಮೇಲ್ಗಡೆ ಜೋಡುಗಿಳಿಗಳನ್ನು ಬಂಗಾರದಲ್ಲಿ ಕೆತ್ತಿರುತ್ತಾರೆ. ಆದಕಾರಣ ಜಾನಪದ ಗೀತೆಯಲ್ಲಿ ಮುತ್ತಿನ ವಾಲಿಗೆ ಜತ್ತಾಗಿರುವದು ಮಾತಾಡುವ ಅರಗಿಳಿ ಎಂದಿದ್ದಾರೆ. ಕನ್ನಡ ಕಾವ್ಯಗಳಲ್ಲಿ ಇನ್ನೂ ಕೆಲವು ಬಗೆಯ ಓಲೆಗಳ ಹೆಸರುಗಳು ದೊರೆಯಬಹುದಾಗಿದೆ. ಈ ಓಲೆಗಳ ವರ್ಣನೆಗೆ ತಕ್ಕಂತಹ ಓಲೆಗಳನ್ನು ಶಿಲಾಕನ್ಯೆಯರ ಕಿವಿಗಳಲ್ಲಿ ಕಾಣಬಹುದಾಗಿದೆ.

ಮೂಗುತಿ

೧೧-೧೨ ನೇ ಶತಮಾನದಿಂದ ಮೂಗುತಿಯನ್ನು ಧರಿಸುವುದು ರೂಢಿಯಲ್ಲಿ ಬಂದಿರಬೇಕು. ಪ್ರಾಚೀನ ದೇವಾಲಯಗಳ ಶಿಲಾಬಾಲಿಕೆಯರು ಮೂಗುತಿಯನ್ನು ಧರಿಸಿಲ್ಲ. ಪ್ರಾಚೀನ ಕಾವ್ಯಗಳಲ್ಲಿ ಮೂಗುತಿಯ ಬಗೆಗೆ ಉಲ್ಲೇಖವಿಲ್ಲ. ೧೧ನೇ ಶತಮಾನದಿಂದೀಚೆಗೆ ಮೂಗುತಿಗೆ ಹೆಚ್ಚಿನ ಮಹತ್ವ ದೊರೆಯಿತು. ಮೂಗುತಿ ಸೌಭಾಗ್ಯದ ಚಿಹ್ನವಾಯಿತು. ಮುತ್ತೈದೆಯ ಮಾಂಗಲ್ಯಕ್ಕಿರುವ ಮಹತಿ ಮೂಗುತಿಗೂ ಇದೆ. ಓಲೆಗಳಲ್ಲಿರುವಷ್ಟು ವೈವಿಧ್ಯ ಮೂಗುತಿಯಲ್ಲಿಲ್ಲ. ಮೂಗುತಿ ಪೊಳೆವ ಮೂಗುತಿ, 'ತಳತಳಿಪ ಪೊಸಕಟ್ಟಾಣಿ ಮುತ್ತಸೆವ ಮೂಗುತಿಯನಳವಡಿಸಿ ನಾಸಿಕಕಿಟ್ಟು' ಎಂಬ ವರ್ಣನೆಗಳು ಕಾವ್ಯಗಳಲ್ಲಿ ದೊರೆಯುತ್ತವೆ. ರತ್ನದ ಬೊಟ್ಟು ಮುತ್ತಿನ ಮೂಗುತಿ, ನತ್ತು, ಮುತ್ತಿನ ನತ್ತು, ಹರಳಿನ ನತ್ತು, 'ರೋಹಿಣಿ ನಕ್ಷತ್ರದಂತೆ ಹೊಳೆಯುವ' ಮೂಗುತಿಗಳನ್ನು ಕಾವ್ಯಸುಂದರಿಯರಿಗೆ ಇಟ್ಟು ಸಿಂಗರಿಸಿದ್ದಾರೆ. 'ನಾಸಿಕಸೊಗಸಾಗೇ ಬೆಸ್ತರಿಬುಲಾಕು ನತ್ತನಿಟ್ಟಳಂತೆ.' ಓರ್ವ

ಕನ್ಯೆ. ಹೆಚ್ಚಾಗಿ ಆಗಿನ ಗೃಹಿಣಿಯರು ಮುತ್ತಿನ ಮೂಗುತಿಯನ್ನಿಡುತ್ತಿದ್ದರು.

ಕೊರಳ ಹಾರಗಳು

ಕೊರಳ ಹಾರಗಳನ್ನು ಪ್ರಾಗೈತಿಹಾಸಿಕ ಕಾಲದಿಂದಲೂ ಮಹಿಳೆಯರು ಧರಿಸುತ್ತಿದ್ದಾರೆ. ಬೆಳ್ಳಿ, ಬಂಗಾರ, ವಜ್ರ, ಮುತ್ತುಗಳ ಶೋಧವಾಗುವದಕ್ಕಿಂತ ಮೊದಲು ಶಂಖ, ಸಿಂಪು, ಕಲ್ಲಿನ ಸಣ್ಣ ಮಣಿಗಳಿಂದ ಹಾರಗಳನ್ನು ಮಾಡಿಕೊಳ್ಳುತ್ತಿದ್ದರು. ನಂತರ ವಜ್ರವೈಢೂರ್ಯಗಳ ಹಾರಗಳು ರೂಢಿಯಲ್ಲಿ ಬಂದುವು. 'ಪ್ರಶಸ್ತಿಪಡೆದ ಪುಸ್ತಿಯ ಚಿಂತಾಕು, ಮಣಿಸರ, ಬಂದಿಗಳ'ನ್ನೂ ಮುತ್ತಿನಹಾರ ತಾತಿಯಮಣಿ, ಸಣ್ಣಮುತ್ತಿನ ಯಜ್ಞೋಪವೀತ, ತಾಳಿ, ಕಂಠಮಾಲೆ, 'ಕಟ್ಟಾಣಿಮುತ್ತಿನ ಕಂಠಮಾಲೆಯನ್ನೂ', ' ಕುಸುರಿಗೆಲಸದ ಮಣಿಪದಕ ಮನೊಪ್ಪುವ ಮುತ್ತಿನ ಸಮ, ಹಾರಾವಳಿಯನುಜ್ವಲಿಪ ಲೇವಣಮನೂಸುರಲೇ' ನಕ್ಷತ್ರ ಮಾಲೆಯನೂ ಕೊರಳಲಿಟ್ಟು ಬೆಡಗುವಡೆದ ಸುಂದರಿಯರು ಕಾವ್ಯಗಳಲ್ಲಿ ಕಂಡುಬರುತ್ತಾರೆ. ಕುಸುರಿಗೆಲಸದ ಮಣಿಪದಕ, ಮುತ್ತಿನ ಹಾರಾವಳಿ, ಉಜ್ವಲಿಪಲೇವಣ, ನಕ್ಷತ್ರಮಾಲೆ, ಕಂಠಾಭರಣಗಳು, ಪುಲಿಯುಗುರು, ನೇವಳ, ರನ್ನತಾಳಿ, ಮಾಗಾಯೆ, ಹೊಸಮಾಗಾಯಿ, ತೋರಹಾರ, ನೇವುರದ ಮುದ್ರಿಕೆಯ ಹಾರಾವಳಿಗಳು, ಪೊಸಮುತ್ತಿನಹಾರ, ಮುತ್ತಿನಸರಿಗೆ, ಕೊರಳೊಳುಪಟ್ಟಿ, ಮುತ್ತಿನೇಕಾವಳಿ ಸರಗಿ, ಪುತ್ಥಳಿ ಸರ, ನೆಲ್ಲಿಸರ, ಚಿಂತಾಕ, ತಾಳಿ, ಕರಿಮಣಿ, ಪೆಂಡ್ಯದಜಲ್ಲಿ, ಕಟ್ಟಾಣಿ, ಗುಂಡಿನ ಸರ, ಚಕ್ರಸರವು, ಹತ್ತೆಳೆಯ ಕಟ್ಟಾಣಿಸರ, ಚಂದ್ರಹಾರ, ಮಾಣಿಕಸರ, 'ಹೊನ್ನಪುತ್ತಳಿಸರ,' ಹವಳಸರ, ಬವಳಸರ, ತಾಯತಲ್ಯಾವಳಗಳು ಮೊದಲಿನ ಮಹಿಳೆಯರ ಕೊರಳ ಹಾರಗಳಾಗಿದ್ದವು. 'ಕೋಮಲೆಯ ಕೊರಳಿನೊಳೊಬ್ಬಳಿಕ್ಕಿದಳೊಲಿದು ಬೆಳಗುವ ತೊಳಪಮುತ್ತಿನ ತೋರಹಾರವನು ಹತ್ತೆಗಟ್ಟಿದ ಕೊರಳೊಳೊಪ್ಪುವ ತೋರಮುತ್ತಿನಸರದ ಸಮುದಯ ಸೊಗಸುತ್ತಿದ್ದವು. ಶುದ್ಧ ಸರಿಗೆಯ ಹತ್ತೆಗಟ್ಟಿನ ಬಣ್ಣ ಸರಗಳು, ಪುಸ್ತಿ, ಮುಕ್ತಾವಳಿ, ರತ್ನಪದಕ, ತ್ರಿಸರ, ಚೌಸರ, ವಿಮಳಮೌಕ್ತಿಕಕಂಠಿಕೆ, ಮುತ್ತಿನೆಕ್ಕಸರ, ಮುತ್ತಿನಲಂಬಳ, ಕಪ್ಪುರದ ಕಂಠಿಕೆ, ಸರಿಗೆ, ಸಣ್ಣಸುತ್ತಿ ನೇಕಾವಳಿ,



1. ಗುಂಡಿನಸರ 2. ಕಟಾಣಿಸರ 3. ಮೋಹನಮಾಳ



ಕೊರಳಹಾರಗಳು

1. ತಾಳಿಯಸರ 2. ಗೆಜೆ ಟೀಕೆಯ ಸರ

ಕೊರಲಹತ್ತಸರ, ಕೊರಳೊಳು ಕಟ್ಟಾಳು ಚಿಂತಾಕಡ್ಡಿಕೆ, ಲಾಡಿ ಜೊತೆಯಾಗೆ, ಭರದಿ ಪದಕ ಮೋಹನಮಾಲೆ, ದೊಡ್ಡಗುಂಡು' ''ಸ್ವರ್ಣಚಿಂತಾಕವು ಸರಿಗೆಯದು ಪೂರ್ಣಿಸಿತು ದ್ವಿಸಹಸ್ರ ಸೂರ್ಯರ'' 'ಒಪ್ಪುವ ಸರದಾಳಿ ಕಟ್ಟಿ ನೆಲ್ಲಿ ಪುತ್ಥಳಿ ಜೋಮಾಲಿ ಕಂಠೀಯಕಟ್ಟಾಣಿಕಟ್ಟಿ' 'ಅಡ್ಡಿಕೆಮುತ್ತು, ತಾಯಿತಮುತ್ತು, ಉತ್ತಮವಾದ ಪುತ್ಥಳಿಸರವು ಏಕಾವಳಿ ಸರವು ಮುತ್ತಿನ ಕಠ್ಠಾಣಿ' ಮುತ್ತೈದೆಯರ ಕರಿಮಣಿಗಳು ಕಾವ್ಯಸುಂದರಿಯರ ಕೊರಳಲ್ಲಿ ಕಂಗೊಳಿಸುತ್ತಿವೆ.

ಬಾಹುಪೂರ

ಕಾವ್ಯಸುಂದರಿಯರು 'ರತ್ನಕೀಲ ಗುಣಿಕೆಯಬಂದಿ ಭುಜಕೀರ್ತಿ ಬಂದಿ, ತೋಳಬಳೆ, ಮಿಸುಪ ಕೇಯೂರ, ತೋಳರಕ್ಷೆಯ' ತೊಡುತ್ತಿದ್ದರು, 'ನಳಿತೋಳ್ಗಿಕ್ಕಿದ ನೂತ್ನರತ್ನ ಕೇಯೂರ ಝುಣಝುಣರೆನುತಿತ್ತು.' ' ಮುತ್ತಿನ ಚಳಕಿಗೆಯಂ ಯುವತಿಯ ನಳಿತೋಳ್ಗೆ ಕಟ್ಟಿದರು' ದಾಸಿಯರು. ಹಲವರು ಮಣಿಗಳನ್ನು ರಟ್ಟೆಗೆ ಕಟ್ಟಿಕೊಂಡಿದ್ದಾರೆ. 'ಮುತ್ತುವಂದಿಯನಳ 'ವಡಿಸಿದಳೋರ್ವಳ್ ನಳಿತೋಳ್ಗೊಲವಿಂ.' ತೋಳಬಂದಿ, ನವರತ್ನದರವೆಯ ಬಂದಿ. ನೀಲದ ರವೆಯ ಬಾಹುಪೂರಗಳು, ವಂಕಿ, ಮುರಡಿಸರ್ಪಳಿ, ತೋಳ್ಬಾಪೂರಗಳು, 'ಬಿಗಿದ ನಳಿ ತೋಳುಗಳ ಬಂದಿಯ ವಿಗಡ ಭುಜಕೀರ್ತಿ', ಮಣಿಮಯದ ಕೇಯೂರ, ವಂಕೀಬಾಜುಬಂದುಗಳನ್ನು ಮೊದಲಿನ ಮಹಿಳೆಯರು ಹಾಕಿಕೊಳ್ಳುತ್ತಿದ್ದರೆಂದು ಕಾವ್ಯಗಳಲ್ಲಿಯ ವರ್ಣನೆಗಳಿಂದ ತಿಳಿದು ಬರುತ್ತದೆ.

ಕಂಕಣ

ಕಂಕಣ ಮಹಿಳೆಯರ ಸೌಭಾಗ್ಯದ ಚಿಹ್ನವಾಗಿದೆ. ಕಂಕಣ ಕೈಯವಳಿಗೆ, ಕಂಕಣಬಲದವಳಿಗೆ ನಾಡಿನಲ್ಲಿ ಪೂರ್ವಕಾಲದಿಂದ ಹಿರಿಯಸ್ಥಾನ ಕೊಡುತ್ತಿದ್ದರು. 'ಕಂಕಣಧ್ವನಿ ಕಣಕಣ ಎನ್ನುತ್ತಿದ್ದವು ಅವರ ಹಸ್ತಗಳಲ್ಲಿ. ಝುಣಝುಣತ್ಕಾರಮಂ ಮಾಳ್ಪಕಿಂಕಿಣಿಗಳು, ಮಣಿಮಯದ ಕಂಕಣಂ, ಅಸಿತಮಣಿಕಂಕಣಂ, ಕಂಕಣಝುಣಝುಂಣಿತಂ' ಮಾಡುತ್ತ ಓಡಾಡುವ ಕಾವ್ಯಸುಂದರಿಯರನೇಕರಿದ್ದಾರೆ. ಚಿನ್ನಹ ಕೈಕಡಗ ಬಂಗಾರ ಬಳೆ, ದುಂಡುಕಂಕಣ, ಕಡಗ ಕಂಕಣ ಹರಡಿ ಕೈಕಟ್ಟು,

ಕೈಹಾರಗಳುಳ್ಳ ಗೃಹಿಣಿಯರನ್ನು ಕಾವ್ಯಗಳಲ್ಲಿ ಕಾಣಬಹುದಾಗಿದೆ. ಹೊನ್ನು ಕಡಗ ಕಂಕಣ ರನ್ನತಡಿಯಕಂಕಣ, ಕಡಗಕಂಕಣ, ಮುಂಗೈತಳದ ಮುರುಡಿಗಳು, ಧಾರೆಗಡಗ, ಹೊನ್ನಬಳೆ, ಭದ್ರಾಕಾರದಿಂದ (ಮಂಗಲಕರವಾದ ಆಕಾರದಿಂದ) ಎಸೆವ ಕನಕಮಣಿಬಂಧ, ಮಿಸುನಿಯ ಕಂಕಣಂ, ಪೊಳೆವಪೊಂಬಳೆ, ಕೇವಣಿಸಿದ ಕಿಂಕಣೀರವಂ, ದಂತದಬಳೆ, ಪಸುರ್ಗಂಕಣ, ರತ್ನದಕಂಕಣ, ಪಿಂಡುಗಂಕಣ, ವಜ್ರಕಂಕಣ, ಮಣಿಕಂಕಣ, ಭೂರಿಕಂಕಣ, ಡೋರೆಕಂಕಣ, ಹರಡಿಕಂಕಣ, ಕೀಲಕಂಕಣ, ರಂಗುನೀಲದ ಬಳೆ, ಬೆಳ್ಳಿಯಬಳೆ, ಬಣ್ಣಬಣ್ಣದ ಗಾಜಿನಬಳೆ, ಮುತ್ತಿನ ಬಳೆ, ಹೀಗೆ ಒಂದಲ್ಲ, ಹತ್ತಲ್ಲ ಹಲವಾರು ತೆರದ ಕಂಕಣಗಳನ್ನು ನಮ್ಮ ಕಾವ್ಯಸುಂದರಿಯರ ಕೈಗಳು ಪರಿಚಯ ಮಾಡಿಕೊಡುತ್ತವೆ. ಅಲ್ಲದೆ, ದುಂಡುತೋಡೆ, ಗೋಟು ಪಾಟಲಿಗಳೂ ಇದ್ದುವು.

ಉಂಗುರ

ಕರ್ನಾಟಕದಲ್ಲಿ ಉಂಗುರಕ್ಕೆ ಪ್ರಾಧಾನ್ಯವಿದೆ. ಮಕ್ಕಳನ್ನು ತೊಟ್ಟಿಲಿಗೆ ಹಾಕುವಾಗ, ಮದುವೆ ನಿಶ್ಚಿತವಾದಾಗ ಉಂಗುರವನ್ನಿಡುವುದು ಸಂಪ್ರದಾಯವಾಗಿದೆ. ವಜ್ರದ ಉಂಗುರ, ನೀಲದುಂಗುರ, ಪಳಂಚಿನುಂಗುರ, ಗಾಜಿನುಂಗುರ, ಕೊಪ್ಪುಂಗುರ, ನವರತ್ನದುಂಗುರ, ಮುತ್ತಿನುಂಗುರಗಳು ಮೊದಲಿನ ಮಹಿಳೆಯರು ಧರಿಸುತ್ತಿದ್ದರು. ಪ್ರಸ್ತುತದುಂಗುರ, ಕೆತ್ತಿದುಂಗುರ, ತೊಂಡಿಲುಂಗುರ, ಮಾಣಿಕದುಂಗುರ, ಕಡೆಯ ಬೆರಳ ಮುದ್ರಿಕೆ, ಬೆರಲ ರತ್ನೋರ್ಮಿಕೆಗಳು, ಹಸುರ್ಮಣಿಯುಂಗುರಗಳು, ರತ್ನಮುದ್ರಿಕೆ ಸಣ್ಣ ಬೆರಳಿಗೊಪ್ಪಿತು, ಮೊದಲಾದ ಉಂಗುರಗಳ ವರ್ಣನೆ ಕಾವ್ಯಗಳಲ್ಲಿ ದೊರೆಯುತ್ತದೆ. ಅಲ್ಲದೆ 'ತೋರಮುದ್ರಿಕೆ ಬೆಳಗಿದುದು ನವಸೂರ್ಯತೇಜದಲಿ ಸೆಳ್ಳುಗುರ್ವೆರಲಿಂಗೆ ಹರಳು ಕೆತ್ತಿದ ಬೆರಳಿನುಂಗುರ'' ಕಾವ್ಯ ಸುಂದರಿಯರ ಬೆರಳಿನಲ್ಲಿ ಕಂಗೊಳಿಸಿತು.

ಒಡ್ಯಾಣ

ಪೂರ್ವಕಾಲದ ಮಹಿಳೆಯರು ಕಟಿಸೂತ್ರ, ಕಾಂಚಿ, ಮೇಖಲಾ ಮೊದಲಾದ ಆಭರಣಗಳನ್ನು ಸೊಂಟಕ್ಕೆ ಧರಿಸುತ್ತಿದ್ದರು. ಬಂಗಾರದ ಪಟ್ಟಿಗೆ ಮಧ್ಯದಲ್ಲಿ ವಜ್ರವೈಢೂರ್ಯಗಳನ್ನು ಕೂಡಿಸಿ ಸುತ್ತಲೂ ಮುತ್ತಿನ ಎಳೆಗಳನ್ನು ಬಿಟ್ಟು

ಮೇಖಲೆಯನ್ನು ತಯಾರಿಸುತ್ತಿದ್ದರು. ಒಡ್ಯಾಣಕ್ಕೆ ಬಂಗಾರದ ಚಿಕ್ಕ ಚಿಕ್ಕ ಗಂಟೆಗಳನ್ನು ಇಲ್ಲವೆ ಬಂಗಾರದ ಗೆಜ್ಜೆಗಳನ್ನು ಹಚ್ಚುತ್ತಿದ್ದರು. ಇಂಥ ಒಡ್ಯಾಣಗಳನ್ನು ಧರಿಸಿದ ಮಹಿಳೆಯರು ಓಡಾಡುವಾಗ ಮೃದುಮಧುರನಾದ ಹೊರಹೊಮ್ಮುತ್ತಿತ್ತಂತೆ. ಹೊನ್ನೊಡ್ಡಿಯಾಣ, ''ಕಟಿಸೂತ್ರ ಕಿಂಕಿಮಿಣಿಯೆನಲು ರಂಜಿಪವೊಡ್ಯಾಣಮಂ, ಉಲಿವ ಘಂಟೆಗಳ ಕಟಿಸೂತ್ರ'' ಘಂಟೆಗಳ ನೋರಂತೆ ತಾತಿ ಮೊದಲಾದವಂ ಕಟ್ಟಿ ಚಂಚತ್ ಕಾಂಚಿಯಂ ಬಂಧಿಸಿ'' ಓಡಾಡುತ್ತಿದ್ದರು. 'ಕೇಯೂರ ಕಾಂಚೀರವಂ'' ಕಾಲಕಂಚಿಯ ಗಂಟೆಗಳೇಂ ಲಲನೆಯ ಲಾವಣ್ಯನದಿಯ ಪೊಣರ್ವಕ್ಕಿಗಳೊಂದುಲಿಪುವೆನಲ್ಕುಮೆನಿತಂ- ಲಲನೆಗೆ ಕಟ್ಟಿದಳ್ ಮಣಿಮೇಖಲೆಯಂ.''ಎಂದೊಬ್ಬ ಕವಿ ಕಾಂಚೀನಾದದ ಸೊಗಸನ್ನು ಬಣ್ಣಿಸಿದ್ದಾನೆ. ಅಂಥ ಮಣಿಮೇಖಲೆಯನ್ನು ಕಟ್ಟಿಕೊಂಡು ಓಡಾಡುವ ಲಲನೆಯರು ಕನ್ನಡ ಕಾವ್ಯಗಳಲ್ಲಿ ಅನೇಕರಾಗಿದ್ದಾರೆ. ನವರತ್ನಮಯದ ಚಿಂತಾಕು ತೋರಿತು ನಡುವಿನೊಳು. 'ಬೆರಕೆವರಲ ಹೊನ್ನ ನೇವುಳ ಹೊಳೆದುದಾ ತರಣಿಯ ಕಟತಟಾಗ್ರದೊಳು ಹೊನ್ನೊಡ್ಡಿಯಾಣ ಕಟಿಸೂತ್ರ ಕಿಂಕಿಣಿ ಮಿಣಿಯೆನಲು ರಂಜಿಪವೊಡ್ಯಾಣಮುಂ ಉಲಿವ ಘಂಟೆಗಳ ಕಟಿಸೂತ್ರ'' ವಜ್ರದ ವೊಡ್ಯಾಣ. ಹರಳು ಹಚ್ಚಿದ ಪಟ್ಟಿ, ಚಿನ್ನದಕೊಂಡಿ, ಹೊನ್ನಿನ ಡಾಬು ಇಟ್ಟುಕೊಂಡು ಕಾವ್ಯಸುಂದರಿಯರು ಓಡಾಡುತ್ತಿದ್ದರು. ಓರ್ವ ದಾಸಿ, 'ಕಟಿಯಲಿ ಕಾಮಿನಿಗೆ ಮಣಿಮಯದ ಕಾಂಚೀಧಾಮವನು ಕಟ್ಟಿದಳು.''''ಕೆತ್ತಿಸಿದ ನವರತ್ನ ಖಚಿತದ ಕಟಿಸೂತ್ರ'' ಮಂಜುಳ ಕಿಂಕಿಣಿಗಳ ಕಾಂಚಿಧಾಮ, ಬ್ರಹ್ಮಸೂತ್ರ ಮತ್ತು ಪಚ್ಚೆ ರತ್ನ ವೈಢೂರ್ಯಗಳಿಂದ ಹೊಮ್ಮಿದ ಒಡ್ಯಾಣ, ಕಟಿಬಂಧ, ಕಾಕಸ್ಯಾ, ಕಾಂಚಿ, ಮೇಖಲೆ, ರಾಸಣ ಮೊದಲಾದ ಸೊಂಟದ ಆಭರಣಗಳನ್ನು ಮೊದಲಿನ ಮಹಿಳೆಯರು ಧರಿಸುತ್ತಿದ್ದರು. ಸುಂದರವಾದ ಒಡ್ಯಾಣಗಳನ್ನು ಬೇಲೂರು ಹಳೇಬೀಡು ಕುರವತ್ತಿ ಮೊದಲಾದ ಊರಿನ ದೇವಾಲಯಗಳ ಶಿಲಾಕನ್ಯೆಯರ ನಡುವಿನಲ್ಲಿ ನೋಡಬಹುದು. ಮೊದಲಿನ ಕಾಲದ ಮಹಿಳೆಯರು ಓಡಾಡಿದರೆ ಅವರ ಕೈಬಳೆಗಳ ಮಂಜುಳನಾದ, ಒಡ್ಯಾಣಗಳ ಕಿರುಗಂಟೆಯ ಸಪ್ಪಳ, ನೂಪುರಗಳ ಕಿರುಗೆಜ್ಜೆಯ ಇನಿದನಿಗಳು ಕೂಡಿ ಮಧುರನಿನಾದವನ್ನು ಹೊರ ಹೊಮ್ಮಿಸುತ್ತಿದ್ದವು. ಸೊಂಟದಿಂದ ಮೊಣಕಾಲವರೆಗೆ ನೇತಾಡುವ ಮೇಖಲೆ, ಮುಂಭಾಗದಲ್ಲಿ


ಪಾದದವರೆಗೆ ನೇತಾಡುವ ಕಟಿಸೂತ್ರಗಳು ಮಹಿಳೆಯರ ಮೆಚ್ಚಿಗೆಗೆ ಪಾತ್ರವಾಗಿದ್ದವೆಂದು ತೋರುತ್ತದೆ.

ನೂಪುರ


'ಪಂಕಜಾಕ್ಷಿಯರ್ಕೈದುತ್ತಿದ್ದರಂದುಗೆಗಳ ಝುಂಕಾರ ಝುಣ ಝುಣರೆನಲು ನೂಪುರ, ಕಾಲರುಳಿ, ನೇವುರ, ಪಾಯವಟ್ಟಂಗಳಂ ವಿರಚಿಸಿ'' ಚರಣನೂಪುರ ಧ್ವನಿಯನ್ನು ಎಲ್ಲೆಡೆ ಹೊಮ್ಮಿಸುವ ಕಾವ್ಯಸುಂದರಿಯರಿದ್ದಾರೆ. 'ಅಂಘ್ರಿಗೋರ್ವಳೊಲವಿಂ ಮಣಿನೂಪುರಮಂ ತೊಡರ್ಚಿದಳ್'' ಸಖಿಗೆ. ಗೆಜ್ಜೆ, ನವರತ್ನದ ಪಾದಮುದ್ರಿಕೆ, ಅಂದುಗೆಗಳು 'ಅಂಘ್ರಿಭೂಷಣರವಂ'' ತೋರಿದವು. ಕಾಲಸರ್ಪಳಿ, ರುಳಿ, ಕಾಲಂದುಗೆಯ ಗೆಜ್ಜೆ, ಝುಣಝುಣೆನುತ ಹೊರಟರು ಸಖಿಯರು ಆಟವಾಡಲು. ಗೆಜ್ಜೆಸರಪಣಿ ಹಾಕಿದವರನ್ನೂ, ಕಾಲ ಕಡಗದ ಮೇಲೆ ಅಂದುಗೆ ಕೀಲಿಸಿ, ಕಡೆಯಗಳ ಮುರಿಗೆಯ ಮೇಲೆ ಕಟ್ಟಿದ ಗೆಜ್ಜೆಗಳುಳ್ಳವರನ್ನೂ ಕಾಣಬಹುದು. ಇನ್ನೂ ಕೆಲವರು 'ಉಲಿವ ಗೆಜ್ಜೆಯ ಕಾಲಕಡಗದ । ಘಲಘಲಿಸುವಂದಿಗೆಯ, ರತುನದ ಉಳಿಯ, ನೇವುರನಿಕ್ಕಿದರು.'' ಪಾಯವಟ್ಟ ಹೊನ್ನ ಗಂಟಿಸರ ನವಮಣಿ ನೂಪುರಗಳು ಝುಣಝುಣರೆನಲ್ಪೊಂಗೆಜ್ಜೆಯೊಂದೊಂದು, ಕಿರುಗೆಜ್ಜೆಗಳಾವರಿಸಿ ದನಿಗೊಡೆ, ನಲಿದಾಡಿದರು ಸಖಿಯರು. ಸರಪಣಿ, ರುಳಿ, ಗೆಜ್ಜೆಗಳನ್ನೂ ಹಾಕಿಕೊಳ್ಳುತ್ತಿದ್ದರು. ಮೊದಲಿನವರು ಕಾಲಲ್ಲಿ ಭಾರವಾದ ಆಭರಣಗಳನ್ನು ಹಾಕುತ್ತಿದ್ದರು. ಅದರಿಂದ ದೇಹ ಸಮತೋಲವಾಗಿರುತ್ತದೆ, ಕ್ರಮಬದ್ಧವಾಗಿರುತ್ತದೆ, ಎಂದವರ ತಿಳಿವಳಿಕೆ.

ಕಾಲುಂಗುರ

'ವೀರಮುದ್ರಿಕೆಯನಿರದುಲಿವ ಕಾಲುಂಗುರ ನಾರಿಯಪಿಲ್ಲೆ, ಮಂಟಿಗೆ ಕಿರಿಯಪಿಲ್ಲೆಗಳ ನಾರಮಣಿಗೊಲ್ದಲಂಕರಿಸಿದರು ಒಡನಾಡಿಯರು. ವೀರಮುದ್ರಿಕೆ, ಉಲಿವ ಕಾಲುಂಗರ ಪಿಲ್ಲೆ, ಮಂಟಿಗೆ, ಮೀನಹಿರಿಪಿಲ್ಲೆ, ಕಿರಿಪಿಲ್ಲೆ, ಸುರುಳಿಕಾಲುಂಗರಗಳು, ಗೆಜ್ಜೆಹಚ್ಚಿದಪಿಲ್ಲೆ, ಬೆರಳುಗುರು, ಪಿಲ್ಲೆಗಳು ಮೊದಲಾದ ಕಾಲ್ಬೆರಳ ಆಭರಣಗಳಿಂದ ಹಿಂದಿನ ಕಾಲದ ಲಲನೆಯರು ಶೋಭಿಸುತ್ತಿದ್ದರು. 'ಅಂಗುಟಿಕೆ ಮೆಂಟಿಕೆ, ಕಿರುಪಿಲ್ಲೆಗಗ್ಗರಿ, ಪಾಗಡೆ ಪಿಲ್ಲಿಯನ್ನಿಟ್ಟರು ನಾರಿಕಾಲಿನಾಗೆ.'' ಮೀನಗುರುಳಿ ಮೊದಲಾದ ಆಭರಣಗಳನ್ನು ಕಾಲಲ್ಲಿ ಹತ್ತು ಬೆರಳಿಗೂ ಇಟ್ಟುಕೊಳ್ಳುತ್ತಿದ್ದರು.



1. ಮತ್ತಿನ ಟೀಕಿ 2. ತನಮಣಿ 3. ಮುತ್ತಿನ ಹಾರ



1. ಕೈಯಲ್ಲಿ ಹಾಕುವ ಗೀರುಬಳೆ 2. ಟೀಕಿ 3. ಗೆಜ್ಜೆ ಟೀಕಿ
4. ಗುಂಡಿನಸರ 5. ಶೃಂಗಾರಸರ

ಒಟ್ಟಾರೆ ಶಿಲಾಕನ್ನೆಯರಿಗೆ ಕಾವ್ಯ ಸುಂದರಿಯರಿಗೆ ಅಡಿಯಿಂದ ಮುಡಿಯವರೆಗೆ ಆಭರಣ ಧರಿಸುತ್ತಿದ್ದ ನಮ್ಮ ಮೊದಲಿನ ಮಹಿಳೆಯರು ಮಾದರಿಯಾಗಿದ್ದರೆಂಬುದು ನಿಸ್ಸಂದೇಹ. ಮುಡಿಗೆ ಮುತ್ತಿನ ಝಾಲರಿ, ಬೈತಲಮಣಿ, ಮುತ್ತಿನಬಲೆ ಬಂಗಾರ ವಜ್ರಗಳ ಹೂವುಗಳನ್ನು ಧರಿಸುತ್ತಿದ್ದರು. ಕಿವಿಯಲ್ಲಿ ಓಲೆ, ಬುಗಡಿ, ಕರ್ಣಪೂಲಗಳನ್ನಿಡುತ್ತಿದ್ದರು. ಕೊರಳಲ್ಲಿ ೫-೬ ಬಗೆಯ ಹಾರಗಳನ್ನು ಕುತ್ತಿಗೆಯಿಂದ ಸೊಂಟದವರೆಗೆ ಧರಿಸುತ್ತಿದ್ದರು. ಬಾಹುಪೂರಗಳನ್ನು ರಟ್ಟೆಗೆ ಕಟ್ಟಿಕೊಳ್ಳುತ್ತಿದ್ದರು. ಕಂಕಣ ಧ್ವನಿಗೈಯ್ಯುವಂತೆ ಕೈತುಂಬ ಬಳೆ ತೊಡುತ್ತಿದ್ದರು. ಕೈಯ್ಯ ಹತ್ತು ಬೆರಳಿಗೂ ಉಂಗುರಗಳನ್ನು ಹಾಕಿಕೊಳ್ಳುತ್ತಿದ್ದರು. ಅಂದವಾದ ಒಡ್ಯಾಣ ನಡುವಿನಲ್ಲಿ. ಕಾಲಲ್ಲಿ ಅಂದುಗೆ ಕಾಲುಂಗುರ ಪಿಲ್ಲೆ, ಈ ರೀತಿಯಾಗಿ ಸರ್ವಾಲಂಕಾರ ಭೂಷಿತೆಯನ್ನು ಕನ್ನಡ ಕಾವ್ಯಗಳಲ್ಲಿ ಕಾಣುತ್ತೇವೆ.

ಕಾವ್ಯಸುಂದರಿಯರನ್ನೂ, ಶಿಲ್ಪಕನ್ಯೆಯರನ್ನೂ, ನೋಡಿದಾಗ ಈ ವರ್ಣನೆ ನಿಜವೆನಿಸುತ್ತದೆ :


'ಪೊಸಮುತ್ತಿನ ಘನನಕ್ಷತ್ರಮಾಲೆಯಂ ತೆಗೆದಿಟ್ಟಳ್
ತೋಳ್ಗೆ ಮೌಕ್ತಿಕದಿಂ ಪುದಿದುರು ಬಾಹುಪೂರಮಂ
ಪದೆದಿತ್ತಳ್ ಮಾಣಿಕಮುಂಗುರಮಂ ನುಣ್ಬೆರಲ್ಗ
ಳೊಳ್ಕೈಗೈದಳ್, ತುಡಿಸಿದಳೆಸೆವ ಮುತ್ತಿನೋಲೆ
ಗಳೆರಡಂ, ಮಿಸುಪ ಮುತ್ತಿನ ಪೊಸಮೂಗುತಿ
ನಾಸಾಮಣಿ ವಿರಾಜಿಸಿತು ಮೊಗಸಸಿಯೋಳ್,
ಕೋಮಲೆಯ ಕದಪಿನೊಳೆ ಬರೆದಳ್ನಲನಾಕ್ಷಿಣಿ
ಮಿಸುಪ ಮಕರಿಕಾ ಪತ್ರಿಕೆಯಂ''

'ಅಗುರು ಕುಂಕುಮ ಪಚ್ಚೆಗಪ್ಪುರ ಪನ್ನೀರು ।
ಮೃಗನಾಭಿ ಕುಂಕುಮ ಕೇಸರಿ ಮುಖ್ಯಲೇಪನದಿ ।
ತಿಗುರನಿಕ್ಕಿದರಾಳಿಯರುಸತ್ಕುವರಿಯ ಹೊಗರೇಳ್ಪ ಹೊಂಬಣ್ಣ ಮೆಯ್ಗೆ
।

ಕಿರುವೆರಲುಗುರಿಂದೆ ಬೈತಲೆದೆಗೆದಾಗ ।

ಮರಿದುಂಬಿಗುರುಳ ಮಾನಿನಿಗೆ ತುರಬನಿಕ್ಕಿದರು ನೋಳ್ಪರ
ದೃಷ್ಟಿಕಣ್ಣಿಗೆ ಕರುಬನಿಕ್ಕಿದರೆಂಬಂತೆ ।
ಜಾತಿಮುತ್ತುಗಳು ಕೇವಣಿಸಿರ್ದವರ ರತ್ನಕೇತಕಿಯಸಳ ಕಟ್ಟಿದರು ।
ಜಾತಿವಡೆದ ಪೆರ್ದುರುಬಿನ ಮೇಲೆ ತಣ್ಣಾತಿ ಮಾಣಿಕವ ಕಟ್ಟಿದರು
'ಪನ್ನೀರ್ಗಳಂ ಮಿಂದು ಬಿಳಿಯಸಪುರಮನುಟ್ಟು
ಪೊಳೆವಂದುಗೆಯನಿಟ್ಟು
ಮುಂಚುತಂಸಡಗರಿಸಿ ಕಾಂಚಿಯನಲಂಕರಿಸಿ
ಘುಸೃಣರಸದಣ್ಣಿಟ್ಟು ಮಿಸುನಿರವೆಯತೊಟ್ಟು
ತೊಳತೊಳಪ ತೋರಮಾಣಿಕದಮಾಲೆಯನಾಂತು
ತಳತಳಿಪ ಪಂಚರತ್ನದ ಪದಕಮುಮನಾಂತು
ಭುಜಮಕರಿಕೆಯ ಬಾಹುಪೂರ ಕಟಕಂಗಳಂ
ನಿಜರುಚಿಯನುಗುಳ್ವ ನವರತ್ನದುಂಗುರಗಳಂ
ತಳೆದಾಣಿ ಮುತ್ತುಗಳ ಹತ್ತಸರಮಂ ಧರಿಸಿ
ಕಳೆವೆತ್ತ ಪೊಸರತ್ನದೋಲೆಯನಲಂಕರಿಸಿ
ತೋರಮುತ್ತಿನ ಮೂಕುತಿಯನಾಂತು ಕಂಪೆಸೆವ
ಸಾರಮೃಗಮದದ ತಿಲಕಮನಾಂತು ನುಣ್ಪೆಸೆವ
ತೆಳ್ಗದಂಪಿಗೆ ಮಕರಿಕೆಯನಂದಂಗೊಳಿಸಿ
ಯೊಳ್ಗುರುಳ್ಗೆ ಮುತ್ತಿನಬಲೆಯನೊಲ್ದು ಕೈಗೊಳಿಸಿ
ಮಾಲತಿಯಮಾಲೆಯಂ ನಿಡುಜಡೆಯೊಳಳವಡಿಸಿ''

ಇದೇನು ಕವಿಯ ಕಪೋಲಕಲ್ಪಿತ ವರ್ಣನೆಯಲ್ಲ. ಈ ರೀತಿಯಾಗಿ ಅಲಂಕಾರಮಾಡಿಕೊಳ್ಳುತ್ತಿದ್ದ ನಾರಿಯರನ್ನು ಪರಿಸರದಲ್ಲಿ ಕಂಡಾಗಲೇ ಅವನು ತನ್ನ ಪ್ರತಿಭೆಯನ್ನು ಜೊತೆಗೊಳಿಸಿ ಬಣ್ಣಿಸಬಲ್ಲ. ನಾಡಿನಲ್ಲಿ ಸಂಪತ್ತು ಸಮೃದ್ಧವಾಗಿದ್ದಾಗ, ಜೀವನದಲ್ಲಿ ನೆಮ್ಮದಿಯಿದ್ದಾಗ, ಯಂತ್ರದೊಡನೆ ದುಡಿಯುವ ದಗದಗಿ ಅವಸರವಿಲ್ಲದೆ ಸಮಾಧಾನದ ಬದುಕು ಸಾಗಿಸುತ್ತಿದ್ದಾಗ ನಮ್ಮ ಸೋದರಿಯರು ರಸಿಕರೂ, ಸೌಂದರ್ಯೋಪಾಸಕರೂ ಆಗಿದ್ದರೆಂಬುದನ್ನು ಅರಿತುಕೊಳ್ಳಬಹುದಾಗಿದೆ.




1. ಜೋಡುಗಿಳಿಗಳುಳ್ಳ ಹೆರಳುಬಂಗಾರ 2. ಮಕ್ಕಳ ಆಭರಣ 3. ಜಡೆಗೊಂಡೆ

ಚಾಲುಕ್ಯರ ಕಾಲದಿಂದ ವಿಜಯನಗರ ಅರಸರ ಕಾಲದವರೆಗೆ ಕನ್ನಡನಾಡಿನಲ್ಲಿ ಬಂಗಾರ, ಬೆಳ್ಳಿ, ವಜ್ರ ವೈಢೂರ್ಯಗಳು ವಿಪುಲವಾಗಿದ್ದವು. ಅನೇಕ ಸಲ ಪರಕೀಯರ ದಾಳಿಗೆ ತುತ್ತಾದರೂ ನಾಡು ಸಂಪತ್ ಸಮೃದ್ಧವಾಗಿತ್ತು. ವಿಜಯನಗರದ ಬೀದಿಗಳಲ್ಲಿ ಮುತ್ತು ರತ್ನಗಳ ರಾಶಿಯನ್ನು ಹಾಕಿ ಮಾರುತ್ತಿದ್ದರೆಂದು ಪರದೇಶದ ಪ್ರವಾಸಿಕರು ವರ್ಣಿಸಿದುದನ್ನು ಹಿಂದೆ ಉಲ್ಲೇಖಿಸಿದೆ. ವಿಜಯನಗರ ಸಾಮ್ರಾಜ್ಯ ಹಾಳಾದ ಮೇಲೆ ಕನ್ನಡನಾಡಿನ ಸಂಪತ್ತಿನ ಸರ್ವನಾಶವಾಯಿತು. ಪರಕೀಯರ ಧಾಳಿ, ಪರಸ್ಪರ ಹೊಡೆದಾಟದಲ್ಲಿ ಇದ್ದ ಸಂಪತ್ತು ಹೆರವರ ಪಾಲಾಯಿತು. ಅಂದಿನಿಂದ ಮಹಿಳೆಯರ ಮೈಮೇಲಿನ ಆಭರಣಗಳ ಸಂಖ್ಯೆ ಕಡಿಮೆಯಾಗುತ್ತ ನಡೆಯಿತು. ಕೆಲವೆಡೆ ಆಭರಣಪ್ರಿಯರಾದ ಮಹಿಳೆಯರು ಆಭರಣಗಳನ್ನು ಕಾಯ್ದುಕೊಂಡು ಬಂದಿದ್ದರು. ಸಂಸ್ಥಾನಗಳಲ್ಲಿ, ಸಿರಿವಂತರ ಮನೆಗಳಲ್ಲಿ ಆಭರಣಗಳು ಬೇಕಾದಷ್ಟಿದ್ದ ಕಾಲವೊಂದಿತ್ತು. ಮಣಗಟ್ಟಲೆ ಬಂಗಾರವಿದ್ದ ಮನೆಗಳಲ್ಲಿ ಸೇರುಗಟ್ಟಲೆ ಬಂಗಾರವನ್ನು ಆಪದ್ಧನವೆಂದು ಕಾಯ್ದುಕೊಂಡು ಬಂದಿದ್ದರು. ತಾಯಿಯಿಂದ ಮಗಳಿಗೆ, ಮಗಳಿಂದ ಮೊಮ್ಮಗಳಿಗೆ ಈ ಆಭರಣಗಳು ಸ್ತ್ರೀಧನವಾಗಿ ಬರುತ್ತಲಿದ್ದವು. ಆ ರೀತಿಯಾಗಿ ಉಳಿದು ಬಂದ ೧೯ನೇ ಶತಮಾನದ ಆಭರಣಗಳು ಸುಂದರವಾಗಿವೆ. ಎರಡನೆ ಮಹಾಯುದ್ಧನಂತರ ನಾಡಿನ ಆರ್ಥಿಕಸ್ಥಿತಿ ದುಃಸ್ಥಿತಿಗೊಳಗಾದಮೇಲೆ ಆಭರಣ ಸಂಖ್ಯೆ ಇನ್ನೂ ಕಡಿಮೆಯಾಯಿತು. ನಾಡಿಗೆ ಸ್ವಾತಂತ್ರ್ಯ ದೊರೆತ ಹನ್ನೆರಡು ವರುಷಗಳಲ್ಲಿ ಮಹಿಳೆಯರ ಆಭರಣ ಪ್ರಿಯತೆ ಕಡಿಮೆಯಾಗಿದೆಯೆನ್ನಬಹುದು. ಅಲ್ಲದೆ ಆಭರಣದ ಮಾದರಿಯಲ್ಲಿ ಬಹಳ ಬದಲಾವಣೆಯಾಗಿದೆ. ನಮ್ಮ ಅಜ್ಜಿಯ ಕಾಲಕ್ಕೆ ಯಾವ ಬಗೆಯ ಆಭರಣಗಳನ್ನು ಧರಿಸುತ್ತಿದ್ದರೆಂಬ ಕಲ್ಪನೆ ಕೂಡ ಇನ್ನು ಅಳಿದುಹೋಗಬಹುದು ಎನಿಸುತ್ತಿದೆ. ಎಂತಲೇ ದೊರೆತ ಕೆಲವೇ ಆಭರಣಗಳ ಛಾಯಾಚಿತ್ರಗಳನ್ನು ಈ ಗ್ರಂಥದಲ್ಲಿ ಕೊಡಲಾಗಿದೆ.


೧೯ನೇ ಶತಮಾನದಲ್ಲಿ ಹಾಗೂ ೨೦ನೇ ಶತಮಾನದ ಪೂರ್ವಾರ್ಧದಲ್ಲಿ ನಮ್ಮ ಮಹಿಳೆಯರು ಯಾವ ಬಗೆಯಾಗಿ ಆಭರಣ ಧರಿಸುತ್ತಿದ್ದರೆಂಬುದನ್ನು, ಮೊದಲಿಗೆ ಮುಡಿಯ ಆಭರಣಗಳಿಂದ ಪ್ರಾರಂಭಿಸಿ ನೋಡೋಣ. ಮುಂದಲೆಯ

ಮೇಲೆ ಕೆಲವು ಕೂದಲುಗಳನ್ನು ತೆಗೆದುಕೊಂಡು ಬಂಗಾರದ ಕೇದಗೆ, ಚಂದ್ರಕೋಲುಗಳನ್ನು ಹಾಕುತ್ತಿದ್ದರು. ಹೆರಳಿಗೆ ಜೋಡುಗಿಳಿಗಳುಳ್ಳ ಹೆರಳು ಬಂಗಾರ ಹಾಕುತ್ತಿದ್ದರು. ಅದು ಜಡೆಯಿಂದ ಜಡೆಯ ತುದಿಯವರೆಗೆ ಇರುತ್ತಿತ್ತು. ತುದಿಗೆ ಕುಚ್ಚುಳ್ಳ ಬಂಗಾರದ ಅಂದವಾದ ಗೊಂಡೆ ಹಾಕುತ್ತಿದ್ದರು. ಜಡೆಯ ಮೇಲ್ಭಾಗದಲ್ಲಿ ಬಂಗಾರದ ಅಂದವಾದ ಗುಲಾಬಿ ಹೂ, ಮೊಗ್ಗೆಯ ಮಾಲೆಗಳನ್ನು ಹಾಕುತ್ತಿದ್ದರು. ಇನ್ನು ಕೆಲವರು ಹೆರಳ ಬಂಗಾರದ ಬದಲು ಜಡೆಗೆಲ್ಲ ತಿರುಪಣಿ ಹೂವುಗಳನ್ನು ತಿರುವಿರುತ್ತಿದ್ದರು. ಜಡೆಯ ಮೇಲ್ಗಡೆ ಅಡ್ಡಕ್ಯಾದಿಗೆಯನ್ನಾಗಲೀ, ನಾಗರವನ್ನಾಗಲಿ ಹಾಕುತ್ತಿದ್ದರು. ದೊಡ್ಡವರು ಮುಡಿಕಟ್ಟಿಕೊಳ್ಳುತ್ತಿದ್ದರು. ಮುಡಿಗೆ ಬಂಗಾರದ ಮೊಗ್ಗೆಯ ಮಾಲೆಯನ್ನು ಹಾಕಿಕೊಳ್ಳುತ್ತಿದ್ದರು. ಮುಡಿಯ ಮಧ್ಯದಲ್ಲಿ ಜಡೆಬಿಲ್ಲೆಗಳನ್ನು, ಹರಳಿನ ಇಲ್ಲವೆ ಬಂಗಾರದ ತಿರುಪಣಿ ಹೂವುಗಳನ್ನು ಧರಿಸಿಕೊಳ್ಳುತ್ತಿದ್ದರು. ಬೈತಲಮಣಿ, ಪಿಂಪಣಿಯನ್ನೂ ಉಪಯೋಗಿಸುತ್ತಿದ್ದರು.

ಕಿವಿಗೆ ಬಂಗಾರದ ಬೆಂಡೋಲೆ, ವಜ್ರದ ಬೆಂಡೋಲೆ, ಮುತ್ತಿನ ಬೆಂಡೋಲೆಗಳನ್ನು ಧರಿಸುತ್ತಿದ್ದರು. ಬಡವರು ಬಂಗಾರದ ಓಲೆಗಳನ್ನೂ, ಮಧ್ಯಮ ವರ್ಗದವರು ಮುತ್ತಿನ ಓಲೆಗಳನ್ನೂ ಶ್ರೀಮಂತರು ವಜ್ರದ ಓಲೆಗಳನ್ನೂ ತಮ್ಮ ತಮ್ಮ ಅಂತಸ್ತಿನ ಮೇರೆಗೆ ಧರಿಸುತ್ತಿದ್ದರು. ಕೆಲವರು ವಾಲಿಗಳನ್ನು ಹಾಕಿಕೊಳ್ಳುತ್ತಿದ್ದರು. ಈಗ ಅಂಥ ವಾಲಿಗಳು ನೋಡಲು ದೊರೆಯುವುದೆ ಅಪರೂಪ. ಚಿತ್ರ ನಂ. ೯ರಲ್ಲಿ ವಾಲಿಯನ್ನು ಕಾಣಬಹುದಾಗಿದೆ, ವಾಲಿಗೆ ಮುತ್ತಿನ ಚೆಳ್ಳತುಂಬಿನ ಮಾದರಿಯ ಮೂರು ಮುತ್ತಿನ ಅಂದವಾದ ಗೊಂಚಲುಗಳು ಜೋತಾಡುತ್ತಿರುತ್ತವೆ. ಮೇಲೆ ಎರಡು ನವಿಲು ಇಲ್ಲವೆ ಗಿಳಿಗಳಿರುತ್ತವೆ. ಅದರ ಮೇಲೆ ಬಂಗಾರದ ತ್ರಿಕೋನಾಕೃತಿ ಇದ್ದು ಸುತ್ತಲೂ ಮುತ್ತಿನಸಾಲು ಕಂಗೊಳಿಸುತ್ತವೆ. ಇಂಥ ವಾಲಿಗಳನ್ನು ಕಂಡು 'ವಜ್ಜರ್ದ ಚ್ಚಿದವಾಲಿ ಮಾತಾಡುವ ಅರಗಿಳಿ'' ಎಂದು ಜಾನಪದ ಗೀತೆಗಳಲ್ಲಿ ಹೇಳಲಾಗಿದೆ. ವಾಲಿ ಬಹಳ ಅಂದವಾದ, ಭಾರವಾದ, ಕಲಾಪೂರ್ಣವಾದ ಕಿವಿಯ ಆಭರಣವಾಗಿದೆ. ವಾಲಿಯ ಜೊತೆಗೆ ಬಂಗಾರದ ಗಂಟಿಗಳೂ ಇರುತ್ತಿದ್ದವಂತೆ, ಅಲ್ಲದೆ ನಮ್ಮ ಮೊದಲಿನ ಮಹಿಳೆಯರು ಕಿವಿ ಅಂಚಿನ ತುಂಬ ಚುಚ್ಚಿಸಿಕೊಂಡು ಆಭರಣವಿಟ್ಟುಕೊಳ್ಳುತ್ತಿದ್ದರು. ಬುಗುಡಿ,



1. ಚಂದ್ರಕೋಲು 2. ಕೇದಿಗೆ 3-5 ವಾಲಿ 4. ಗೂಟಮೂಗುತಿ



1-2 ಆಧುನಿಕ ಕೊರಳ ಹಾರಗಳು 3. ಮೊಗ್ಗೆಯ ಮಾಲೆ


ಸರಪಳಿ ಚೆಳ್ಳತುಂಬು, ದ್ರಾಕ್ಷಿಬಳ್ಳಿ, ತಾಲುಕ, ಗುಬ್ಬಿಬಾವಲಿ, ಮಿಚ್ಚಪಟ್ಟಿ, ಚಂದ್ರಬಾವ ಕೆನ್ನೆಸರಪಳಿ, ಕರ್ಣಮೂಲ - ಇಷ್ಟೆಲ್ಲ ಆಭರಣಗಳು ಒಂದು ಸಣ್ಣ ಕಿವಿಗೆ. ಕಿವಿಯ ಯಾವ ಭಾಗವೂ ಆಭರಣಗಳಿಲ್ಲದೆ ಇರುತ್ತಿರಲಿಲ್ಲ.

ಮೂಗಿಗೆ ಮುತ್ತಿನ ಮೂಗುತಿಯನ್ನು ಹೆಚ್ಚಾಗಿ ಇಟ್ಟುಕೊಳ್ಳುತ್ತಿದ್ದರು. ಮೂಗುಬೊಟ್ಟು, ಗೂಟಮೂಗುತಿ, ಅರ್ಧಚಂದ್ರ, ಎಲಿಮೂಗುಬೊಟ್ಟು, ಒಂದರಿಂದ ೮-೯ ರ ವರೆಗೆ ಹರಳಿರುವ ಮೂಗುಬೊಟ್ಟುಗಳನ್ನು ಹಾಕಿ ಕೊಳ್ಳುತ್ತಿದ್ದರು. ಮುತ್ತಿನ ನತ್ತು, ಹರಳಿನ ನತ್ತು, ಗಾಡೆ, ಬುಲಾಕುಗಳನ್ನು ವಿಶೇಷ ಸಂದರ್ಭಗಳಲ್ಲಿ ಹಾಕಿಕೊಳ್ಳುತ್ತಿದ್ದರು.


ಕೊರಳಲ್ಲಿ ನಾನಾ ಬಗೆಯ ಆಭರಣಗಳನ್ನು ಧರಿಸುತ್ತಿದ್ದರು. ಟೀಕಿ, ಗೆಜ್ಜಿಟೀಕಿ, ಮುತ್ತಿನ ಟೀಕಿ, ಹರಳಿನ ಟೀಕಿ, ಪಟ್ಟಿಟೀಕಿ, ಪತ್ರಿದಳದ ಟೀಕಿ ಹೀಗೆ ಟೀಕಿಗಳೇ ಹಲವು ತೆರನಾಗಿದ್ದವು. ಕರಿಮಣಿ ಟೀಕಿ, ನಾನಡ್ಡಿಕೆ, ಟೀಕಾಬಟ್ಟು, ಮುತ್ತಿನ ಕಂಠಿ, ಜೋಮಾಲಿಸರ, ಪುತ್ಥಳಿಸರ, ಸರಗಿ, ಶೃಂಗಾರಿಸರ, ಗೋಧಿಸರ, ಗೋಪು, ನೆಲ್ಲಿಕಾಯಿಯಸರ, ಗುಂಡಿನಸರ, ಮೇಲಗುಂಡು, ಹವಳದ ಸರ, ಮುತ್ತಿನ ಹಾರ, ತನಮಣಿ, ಕಾಸಿನಸರ, ಅವಲಕ್ಕಿಸರ, ತ್ರಿಶೂಲಹಾರ, ಕಮಲದ ಹಾರ, ಚಪಲಹಾರ, ಚಂದ್ರಹಾರ, ಸೂರ್ಯಹಾರ, ನಕ್ಷತ್ರಹಾರ, ಮೋಹನಮಾಳ, (ರುದ್ರಾಕ್ಷಿಸರ) ಬೋರಮಾಳ, ಮಾವಿನಕಾಯಿಸರ, ಚಿಂತಾಕ, ಅಡ್ಡಿಕೆಮಣಿ, ಚಿಂತಪಟ್ಟಿ, ಕಾಫಿಬೀಜದಸರ, ಕಟ್ಟಾಣಿಸರ, ಕಂಠಿಸರ, ಚೈನ ಪವನದಸರ, ತಾಳಿಸಾಮಾನ, ಇತ್ಯಾದಿ ಆಭರಣಗಳನ್ನು ಕೊರಳಲ್ಲಿ ಧರಿಸುತ್ತಿದ್ದರು. ಎದೆ ಹೊಟ್ಟೆ ಎಲ್ಲಾ ಆಭರಣದಿಂದ ಮುಚ್ಚುತ್ತಲಿತ್ತು. ಕುತ್ತಿಗೆಗೆ ಸರಿಯಾಗುವಂತೆ ಟೀಕಿ, ಅದರ ಕೆಳಗೆ ಗೆಜ್ಜೆ ಟೀಕಿ, ಮಧ್ಯದಲ್ಲಿ ಸರಿಗೆ, ಕೆಳಗೆ ಪುತ್ಥಳಿಸರ, ಜೋಮಾಲಿಸರ, ಶೃಂಗಾರಿ ಸರ ಮೊದಲಾದವನ್ನು ಹಾಕಿಕೊಳ್ಳುವುದು ವಾಡಿಕೆಯಾಗಿತ್ತು. ಕೆಲವರು ಮುತ್ತಿನ ಟೀಕಿ, ಮುತ್ತಿನ ತನಮಣಿ ಮುತ್ತಿನಹಾರಗಳನ್ನು ಹಾಕಿಕೊಳ್ಳುತ್ತಿದ್ದರು.

ರಟ್ಟೆಗೆ ವಂಕಿ, ಬಾಜೂಬಂದ, ನಾಗಮುರಿಗೆ, ಉಲಿವ ಬಾಹುಲಿ, ತೋಳ ಬಾಪುರಿ, ರಟ್ಟೆಬಳೆ, ಹರಳುಹಚ್ಚಿದ ನಾಗಮರಿಗೆಗಳನ್ನು ಹಾಕಿಕೊಳ್ಳುತ್ತಿದ್ದರು.

ಮುಂಗೈಯಲ್ಲಿ, ಬಂಗಾರದ ಬಳೆ, ಗೋಟು, ಪಾಟ್ಲಿ, ತೋಡೆ, ಗೀರಬಳಿ, ಮುರಗಿಬಳಿ, ಮುಳ್ಳುಗಂಕಣ, ಮುತ್ತಿನಬಳೆ, ವಜ್ರದಬಳೆ, ಮಾಣಿಕ್ಯದಬಳೆ,



1. ವಾಲಿ 2. ಮೂಗುತಿ 3. ಎಲೆಮೂಗುಬೊಟ್ಟು 4. ಬುಗುಡಿ



1. ಕಾಲಿಗೆ ಹಾಕುವ ತೋಡೆ, ಪೈಜಣ 2. ಜಡೆಗೊಂಡೆಯ ಮೇಲ್ಭಾಗದ ಬಂಗಾರದ ಕವಚ 3. ಸುತ್ತುಗಾಲುಂಗುರ 4. ವಾರಿಮೀನ 5. ಗೆಜ್ಜೆ ಉಂಗುರ 6. ಮೆಂಟಿಗೆ 7. ಉಳ್ಳಾಗಡ್ಡಿ ಪಿಲ್ಲೆ

ಹವಳದಪಾಟ್ಲಿ, ಹರಡಿಕಂಕಣ, ಕಡಗ, ಕಮಲದೋರೆ, ನೀರಗಿಬಳೆ, ಸಿಂಹದ ಮುಖದ ಕಂಕಣ, ಜೋಡುದುಂಡು ಮೊದಲಾದವನ್ನು ಧರಿಸುತ್ತಿದ್ದರು. ಪಾಟ್ಲಿ, ಅದರ ಮುಂದೆ ಗೋಟು ಜೋಡುಗೋಟು ಕಾಜಿನಬಳೆ ಮಧ್ಯದಲ್ಲಿ ಬಂಗಾರದ ಬಳೆ, ಹವಳಪಾಟ್ಲಿ ಮುಂದೆ ತೋಡೆ ಈ ರೀತಿಯಾಗಿ ಮುಂಗೈಯಿಂದ ಮೊಳಕೈವರೆಗೆ ಆಭರಣಗಳಿರುತ್ತಿದ್ದವು.

ಕೈಬೆರಳಿಗೆ ಮುದ್ರೆಉಂಗುರ, ಹರಳಿನ ಉಂಗುರ, ಮಡಿಉಂಗುರ ನಾಗರುಂಗುರ, ಮುತ್ತಿನ ಉಂಗುರ, ಸುತ್ತುಂಗುರ, ಗೆಜ್ಜೆಉಂಗುರ, ಬದಾಮದ ಉಂಗುರ, ಚೌಕೋನಾಕೃತಿಯ ಉಂಗುರ, ಅನೇಕ ಬಗೆಯ ವಜ್ರದ ಉಂಗುರಗಳನ್ನೂ, ನವರತ್ನದ ಉಂಗುರಗಳನ್ನೂ ಧರಿಸುತ್ತಿದ್ದರು. ಹೆಣ್ಣು ಮಕ್ಕಳು ಹೆಚ್ಚಾಗಿ ಎಡಗೈಯ್ಯ ಬೆರಳುಗಳಿಗೆ ಉಂಗುರಗಳನ್ನು ಧರಿಸುತ್ತಿದ್ದರು. ಮಗುವಿನ ನಾಮಕರಣ ಸಮಾರಂಭಕ್ಕೆ, ಹೆಣ್ಣುಮಕ್ಕಳ ಮದುವೆಯ ನಿಶ್ಚಿತಾರ್ಥಕ್ಕೆ ಉಂಗುರ ಅವಶ್ಯಕವಾದ ಆಭರಣವಾಗಿದೆ.

ಕಾಲಲ್ಲಿ ತೋಡೆ, ಪೈಝಣ, ಕಡಗ, ವಿವಿಧ ಬಗೆಯ ಚೈನುಗಳನ್ನು ಹಾಕಿಕೊಳ್ಳುತ್ತಿದ್ದರು.

ಕಾಲಲ್ಲಿ ಹತ್ತು ಬೆರಳಿಗೂ ಆಭರಣಗಳಿರುತ್ತಿದ್ದವು. ಮೆಂಟಿಕೆ, ಮಿಂಚು ಉಳ್ಳಾಗಡ್ಡಿಪಿಲ್ಲೆ, ಗುಳ್ಳಿಪಿಲ್ಲೆ, ಸಾದಾಮೀನ, ವಾರಿಮೀನ, ಸುತ್ತುಕಾಲುಂಗರ, ಕಾಲುಂಗರ, ಗೆಜ್ಜೆಉಂಗುರಗಳನ್ನು ಧರಿಸುತ್ತಿದ್ದರು. ಕಿರಿಬೆರಳಿಗೆ ಮೆಂಟಿಕೆ, ಎರಡನೆ ಬೆರಳಿಗೆ ಉಳ್ಳಾಗಡ್ಡಿಪಿಲ್ಲೆ, ಮೂರನೇ ಬೆರಳಿಗೆ ವಾರಿಮೀನ, ನಾಲ್ಕನೇ ಬೆರಳಿಗೆ ಸುತ್ತು ಕಾಲುಂಗರ, ಹೆಬ್ಬೆರಳಿಗೆ ಗೆಜ್ಜೆ ಉಂಗುರಗಳನ್ನು ಮುತ್ತೈದೆಯರು ಯಾವಾಗಲೂ ಧರಿಸುತ್ತಿದ್ದರು. ಮದುವೆಯಲ್ಲಿ ಮದುಮಗಳಿಗೆ ಹಾಕುವ ಆಭರಣಗಳಲ್ಲಿ ಮಂಗಳಸೂತ್ರದ ಜೊತೆಗೆ ಸುತ್ತು ಕಾಲುಂಗರ ಪಿಲ್ಲೆ ಮಹತ್ವದ ಸ್ಥಾನ ಪಡೆದಿವೆ. ಅವೂ ಮಾಂಗಲ್ಯದ ಚಿಹ್ನೆಗಳು.

ಸೊಂಟದಲ್ಲಿ ಬೆಳ್ಳಿಯ ಹಾಗೂ ಬಂಗಾರದ ಪಟ್ಟಿಗಳನ್ನು ಧರಿಸುತ್ತಿದ್ದರು. ಸಾದಾಪಟ್ಟಿ, ಗುಂಡು ಹಚ್ಚಿದ ಪಟ್ಟಿ, ಗೆಜ್ಜೆ ಪಟ್ಟಿ, ವಜ್ರಹಚ್ಚಿದ ಡಾಬು, ವಿವಿಧ ಬಗೆಯ ಒಡ್ಯಾಣಗಳು ನಮ್ಮ ಹಿಂದಿನ ಮಹಿಳೆಯರ ಆಭರಣಗಳಾಗಿದ್ದವು.

೨೦ನೆಯ ಶತಮಾನದ ಆಭರಣಗಳು

೨೦ನೆಯ ಶತಮಾನದ ಪ್ರಾರಂಭದವರೆಗೆ ನಮ್ಮ ಮಹಿಳೆಯರು ಅಡಿಯಿಂದ ಮುಡಿಯವರೆಗೆ ಆಭರಣ ಧರಿಸುವುದು ಬಳಕೆಯಲ್ಲಿತ್ತು. ಕೆಲವು ಆಭರಣಗಳನ್ನು ಕೇವಲ ಅಂಗಸೌಂದರ್ಯಕ್ಕಾಗಿ ಧರಿಸುತ್ತಿದ್ದರು. ಇನ್ನು ಕೆಲವು ಆಭರಣಗಳನ್ನು ಸೌಭಾಗ್ಯದ ಚಿಹ್ನವೆಂದು ಧರಿಸುತ್ತಿದ್ದರು. ಓಲೆ, ಬುಗಡಿ, ಮೂಗುಬೊಟ್ಟು, ಮಂಗಳಸೂತ್ರ, ಬೆರಳಿಗೆ ಉಂಗುರ, ಕಾಲುಂಗುರಗಳು ಸೌಭಾಗ್ಯವತಿಯ ಆಭರಣಗಳಲ್ಲಿ ಮುಖ್ಯವಾಗಿವೆ. ತೋಳಿಗೆ ವಂಕಿ, ನಾಗಮುರಿಗೆಗಳನ್ನೂ, ಸೊಂಟಕ್ಕೆ ಪಟ್ಟಿಯನ್ನೂ, ಕಾಲಲ್ಲಿ ತೋಡೆಪೈಜಣಗಳನ್ನೂ ದೇಹದ ಕ್ರಮಬದ್ಧತೆಗಾಗಿ ಧರಿಸುತ್ತಿದ್ದರು. ಆರ್ಥಿಕ, ಸಾಮಾಜಿಕ, ದೃಷ್ಟಿಯಿಂದ ಆಭರಣಕ್ಕೆ ಮಹತ್ವವಿದ್ದಂತೆ ಸಾಂಪ್ರದಾಯಪ್ರಿಯತೆಯೂ, ಸೇರಿ ದೇಹದ ಕ್ರಮಬದ್ಧತೆಯೂ ಆಭರಣಗಳ ಬೆಳವಣಿಗೆಗೆ ಕಾರಣವಾಗಿದ್ದವೆನ್ನಬಹುದಾಗಿದೆ.

೨೦ನೆಯ ಶತಮಾನದಲ್ಲಿ ಸ್ವತಂತ್ರ ಭಾರತದ ಮಹಿಳೆಯರು ಆಭರಣಗಳನ್ನೂ ಧರಿಸುವದಿಲ್ಲವೆಂದಿಲ್ಲ. ಆದರೆ ಅಜ್ಜಿಯ ಕಾಲದ ಆಭರಣಗಳಿಗೂ ಮೊಮ್ಮಗಳ ಈ ಕಾಲದ ಆಭರಣಗಳಿಗೂ ಬಹಳ ವ್ಯತ್ಯಾಸವಿದೆ. ಅಜ್ಜಿ ಹೊರಲಾರದಷ್ಟು ಆಭರಣಗಳನ್ನು ಧರಿಸುತ್ತಿದ್ದರೆ, ಮೊಮ್ಮಗಳು ಕೆಲವೇ ಆಭರಣಗಳನ್ನು ಧರಿಸಲು ಅಪೇಕ್ಷಿಸುತ್ತಾಳೆ. ಫ್ಯಾಶನ್ ಹೇಗೆ ಹುಟ್ಟುತ್ತದೆ ಹೇಗೆ ಹೋಗುತ್ತದೆ ಎಂಬುದನ್ನು ಹೇಳಲು ಬರುವಂತಿಲ್ಲ. ಅಜ್ಜಿಯ ಕಾಲಕ್ಕೆ ಕಿವಿತುಂಬ ಓಲೆ, ಬುಗಡಿಗಳನ್ನೂ ಕೊರಳಲ್ಲಿ ಕುತ್ತಿಗೆಯಿಂದ ಸೊಂಟದವರೆಗೂ ಆಭರಣ ಧರಿಸುವದು ಫ್ಯಾಶನ್ ಎನ್ನಿಸಿದರೆ, ಮೊಮ್ಮಗಳ ಕಾಲಕ್ಕೆ ಸುಂದರವಾದ ಒಂದು ನೆಕ್‌ಲೇಸ, ಅದಕ್ಕೆ ಒಪ್ಪುವಂತಹ ಓಲೆ, ಬಳೆ, ಉಂಗುರ ಇಷ್ಟೇ ಆಭರಣಗಳು ಸಾಕೆನಿಸುತ್ತವೆ. ಫ್ಯಾಶನ್ ಆರ್ಥಿಕ ಪರಿಸ್ಥಿತಿಯನ್ನೂ, ಸೌಂದರ್ಯದ ದೃಷ್ಟಿಕೋನವನ್ನೂ ಅವಲಂಬಿಸಿರುತ್ತದೆ. ಕೆಲವೊಂದು ಅಜ್ಜಿಯ ಆಭರಣಗಳು ಮೊಮ್ಮಗಳ ಮನಸ್ಸಿಗೆ ಒಪ್ಪುವಂತಹವೂ ಇವೆ.

ಇಂದಿನ ಯುವತಿಯರು ಹೆಚ್ಚು ಭಾರವಾಗಿರದ, ಕಲಾಪೂರ್ಣವಾದ ಆಭರಣಗಳನ್ನು ಇಚ್ಛಿಸುತ್ತಾರೆ. ಎಡಗೈಯಲ್ಲಿ ಒಂದು ವಾಚು, ಬಲಗೈಯಲ್ಲಿ ಕೈತುಂಬ ಗಾಜಿನಬಳೆ, ಅವುಗಳಿಗೆ ತಕ್ಕಂತಹ ಬಂಗಾರದ ಬಳೆ ಧರಿಸುತ್ತಾರೆ.

ಕಿವಿಯಲ್ಲಿ ಮುತ್ತಿನ ಓಲೆಗಳಿದ್ದರೆ ಕೊರಳಲ್ಲಿ ಎರಡೆಳೆ ಮುತ್ತಿನಹಾರ ಇಲ್ಲವೆ ಮುತ್ತಿನ ಟೀಕಿ ಅಥವಾ ಮುತ್ತಿನ ತನಮಣಿ ಧರಿಸುತ್ತಾರೆ. ತನಮಣಿಗೆ

ಮಧ್ಯದಲ್ಲಿ ಬಣ್ಣಬಣ್ಣದ ವಜ್ರ ಮೊದಲಾದವುಗಳಿಂದ ನವಿಲು ಮೊದಲಾದ ಚಿತ್ರಗಳನ್ನು ಬಂಗಾರದಲ್ಲಿ ಕೆತ್ತುತ್ತಾರೆ. ಇಂಥ ತನಮಣಿ ಬಹಳ ಸುಂದರವಾಗಿ ಕಾಣಿಸುತ್ತದೆ. ಮುತ್ತಿನ ಟೀಕಿಗೆ ನಾಲ್ಕು ನಾಲ್ಕು ಮುತ್ತುಗಳಂತೆ ಮೂರು ಸಾಲು ಕೂಡಿಸಿ ಮಧ್ಯದಲ್ಲಿ ಹರಳನ್ನು ಕೂಡಿಸುತ್ತಾರೆ. ಇಂಥ ಟೀಕಿಗಳನ್ನು ಕೊರಳಿಗೆ ಹತ್ತೆಯಾಗುವಂತೆ ಕಟ್ಟಿಕೊಳ್ಳುತ್ತಾರೆ. ಕೈಗೆ ವಿವಿಧಬಗೆಯ ಮುತ್ತಿನ ಬಳೆ ಧರಿಸುತ್ತಾರೆ. ಬೆರಳಿಗೆ ಮುತ್ತಿನ ಉಂಗುರವನು ಧರಿಸುತ್ತಾರೆ. ಈ ರೀತಿಯಾಗಿ ಮುತ್ತಿನ ಓಲೆ, ಮುತ್ತಿನ ಹಾರ, ಮುತ್ತಿನ ಬಳೆ, ಮುತ್ತಿನ ಉಂಗುರ ಧರಿಸುವುದುಂಟು.

ಅಂದವಾಗಿ ಕೆತ್ತಿರುವ ಬಂಗಾರದ ಓಲೆಗಳನ್ನು ಕಿವಿಗೆ ಧರಿಸಿದರೆ ಕೊರಳಲ್ಲಿ ಮಾವಿನಕಾಯಿ ಹಾರ, ಒಂದೆಳೆ ಮೋಹನಮಾಳ, ಇಲ್ಲವೆ ಕಾಸಿನ ಸರ, ಒಂದು ಇಲ್ಲವೆ ಎರಡೆಳೆಯ ಚೈನು ಧರಿಸುವುದುಂಟು. ಕೈಗೆ ಅನೇಕ ಬಗೆಯ ನಕ್ಷೆಯುಳ್ಳ ಬಂಗಾರದ ಬಳೆಗಳಿರುತ್ತವೆ. ಸುಂದರವಾಗಿ ಕೆತ್ತನೆಯ ಕೆಲಸ ಮಾಡಿದ ಉಂಗುರವನ್ನು ಧರಿಸುತ್ತಾರೆ.

ವಜ್ರದ ಓಲೆ, ವಜ್ರದ ನೆಕ್‌ಲೇಸ್, ವಜ್ರದ ಬಳೆ, ವಜ್ರದ ಉಂಗುರಗಳನ್ನು ಧರಿಸುತ್ತಾರೆ. ಇದೇ ರೀತಿಯಾಗಿ ಮಾಣಿಕ, ಪಚ್ಚೆಗಳ, ಆಭರಣಗಳನ್ನು ಜೊತೆಮಾಡಿ ಹಾಕಿಕೊಳ್ಳುತ್ತಾರೆ. ರಂಗೂನದ ಕೃತ್ರಿಮ ವಜ್ರಗಳೂ. ಕಲ್ಚರಿ ಮುತ್ತುಗಳೂ ಹೆಚ್ಚಾಗಿ ಬಳಕೆಯಲ್ಲಿವೆ. ಜಾತಿ ಮುತ್ತುಗಳ ಬೆಲೆ, ವಜ್ರಗಳ ಬೆಲೆ ಹೆಚ್ಚಾಗಿದೆ. ಆದಕಾರಣ ಸುಲಭ ಬೆಲೆಯಲ್ಲಿ ದೊರೆಯಬಹುದಾದ ಆಭರಣಗಳು ಜನಸಾಮಾನ್ಯರಿಗೆ ಧರಿಸಲು ಅನುಕೂಲವಾಗುತ್ತವೆ. ಶ್ರೀಮಂತರ ಮನೆಯವರು ವಜ್ರಾಭರಣಗಳನ್ನು ಧರಿಸುವುದುಂಟು. ಮಧ್ಯಮ ವರ್ಗದವರು, ಬಂಗಾರ, ಕಲ್ಚರ ಮುತ್ತು, ರಂಗೂನ ವಜ್ರಗಳನ್ನು ಧರಿಸುತ್ತಾರೆ. ಬಡವರು ಕಡಿಮೆಬೆಲೆಗೆ ದೊರೆಯಬಹುದಾದ ಜಪಾನ ಮುತ್ತಿನಸರಗಳನ್ನೂ ರೋಲ್ಡ್‌ಗೋಲ್ಡ್ ಆಭರಣಗಳನ್ನೂ ಧರಿಸುತ್ತಾರೆ.

ಯಾವುದೇ ಆಭರಣ ಮಾಡಿಸಿದರೂ ಅವುಗಳ ಜೊತೆ ಸರಿಯಾಗಿರುವಂತೆ ನೋಡುವ ದೃಷ್ಟಿ ಈಗಿನವರಲ್ಲಿ ಬೆಳೆದಿದೆ. ಹೂವಿನ ಚಿತ್ರವುಳ್ಳ ನೆಕ್‌ಲೇಸ್ ಇದ್ದರೆ ಅಂತಹದೇ ಓಲೆ, ಬಳೆ, ಉಂಗುರ ಆಗಬೇಕು.

ಅಮೃತಸರ ನೆಕ್‌ಲೇಸ್, ಇಲ್ಲವೆ ಇನ್ನೂ ಅನೇಕ ಬಗೆಯ ಹಾರಗಳು ಇಂದು ರೂಢಿಯಲ್ಲಿವೆ. ಅಂಥ ಹಾರಗಳಿಗೆ ಹೊಂದಿಕೆಯಾಗಬಲ್ಲ ಬಳೆ, ಉಂಗುರ, ಓಲೆಗಳಿದ್ದರೆ ಚೆಂದವೆನಿಸುತ್ತದೆ.

ಇಂದಿನ ಫ್ಯಾಶನ್

ಬಂಗಾರದ ಬೆಲೆಯು ತೊಲೆಗೆ ೧೯-೨೦ ರೂಪಾಯಿಗಳಿದ್ದಾಗ ಸೇರುಗಟ್ಟಲೆ ಬಂಗಾರದ ಆಭರಣಗಳನ್ನು ಮೈತುಂಬ ಧರಿಸಿಕೊಳ್ಳುವುದು ರೂಢಿಯಾಗಿತ್ತು. ಇಂದು ಬಂಗಾರದ ಬೆಲೆ ತೊಲೆಗೆ ೧೩೦ ರೂ. ಆಗಿದೆ. ಆದಕ್ಕನುಸರಿಸಿ ಮಹಿಳೆಯರ ಆಭರಣಗಳ ಬೆಡಗಿನ ದೃಷ್ಟಿಕೋನವೂ ವ್ಯತ್ಯಾಸವಾಗಿದೆ. ಕೇವಲ ೪-೬ ತೊಲೆ ಬಂಗಾರದಲ್ಲಿ ಇಂದಿನ ಮಹಿಳೆಗೆ ಬೇಕಾದ ಆಭರಣಗಳು ಸಿದ್ಧವಾಗುತ್ತವೆ. ಕಾಲಕ್ಕೆ ತಕ್ಕಂತೆ ಬದಲಾವಣೆಯಾಗುವುದೇ ನಿಜವಾದ ಫ್ಯಾಶನ್ ಆಗಿದೆ.

ಪ್ರಾಗೈತಿಹಾಸಿಕ ಕಾಲದಿಂದ ಇಂದಿನವರೆಗೆ ಆಭರಣಗಳಲ್ಲಿ ಬದಲಾವಣೆ ಆದುದು ಕಂಡುಬರುತ್ತದೆ. ಮೊಹೆಂಜೋದಾರೊ ಹರಪ್ಪಾಗಳ ಕಾಲದಿಂದ ಇಂದಿನವರೆಗೆ ಮಹಿಳೆಯರು ಆಭರಣಪ್ರಿಯರಾಗಿದ್ದಾರೆ. ಸೌಂದರ್ಯದ ಕಲ್ಪನೆ ಬೆಳೆಯುವ ಮೊದಲು, ವಜ್ರ ಬಂಗಾರಗಳ ಶೋಧವನ್ನು ಮಾನವನು ಅರಿಯುವ ಮೊದಲು, ಶಂಖ, ಸಿಂಪುಗಳ ಆಭರಣಗಳನ್ನೂ, ಕಲ್ಲಿನ ಮಣಿಯ ಆಭರಣಗಳನ್ನೂ ಧರಿಸಿಕೊಂಡು ಸಂತಸಪಡುತ್ತಿದ್ದರು. ವಜ್ರ, ಬಂಗಾರಗಳ ಶೋಧವಾದ ನಂತರ ನಾಡು ಸಂಪತ್ ಸಮೃದ್ಧವಾಗಿದ್ದಾಗ ಮಹಿಳೆಯರು ಅಡಿಯಿಂದ ಮುಡಿಯವರೆಗೆ ಆಭರಣ ಧರಿಸಿಕೊಂಡು ನಲಿಯುತ್ತಿದ್ದರು. ಈಗ ಭಾರತ ಸ್ವತಂತ್ರವಾದರೂ, ಆರ್ಥಿಕ ದುಃಸ್ಥಿತಿಗೆ ಒಳಗಾಗಿರುವುದರಿಂದ ಅಲ್ಪಸ್ವಲ್ಪ ಬಂಗಾರದಲ್ಲಿಯೇ ಆಭರಣಗಳನ್ನು ಮಾಡಿಸಿ ಧರಿಸಿಕೊಳ್ಳುತ್ತಾರೆ. ಅಲ್ಲದೆ ಹೆಚ್ಚು ಬಂಗಾರ ಧರಿಸುವುದು ದಾಸ್ಯದ ಚಿಹ್ನೆವಾಗಿದೆ ಎಂಬ ಭಾವನೆ ನಮ್ಮ ಮಹಿಳೆಯರಲ್ಲಿ ಬೆಳೆದುಬಂದಿದೆ. ಇದುವರೆಗೆ ಪುರುಷರು ಹೆಣ್ಣುಮಕ್ಕಳಿಗೆ ಹೊರಲಾರದಷ್ಟು ಬಂಗಾರ ಹಾಕುತ್ತಿದ್ದರು. ಬಂಗಾರದ ಸಂಕೋಲೆಯಿಂದ ಬಂಧಿತರಾದ ಹೆಣ್ಣುಮಕ್ಕಳು ಮನೆಯ ನಾಲ್ಕು ಗೋಡೆಗಳ ಮಧ್ಯದಲ್ಲಿರಬೇಕಾಗಿತ್ತು. ಸ್ವತಂತ್ರಭಾರತದ ಹೆಣ್ಣುಮಕ್ಕಳು ತಮ್ಮ ಸ್ಥಾನಮಾನಗಳನ್ನೂ ಹೊಣೆಗಾರಿಕೆಯನ್ನೂ ಅರಿತವರಾಗಿದ್ದಾರೆ. ಆದಕಾರಣ ಅವರು ಬಂಗಾರದ ವ್ಯಾಮೋಹಕ್ಕೆ ಒಳಗಾಗುತ್ತಿಲ್ಲ. "ಸಾದಾತನದಲ್ಲಿಯೇ ಸೌಂದರ್ಯವಿದೆ" ಎಂಬುದನ್ನು ಅರಿತಿದ್ದಾರೆ. ಇದರಿಂದಾಗಿ ಇಂದು ಆಭರಣಗಳ ಮಹತ್ತ್ವ ತಗ್ಗಿದೆ,

೩

ಸೀರೆಯ ಸೊಬಗು

ನಮ್ಮ ಪೂರ್ವಜರು ಕೇಶಾಲಂಕಾರಕ್ಕೆ, ಆಭರಣಗಳ ಅಂದಕ್ಕೆ ಕೊಟ್ಟ ಮಹತ್ತ್ವವನ್ನು ಮಹಿಳೆಯರ ವೇಷಕ್ಕೂ ಕೊಟ್ಟಿದ್ದಾರೆನ್ನಬಹುದು. ವೇಷದ ವಿವಿಧತೆಯನ್ನೂ ಅದರ ಪ್ರಾಚೀನತೆಯನ್ನೂ ಕಾವ್ಯ, ಶಿಲ್ಪಗಳಿಂದ ಅರಿಯಬಹುದಾಗಿದೆ.

ಉಡಿಗೆಯ ಅವಶ್ಯಕತೆ ಮಾನವನಿಗೆ ಕಾಡುಸ್ಥಿತಿಯಲ್ಲಿದ್ದಾಗಲೇ ತೋರಿಬಂತು. ಚಳಿ-ಮಳೆ- ಬಿಸಿಲುಗಳಿಂದ ದೇಹವನ್ನು ರಕ್ಷಿಸಿಕೊಳ್ಳುವುದೇ ಉಡಿಗೆಯ ಪ್ರಥಮ ಉದ್ದೇಶವಾಗಿತ್ತು. ಆಗ ಬೇಟೆಯಾಡಿದ ಪ್ರಾಣಿಗಳ ಚರ್ಮವನ್ನೇ ಮಾನವರು ಉಡಲು ಪ್ರಾರಂಭಿಸಿದರು. ನಂತರ ಗಿಡಗಳ ತೊಗಟೆ, ಬಾಳೆಯ, ಕಮಲದ ಇನ್ನಿತರ ವಿವಿಧ ಬಗೆಯ ಎಲೆಗಳನ್ನು ಉಡಹತ್ತಿದ ಉದಾಹರಣೆಗಳು ದೊರೆಯುತ್ತವೆ. ಮಾನವರ ಉಡುಪು ಬರಬರುತ್ತ ದೇಶದ ಹವೆಯನ್ನೂ ಕಾಲಮಾನವನ್ನೂ ಅನುಸರಿಸಿ ಮಾರ್ಪಡುತ್ತ ಸಾಗಿತು.

ಅತಿ ಪುರಾತನ ಕಾಲದಲ್ಲಿ ಮಾನವರು ಕುತ್ತಿಗೆಯಿಂದ ಸೊಂಟದವರೆಗೆ ಹಾರಗಳನ್ನು ಧರಿಸುತ್ತಿದ್ದರು. ಸೊಂಟದಿಂದ ಮೊಣಕಾಲಿನವರೆಗೆ ಒಡ್ಯಾಣದಂಥ ಆಭರಣಗಳನ್ನು ಧರಿಸಿ ದೇಹವನ್ನು ಮುಚ್ಚಿಕೊಳ್ಳುತ್ತಿದ್ದರು. ನಂತರ ದೇಹ ರಕ್ಷಣೆಗಾಗಿ ಚಳಿ ಮಳೆ ಗಾಳಿ ಬಿಸಿಲುಗಳ ತೊಂದರೆಯನ್ನು ತಪ್ಪಿಸಿಕೊಳುವುದಕ್ಕೋಸ್ಕರ ಚರ್ಮವನ್ನು ಉಡತೊಡಗಿದರು. ನಂತರ ನಾರಿನ

ಬಟ್ಟೆಗಳನ್ನು ನೇಯಹತ್ತಿದರು. ಆ ಕಾಲಕ್ಕೆ ಮಹಿಳೆಯರು ಕೇವಲ ಸೊಂಟದಿಂದ ಮೊಣಕಾಲಿನವರೆಗೆ ಬಟ್ಟೆಗಳನ್ನು ಧರಿಸಹತ್ತಿದರು. ಮುಂದೆ ಕುತ್ತಿಗೆಯಿಂದ ಸೊಂಟದವರೆಗೆ ಆಭರಣಗಳನ್ನು ಧರಿಸಿ, ಸೊಂಟದಿಂದ ಮೊಣಕಾಲಿನವರೆಗೆ ಬಟ್ಟೆಗಳನ್ನು ಧರಿಸುತ್ತಿದ್ದ ಮಹಿಳೆಯರು ಬರಬರುತ್ತ ನಿರಿಗೆ ಮಾಡಿ ಪಾದದವರೆಗೆ ಬಟ್ಟೆ ಧರಿಸಹತ್ತಿದರು. ಅನಂತರ ಎದೆಗೆ ಕಂಚುಕವನ್ನು ಧರಿಸಿ, ಮೇಲೆ ಉತ್ತರೀಯವನ್ನು ಹೊದ್ದುಕೊಳ್ಳುವ ರೂಢಿ ಬೆಳೆದು ಬಂದಿತು.

ಮಾನವರಲ್ಲಿ ಸಭ್ಯತೆಯ ಕಲ್ಪನೆ ಬೆಳೆದು ಬಂದಮೇಲೆ, ಬುದ್ಧಿಶಕ್ತಿಯು ಹೆಚ್ಚುತ್ತಿರಲು, ನಾರಿನ ಬಟ್ಟೆಯನ್ನು ನೇಯಹತ್ತಿದರು. ಕ್ರಿಸ್ತಪೂರ್ವ ೨೦೦೦ ವರ್ಷಗಳಿಂದ ಭಾರತೀಯರು ಬಟ್ಟೆಗಳ ಉಪಯೋಗವನ್ನು ಬಲ್ಲವರಾಗಿದ್ದಾರೆ. ಪ್ರತಿ ಮನೆಯಲ್ಲಿ ತಕಲಿ, ರಾಟೆಗಳಿಂದ ನೂಲನ್ನು ತೆಗೆಯುತ್ತಿದ್ದರು. ದೇಹದ ರಕ್ಷಣೆಗೆಂದು ಪ್ರಾರಂಭವಾದ ಉಡಿಗೆಯು, ಸೌಂದರ್ಯ ವರ್ಧನೆಗೆ ಕಾರಣವಾಯಿತು. ನಾರಿನಿಂದ ಕೇವಲ ಬಿಳಿಯ ಬಟ್ಟೆಗಳನ್ನು ಮೊದಲು ನೇಯುತ್ತಿದ್ದರು. ಅನಂತರ ಅದರಲ್ಲಿ ಹಳದಿ ಕೇಶರ ಬಣ್ಣದ ಬಟ್ಟೆಗಳನ್ನು ಮಾಡಹತ್ತಿದರು. ಆಮೇಲೆ ವಿವಿಧ ಬಣ್ಣಗಳು ರೂಪುಗೊಂಡವು. ನೇಕಾರನ ಕಲೆಕುದುರಿದಂತೆ ಸೀರೆಯ ಸೆರಗು, ಅಂಚುಗಳ ಅಂದ ಬೆಳೆಯಿತು. ಸೀರೆಯಲ್ಲಿ ವಿವಿಧ ಬಗೆಯ ಹೂಬಳ್ಳಿಗಳನ್ನೂ ಪಕ್ಷಿ ಪ್ರಾಣಿಗಳನ್ನೂ ನೇಯಹತ್ತಿದರು. ಮನುಷ್ಯರಲ್ಲಿ ಸೌಂದರ್ಯದ ಕಲ್ಪನೆ ಬೆಳೆದಂತೆ ಸೀರೆಗಳಲ್ಲಿಯ ವೈವಿಧ್ಯ ಬೆಳೆಯುತ್ತ ನಡೆದಿದೆ.

ಭೂದೇವಿ ಮಳೆಗಾಲದಲ್ಲಿ ಪಚ್ಚೆ ಪಯರಿನಿಂದ ಹಚ್ಚ ಹಸಿರು ಬಣ್ಣದ ಸೀರೆಯನ್ನು ಉಟ್ಟಂತೆ ತೋರುತ್ತಾಳೆ. ಚಳಿಗಾಲದಲ್ಲಿ ಹೊಲಗಳಲ್ಲೆಲ್ಲ ಬೆಳೆ ಬೆಳೆದು ತೆನೆಯಲ್ಲಿ ಕಾಳು ತುಂಬಿ ಹಳದಿ ಬಣ್ಣ ಕಂಗೊಳಿಸುತ್ತದೆ ; ಕುಸುಬೆ, ಎಳ್ಳು ಮೊದಲಾದ ಹೂಗಳು ಕೇಸರಿ ಹಳದಿ ಬಣ್ಣಗಳಿಂದ ಕಂಗೊಳಿಸುತ್ತವೆ. ಆಗ ಭೂದೇವಿ ಬಣ್ಣ ಬಣ್ಣದ ಸೀರೆಗಳನ್ನುಟ್ಟಂತೆ ತೋರುತ್ತಾಳೆ. ಬೇಸಿಗೆ ಕಾಲದಲ್ಲಿ ಬೆಳೆಯೆಲ್ಲ ಒಣಗಿ ನೆಲವೆಲ್ಲ ಬರಿದಾಗಿರುವಾಗ ಭೂಮಿ ತನ್ನ ಸ್ವಾಭಾವಿಕವಾದ ಕರಿಯ ಕೆಂಪು ಬಣ್ಣ ಪಡೆಯುತ್ತದೆ. ಭೂದೇವಿ ಆಗ ಕೆಂಪು, ಕರಿಯ ಬಣ್ಣದ ಸೀರೆಗಳನ್ನು ಉಟ್ಟಂತೆ ಕಾಣುವಳಷ್ಟೇ? ಅವಳನ್ನು ನೋಡಿಯೇ ನಮ್ಮ ಮಹಿಳೆಯರು ಋತುಮಾನಕ್ಕೆ ತಕ್ಕಂತೆ ವಿವಿಧ ಬಣ್ಣದ ಸೀರೆಗಳನ್ನು ಉಡುತ್ತಿದ್ದರೆಂದು ತೋರುತ್ತದೆ.

ಉಡುಪು ಒಂದು ಕಲೆ

ಭಾರತೀಯರು ಅನೇಕ ಶತಮಾನಗಳಿಂದ ಹದಿನೆಂಟು ಶಾಸ್ತ್ರಗಳನ್ನು ಅರುವತ್ತು ನಾಲ್ಕು ಕಲೆಗಳನ್ನು ಬಲ್ಲವರಾಗಿದ್ದಾರೆ. ಆ ಅರುವತ್ತು ನಾಲ್ಕು ಕಲೆಗಳಲ್ಲಿ ವೇಷ, ಭೂಷಣ, ಹೂವಿನ ಅಲಂಕಾರಗಳೂ ಒಂದೊಂದು ಕಲೆಗಳಾಗಿವೆ. ಹೂವಿನಿಂದ ಮಾಡಿದ ಅಲಂಕಾರಗಳನ್ನು ದೇಹಕ್ಕೆ ಒಪ್ಪುವಂತೆ ಧರಿಸುವುದೂ ಒಂದು ಕಲೆ. ಸೂಜಿಯಿಂದ ಬಟ್ಟೆಗಳನ್ನು ಹೊಲೆಯುವದೂ ಒಂದು ಕಲೆ. ಸಾದಾ ಹಾಗೂ ಒಳ್ಳೆಯ ಬಟ್ಟೆಗಳನ್ನು ದೇಹಕ್ಕೆ ಒಪ್ಪುವಂತೆ ಧರಿಸುವುದೂ ಒಂದು ಕಲೆ.

ಬಟ್ಟೆ ಹೊಸವಿರಲಿ ಹಳೆಯವಿರಲಿ, ಸ್ವಚ್ಛವಾಗಿದ್ದರೆ ಅಚ್ಚುಕಟ್ಟಾಗಿದ್ದರೆ ಅಂದವಾಗಿ ಕಾಣುತ್ತವೆ. ಅವರವರ ದೇಹದ ಬಣ್ಣಕ್ಕೆ, ಗಾತ್ರಕ್ಕೆ ಹೊಂದುವಂತಹ ಬಟ್ಟೆಗಳಿರಬೇಕೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಸಾಮಾಜಿಕ ಜೀವನದಲ್ಲಿ ಬಟ್ಟೆಗೆ ಹಿರಿಯ ಸ್ಥಾನವಿದೆ. 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಮೈಗೆ ಒಳ್ಳೆ ಬಟ್ಟೆ ಬೇಕು''ಎಂದು ಬಿಹಾರಿ ಭಾಷೆಯಲ್ಲಿ ಗಾದೆಯ ಮಾತಿದೆ. ಅದರಂತೆ ಅನೇಕರು ಬಟ್ಟೆಗೆ ಹೆಚ್ಚು ಮಹತ್ತ್ವ ಕೊಡುತ್ತಾರೆ. ಊಟ ಮಾಡುವದಕ್ಕಾಗಿ ಗಳಿಸವುದು, ಅಲಂಕಾರಕ್ಕಾಗಿ ಬಟ್ಟೆ ಧರಿಸುವುದು ಎಂಬ ಮಾತು ಕೇಳಿಬರುತ್ತದೆ. ಬಟ್ಟೆ ಮನುಷ್ಯನ ವ್ಯಕ್ತಿತ್ವವನ್ನು ವ್ಯಕ್ತಿಪಡಿಸುತ್ತದಂತೆ. ದೇಹ ರಚನೆಗೆ ತಕ್ಕಂತೆ ಬಟ್ಟೆ ಧರಿಸುವುದರಿಂದ ವ್ಯಕ್ತಿತ್ವ ಎದ್ದು ಕಾಣುತ್ತದೆ. ಆದರೆ 'ಬಟ್ಟೆಯಿಂದ ಮಂಗ ಮನುಷ್ಯನಾಗಲಾರ'' ಎಂಬ ಗಾದೆಯ ಮಾತೂ ಹಿಂದೀ ಭಾಷೆಯಲ್ಲಿದೆ. ಬಟ್ಟೆಯಿಂದ ಸೌಂದರ್ಯವರ್ಧನೆಯಾದರೂ ಇದ್ದ ರೂಪ ಬದಲಾಗಲಾರದು ಎಂದು ಇದರ ತಾತ್ಪರ್ಯ. ಮನುಷ್ಯನ ಸೌಂದರ್ಯವರ್ಧನೆಗೆ ಬಟ್ಟೆ ಸಹಾಯಕವಾಗಬಲ್ಲದು.

ಉತ್ತಮವಾದ ಉಡಿಗೆ ಚೆಲುವನ್ನು ಹೆಚ್ಚಿಸುವ ಮೊದಲ ಸಾಧನವಾಗಿದೆ. ದೇಶ ಕಾಲಮಾನಗಳ ಪ್ರಕಾರ ವೇಷ ಭೂಷಣಗಳಲ್ಲಿ ಪರಿವರ್ತನೆಯಾಗುತ್ತ ಬಂದಿದೆ. ಸೀರೆ ಮಹಿಳೆಯರಿಗೆ ಸುಂದರವಾದ ಉಡುಪಾಗಿದೆ. ಸರಳತೆಯಲ್ಲಿ ಹಿರಿಯ ಸೌಂದರ್ಯ ಅಡಕವಾಗಿದೆ. ಸೀರೆಗಳಲ್ಲಿ ಆಕರ್ಷಕವಾದ ಮೂರು ತರಹದ ಹೊಂದಿಕೆಯಿದೆ. ಸೆರಗು, ಅಂಚು, ಒಳಮೈ ಈ ತ್ರಿವೇಣೀ ಸಂಗಮದಿಂದ ಸೀರೆಯ ಸೊಬಗು ಮೂಡಿಬರುತ್ತದೆ. ಸೀರೆಯ ಅಂಚಿಗೆ, ಒಳಮೈಗೆ

ಹೊಂದಿಕೆಯಾಗುವಂತಹ ಸೆರಗು ಯಾವಾಗಲೂ ಶೋಭಾಯಮಾನವಾಗಿ ಕಾಣುವುದು. ಭಾರತೀಯ ಸೀರೆಗಳು ಕೇವಲ ಯಂತ್ರ ಸಾಮಗ್ರಿಯನ್ನು ಅವಲಂಬಿಸಿಲ್ಲ. ನೇಯುವವರ ಕುಶಲತೆಯನ್ನು ಅವಲಂಬಿಸಿವೆ. ಅಂಚು ಸೆರಗುಗಳನ್ನು ನೇಯುವ ಕಲೆ ಪುಸ್ತಕದ ಪಾಠವಲ್ಲ; ವಂಶಪರಂಪರಾಗತವಾಗಿ ಬಂದ ಕುಶಲ ಕಲೆಯಾಗಿದೆ.

ಸೀರೆ ಭಾರತದ ವೈಶಿಷ್ಟ್ಯ

ಸೀರೆಯು ಹೊಲಿಗೆಯಿಲ್ಲದೆ ದೇಹವನ್ನೆಲ್ಲ ಮುಚ್ಚಬಲ್ಲ ವೇಷವಾಗಿದೆ. ಸೀರೆಯನ್ನುಡುವ ಸಂಪ್ರದಾಯ ಭಾರತೀಯ ಮಹಿಳೆಯರಲ್ಲಿ ಪ್ರಾಗೈತಿಹಾಸಿಕ ಕಾಲದಿಂದ ಬಂದಿದೆ. ಭಾರತೀಯ ಪುರುಷರು ಪಾಶ್ಚಿಮಾತ್ಯ ವೇಷಗಳಿಗೆ ಮೋಹಿತರಾಗಿ ಅವರ ಅನುಕರಣ ಮಾಡಿದರು. ಸಂಪ್ರದಾಯ ಪ್ರಿಯರಾದ ಭಾರತೀಯ ಮಹಿಳೆಯರು ಮಾತ್ರ ಈ ಹುಚ್ಚಿಗೆ ಬಲಿಬೀಳಲಿಲ್ಲ. ಅವರ ವಿಶಿಷ್ಟ ಉಡುಪಾಗಿರುವ ಅಂದ-ಚಂದದ ಸೀರೆಗಳನ್ನು ಕಂಡು ಪರದೇಶದ ಮಹಿಳೆಯರೂ ಭಾರತದ ಮಹಿಳೆಯರ ಅನುಕರಣ ಮಾಡುತ್ತಿದ್ದಾರೆ. ಪರ ದೇಶಗಳಲ್ಲಿ ಭಾರತದ ಸೀರೆ ಹೆಚ್ಚಿನ ಸ್ಥಾನ ಪಡೆದಿದೆ. ಈ ಸೀರೆಯ ಸೊಬಗಿಗೆ ಅಲ್ಲಿಯ ಮಹಿಳೆಯರು ಮೋಹಿತರಾಗಿದ್ದಾರೆ. ನಮ್ಮ ಪರಿಚಿತ ಮಹಿಳೆಯೊಬ್ಬಳು ಪರದೇಶಕ್ಕೆ ಹೋದಾಗ, ಉಟ್ಟ ಸೀರೆಯಿಂದ ಇವರು ಭಾರತೀಯರು ಎಂದು ಗೌರವದಿಂದ ಕಾಣುತ್ತಿದ್ದರಂತೆ ಅಲ್ಲಿಯ ಜನ. ಒಮ್ಮೆ ಆಕೆ ಎಲ್ಲಿಗೋ ಹೋಗಬೇಕಾಗಿತ್ತು ;ಬಸ್ಸಿನಲ್ಲಿ ಸ್ಥಳವಿರಲಿಲ್ಲ. ಆಕೆ ನಿಂತುಕೊಂಡಿದ್ದಳು; ಆಕೆ ಉಟ್ಟ ಸೀರೆಯನ್ನು ಕಂಡು, ಓ, ಈಕೆ ಭಾರತದವಳು, ಎಂದು ಕುಳಿತವರು ಎದ್ದು ನಿಂತು ಬಸ್ಸಿನಲ್ಲಿ ಸ್ಥಳಮಾಡಿ ಕೊಟ್ಟರಂತೆ.

ಫ್ರಾನ್ಸದ ಫ್ಯಾಶನ್ ಪ್ರದರ್ಶನಗಳ ವಸ್ತುಭಂಡಾರದಲ್ಲಿ, ಅಮೆರಿಕಾ, ಇಂಗ್ಲೆಂಡುಗಳ ದೊಡ್ಡ ದೊಡ್ಡ ಬಟ್ಟೆ ಅಂಗಡಿಗಳಲ್ಲಿ ಮೈಸೂರಿನ ರೇಶಿಮೆ ಸೀರೆಗಳನ್ನು, ಬನಾರಸ ಮತ್ತು ಕಾಶ್ಮೀರದ ಜರದ ಕಲಾಕುಸುರಿನ ಸೀರೆಗಳನ್ನು ಮಾರಲು ಇಡುತ್ತಿದ್ದಾರೆ. ಅವುಗಳ ವ್ಯಾಪಾರ ಹೆಚ್ಚಿನ ಪ್ರಮಾಣದಿಂದ ಆಗುತ್ತಲಿದೆ. ಪಾಶ್ಚಿಮಾತ್ಯ ಮಹಿಳೆಯರು ಭಾರತೀಯ ಮಹಿಳೆಯರಂತೆ ಸೀರೆ ಉಡಲು ಪ್ರಯತ್ನಿಸುತ್ತಿದ್ದಾರೆ. ಇನ್ನು ಕೆಲವರು ಜರದ ಸೀರೆಗಳಿಂದ ಪಾಶ್ಚಿಮಾತ್ಯ ರೀತಿಯ ಉಡಿಗೆಯನ್ನು ತಯಾರಿಸಿಕೊಂಡು ಧರಿಸುತ್ತಾರೆ.

ಸರ್ ರಾಮರಾವ್ ಅವರು ಅಮೇರಿಕೆಯಲ್ಲಿ ಭಾರತದ ರಾಯಭಾರಿಯಾಗಿದ್ದರು. ಆಗ ಶ್ರೀಮತಿ ಧನವಂತಿ ರಾಮರಾವ್ ಅವರು ಅಲ್ಲಿ ವಾರಕ್ಕೊಮ್ಮೆ ನಡೆಯುವ ಫ್ಯಾಶನ್‌ಫೇರ್‌ದಲ್ಲಿ ಭಾರತದ ಸೀರೆಗಳ ಪ್ರದರ್ಶನವನ್ನು ಏರ್ಪಡಿಸುತ್ತಿದ್ದರು. ಅಮೇರಿಕೆಯ ಫ್ಯಾಶನ್ ಫೇರ್‌ದಲ್ಲಿ ಭಾರತದ ಸೀರೆ ಎಲ್ಲರ ಮನವನ್ನು ಆಕರ್ಷಿಸಿತಂತೆ. ಬಿಳಿಯ ಶಿಫಾನ್ ಸೀರೆ, ಕರಿಯ ಬನಾರಸದ ಸೀರೆ, ಕಚ್ಚದ ಹೆಣಿಕೆಯ ಕುಸುರಿನ ಸ್ಯಾಟಿನ ಬ್ಲೌಜುಗಳು ಫ್ಯಾಶನ್ ಫೇರ್‌ನಲ್ಲಿ ಜನಪ್ರಿಯವಾದುವಂತೆ. ಹೀಗೆ ಭಾರತೀಯ ಮಹಿಳೆಯರ ರಾಷ್ಟ್ರೀಯ ಉಡುಪಾದ ಸೀರೆ ಪರದೇಶಗಳಲ್ಲೆಲ್ಲ ಹೆಚ್ಚಿನ ಮಹತ್ತ್ವ ಪಡೆದಿದೆ.

ಭಾರತೀಯ ಮಹಿಳೆಯರ ಸೀರೆ ಬಣ್ಣಗಳ ರಾಣಿಯಂತಿದೆ. ಕಾಮನ ಬಿಲ್ಲಿನ ಏಳು ಬಣ್ಣಗಳು ಸೀರೆಗಳಲ್ಲಿ ದೊರೆಯುತ್ತವೆ. ಇತ್ತೀಚೆಗೆ ಆ ಏಳು ಬಣ್ಣಗಳು ನೂರೆಂಟು ಬಣ್ಣಗಳಾಗಿವೆ. ಕಣ್ಣನ್ನು ಸೆಳೆಯುವ ವಿವಿಧ ಬಣ್ಣದ ಸೀರೆಗಳು ಆಕರ್ಷಕವಾಗಿರುತ್ತವೆ. ಅಡಿಯಿಂದ ಮುಡಿಯವರಿಗಿನ ದೇಹದ ರಕ್ಷಣೆಯ ಹೊಣೆಯನ್ನು ಹೊತ್ತು ಚಳಿ, ಮಳೆ, ಬಿಸಿಲುಗಳಿಂದ ಸದಾ ಕಾಪಾಡುತ್ತದೆ ಅದು. ಸೀರೆಗೆ ಪಾಶ್ಚಿಮಾತ್ಯ ಉಡುಪಿನಂತೆ ಹೊಲಿಗೆಯ ಆವಶ್ಯಕತೆಯಿಲ್ಲ. ಒಂದೇ ಸೀರೆ ದೇಹವೆಲ್ಲ ಮುಚ್ಚುವಂತೆ ವಿವಿಧ ಪ್ರಾಂತದವರು ವಿವಿಧ ಬಗೆಯಾಗಿ ಉಡುತ್ತಾರೆ.

ಸೀರೆಯು ಭಾರತೀಯ ಮಹಿಳೆಯರಿಗೆ ಸದಾ ಜೊತೆಯಾಗಿರುತ್ತದೆ. ಸೀರೆ ಹರಿದರೂ ವಿವಿಧ ಬಗೆಯ ಉಪಯೋಗಕ್ಕೆ ಬರುತ್ತದೆ. ಹಳೆಯ ಸೀರೆಯ ಗಟ್ಟಿಯಿದ್ದ ಭಾಗದಿಂದ ಮೊದಲಿನ ಮಹಿಳೆಯರು ತಮ್ಮ ಕಲೆಗಾರಿಕೆಯಿಂದ ಅಂದವಾದ ಕುಂಚಿಗೆ, ಕುಲಾಯಿಗಳನ್ನೂ, ಹರಿದ ಭಾಗದಿಂದ ದುಪ್ಪಟಿ, ಕೌದಿಗಳನ್ನೂ ಹೊಲಿಯುತ್ತಿದ್ದರು. ಚಿಂದಿಯಿಂದ ಮಾಡಿದ ಅವುಗಳಲ್ಲಿಯೂ ಮಹಿಳೆಯರ ಕಲಾಪ್ರೌಢಿಮೆ ಎದ್ದುಕಾಣುತ್ತಿತ್ತು. ಹಳೆಯ ಬಟ್ಟೆಯ ಕೌದಿಗಳಲ್ಲಿ ರಾಮಾಯಣ ಮಹಾಭಾರತಗಳ ಸನ್ನಿವೇಶಗಳನ್ನೂ ಸುತ್ತಲೂ ಎಲೆ ಬಳ್ಳಿಗಳನ್ನೂ ಪಕ್ಷಿ ಪ್ರಾಣಿಗಳನ್ನೂ ಕುಸುರು ಕೆಲಸದಿಂದ ಮಾಡುತ್ತಿದ್ದರು. ಹಳೆಯ ಸೀರೆಗಳ ವಿವಿಧ ಉಪಯೋಗಗಳಿಂದ ಬಿಡುವಿನ ವೇಳೆಯ ಸದುಪಯೋಗ, ಮಹಿಳೆಯರ ಕುಶಲಕೈಗಾರಿಕೆ, ಮಿತವ್ಯಯ ಸಾಧ್ಯವಾಗುತ್ತಿದ್ದವು. ತಮ್ಮ ಕೈಯಿಂದ ಹೊಲಿದ

ಬಟ್ಟೆಗಳನ್ನು ಮನೆಯ ಜನರ ಉಪಯೋಗಕ್ಕೆ, ಮಕ್ಕಳ ಸೌಂದರ್ಯವರ್ಧನೆಗೆ ಒದಗಿಸಿಕೊಡುವ ಆನಂದ ಆ ಮಹಿಳೆಯರಿಗಿರುತ್ತಿತ್ತು. ಒಂದೊಂದು ಕೌದಿಯನ್ನು ಆರು ತಿಂಗಳುಗಳವರೆಗೆ ಹೊಲೆಯುತ್ತಿದ್ದರು. ಯಂತ್ರಯುಗದಲ್ಲಿ ಯಾಂತ್ರಿಕ ಜೀವನ ನಡೆಸುವ ಮಹಿಳೆಯರಿಗೆ ಮೊದಲಿನ ಮಹಿಳೆಯರಷ್ಟು ತಾಳ್ಮೆಯೂ ಇಲ್ಲ, ವೇಳೆಯೂ ಇಲ್ಲ. ಆದಕಾರಣ ಇಂದಿನವರು ಸುಂದರವಾದ ಹಳೆಯ ಸೀರೆಗಳಿಂದ ಯಂತ್ರದ ಸಹಾಯದಿಂದ ತೆರೆಗಳನ್ನು ಹೊಲಿದು ಬಾಗಿಲು ಕಿಟಕಿಗಳಿಗೆ ಹಾಕುತ್ತಾರೆ. ಅಂಚಿನಿಂದ ಸುಂದರವಾದ ಕೈಚೀಲಗಳನ್ನೂ ಟೇಬಲ್, ಕುರ್ಚಿಗಳಿಗೆ ಹೊದಿಕೆಗಳನ್ನೂ ಮಾಡುತ್ತಾರೆ.

ಅನುಕೂಲ ಉಡುಪು

ಭಾರತೀಯ ಮಹಿಳೆಯರಿಗೆ ಸೀರೆ ಬಲು ಅನುಕೂಲವಾದ ಉಡುಪಾಗಿದೆ. ಪಾಶ್ಚಾತ್ಯರಂತೆ ಬೇರೆ ಬೇರೆ ಸಮಯಕ್ಕೆ ವಿವಿಧ ಬಟ್ಟೆಯ ಅವಶ್ಯಕತೆ ನಮಗೆ ತೋರುವುದಿಲ್ಲ. ಪಾಶ್ಚಿಮಾತ್ಯ ಮಹಿಳೆಯರು ಆಟವಾಡುವಾಗ, ತಿರುಗಾಡಲು ಹೋಗುವಾಗ ಮೊಳಕಾಲಿನವರೆಗೆ ಅಂಗಿಯನ್ನು ಹಾಕುತ್ತಾರೆ. ಯಾಕೆಂದರೆ ಓಡಾಡುವಾಗ ಅನಾನುಕೂಲವಾಗಬಾರದೆಂಬುದೇ ಅವರ ಉದ್ದೇಶವಾಗಿದೆ. ಉಳಿದ ವೇಳೆಯಲ್ಲಿ ದೇಹಕ್ಕೆ ಹೊಂದಿಕೆಯಾಗುವಂತಹ ಬಟ್ಟೆಯನ್ನು ಧರಿಸುತ್ತಾರೆ. ನಮ್ಮ ಮಹಿಳೆಯರು ದೇಹ ಮುಚ್ಚುವಂತಹ ಹಾರಾಡುವ ಸೀರೆಯನ್ನು ಯಾವಾಗಲೂ ಉಡುತ್ತಾರೆ. ನಿರಿಗೆ ಮಾಡಿ ಉಟ್ಟ ಸೀರೆ ಬಲು ಅಂದವಾಗಿ ತೋರುತ್ತದೆ. ಸೀರೆಯ ನಿರಿಗೆಗಳನ್ನು ಹೊಳೆಯ ತೆರೆಗಳಿಗೆ ಅನೇಕ ಜನ ಕವಿಗಳು ಹೋಲಿಸಿದ್ದಾರೆ. ನಿರಿಗೆಯನ್ನು ಚಿಮ್ಮುತ್ತ ಹೊರಟ ಅನೇಕ ಯುವತಿಯರ ವರ್ಣನೆಯು ಕಾವ್ಯಗಳಲ್ಲಿ ಬರುತ್ತದೆ. ಸೀರೆಯ ದೊಡ್ಡ ಸೆರಗನ್ನು ಕಂಡಾಗ ಅದು ಉಟ್ಟವರ ಶ್ರೀಮದ್ಗಾಂಭೀರ್ಯವನ್ನು ತೋರುತ್ತದೆ. ಈ ಎಲ್ಲ ದೃಷ್ಟಿಗಳಿಂದ ನೋಡಿದಾಗ ಭಾರತೀಯ ಮಹಿಳೆಯರ ಉಡುಪಾದ ಸೀರೆಯು, ವೈಶಿಷ್ಟ್ಯಪೂರ್ಣ, ಕಲಾಪೂರ್ಣ ಮತ್ತು ಪ್ರಭಾವಯುತವೆಂದು ಕಂಡು ಬರದೆ ಇರದು.

ಪರದೇಶದ ಜನರು ನೆಯ್ಗೆಯ ಕಲೆಯನ್ನು ಅರಿಯುವ ಮೊದಲಲ್ಲಿಯೇ ಭಾರತೀಯರು ಸುಂದರವಾದ ಬಟ್ಟೆಗಳನ್ನು ನೇಯುತ್ತಿದ್ದರು. ಢಾಕಾದ ತೆಳುವಾದ ಸೀರೆಗಳು, ಬನಾರಸದ ಜರದ ಸೀರೆಗಳು, ಗುಜರಾಥದ ಬಾಂದನೀ, ಪುಣೆಯ

ಪೀತಾಂಬರಗಳು, ದಕ್ಷಿಣದ ಧರ್ಮಾವರ ಸೀರೆಗಳು ಮೊದಲಿನಿಂದ ಪ್ರಸಿದ್ಧವಾಗಿವೆ.

ಮೂಲ ಅರ್ಥ

'ಸೀರೆ'ಎಂಬ ಶಬ್ದದ ಅರ್ಥ ಬಟ್ಟೆಯ ಚೂರು ಎಂಬುದಾಗಿತ್ತು. ಆದ್ದರಿಂದ ಒಂದು ಕಾಲಕ್ಕೆ ಪುರುಷರೂ, ಸ್ತ್ರೀಯರೂ ಉಡುವ ಬಟ್ಟೆಗಳಿಗೆಲ್ಲ ಸೀರೆ ಎಂದೇ ಹೇಳಲಾಗುತ್ತಿತ್ತು. ಮಥುರಾ, ಅಜಂತಾ, ಎಲ್ಲೋರ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ವಿಜಯನಗರ ಶಿಲ್ಪಕಲೆಯಿಂದ ಬಟ್ಟೆಗಳ ವಿವಿಧತೆಯನ್ನು ಅರಿಯಬಹುದಾಗಿದೆ. ೩ ನೆಯ ಶತಮಾನದಿಂದ ೧೬ ನೆಯ ಶತಮಾನದವರೆಗಿನ ದೇವಾಲಯಗಳಲ್ಲಿ ಉಡಿಗೆಗಳ ವಿವಿಧ ಬಗೆಗಳನ್ನು ನೋಡಬಹುದಾಗಿದೆ. ಪ್ರಾಚೀನ ದೇವಾಲಯಗಳು ಅಂದಿನ ಜನಜೀವನವನ್ನು ಕುರಿತ ಸಾಕ್ಷಿ ಚಿತ್ರಗಳೆಂದು ಹೇಳಬಹುದು. ಅಂತೆಯೇ ಶಿಲ್ಪಕಲೆಯು ಹಿಂದಿನ ಹಿರಿಯರ ವೇಷಭೂಷಣದ ಕೈಗನ್ನಡಿಯಂತಿದೆ. ಶಿಲ್ಪಕಲೆಯೊಂದಿಗೆ ಕನ್ನಡ, ಸಂಸ್ಕೃತ ಕಾವ್ಯಗಳೂ ವೇಷಗಳ ವೈವಿಧ್ಯವನ್ನು ಅರಿತುಕೊಳ್ಳಲು ಸಹಾಯಕವಾಗಿವೆ.

ಪ್ರಾಗೈತಿಹಾಸಿಕ ಕಾಲದ ಹರಪ್ಪಾ ಮೊಹೆಂಜೋದಾರೋಗಳ ಅವಶೇಷಗಳಲ್ಲಿ ಕಿವಿಯ ಆಭರಣಗಳನ್ನು ಬಟ್ಟೆಯಲ್ಲಿ ಸುತ್ತಿಟ್ಟುದು ದೊರೆತಿದೆ. ಅದರಿಂದಾಗಿ ಆ ಕಾಲದ ಮಹಿಳೆಯರು ಬಟ್ಟೆಯನ್ನು ಧರಿಸುತ್ತಿದ್ದರೆಂದು ಊಹಿಸಬಹುದಾಗಿದೆಯಲ್ಲದೆ, ಅವರ ಉಡುಗೆಯ ಕಲ್ಪನೆಯೂ ಕೆಲಮಟ್ಟಿಗೆ ಬರುವಂತಹ ಕುರುಹುಗಳು ಅಲ್ಲಿ ಸಿಕ್ಕಿವೆ. ತೆಳ್ಳಗಿನ ಶಾಲನ್ನು ಹೊದೆಯುತ್ತಿರಬೇಕು. ಕುಂಬಳದ ಆಕಾರವುಳ್ಳ ಚಿತ್ರಗಳ ಬಟ್ಟೆಯ ತುಂಡುಗಳೂ ಅಲ್ಲಿ ದೊರೆತಿವೆ. ಮೊಹೆಂಜೋದಾರೋದಲ್ಲಿ ದೊರೆತ ಮೂರ್ತಿಗಳ ಆಧಾರದಿಂದ ಆಗಿನ ಮಹಿಳೆಯರು ದೇಹದ ಕೆಲವೊಂದು ಭಾಗ ಮುಚ್ಚುವಂತೆ ಗೇಣಗಲದ ಬಟ್ಟೆ ಧರಿಸಿ ತಲೆಯ ಮೇಲೆ ವಸ್ತ್ರ ಹೊದೆಯುತ್ತಿದ್ದರೆಂದು ತಿಳಿಯುತ್ತದೆ. ಆ ಶಿರೋವಸ್ತ್ರ ಸೊಂಟದವರೆಗೆ ಇದ್ದಂತಿದೆ. ನೇಯ್ಗೆಯ ಸಾಧನಗಳೂ ಅಲ್ಲಿ ದೊರೆತಿವೆ. ಪ್ರಾಗೈತಿಹಾಸಿಕ ಕಾಲದ ಮಹಿಳೆಯರು ನೂಲು ಹಾಗೂ ಉಣ್ಣೆಯ ಬಟ್ಟೆಗಳನ್ನು ಧರಿಸುತ್ತಿದ್ದರಂತೆ.

ಮಧುರೆ ಮೀನಾಕ್ಷಿ ದೇವಾಲಯದಲ್ಲಿರುವ ಶಿಲಾಕನ್ಯೆಯರಲ್ಲಿ ಕೆಲವರು ಒಂದೇ ಒಂದು ಬಟ್ಟೆಯನ್ನು ಧರಿಸಿದ್ದಾರೆ. ಕೆಲವರು ಸೊಂಟದಿಂದ ಮೊಳಕಾಲಿನವರೆಗೆ ಬಟ್ಟೆಯನ್ನುಟ್ಟಿದ್ದಾರೆ. ಇನ್ನು ಕೆಲವರು ಸೊಂಟದಿಂದ ಪಾದದವರೆಗೆ ಸೀರೆಯನ್ನುಟ್ಟಿದ್ದಾರೆ. ಪೂಜೆಗೆ ಹೊರಟ ಹೆಂಗಳೆಯರು ದೇಹವೆಲ್ಲಾ ಮುಚ್ಚುವಂತೆ ಕುತ್ತಿಗೆಯಿಂದ ಪಾದದವರೆಗೆ ಸೀರೆಯನ್ನುಟ್ಟಿದ್ದಾರೆ. ಕೌಶಂಬಿ ಹಾಗೂ ಮಧುರಗಳಲ್ಲಿ ದೊರೆತ ಮಣ್ಣಿನ ಮೂರ್ತಿಗಳಿಂದ ಆ ಕಾಲದ ಮಹಿಳೆಯರು ಕಂಚುಕ ಶಿರೋವಸ್ತ್ರಗಳನ್ನು ಧರಿಸುತ್ತಿದ್ದರೆಂದು ತಿಳಿದುಬರುತ್ತದೆ. ಮೂರನೆಯ ಶತಮಾನಕ್ಕಿಂತ ಮೊದಲಿನ ಬಟ್ಟೆ ಧರಿಸಿದ ಮೂರ್ತಿಗಳು ಕಂಡುಬರುವುದಿಲ್ಲ.

ಹೊರಗಿನ ಪ್ರಭಾವ

ಮೌರ್ಯ ಚಂದ್ರಗುಪ್ತನ ಕಾಲಕ್ಕೆ ಭಾರತ ಬಲಾಢ್ಯ ರಾಷ್ಟ್ರವಾಗಿದ್ದಿತು. ಅವನ ರಾಜ್ಯಕ್ಕೆ ಗ್ರೀಕ್ ರಾಯಭಾರಿ ಮೆಗಸ್ತನೀಸನು ಬಂದಿದ್ದನು. ಚಂದ್ರಗುಪ್ತನಿಗೆ ಓರ್ವ ಗ್ರೀಕ್ ಪತ್ನಿಯೂ ಇದ್ದಳು. ಆ ಕಾಲಕ್ಕೆ ಪರರಾಷ್ಟ್ರಗಳ ಜನರೂ ಭಾರತಕ್ಕೆ ಬರಹತ್ತಿದರು. ಇದರಿಂದಾಗಿ ಪರದೇಶದ ಜನಗಳ ವೇಷದ ಪ್ರಭಾವ ಭಾರತೀಯರ ವೇಷದ ಮೇಲೆ ಆಗಿರಬೇಕು. ಚಂದ್ರಗುಪ್ತನ ಕಾಲಕ್ಕೆ ಭಾರತದ ಸಂಸ್ಕೃತಿ ಘನತೆಗೇರಿತು. ಭಾರತದ ಕಲೆ, ಸಾಹಿತ್ಯಗಳ ಬೆಳವಣಿಗೆಯೂ ಭರದಿಂದ ಸಾಗಿತ್ತು. ಆ ಕಾಲದ ಮಹಿಳೆಯರು ಬಣ್ಣ ಬಣ್ಣದ ಬಟ್ಟೆ ಧರಿಸುತ್ತಿದ್ದರಂತೆ. ಆ ಬಟ್ಟೆಗಳಲ್ಲಿ ಹೂಬಳ್ಳಿಗಳನ್ನೂ ಪಕ್ಷಿಗಳನ್ನೂ ನೇಯುತ್ತಿದ್ದರು. ನೇತ್ರಾ ಎಂಬ ತೆಳುವಾದ ಸುಂದರವಾದ ಬಟ್ಟೆ ಆ ಕಾಲಕ್ಕೆ ಪ್ರಸಿದ್ಧವಾಗಿತ್ತು. ಅಂಥ ಬಟ್ಟೆಯನ್ನು ರೇಶ್ಮೆ ಹಾಗೂ ಜರದಿಂದ ನೇಯುತ್ತಿದ್ದರು. ನೂಲು ರೇಶ್ಮೆ ಜರದಿಗಳಿಂದ ಬಟ್ಟೆಯನ್ನು ನೇಯುವ ಕಲೆ ಚಂದ್ರಗುಪ್ತನ ಕಾಲಕ್ಕೆ ಭರದಿಂದ ಬೆಳೆದಿತ್ತು.

'ಅಜಂತಾದ ವರ್ಣಚಿತ್ರಗಳು ಗುಪ್ತ ಕಾಲದ ವಸ್ತ್ರಗಳ ಕೋಶಗಳಂತಿವೆ'ಎಂದು ಬಲ್ಲವರು ಅಭಿಪ್ರಾಯ ಪಡುತ್ತಾರೆ. ಇಲ್ಲಿಯ ಚಿತ್ರಗಳಿಂದ ಆ ಕಾಲದ ಸ್ತ್ರೀಯರು ತೆಳುವಾದ, ನಕ್ಷೆಗಳುಳ್ಳ, ಕುಸುರು ಕೆಲಸದ, ಸುಂದರವಾದ ಸೀರೆಗಳನ್ನೂ ಸಾದಾ ವಸ್ತ್ರಗಳನ್ನೂ ಹೊಲಿದ ಬಟ್ಟೆಗಳನ್ನೂ

ಧರಿಸುತ್ತಿದ್ದರೆಂದು ತಿಳಿಯುತ್ತದೆ. ಗುಪ್ತರ ಕಾಲದಲ್ಲಿ ಭಾರತ ದೇಶ ಏಶಿಯಾ ಖಂಡವನ್ನೇ ಆಕರ್ಷಿಸಿತ್ತು. ಏಶಿಯಾದ ನಾನಾ ಭಾಗಗಳಿಂದ ಬುದ್ಧನ ತತ್ತ್ವಜ್ಞಾನ ಅರಿತುಕೊಳ್ಳಲು ಜನರು ಬರುತ್ತಿದ್ದರು ಈ ರೀತಿಯಾಗಿ ವಿವಿಧ ದೇಶಗಳಿಂದ ಬಂದ ಜನರ, ವಿವಿಧ ಬಗೆಯ ಉಡುಪುಗಳು ಅಜಂತಾದ ವರ್ಣಚಿತ್ರಗಳಲ್ಲಿ ಪಡಿಮೂಡಿವೆ. ಆ ಕಾಲಕ್ಕೆ ಭಾರತೀಯರ ವೇಷ ಭೂಷಣಗಳಲ್ಲಿ ವೈವಿಧ್ಯತೆ ಬೆಳೆದುಬಂದಿತು. ಸ್ತ್ರೀಪುರುಷರು ಬಟ್ಟೆ ಧರಿಸುವದರಲ್ಲಿ ಬಲು ರಸಿಕರಾಗಿದ್ದರು. ಬಣ್ಣ ಬಣ್ಣದ ಬಟ್ಟೆಗಳನ್ನೂ, ಹೆಣಿಕೆಗೆ ಬಟ್ಟೆಗಳನ್ನೂ ಧರಿಸುತ್ತಿದ್ದರು. ಪರದೇಶಗಳಿಂದ ಗಂಗಾನದಿಯ ಮೂಲಕ ಬಟ್ಟೆಗಳು ಭಾರತಕ್ಕೆ ಬರುತ್ತಿದ್ದವಂತೆ. ಕೆಲವರು ಕಂಚುಕ ಧರಿಸುತ್ತಿದ್ದರು. ಅಜಂತಾದ ಚಿತ್ರಗಳು ರೂಪುಗೊಂಡದ್ದು ೩ನೆಯ ಶತಮಾನದಿಂದ ೭ನೆಯ ಶತಮಾನದವರೆಗೆ ಎಂದು ಹೇಳಲಾಗುತ್ತಿದೆ. ಈ ಅವಧಿಯಲ್ಲಿ ಮಹಿಳೆಯರ ಉಡುಪಿನಲ್ಲಿ ಆದ ಬದಲಾವಣೆಯನ್ನು, ಪ್ರಗತಿಯನ್ನು ಆ ಕಾಲದ ವಸ್ತ್ರ ಭಂಡಾರವೆನಿಸಿರುವ ಅಜಂತಾ ಚಿತ್ರಗಳಿಂದ ನಾವು ಅರಿಯಬಹುದಾಗಿದೆ.

ಅಜಂತಾದ ವೇಷವೈವಿಧ್ಯ

ಅಜಂತಾದ ಚಿತ್ರಗಳ ಯಕ್ಷಿಣಿಯರ ದೇಹಗಳೆಲ್ಲ ಆಭರಣಗಳಿಂದ ಆವೃತವಾಗಿವೆ. ಉಡಿಗೆ ಕೇವಲ ಮೂರು ತುಂಡು ಬಟ್ಟೆಯಾಗಿದೆ. ಒಂದು ಬಟ್ಟೆಯನ್ನು ಸೊಂಟದಿಂದ ಮೊಣಕಾಲಿನವರೆಗೆ ಸುತ್ತಲಾಗಿದೆ. ಇನ್ನೊಂದನ್ನು ಬಿಗಿಯಾದ ಎದೆಕಟ್ಟನ್ನಾಗಿ ಮಾಡಲಾಗಿದೆ. ಮತ್ತೊಂದನ್ನು ಹೆಗಲ ಮೇಲೆ ಉತ್ತರೀಯದಂತೆ ಹೊದ್ದುಕೊಳ್ಳಲಾಗಿದೆ.

ಅಜಂತಾ ಚಿತ್ರಗಳಲ್ಲಿಯ ಸ್ತ್ರೀಯರನ್ನು ಅವರ ಉಡುಪಿಗನುಸಾರವಾಗಿ ವರ್ಗೀಕರಿಸಿದರೆ, ಅರೆಮೈ ಬಟ್ಟೆಯವರು, ಮೈತುಂಬ ಸೀರೆಯುಟ್ಟವರು, ಕಾಸೆ ಚಲ್ಲಣ ಹಾಕಿದವರು ಎಂದು ಮೂರು ಬಗೆಗಳು ಕಂಡುಬರುತ್ತವೆ. ಅರೆಮೈಯುಟ್ಟವರು ಸೊಂಟದಿಂದ ಮೊಳಕಾಲಿನವರೆಗೆ ಮಾತ್ರ ಬಟ್ಟೆ ಧರಿಸಿದವರಾಗಿದ್ದಾರೆ. ಸೊಂಟದಿಂದ ಪಾದದವರೆಗೆ ನಿರಿಗೆ ಮಾಡಿ ಅಲೆದಾಡುವಂತೆ ಸೀರೆಯುಟ್ಟು ಮೇಲೊಂದು ಉತ್ತರೀಯವನ್ನು ಹೊತ್ತಿದ್ದಾರೆ. ಕೆಲವರು

ಸೊಂಟದಿಂದ ಮೊಳಕಾಲಿನವರೆಗೆ, ಪಾದದವರೆಗೆ ಬಟ್ಟೆ ಧರಿಸಿ, ಜಾಕೀಟು ಇಲ್ಲವೆ ಕುಪ್ಪಸ, ಮುಂಗೈವರೆಗಿನ ಕುಪ್ಪಸ ತೊಟ್ಟವರೂ ಇದ್ದಾರೆ. ಚಲ್ಲಣ ಹಾಕಿದವರನ್ನೂ ನೋಡಬಹುದಾಗಿದೆ. ಅನೇಕ ಬಗೆಯಾಗಿ ಉಟ್ಟ ನೂರಾರು ಬಗೆಯ ಸ್ತ್ರೀಯರ ಚಿತ್ರಗಳು ಅಜಂತೆಯಲ್ಲಿವೆ.

ಭಾರತೀಯ ಸ್ತ್ರೀಯರು ತಮ್ಮ ವೇಷಭೂಷಣಗಳಲ್ಲಿ ಅಸಾಧಾರಣವಾದ ವರ್ಣಪ್ರಜ್ಞೆಯನ್ನು ತೋರಿಸಿದ್ದಾರೆಂಬುದನ್ನು ಅಜಂತಾದ ವರ್ಣಮಯ ಚಿತ್ರಗಳು ಸ್ಪಷ್ಟಗೊಳಿಸುತ್ತವೆ. ಸೀರೆಗೊಪ್ಪುವ ಬಣ್ಣದ ಕುಪ್ಪಸವನ್ನು ತೊಟ್ಟು ಅದಕ್ಕೆ ಹೊಂದಿಕೆಯಾಗುವಂತಹ ಆಭರಣಗಳನ್ನು ಧರಿಸಿದ್ದಾರೆ. ಉಟ್ಟ ಸೀರೆಗೆ, ತೊಟ್ಟ ಕುಪ್ಪಸಕ್ಕೆ ಹೊಂದಿಕೆಯಾಗುವಂತಹ ಬಣ್ಣದ ಹೂ ಮಾಲೆಗಳನ್ನು, ಆಕರ್ಷಕವಾದ ರೀತಿಯಲ್ಲಿ ಮುಡಿದುಕೊಂಡಿದ್ದಾರೆ. ವಸ್ತ್ರಾಲಂಕಾರದಲ್ಲಿ, ಹೂವಿನ ಅಲಂಕಾರದಲ್ಲಿ ವರ್ಣಸಮನ್ವಯವನ್ನು ಸಾಧಿಸುವ ಭಾರತೀಯ ಮಹಿಳೆಯರ ಜಾಣತನ ಹಿರಿದಾಗಿದೆ.

ಅಜಂತಾ ಚಿತ್ರಗಳಲ್ಲಿ ರಾಜಮನೆತನದ ಸ್ತ್ರೀಯರು ಉತ್ತರೀಯವನ್ನು ಹೊದ್ದಿದ್ದಾರೆ. ಓರ್ವ ನೃತ್ಯರಾಣಿ ಬಿಳಿ ಹೂಗಳುಳ್ಳ ಕರಿಬಣ್ಣದ ಉದ್ದ ತೋಳಿನ ಕುಪ್ಪಸ ತೊಟ್ಟು, ಹಳದಿ ಬಣ್ಣದ ಜಾಕೆಟನ್ನು ತೊಟ್ಟುಕೊಂಡಿದ್ದಾಳೆ. ಸೊಂಟದಿಂದ ಪಾದದವರೆಗೆ ಸುಂದರವಾದ ನಕ್ಷೆಗಳುಳ್ಳ ಬಟ್ಟೆಯನ್ನುಟ್ಟಿದ್ದಾಳೆ. ಮತ್ತೋರ್ವ ನೃತ್ಯರಾಣಿ ಹಳದಿ ಕೆಂಪು ಚೌಕು ಮನೆಗಳ ಬಟ್ಟೆಯನ್ನುಟ್ಟಿದ್ದಾಳೆ. ಕೆಲವರು ಉಟ್ಟ ಬಟ್ಟೆಯ ಅಂಚು ಬಹಳ ಸುಂದರವಾಗಿವೆ.

ಓರ್ವ ದಾಸಿ ಮುಂಗೈವರೆಗೆ ತೋಳಿರುವ ಬಿಳಿಯ ಬ್ಲೌಜ್ ಧರಿಸಿದ್ದಾಳೆ. ಸೊಂಟದಿಂದ ಮೊಣಕಾಲಿನವರೆಗೆ ಬಣ್ಣ ಬಣ್ಣದ ವಸ್ತ್ರಗಳನ್ನು ಧರಿಸಿದ್ದಾಳೆ. ಓರ್ವ ನಾರಿ ಸೊಂಟದಿಂದ ಪಾದದವರೆಗೆ ಮೈಗೆ ಹತ್ತಿಯಾದ ಬಟ್ಟೆಯನ್ನುಟ್ಟಿದ್ದಾಳೆ. ಆ ಬಟ್ಟೆ ಅಡ್ಡಪಟ್ಟೆಯುಳ್ಳದ್ದಾಗಿದೆ. ನೀಲಿ, ಬಿಳಿ, ಕಂದು ಹಾಗೂ ಬಿಳಿ, ನೀಲಿ ಬಣ್ಣಗಳುಳ್ಳ ಪಟ್ಟೆಯುಳ್ಳ ಬಟ್ಟೆ ದೇಹದ ಸೌಷ್ಠವಕ್ಕೆ ಒಪ್ಪುವಂತಿದೆ. ಬಹಳ ಬಣ್ಣಗಳುಳ್ಳ ಅಡ್ಡಪಟ್ಟೆ ಹಾಗೂ ಉದ್ದಪಟ್ಟೆಗಳುಳ್ಳ ಬಟ್ಟೆಗಳನ್ನು ಅನೇಕರು

ಉಟ್ಟಿದ್ದುದು ಕಂಡುಬರುತ್ತದೆ. ಕೆಲವರು ಬಣ್ಣ ಬಣ್ಣದ ಎದೆಕಟ್ಟನ್ನು ಕಟ್ಟಿದ್ದಾರೆ. ಕೆಲವರು ಉತ್ತರೀಯವನ್ನು ಹೊತ್ತಿದ್ದಾರೆ.

ಓರ್ವ ತಾಯಿ ನೀಲಿ ಬಣ್ಣದ ಜಾಕೆಟ್ಟನ್ನು ಹಾಕಿದ್ದಾಳೆ. ಅದಕ್ಕೆ ಒಪ್ಪುವಂತೆ ನೀಲಿ, ಬಿಳಿ ಪಟ್ಟಿಗಳುಳ್ಳ ಬಟ್ಟೆಯನ್ನು ಸೊಂಟದಿಂದ ಪಾದದವರೆಗೆ ಧರಿಸಿದ್ದಾಳೆ. ಮತ್ತೋರ್ವಳು ಬಿಳಿ ಹೂಗಳುಳ್ಳ ಕರಿಯ ಬಣ್ಣದ ಬಟ್ಟೆಯನ್ನು ಉಟ್ಟಿದ್ದಾಳೆ. ಕರಿಯ ಬಣ್ಣದಲ್ಲಿ ಚೌಕು ಮನೆಗಳುಳ್ಳ ಸುಂದರವಾದ ಬಟ್ಟೆಯನ್ನೊಬ್ಬಳು ಅಂದವಾಗಿ ಕಾಣುವಂತೆ ಉಟ್ಟಿದ್ದಾಳೆ. ಇನ್ನೂ ಕೆಲವರು ಚಾಕಲೇಟ್ ಬಣ್ಣದಲ್ಲಿ ಹಳದಿ ಹೂವಿರುವ ಬಟ್ಟೆಯನ್ನು, ಹಸಿರು ಹಳದಿ ಬಣ್ಣಗಳ ಹೊಂದಿಕೆಯುಳ್ಳ ಬಟ್ಟೆಯನ್ನು, ತಿಳಿನೀಲಿ ಬಣ್ಣದ ಬಟ್ಟೆಯನ್ನೂ ಉಟ್ಟಿದ್ದಾರೆ.

ಉತ್ತರ ಭಾರತದಲ್ಲಿ ಗುಪ್ತರನಂತರ ಹರ್ಷವರ್ಧನನ ರಾಜ್ಯ ಭಾರತದಲ್ಲಿ ಪ್ರಖ್ಯಾತವಾಗಿತ್ತು. ಅದೇ ಕಾಲಕ್ಕೆ ದಕ್ಷಿಣದಲ್ಲಿ ಚಾಲುಕ್ಯರ ೨ನೆಯ ಪುಲಿಕೇಶಿಯ ರಾಜ್ಯ ಘನತೆಗೇರಿತ್ತು. ೭ನೆಯ ಶತಮಾನದಲ್ಲಿ ಕೀರ್ತಿಶಾಲಿಯಾಗಿದ್ದ ಈ ಎರಡೂ ದೊಡ್ಡ ರಾಜ್ಯಗಳ ಜನಜೀವನದ ಪ್ರಭಾವ ಒಂದರ ಮೇಲೊಂದಾಗಿ ಉತ್ತರ ದಕ್ಷಿಣಗಳ ಸಂಸ್ಕೃತಿಯ ಸಮ್ಮಿಳನವು ಅಜಂತಾದ ಚಿತ್ರಗಳಲ್ಲಿ ಒಡಮೂಡಿ ನಿಂತಿದೆ.

ಅಜಂತಾ ಚಿತ್ರಗಳಲ್ಲಿ ಓರ್ವ ರಾಣಿ ಹಾಗೂ ಅವಳ ದಾಸಿ ಮೊಣಕೈವರೆಗಿನ ಕುಪ್ಪಸ ತೊಟ್ಟಿದ್ದಾರೆ. ಸೊಂಟದಿಂದ ಪಾದದವರೆಗೆ ಸೀರೆಯುಟ್ಟಿದ್ದಾರೆ. ತಲೆಯ ಮೇಲೆ ಮುಸುಕು ಇದೆ. ಸೊಂಟಕ್ಕೊಂದು ಬಂಗಾರದ ಪಟ್ಟಿಯನ್ನು ಕಟ್ಟಿದ್ದಾರೆ. ಕನ್ನಡಿಯನ್ನು ನೋಡಿ ಅಲಂಕರಿಸುತ್ತಿರುವ ಓರ್ವ ರಾಣಿ ಹೊಲಿದ ಬಟ್ಟೆಯನ್ನು ಉಟ್ಟಿದ್ದಾಳೆ. ಮತ್ತೋರ್ವಳು ಉಟ್ಟ ಬಟ್ಟೆಗೆ ಚೌಕೋನಾಕೃತಿಯಲ್ಲಿ ಪಕ್ಷಿಗಳನ್ನು ಚಿತ್ರಿಸಲಾಗಿದೆ. ಮತ್ತೊಬ್ಬಳ ಕುಪ್ಪಸದ ಅಂಚಿಗೆ ವಜ್ರಗಳನ್ನು ಹಚ್ಚಿದ್ದಾರೆ. ರಾಣಿಯರ ಹಾಗೂ ಮೇಲ್ತರಗತಿಯ ಸ್ತ್ರೀಯರಿಗಿಂತ ದಾಸಿಯರ ಬಟ್ಟೆಗಳು ಹೆಚ್ಚು ಬಣ್ಣಗಳಿಂದ ಕೂಡಿವೆ. ದಾಸಿಯರೂ ಸೀರೆಯುಟ್ಟು ಕುಪ್ಪಸ ತೊಟ್ಟಿದ್ದಾರೆ. ಕೆಲವರು ದುಪ್ಪಟಿ ಹೊದ್ದಿದ್ದಾರೆ. ದಾಸಿಯರು ಉಟ್ಟ ಬಟ್ಟೆಗಳು ಚಿತ್ರದವೂ ಹೆಣಿಕೆಯವೂ

ಬಣ್ಣ ಬಣ್ಣದವೂ ಆಗಿವೆ. ಅವರೆಲ್ಲ ಮೊಣಕಾಲಿನವರೆಗೆ ಬಟ್ಟೆಯನ್ನುಟ್ಟು ಪೂರ್ಣ ತೋಳಿನ ಕಂಚುಕ ಧರಿಸಿದವರು. ಕೆಲವರು ಜಾಕೆಟ್ ಧರಿಸಿದ್ದಾರೆ. ಪೂರ್ಣ ತೋಳಿನ ಕಂಚುಕಗಳು ಬೆನ್ನ ಬದಿಗೆ ಕಟ್ಟುವಂತಹವಿವೆ. ಇನ್ನೋರ್ವಳ ಕುಪ್ಪಸಕ್ಕೆ ತೋಳಿಲ್ಲ. ಆದರೆ ಕುಪ್ಪಸ ಪಾದದವರೆಗೆ ಇದೆ. ಓರ್ವ ಚಾಮರಧಾರಿಣಿ ಹಂಸದ ಚಿತ್ರವುಳ್ಳ ದುಕೂಲವನ್ನು ಧರಿಸಿದ್ದಾಳೆ. ಕೆಲವರು ಟೊಪ್ಪಿಗೆಗಳನ್ನೂ ಹೂವಿನ ದಂಡೆಗಳನ್ನೂ ಧರಿಸಿದ್ದಾರೆ. ಇನ್ನೂ ಕೆಲವರು ಅರ್ಧ ಬಟ್ಟೆಯನ್ನು ಮೈಗೆ ಬಿಗಿಯಾಗಿ ಸುತ್ತಿಕೊಂಡು ಉಳಿದ ಅರ್ಧವನ್ನು ಮುಂಗೈ ಮೇಲಿನಿಂದ ಪಾದದವರೆಗೆ ಇಳಿ ಬಿಟ್ಟಿದ್ದಾರೆ.

ಮಧ್ಯಮ ವರ್ಗದ ಸ್ತ್ರೀಯರು ತೆಳ್ಳಗಿನ ಹೂವಿನ ಚಿತ್ರಗಳುಳ್ಳ ಬಟ್ಟೆ ಧರಿಸುತ್ತಿದ್ದರು. ಕಂಚುಕ ಹಾಗೂ ದುಪ್ಪಟೆಯನ್ನು ಉಪಯೋಗಿಸುತ್ತಿದ್ದರು ದಾಸಿಯರು ಹಾಗೂ ಪರದೇಶಗಳ ಸೇವಿಕೆಯರು ಕೆಂಪುಟೊಪ್ಪಿಗೆ, ಮುಂಗೈವರೆಗೆ ತೋಳಿರುವ ಕೆಂಪು ಕಂಚುಕಗಳನ್ನು ಧರಿಸುತ್ತಿದ್ದರು.

ಓರ್ವ ರಾಣಿ ತನ್ನ ದಾಸಿಯೊಂದಿಗೆ ಮಾತನಾಡುತ್ತಿರುವ ಒಂದು ಚಿತ್ರವಿದೆ. ದಾಸಿ ರಾಣಿಯ ಕೇಶಾಲಂಕಾರದಲ್ಲಿ ಮಗ್ನಳಾಗಿದ್ದಾಳೆ. ರಾಣಿಯು ಉಟ್ಟ ಬಟ್ಟೆ ಪಾರದರ್ಶಕವಾಗಿದೆ. ದಾಸಿ ಬಿಳಿ ಬಣ್ಣದ ಉದ್ದ ತೋಳಿನ ಕುಪ್ಪಸ ತೊಟ್ಟಿದ್ದಾಳೆ. ಮೈಗೊಂದು ಬಟ್ಟೆ ಸುತ್ತಿಕೊಂಡಿದ್ದಾಳೆ. ಹೆಚ್ಚಾಗಿ ಮಧ್ಯಮ ವರ್ಗದ ಮಹಿಳೆಯರು ಬಣ್ಣ ಬಣ್ಣದ ಬಟ್ಟೆಯಿಂದ, ಮುತ್ತಿನ ಆಭರಣಗಳಿಂದ ಎದೆಯನ್ನು ಮುಚ್ಚಿಕೊಳ್ಳುತ್ತಿದ್ದರು. ಬಟ್ಟೆಯ ಎದೆಕಟ್ಟಿನಂತೆ ಮುತ್ತಿನ ಎದೆಕಟ್ಟನ್ನು ಉಪಯೋಗಿಸುತ್ತಿದ್ದರೆಂದು ತೋರುತ್ತದೆ. ಕೆಲವರು ಬನಾರಸದ ಜರದಂಚಿನ ಬಟ್ಟೆ ಧರಿಸಿದ್ದಾರೆ.

ಓರ್ವ ನೃತ್ಯ ರಾಣಿ ತೊಟ್ಟ ಕುಪ್ಪಸದ ತೋಳು ಮುಂಗೈವರೆಗಿದೆ. ಕುತ್ತಿಗೆಯಿಂದ ಪಾದದವರೆಗೆ ಕುಪ್ಪಸ ಇಳಿಬಿದ್ದಿದೆ. ತೋಳಿನ ಬಟ್ಟೆ ಕಪ್ಪು ಕೆಂಪು ಬಣ್ಣದ ಹೂವಿನದಾಗಿದೆ. ಕುಪ್ಪಸದ ಉಳಿದ ಭಾಗ ಬಿಳಿ ರೇಶಿಮೆಯದಿದೆ. ಆಕೆ ಉಟ್ಟ ಬಟ್ಟೆ ಅನೇಕ ಬಣ್ಣದ್ದಾಗಿದೆ. ಕೆಲವರು ತೊಟ್ಟ ಕುಪ್ಪಸದ ತೋಳಿಗೆ ಮುತ್ತಿನ ಎಳೆ, ಮುತ್ತಿನ ಸಾಲುಗಳು ಜೋತಾಡುತ್ತಿವೆ. ಕೆಲವರು ತೊಟ್ಟ ತೋಳಿಲ್ಲದ

ಜಾಕೆಟಿನಂತಹ ಕುಪ್ಪಸಗಳು ನೀಲಿ, ಹಳದಿ ಹಾಗೂ ಹಸಿರು ಬಣ್ಣದ ಪಟ್ಟಿ ಪಟ್ಟಿಯವಿವೆ. ಕೆಲವರು ಹಂಸದ ಸಾಲಿರುವ ಹಂಸದುಕೂಲವನ್ನುಟ್ಟಿದ್ದಾರೆ.

ಅಜಂತಾದ ಚಿತ್ರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಮೊದಲಿಗೆ ಮಹಿಳೆಯರು ಸೊಂಟದಿಂದ ಮೊಳಕಾಲಿನವರೆಗೆ ಬಟ್ಟೆ ಧರಿಸುತ್ತಿದ್ದುದು ಕಂಡು ಬರುತ್ತದೆ. ಆನಂತರದ ಕಾಲದಲ್ಲಿ ಸೊಂಟದಿಂದ ಪಾದದವರೆಗೆ ಬಟ್ಟೆ ಧರಿಸಿ ಉತ್ತರೀಯ ಹೊದೆವುದು ರೂಢಿಗೆ ಬಂದಿದೆ. ಕೊನೆಗೆ ನಡಕ್ಕೆ ಸುತ್ತಿದ ಬಟ್ಟೆಯನ್ನೇ ಸೆರಗು ಬಿಟ್ಟು ಮೈಮೇಲೆ ಹೊರಹತ್ತಿದರು. ಎದೆಕಟ್ಟನ್ನು ಉಪಯೋಗಿಸುತ್ತಿದ್ದರು. ಹೊದ್ದ ಕಂಚುಕಗಳನ್ನು ಕುತ್ತಿಗೆಯಿಂದ ಪಾದದವರೆಗೆ ಧರಿಸಹತ್ತಿದರು.

ಮೊದಲಿಗೆ ಬಣ್ಣ ಬಣ್ಣದ ಬಟ್ಟೆಗಳನ್ನು ಉಪಯೋಗಿಸುತ್ತಿದ್ದುದು ಕಂಡು ಬರುತ್ತದೆ. ಅನಂತರ ಸುಳುವು -ಹೊಳವಿನ ಬಟ್ಟೆ, ಹಂಸ ಹಾಗೂ ವಿವಿಧ ಬಗೆಯ ಪಕ್ಷಿಗಳ ನಕ್ಷೆಯುಳ್ಳ ಬಟ್ಟೆ, ಚಿಕ್ಕೆ ಹಾಗೂ ಬಗೆಬಗೆಯ ಬಣ್ಣದ ಹೂಗಳುಳ್ಳ ಬಟ್ಟೆಗಳು ರೂಢಿಯಲ್ಲಿ ಬಂದವು. ಚೌಕೋನಾಕೃತಿಯ ಬಟ್ಟೆ, ವರ್ತುಲಾಕಾರದಲ್ಲಿ ಅಂದವಾದ ಹೂಗಳಿರುವ ಬಟ್ಟೆಗಳು ಸಿದ್ಧವಾದುವು. ಬಣ್ಣ ಬಣ್ಣದ ಪಟ್ಟೆಗಳುಳ್ಳ ಬಟ್ಟೆ, ಅಡ್ಡಗೆರೆ, ಉದ್ದಗೆರೆಗಳುಳ್ಳ ಬಟ್ಟೆ, ಮತ್ತು ಹೆಣೆದ ಬಟ್ಟೆ, ಕಸೂತಿ ತೆಗೆದ ಬಟ್ಟೆಗಳನ್ನು ಅಜಂತಾ ಚಿತ್ರಕಲೆಯ ಕಾಲದ ಮಹಿಳೆಯರು ಉಪಯೋಗಿಸುತ್ತಿದ್ದರೆಂಬುದನ್ನು ಅಲ್ಲಿಯ ಚಿತ್ರಗಳು ತೋರುತ್ತವೆ.

ಬನಾರಸದ ಬಳಿಯಿರುವ ಸಾರಾನಾಥದ ದೇವಾಲಯಗಳ ಶಿಲಾಕನ್ನಿಕೆಯರಿಂದ ಆಗಿನವರು ಸೊಂಟದಿಂದ ಪಾದದವರೆಗೆ ಸೀರೆಯನ್ನುಟ್ಟು ಸೊಂಟಕ್ಕೆ ಕಟಿಬಂಧನವನ್ನು ಧರಿಸುತ್ತಿದ್ದರೆಂದೂ, ಕೆಲವರು ಉತ್ತರೀಯವನ್ನು ನಾನಾ ವಿಧವಾಗಿ ಹೊದೆಯುತ್ತಿದ್ದರೆಂದೂ ತಿಳಿದು ಬರುತ್ತದೆ. ಅಲ್ಲಿಯ ಗುಪ್ತರ ಕಾಲದ ದೇವಾಲಯಗಳಲ್ಲಿರುವ ದಶಾವತಾರಗಳಲ್ಲಿ ಕೃಷ್ಣಜನ್ಮದ ಚಿತ್ರವಿದೆ. ಯಶೋದೆ ಉದ್ದ ಕುಪ್ಪಸ ತೊಟ್ಟಿದ್ದಾಳೆ. ಪಾದದವರೆಗೊಂದು ಗಗ್ಗರಿಯನ್ನು ಹಾಕಿದ್ದಾಳೆ. ಉತ್ತರೀಯವನ್ನು ಹೊದೆದಿದ್ದಾಳೆ.



ಬಾದಾಮಿ ಗುಹೆಯಲ್ಲಿಯ ಯಕ್ಷಯಕ್ಷಿಣಿಯರು

ಮೌರ್ಯಯುಗದ ಯಕ್ಷಿಣಿಯರ ಚಿತ್ರಗಳಿಂದ ಆಗಿನ ಮಹಿಳೆಯರು ಮೊಳಕಾಲಿನವರೆಗೆ ಸೀರೆಯನ್ನುಟ್ಟು ಉತ್ತರೀಯವನ್ನು ಹೊದೆಯುತ್ತಿದ್ದರೆಂದೂ ಕೆಲವರು ಸೀರೆಯನ್ನುಟ್ಟು ಮೇಖಲೆ ಧರಿಸುತ್ತಿದ್ದರೆಂದೂ ತಿಳಿಯುತ್ತದೆ. ಮೌರ್ಯಯುಗದ ಶಿಲಾಕನ್ಯೆ ಸೊಂಟದಿಂದ ಪಾದದವರೆಗೆ ಸೀರೆಯುಟ್ಟು ಕಚ್ಚೆ ಹಾಕಿದ್ದಾಳೆ: ಮುಂದುಗಡೆ ಅಂದವಾಗಿ ನಿರಿಗಿ ಮಾಡಿ ಪಾದದವರೆಗೆ ಇಳಿ ಬಿಟ್ಟಿದ್ದಾಳೆ; ಉತ್ತರೀಯವನ್ನು ಹೊದ್ದಿದ್ದಾಳೆ.

ಓರ್ವ ಯಕ್ಷಿಣಿಯ ವೇಷ ಶೃಂಗಯುಗದ ವೇಷವನ್ನು ಸಾರುವಂತಿದೆ. ಈ ಮೂರ್ತಿಗೆ ತೆಳ್ಳಗಿನ ಸೀರೆಯಿದೆ. ಸೊಂಟಕ್ಕೆ ಅಂದವಾದ ಪಟ್ಟಿಯನ್ನು ಕಟ್ಟಲಾಗಿದೆ. ಹಣೆಯ ಮೇಲೆ ಹೂವಿನಾಕಾರದ ತಿಲಕವಿದೆ. ತಲೆಯ ಮೇಲೆ ದುಪ್ಪಟಿಯಿದೆ. ಆ ಕಾಲದ ಸಾಮಾನ್ಯ ಗೃಹಿಣಿಯರು ಸೀರೆಯುಟ್ಟು ಸೊಂಟಕ್ಕೆ ಪಟ್ಟಿಗಳನ್ನು ಕಟ್ಟಿಕೊಳ್ಳುತ್ತಿದ್ದರು. ಶ್ರೀಮಂತ ಮಹಿಳೆಯರು ಸೀರೆಯುಟ್ಟು ಬಂಗಾರದ ಕಿರುಗಂಟೆಗಳುಳ್ಳ ಮೇಖಲೆ ಧರಿಸುತ್ತಿದ್ದರಂತೆ.

ಸಾಂಚಿಯ ಶಿಲಾಮೂರ್ತಿಗಳಿಂದ ಆಗಿನ ಸ್ತ್ರೀಯರು ಎರಡು ಬಗೆಯಾಗಿ ಸೀರೆಯನ್ನುಟ್ಟುದುದು ಗೊತ್ತಾಗುತ್ತದೆ. (೧) ಸೊಂಟದಿಂದ ಮೊಳಕಾಲಿನವರೆಗೆ ಸೀರೆಯನ್ನುಟ್ಟು ಕಚ್ಚೆ ಹಾಕುವುದು. (೨) ಪಾದದವರೆಗೆ ಸೀರೆಯನ್ನುಟ್ಟು ಕಚ್ಚೆ ಹಾಕುವುದು. ಅಂಚುಳ್ಳ ಉತ್ತರೀಯವನ್ನು ಕೆಲವರು ಹೊದ್ದಿದ್ದಾರೆ. ಕೆಲವರು ಟೊಪ್ಪಿಗೆ ಧರಿಸಿದ್ದು ಕಂಡುಬರುತ್ತದೆ.

ಗಾಂಧಾರ, ಮಥುರಾ ಮತ್ತು ದಕ್ಷಿಣ ಭಾರತದ ಶಿಲ್ಪಕಲೆಯನ್ನು ಪರಿಶೀಲಿಸಿದರೆ ಆಗಿನ ಮಹಿಳೆಯರು ಕಚ್ಚೆ ಹಾಕಿ ಸೀರೆಯುಡುತ್ತಿದ್ದರೆಂದು ತಿಳಿಯುತ್ತದೆ. ಮಥುರೆಯ ಶಿಲಾಕನ್ಯೆಯರು ಪಾದದವರೆಗೆ ಸೀರೆಯುಟ್ಟು ಕುತ್ತಿಗೆಯಿಂದ ಸೊಂಟದವರೆಗೆ ಆಭರಣ ಧರಿಸಿದ್ದಾರೆ. ಹೊದ್ದ ಉತ್ತರೀಯವು ಬೆನ್ನ ಮೇಲೆ ಹಾಯ್ದು ಎರಡು ಕೈಗಳ ಕೆಳಭಾಗಕ್ಕೆ ಇಳಿಬಿದ್ದಿದೆ. ಉತ್ತರೀಯವನ್ನು ನಾನಾ ರೀತಿಯಿಂದ ಹೊದ್ದದ್ದು ಕಂಡು ಬರುತ್ತದೆ. ಸೊಂಟಕ್ಕೆ ಕಟ್ಟಿದ ಪಟ್ಟಿಯನ್ನು ವಿವಿಧ ಆಕಾರವಾಗಿ ಮಾಡಿ ಸೊಂಟದ ಎಡಭಾಗಕ್ಕೆ ಇಳಿಬಿಡುತ್ತಿದ್ದರು. ಕೆಲವರು ಸೊಂಟದಿಂದ ಪಾದದವರೆಗೆ ಪಟ್ಟಿಯನ್ನು ಇಳಿಬಿಡುತ್ತಿದ್ದರೆಂದು ತಿಳಿದುಬರುತ್ತದೆ.

ಏಳನೆಯ ಶತಮಾನದ ಮಹಾಬಲಿಪುರಂ ದೇವಾಲಯಗಳಲ್ಲಿ ಕೆತ್ತಿರುವ ಅಲ್ಲಿಯ ಅರಸರಾದ ಸಿಂಹವಿಷ್ಣುವಿನ, ಮಹೇಂದ್ರವರ್ಮನ ರಾಣಿಯರು ಸೊಂಟದಿಂದ ಪಾದದವರೆಗೆ ಬಹಳ ಅಂದವಾಗಿ ಸೀರೆಯುಟ್ಟಿದ್ದಾರೆ.

ಹತ್ತು ಹನ್ನೊಂದನೆಯ ಶತಮಾನದಲ್ಲಿ ಕಟ್ಟಲಾದ ಭುವನೇಶ್ವರ ದೇವಾಲಯಗಳಲ್ಲಿ ಓರ್ವ ಅಪ್ಸರೆ ಹಾಗೂ ಇನ್ನೋರ್ವ ಹೆಣ್ಣುಮಗಳು ಉಟ್ಟ ಬಟ್ಟೆ ಪಾದದ ತನಕ ಪಾರದರ್ಶಕವಾಗಿದೆ. ಅಲ್ಲಿಯ ದೇವಾಲಯಗಳ ಶಿಲಾ ಕನ್ಯೆಯರು ಬಹಳ ಸುಂದರಿಯರಾಗಿದ್ದಾರೆ. ಅವರೆಲ್ಲ ಸೊಂಟದಿಂದ ಪಾದದವರೆಗೆ ಸೀರೆಯುಟ್ಟಿದ್ದಾರೆ. ಆ ಬಟ್ಟೆ ಅಡ್ಡ ಗೆರೆಯುಳ್ಳದ್ದಾಗಿದೆ.

ಚಾಲುಕ್ಯರ ಕಾಲದ ಉಡುಗೆ

ಕರ್ನಾಟಕದಲ್ಲಿ ಚಾಲುಕ್ಯರ ರಾಜ್ಯ ಬಲಾಢ್ಯವಾಗಿತ್ತು. ಎರಡನೆಯ ಪುಲಿಕೇಶಿ ಹರ್ಷವರ್ಧನನನ್ನು ಸೋಲಿಸಿದ್ದನು. ಚಾಲುಕ್ಯರ ಕಾಲಕ್ಕೆ ಕರ್ನಾಟಕದ ಶಿಲ್ಪಕಲೆಯು ಹಿರಿಮೆಯದಾಗಿತ್ತು ಎಂಬ ಮಾತಿಗೆ ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲುಗಳ ದೇವಾಲಯಗಳು, ಗುಹೆಗಳು ಸಾಕ್ಷಿಯಾಗಿವೆ. ಅಜಂತದ ವರ್ಣಚಿತ್ರಗಳಲ್ಲಿ ಪುಲಿಕೇಶಿಯ ಭೇಟಿಗೆ ಬಂದ ಪರ್ಶಿಯಾ ದೇಶದ ರಾಯಭಾರಿಗಳ ಚಿತ್ರವಿದೆ. ಇದರಿಂದಾಗಿ ಪುಲಿಕೇಶಿಯ ಕಾಲದಿಂದ ಪರರಾಷ್ಟ್ರಗಳ ಸಂಪರ್ಕ ಕನ್ನಡನಾಡಿಗಿತ್ತೆಂದು ತಿಳಿದುಬರುತ್ತದೆ.

ಚಾಲುಕ್ಯರು ಐದನೆಯ ಶತಮಾನದಿಂದ ಎಂಟನೆಯ ಶತಮಾನದವರೆಗೆ ವಿಶಾಲ ಕರ್ನಾಟಕದಲ್ಲಿ ಮತ್ತು ಹೊರ ಪ್ರಾಂತಗಳಲ್ಲಿ ರಾಜ್ಯವಾಳಿದರು. ಅವರ ಕಾಲಕ್ಕೆ ಕಟ್ಟಲಾದ ದೇವಾಲಯಗಳು ಉತ್ತರ ಮತ್ತು ದಕ್ಷಿಣ ಭಾರತಗಳ ಶಿಲ್ಪಕಲೆಯ ಮಾದರಿಯನ್ನೊಳಗೊಂಡಿವೆ. ಬಾದಾಮಿಯ ಗುಹಾಂತರ್ದೇವಾಲಯಗಳು ಜಗತ್ಪ್ರಸಿದ್ಧವಾಗಿವೆ; ಕಲಾಪೂರ್ಣವಾಗಿವೆ. ಜೈನ, ಶೈವ, ವೈಷ್ಣವ ಗುಹೆಗಳನ್ನು ಒಂದೆಡೆ ಕೊರೆಯಿಸಿ, ಚಾಲುಕ್ಯರು ತಮ್ಮ ಸಂಸ್ಕೃತಿಯ ಹಿರಿಮೆಯನ್ನು ತೋರಿದ್ದಾರೆ. ಬಾದಾಮಿಯ ಗವಿಗಳು ಕನ್ನಡಿಗರ ವಿಶಾಲ ಭಾವನೆಯ ಪ್ರತೀಕವಾಗಿವೆ. ಆ ಗವಿಗಳಲ್ಲಿ ಕೊರೆದ ಶಿಲಾಮೂರ್ತಿಗಳಿಂದ ಆ ಕಾಲದ ವೇಷವೈವಿಧ್ಯವನ್ನು ನಾವು ಅರಿಯಬಹುದಾಗಿದೆ.

೯ ನೆಯ ಶತಮಾನದ ಗುಹಾಂತರ್ಗತದೇವಾಲಯಗಳಲ್ಲಿ ೨೦ ಪೂಟು ೨೦ ಇಂಚು ಎತ್ತರದ ಸುಂದರವಾದ ಅರ್ಧನಾರೀಶ್ವರ ಮೂರ್ತಿಯಿದೆ. ಬಳಿಯಲ್ಲಿ ಪಾರ್ವತಿಯಿದ್ದಾಳೆ. ಆಕೆ ಸೊಂಟದಿಂದ ಪಾದದವರೆಗೆ ತೆಳ್ಳಗಿನ ಬಟ್ಟೆಯನ್ನುಟ್ಟಿದ್ದಾಳೆ. ಅರ್ಧ ತೋಳಿನ ಕುಪ್ಪಸ ತೊಟ್ಟಿದ್ದಾಳೆ. ಆ ಗವಿಯಲ್ಲಿರುವ ಮಹಿಷಾಸುರಮರ್ದಿನಿ ಸೊಂಟದಿಂದ ಪಾದದವರೆಗೆ ಅಡ್ಡಗೆರೆಗಳುಳ್ಳ ಬಟ್ಟೆಯನ್ನುಟ್ಟಿದ್ದಾಳೆ.

ಓರ್ವ ಯಕ್ಷಿಣಿ ಮೊಣಕಾಲಿಂದ ಸೊಂಟದವರೆಗೆ ಬಟ್ಟೆಯನ್ನು ಉಟ್ಟಿದ್ದಾಳೆ. ಮೇಲೆ ಹೊದ್ದ ಉತ್ತರೀಯ ಎರಡೂ ಕೈಗಳ ಮೇಲಿಂದ ಕೆಳಗೆ ಇಳಿಬಿದ್ದಿದೆ. ಹಿಂಬದಿಯಲ್ಲಿ ಗಾಳಿಗೆ ಕೊಡೆಯಂತೆ ದುಂಡಗೆ ಹಾರಿದೆ. ಯಕ್ಷಿಣಿ ಆಕಾಶಮಾರ್ಗವಾಗಿ ಹೊರಟಾಗ ಗಾಳಿಯಲ್ಲಿ ಉತ್ತರೀಯವು ಹಾರಾಡುವುದನ್ನು ಬಹಳ ಅಂದವಾಗಿ ಕೆತ್ತಲಾಗಿದೆ.

ಬಾದಾಮಿಯ ಮೂರನೆಯ ಗವಿಯಲ್ಲಿ ಕಂಬದ ಮೇಲೆ ಕೆತ್ತಲಾದ ಜೋಡು ಮೂರ್ತಿಗಳಲ್ಲಿ, ಕೆಲವರು ಸೊಂಟದಿಂದ ಮೊಳಕಾಲವರೆಗೆ ಸೀರೆಯನ್ನುಟ್ಟಿದ್ದಾರೆ. ಚಾಲುಕ್ಯರ ಕಾಲಕ್ಕೆ ಐದನೆಯ ಶತಮಾನದಿಂದ ಏಳನೆಯ ಶತಮಾನದವರೆಗೆ ಕಟ್ಟಲಾದ ದೇವಾಲಯಗಳು ಭಾರತದಲ್ಲಿ ಪ್ರಸಿದ್ಧಿಯನ್ನು ಪಡೆದಿವೆ. ಐಹೊಳೆಯ ದೇವಾಲಯಗಳಲ್ಲಿರುವ ಸ್ತ್ರೀಮೂರ್ತಿಗಳನ್ನು ನಿರೀಕ್ಷಿಸಿದಾಗ ಆವರೆಲ್ಲ ಸೊಂಟದಿಂದ ಮೊಳಕಾಲದವರೆಗೆ ಬಟ್ಟೆ ಧರಿಸಿದ್ದು ಕಂಡು ಬರುತ್ತದೆ. ದುರ್ಗಾದೇವಾಲಯದಲ್ಲಿರುವ ಅಪ್ಸರೆಯರು ಮೊಳಕಾಲಿನವರೆಗೆ ಬಟ್ಟೆ ಧರಿಸಿದ್ದಾರೆ. ಹೊದ್ದ ಉತ್ತರೀಯ ಮೇಲೆ ಹಾರಿದಂತಿದೆ.

ಐಹೊಳೆಯ ಗುಹಾಂತರ್ದೇವಾಲಯದಲ್ಲಿ ಶಿವನ ಮೇಳದವರು ನೃತ್ಯಗೈಯುತ್ತಿದ್ದಾರೆ. ಅವರು ತಲೆಗೆ ಉದ್ದವಾದ ಕಿರೀಟ ಧರಿಸಿದ್ದಾರೆ. ಉದ್ದಗೆರೆ ಹಾಗೂ ಅಡ್ಡಗೆರೆಗಳುಳ್ಳ ಬಟ್ಟೆಯನ್ನು ಮೊಳಕಾಲವರೆಗೆ ಉಟ್ಟುಕೊಂಡು ಕಚ್ಚೆಹಾಕಿದ್ದಾರೆ. ಇನ್ನೊಂದು ದೇವಾಲಯದಲ್ಲಿ ಶಿವಪಾರ್ವತಿಯರು ನಂದಿಯ ಮೇಲೆ ಹೊರಟಿದ್ದಾರೆ. ಅದರಲ್ಲಿ ಪಾರ್ವತಿ ಉಟ್ಟ ಬಟ್ಟೆ ಸುಳುವು ಹೊಳಹಿನದಾಗಿದೆ. ಬಾದಾಮಿ ಐಹೊಳೆಗಳ ಶಿಲ್ಪವನ್ನು ನೋಡಿದರೆ ೬ ಹಾಗೂ



ಬಾದಾಮಿ 3ನೆಯ ಗುಹೆಯಲಿ ಯ ಜೋಡು ಮೂರ್ತಿಗಳು

೭ನೆಯ ಶತಮಾನದ ಮಹಿಳೆಯರು ಮೊಳಕಾಲಿನವರೆಗೆ ಬಟ್ಟೆ ಧರಿಸುತ್ತಿದ್ದರೆಂದು ತಿಳಿದುಬರುತ್ತದೆ.

೭೪೬ ರಲ್ಲಿ ಚಾಲುಕ್ಯ ವಿಕ್ರಮಾದಿತ್ಯನು ಕಂಚಿಯ ಪಲ್ಲವರನ್ನು ಸೋಲಿಸಿದನು. ಮರಳಿ ಬರುವಾಗ ಅಲ್ಲಿಯ ಪ್ರಸಿದ್ಧ ಶಿಲ್ಪಿಗಳಾದ ಸೂತ್ರಧಾರಿ ಗುಂಡ, ರೇವಡಿ ಓವಜ್ಜ ಮೊದಲಾದವರನ್ನು ಪಟ್ಟದಕಲ್ಲಿಗೆ ಕರೆದುಕೊಂಡು ಬಂದನು. ವಿಕ್ರಮಾದಿತ್ಯನ ರಾಣಿಯರಾದ ಲೋಕಮಹಾದೇವಿ, ತ್ರೈಲೋಕ್ಯ ಮಹಾದೇವಿಯರು ಗಂಡನ ಜಯದ ನೆನಪಿಗಾಗಿ ಪಟ್ಟದಕಲ್ಲಿನಲ್ಲಿ ವಿರೂಪಾಕ್ಷ ಹಾಗೂ ಮಲ್ಲಿಕಾರ್ಜುನ ದೇವಾಲಯಗಳನ್ನು ದಕ್ಷಿಣದಿಂದ ಬಂದ ಆ ಶಿಲ್ಪಿಗಳಿಂದ ಕಟ್ಟಿಸಿದರು. ಆ ದೇವಾಲಯಗಳು, ಭವ್ಯವಾಗಿವೆ. ಕಲಾಪೂರ್ಣವಾಗಿವೆ. ವಿರೂಪಾಕ್ಷ ದೇವಾಲಯದಲ್ಲಿರುವ ಶಿವಪಾರ್ವತಿಯರ ಮೂರ್ತಿಗಳು ಬಹಳ ಸುಂದರವಾಗಿವೆ. ಪಾರ್ವತಿ ಸೊಂಟದಿಂದ ಪಾದದವರೆಗೆ ಅಲೆದಾಡುವಂತೆ ಸೀರೆಯುಟ್ಟು ಸುಂದರವಾದ ಒಡ್ಯಾಣವನ್ನು ಹಾಕಿಕೊಂಡಿದ್ದಾಳೆ. ಪಟ್ಟದಕಲ್ಲಿನ ಮಲ್ಲಿಕಾರ್ಜುನ ಹಾಗೂ ಇತರ ದೇವಾಲಯಗಳನ್ನು ನೋಡಿದರೆ ೮ನೆಯ ಶತಮಾನದ ಮಹಿಳೆಯರು ಪಾದದವರೆಗೆ ಸೀರೆಯುಡುತ್ತಿದ್ದರೆಂದು ತಿಳಿದುಬರುತ್ತದೆ. ಚಾಲುಕ್ಯರು ಕಲೆ, ಸಂಸ್ಕೃತಿಗಳನ್ನು ಬೆಳೆಸಿ ಭಾರತದ ಶಿಲ್ಪ ಪ್ರಪಂಚದಲ್ಲಿ ಸುವರ್ಣ ಯುಗಕ್ಕೆ ಕಾರಣರಾದರೆಂದು ಫ್ರಾನ್ಸದ ಕಲಾವಿದರು ಅಭಿಪ್ರಾಯಪಟ್ಟಿದ್ದಾರೆ.

ಚಾಲುಕ್ಯ ಪದ್ಧತಿಯ ಹತ್ತನೆಯ ಶತಮಾನದ ಸರಸ್ವತಿ ದೇವಾಲಯ ಗದಗಿನಲ್ಲಿದೆ. ಈ ಸರಸ್ವತಿ ದೇವಾಲಯವು ಚಾಲುಕ್ಯರ ಶಿಲ್ಪಕಲೆಯಲ್ಲಿ ಅತ್ಯುನ್ನತಮಟ್ಟದ್ದಾಗಿದೆ. ಸರಸ್ವತಿ ಉಟ್ಟಿರುವ ಬಟ್ಟೆಯ ಬಗೆಗೆ 'ದೇಹವನ್ನು ಮುಚ್ಚುವುದಕ್ಕಿಂತ ಹೊರಹೊಮ್ಮಿಸುವದರಲ್ಲಿಯೇ ಬಟ್ಟೆಯ ಪ್ರಯೋಜನ ಇದ್ದಂತೆ ಕಾಣುತ್ತದೆ'' ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಸರಸ್ವತಿ ಉಟ್ಟ ಬಟ್ಟೆ ಪಾರದರ್ಶಕವಾಗಿದೆ. ಬನಾರಸದ ಸೀರೆಗಳಂತೆ ಅಂದವಾದ ಸುಳುಹು ಹೊಳಹಿನ ಸೀರೆ ಸೊಂಟದಿಂದ ಪಾದದವರೆಗಿದೆ. ಈ ಮೂರ್ತಿ ಕಲಾಪೂರ್ಣವಾಗಿದೆ. ಸೀರೆಯನ್ನು ಬಹಳ ಸೂಕ್ಷ್ಮವಾಗಿ ಮತ್ತು ಅಂದವಾಗಿ ಕೆತ್ತಿದ್ದಾರೆ.

ಚಾಲುಕ್ಯರ ತರುವಾಯ ಕರ್ನಾಟಕದಲ್ಲಿ ಶಿಲ್ಪಕಲೆಯ ದೃಷ್ಟಿಯಿಂದ ಪ್ರಸಿದ್ಧವಾದ ಅರಸುಮನೆತನವೆಂದರೆ ಹೊಯ್ಸಳ ಮನೆತನವು. ಅವರ ಕಾಲಕ್ಕೆ ಕಟ್ಟಲಾದ ದೇವಾಲಯಗಳಲ್ಲಿಯ ಶಿಲ್ಪಕಲೆಯಿಂದ ಆ ಕಾಲದ ಮಹಿಳೆಯರ ಸೀರೆಯ ಸೊಬಗನ್ನು ಇನ್ನು ನೋಡುವ.

ಸೀರೆಯ ಸೊಬಗು

ಬೇಲೂರ ಶಿಲಾಬಾಲಿಕೆಯರು, ಸೋಮನಾಥಪುರದ ವೇಣುಗೋಪಾಲ ದೇವಾಲಯದಲ್ಲಿರುವ ಗೋಪಿಯರು, ಹಾಗೂ ದೇವಾಲಯದ ಹೊರ ಗೋಡೆಯಲ್ಲಿ ಕೆತ್ತಲಾದ ಮಹಿಳೆಯರು ಉಟ್ಟ ಬಟ್ಟೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಅವರಲ್ಲಿ ಅನೇಕರು ಸೊಂಟದಿಂದ ಮೊಣಕಾಲವರೆಗೆ ಅಂದವಾದ ಬಟ್ಟೆಯನ್ನು ಉಟ್ಟುದು ಕಂಡುಬರುತ್ತದೆ. ಕೆಲವರು ಉಟ್ಟ ಬಟ್ಟೆಯ ಅಂಚಿಗೆಲ್ಲ ಮುತ್ತು ರತ್ನಗಳನ್ನು ಹಚ್ಚಿದ್ದಾರೆ. ಸ್ನಾನ ಮಾಡಿ ಸೀರೆ ಉಟ್ಟುಕೊಳ್ಳುವಾಗ ಚೇಳನ್ನು ಕಂಡು ಗಾಬರಿಯಿಂದ ಸೀರೆಯನ್ನು ಕೊಡಹುವ ಬಾಲಿಕೆಯೊಬ್ಬಳನ್ನು ಬೇಲೂರಲ್ಲಿ ಕಾಣುತ್ತೇವೆ. ನಿರಿಗೆ ಮಾಡಿದ ಸೀರೆಯ ಅರ್ಧಭಾಗ ಬಲಗೈಯಲ್ಲಿ ಹೊದ್ದುಕೊಳ್ಳುವ ಸೆರಗು ಹಿಡಿದಿದ್ದಾಳೆ. ಇದರಿಂದ ಆಗಿನ ಕಾಲದ ಮಹಿಳೆಯರು ನಿರಿಗೆ ಮಾಡಿ ಸೀರೆ ಉಡುತ್ತಿದ್ದರೆಂದು ತಿಳಿದು ಬರುತ್ತದೆ. ಹಳೆಬೀಡಿನ ಬಾಲಿಕೆಯರಲ್ಲಿ ಅನೇಕರು ಉರಧಾಮವನ್ನು ಸೊಂಟದಿಂದ ಮೊಣಕಾಲವರೆಗೆ ಉಟ್ಟಿದ್ದಾರೆ. ಅದಕ್ಕೆಲ್ಲ ಮುತ್ತು ರತ್ನಗಳನ್ನು ಹಚ್ಚಿದ್ದಾರೆ. ನೃತ್ಯಗಾತಿಯರು ಉಟ್ಟ ಬಟ್ಟೆ ವಿವಿಧ ಬಗೆಯವಾಗಿವೆ. ಅವುಗಳ ಅಂಚಿಗೆಲ್ಲ ರತ್ನ ಹಚ್ಚಿದ್ದಾರೆ. ಸೋಮನಾಥಪುರದ ಹೊರಭಾಗದಲ್ಲಿ ಕೆತ್ತಿದ ಮಹಾಭಾರತದ ಕಥೆಗಳಲ್ಲಿ ಅನೇಕ ಮಹಿಳೆಯರು ಚೌಕುಮನೆ, ಅಡ್ಡಗೆರೆಗಳುಳ್ಳ ಸೀರೆಯನ್ನು ಪಾದದವರೆಗೆ ಉಟ್ಟಿದ್ದಾರೆ.

ನಂದಿಗ್ರಾಮದ ಭೋಗನಂದೀಶ್ವರ ದೇವಾಲಯದಲ್ಲಿ ಹೊಯ್ಸಳರ ಕಾಲದ ಕಲ್ಯಾಣಮಂಟಪವಿದೆ. ಅದರ ನಾಲ್ಕು ಕಂಬಗಳಲ್ಲಿ ಇಬ್ಬಿಬ್ಬರು ಮಹಿಳೆಯರನ್ನು ಕೆತ್ತಿದ್ದಾರೆ. ಅವರೆಲ್ಲ ಪಾದದವರೆಗೆ ನಿರಿಗೆಯುಳ್ಳ ಸೀರೆಯುಟ್ಟಿದ್ದಾರೆ. ಅದಕ್ಕೆ ಮಧ್ಯದಲ್ಲಿ ವಜ್ರ, ಮುತ್ತಿನ ಎಳೆಗಳನ್ನು ಅಂಚಿಗೆಲ್ಲ ಹಚ್ಚಿದ್ದಾರೆ. ಬಂಗಾರದ ಹೂವು ಇರುವ ಎದೆಕಟ್ಟನ್ನು ಅವರು ಕಟ್ಟಿದ್ದಾರೆ. ಅದಕ್ಕೆ



ಐಹೊಳೆ ಗುಹೆಯಲ್ಲಿಯ ಶಿಲಾಕನ್ಯೆ

ಕೆಳಭಾಗದಲ್ಲಿ ಬಂಗಾರದ ಚೈನ್ ಅಂದವಾಗಿ ಇಳಿಬಿಟ್ಟಿದ್ದಾರೆ. ಎದೆಕಟ್ಟು ಕಟ್ಟಿದ ಚಿತ್ರ ಈ ಭಾಗದಲ್ಲಿ ಕಂಡುಬರುವುದು ಇದೊಂದೇ ದೇವಾಲಯದಲ್ಲಿ.

ವಿಜಯನಗರ ಸಾಮ್ರಾಜ್ಯದ ಕಾಲದ ಉಡುಗೆ


ವಿಜಯನಗರ ಸಾಮ್ರಾಜ್ಯವು ವೈಭವಪೂರ್ಣವಾಗಿತ್ತು; ಬಲಾಢ್ಯವಾಗಿತ್ತು. ಉತ್ತರ ಭಾರತದಲ್ಲಿ ಪರಕೀಯರ ದಾಳಿಯಿಂದ ಹಿಂದೂ ಸಂಸ್ಕೃತಿ ಅಳಿಯುತ್ತಿದ್ದಾಗ ವಿಜಯನಗರದ ಅರಸರು ಧರ್ಮ, ಕಲೆ, ಸಂಸ್ಕೃತಿಗಳನ್ನು ಉಳಿಸಿಕೊಂಡು ಬಂದರು. ಅವರ ಕಾಲಕ್ಕೆ ಕಟ್ಟಲಾದ ದೇವಾಲಯಗಳಲ್ಲಿಯ ಶಿಲಾಕನ್ಯೆಯರು ಸೊಂಟದಿಂದ ಮೊಳಕಾಲಿನವರೆಗೆ ಮತ್ತು ಪಾದದವರೆಗೆ ಸೀರೆಯನ್ನು ಉಟ್ಟಿದ್ದಾರೆ. ನಿರಿಗೆ ಮಾಡಿ ಬಟ್ಟೆಯುಟ್ಟಿದ್ದಾರೆ. ಕೃಷ್ಣರಾಯ ತಿರುಮಲರಾಯರ ರಾಣಿಯರು ಪಾದದವರೆಗೆ ಸೀರೆಯನ್ನುಟ್ಟಿದ್ದಾರೆ. ಮುಂದುಗಡೆ ನಿರಿಗೆ ಮಾಡಲಾಗಿದೆ. ಆ ನಿರಿಗೆಯ ಕೆಳಭಾಗವನ್ನು ಬೀಸಣಿಗೆಯ ಆಕಾರದಂತೆ ಕಲಾಪೂರ್ಣವಾಗಿ ರೂಪಿಸಲಾಗಿದೆ.

ಪರದೇಶಗಳ ಪ್ರವಾಸಿಗರು ವಿಜಯನಗರದ ವರ್ಣನೆಯನ್ನು ಬರೆದಿದ್ದಾರೆ. ಅದರಲ್ಲಿ ಮಹಿಳೆಯರ ವೇಷದ ಬಗೆಗೂ ಮಾತುಗಳಿವೆ. 'ಸುರಸುಂದರಿಯರಾದ ಗಾಯಿಕೆಯರು, ನೃತ್ಯಗಾತಿಯರು, ಸುಂದರವಾದ ಬಟ್ಟೆಗಳನ್ನು ಧರಿಸುತ್ತಿದ್ದರು'' ಎಂದು ಪೇಜ್ ವರ್ಣಿಸಿದ್ದಾನೆ. ಮತ್ತೊಬ್ಬನು ''ಇಲ್ಲಿಯ ಮಹಿಳೆಯರು ತೆಳುವಾದ ಬಿಳಿಬಣ್ಣದ ನೂಲಿನ ಬಟ್ಟೆಯನ್ನುಡುತ್ತಾರೆ'' ಎಂದು ಹೇಳುವನು. ಕೆಲವರು ಜರತಾರಿ ಅಂಚುಳ್ಳ ಶುಭ್ರ ಬಟ್ಟೆಗಳನ್ನುಡುತ್ತಾರೆ; ಮೊಗ ಪಾವುಡಗಳನ್ನು ಧರಿಸುತ್ತಾರೆ; ಚಲ್ಲಣವನ್ನು ಕಟ್ಟಿಕೊಂಡು ಕಾಸೆ ಧರಿಸುವವರು ಇದ್ದಾರೆ; ಬಗೆ ಬಗೆಯ ಬಣ್ಣದ ರೇಶಿಮೆ ಬಟ್ಟೆಯನ್ನುಡುತ್ತಾರೆ; ಸೀರೆಯ ನಿರಿಗೆ ಮಾಡಿ ಉಟ್ಟುಕೊಂಡು ಉಳಿದ ಅರ್ಧ ಭಾಗವನ್ನು ಹೆಗಲ ಮೇಲೆ ಇಳಿಬಿಡುತ್ತಾರೆ; ರೇಶಿಮೆಯ ದಾರದಿಂದ ಹೆಣೆದ ತೊಗಲಿನ ಬೂಟುಗಳನ್ನು ಹಾಕಿಕೊಳ್ಳುತ್ತಾರೆ; ಕೂದಲನ್ನು ಚೆನ್ನಾಗಿ ಬಾಚಿಕೊಂಡು ಹಿಂದೆ ಗಂಟು ಹಾಕಿಕೊಳ್ಳುತ್ತಾರೆ. ಸುವಾಸಿತವಾದ ಹೂಗಳಿಂದ ಅಲಂಕರಿಸಿಕೊಳ್ಳುತ್ತಾರೆ; ವಜ್ರಾಭರಣಗಳನ್ನು ಧರಿಸುತ್ತಾರೆ ಎಂದೂ ವಿವರಿಸಿದ್ದಾನೆ. ಪೇಜನು ''ವಿಜಯನಗರದ ಮಹಿಳೆಯರು

ಬಹಳ ಬೆಲೆಯುಳ್ಳ ಸುಂದರವಾದ ರೇಶಿಮೆಯ ಬಟ್ಟೆಗಳನ್ನು ಧರಿಸುತ್ತಾರೆ. ತಲೆಗೆ ಎತ್ತರವಾದ ಟೊಪ್ಪಿಗೆಗಳನ್ನು ಹಾಕುತ್ತಾರೆ. ಟೊಪ್ಪಿಗೆಯ ಮೇಲೆ ಮುತ್ತಿನಿಂದ ಮಾಡಿದ ಹೂಗಳನ್ನು ಧರಿಸುತ್ತಾರೆ. ವಜ್ರಾಭರಣಗಳನ್ನಿಟ್ಟುಕೊಳ್ಳುತ್ತಾರೆ. ಭುಜದ ಪಟ್ಟೆ ಮುತ್ತಿನ ಎಳೆಯಿಂದ ಮಾಡಲ್ಪಟ್ಟಿರುತ್ತದೆ. ಸೊಂಟಕ್ಕೆ ಧರಿಸಿದ ಒಡ್ಯಾಣದ ಮುತ್ತಿನ ಎಳೆಗಳು ಮೊಳಕಾಲಿನವರೆಗೆ ನೇತಾಡುತ್ತವೆ. ಇಂಥ ಮಹಿಳೆಯರು ಬಂಗಾರದ ಪಾತ್ರೆಗಳಲ್ಲಿ ನೀರನ್ನು ತರುತ್ತಾರೆ'' ಎಂದು ಹೇಳುತ್ತಾನೆ.

ನ್ಯೂನಿಝನು ಹೀಗೆ ಬರೆಯುತ್ತಾನೆ: ''ಸ್ತ್ರೀಯರು ಕುಲಾಯಿ ಕಟ್ಟಿಕೊಳ್ಳುತ್ತಾರೆ. ಆ ಕುಲಾಯಿಗಳಿಗೆ ದೊಡ್ಡ ಮುತ್ತಿನ ಹೂವನ್ನು ಹಚ್ಚಿರುತ್ತಾರೆ'' ವಿಜಯನಗರ ಸಾಮ್ರಾಜ್ಯದ ಕಾಲಕ್ಕೆ ಸಾಮಾನ್ಯ ಮಹಿಳೆಯರು ಪಾದದವರೆಗೆ ಬಟ್ಟೆ ಧರಿಸುತ್ತಿದ್ದರು. ತೆಳ್ಳಗಿನ ತೊಗಲಿನ ಬೂಟುಗಳನ್ನು ಬಂಗಾರದ ಇಲ್ಲವೆ ರೇಶಿಮೆಯ ಎಳೆಗಳಿಂದ ಹೆಣೆದ ಬೂಟುಗಳನ್ನು ಧರಿಸುತ್ತಿದ್ದರು. ನಾನಾ ಬಗೆಯಾಗಿ ಕೇಶಾಲಂಕಾರವನ್ನು ಮಾಡಿಕೊಳ್ಳುತ್ತಿದ್ದರು. ತಲೆಯ ಕೆಲವು ಭಾಗವನ್ನು ಹೆಣಿಗೆಯ ವಸ್ತ್ರದಿಂದ ಕಟ್ಟಿಕೊಳ್ಳುತ್ತಿದ್ದರು. ಅದಕ್ಕೆ ಬಂಗಾರದ ಎಳೆಗಳಿಂದ ಕಸೂತಿ ಹಾಕುತ್ತಿದ್ದರು. ಅಲ್ಲದೆ ರೇಶಿಮೆಯ ದಾರದಿಂದಲೂ ಕೂದಲನ್ನು ಕಟ್ಟಿಕೊಳ್ಳುತ್ತಿದ್ದರು. ಪರದೇಶಗಳಿಂದ ಗೋವೆಯ ಮಾರ್ಗವಾಗಿ ವ್ಹೆಲ್‌ವೆಟ್, ಸ್ಯಾಟಿನ್, ಮತ್ತು ಚೀನೀ ರೇಶಿಮೆ ಬಟ್ಟೆ ವಿಜಯನಗರಕ್ಕೆ ಬರುತ್ತಿದ್ದವು.

ಇನ್ನೊಬ್ಬ ಪರದೇಶದ ಪ್ರವಾಸಿ ಇಕ್ಕೇರಿಯಲ್ಲಿ ತಾನು ನೋಡಿದ ನರ್ತಕಿಯರ ಬಟ್ಟೆಯ ವರ್ಣನೆಯನ್ನು ಈರೀತಿ ಮಾಡಿದ್ದಾನೆ: ''ಸೊಂಟದಿಂದ ಕೆಳಗೆ ಪಾದದವರೆಗೆ ಬಣ್ಣ ಬಣ್ಣದ ಅಂಚಿನ ಪಟ್ಟೆಪಟ್ಟೆಯ ಬಟ್ಟೆಯನ್ನುಟ್ಟು ಹೆಗಲಮೇಲೆ ಸ್ಕಾರ್ಫ್ ಹೊದೆದಿದ್ದರು.'' ಇಲ್ಲಿ ಆ ಪ್ರವಾಸಿ ಉತ್ತರೀಯವನ್ನೇ ಸ್ಕಾರ್ಫ್ ಎಂದು ಕರೆದಿರಬೇಕು. ಕರ್ನಾಟಕದಲ್ಲಿ ನೂಲಿನ ಉಣ್ಣೆಯ ಉದ್ಯೋಗ ಸಾರ್ವತ್ರಿಕವಾಗಿತ್ತು. ಇಲ್ಲಿಯ ಬಟ್ಟೆ ಜಿನುಗಿನಲ್ಲಿಯೂ ಅಂದಚೆಂದದಲ್ಲಿಯೂ ಮಿಗಿಲಾಗಿದ್ದವು. ರೇಶಿಮೆಯ ವಸ್ತ್ರಗಳು ಮೇಲ್ತರಗತಿಯವಾಗಿದ್ದವು.



ನಂದಿಬೆಟ್ಟದಲ್ಲಿರುವ ಯೋಗನಂದೀಶ್ವರ, ನಂದೀ ಗ್ರಾಮದಲ್ಲಿರುವ ಭೋಗನಂದೀಶ್ವರ ದೇವಾಲಯಗಳಲ್ಲಿ ವಿಜಯನಗರದ ಅರಸರ ಆಳ್ವಿಕೆಯ ಕಾಲದ ಶಿಲ್ಪಕಲೆಯಿದೆ. ಯೋಗನಂದೀಶ್ವರ ದೇವಾಲಯದ ಮಂಟಪದ ಕಂಬಗಳಲ್ಲಿ ಕೆತ್ತಿದ ದೇವತೆಗಳು, ಹೆಂಗಳೆಯರು ಪಾದದವರೆಗೆ ನಿರಿಗೆ ಮಾಡಿ ಸೀರೆಯುಟ್ಟಿದ್ದಾರೆ. ಭೋಗನಂದೀಶ್ವರ ದೇವಾಲಯದ ಮುಖಮಂಟಪದಲ್ಲಿ ಮಹಾದ್ವಾರದಲ್ಲಿ ನಿಂತ ಶಿಲಾಬಾಲಿಕೆಯರ ವೇಷ ವೈಶಿಷ್ಟ್ಯಪೂರ್ಣವಾಗಿದೆ. ಸುಂದರವಾದ ಎದೆಕಟ್ಟನ್ನು ಅವರು ಕಟ್ಟಿದ್ದಾರೆ. ಅಂಚಿಗೆಲ್ಲ ಮುತ್ತು ರತ್ನಗಳನ್ನು ಹಚ್ಚಿದ್ದಾರೆ. ಸೊಂಟದಿಂದ ಪಾದದವರೆಗೆ ಅಲೆದಾಡುವಂತೆ ನಿರಿಗೆ ಮಾಡಿ ಸೀರೆ ಉಟ್ಟಿದ್ದಾರೆ. ಎಡಭಾಗದಲ್ಲಿ ಬಲಭಾಗದಲ್ಲಿ ನಿರಿಗೆಗಳಿವೆ. ಸೊಂಟದಿಂದ ಪಾದದವರೆಗೆ ಮಧ್ಯ ಮಧ್ಯದಲ್ಲಿ ನಾಲ್ಕಾರು ಸಾಲು ವಜ್ರ ರತ್ನಗಳನ್ನು ಹಚ್ಚಿದ್ದಾರೆ.

ಕರ್ನಾಟಕದ ಮಹಿಳೆಯರಿಗೆ ಏಳು - ಎಂಟನೆಯ ಶತಮಾನಗಳಿಂದಲೂ ಕಸೂತಿ ಕಲೆ ಚೆನ್ನಾಗಿ ಗೊತ್ತಿತ್ತು. ಪ್ರತಿಯೊಬ್ಬಳೂ ತನ್ನ ಬಿಡುವಿನ ವೇಳೆಯಲ್ಲಿ ಉಡುವ ಸೀರೆಗೆ, ಮಕ್ಕಳ ಉಡಿಗೆಗೆ ಕಸೂತಿ ಹಾಕುತ್ತಿದ್ದಳು. ತಮ್ಮ ಸುತ್ತಲೂ ಕಾಣುವ ಗುಡಿಗೋಪುರಗಳು, ತೇರು, ಕಮಲ, ಪಕ್ಷಿ ಪ್ರಾಣಿಗಳ ಪ್ರತಿರೂಪಗಳನ್ನು ಕಸೂತಿಯಲ್ಲಿ ಚಿತ್ರಿಸುತ್ತಿದ್ದರು. ಗಿಳಿ, ನವಿಲು, ಆನೆ, ಅಂಬಾರಿ, ತೊಟ್ಟಿಲು ಅವರಿಗೆ ಪ್ರಿಯವಾದ ವಸ್ತುಗಳಾಗಿದ್ದುವು. ಅವುಗಳಲ್ಲಿ ನೇಗಿಯ ಹೆಣಿಗೆ, ಮೆಂತೆಯ ಹೆಣಿಕೆ, ಮುರುಗಿ ಹೆಣಿಗೆಗಳು ಪ್ರಸಿದ್ಧವಾಗಿವೆ. ಗೋಡಂಬಿ, ವರಾಹ ಗೋಡಂಬಿಗಳನ್ನು ಬಹಳ ಅಂದವಾಗಿ ಹೆಣೆಯುತ್ತಿದ್ದರು. ಕನ್ನಡತಿಯರ ಕಸೂತಿ ಕಲೆಯು, ವೈಶಿಷ್ಟ್ಯಪೂರ್ಣವಾಗಿದೆ; ಪ್ರತಿಭಾಯುಕ್ತವಾಗಿದೆ. ವಿಜಯನಗರದ ಪತನದ ನಂತರ ಪರಕೀಯರ ಪ್ರಭಾವ ಭಾರತದಲ್ಲೆಲ್ಲ ವ್ಯಾಪಿಸಿತು. ಆಗ ಕನ್ನಡತಿಯರ ಕಲೆಗೂ ಗ್ರಹಣ ಹಿಡಿಯಿತು. ಇದೀಗ ಮತ್ತೆ ಆ ಕಲಾಪ್ರಜ್ಞೆ ಚೇತರಿಸಿಕೊಳ್ಳುತ್ತಿದೆ.

ಕರ್ನಾಟಕದ ಪ್ರಸಿದ್ಧ ಅರಸುಮನೆತನವಾದ ಚಾಲುಕ್ಯರ ಕಾಲದಿಂದ ವಿಜಯನಗರ ಸಾಮ್ರಾಜ್ಯದ ವರೆಗಿನ ಶಿಲ್ಪಕಲೆಯನ್ನು ಪರಿಶೀಲಿಸಿದರೆ, ಕನ್ನಡತಿಯರು ಬಹುಕಾಲದಿಂದ ವಿವಿಧ ಬಗೆಯ ಬಟ್ಟೆಗಳನ್ನು ಧರಿಸುತ್ತಿದ್ದರೆಂದು ತಿಳಿಯುತ್ತದೆ. ಬಟ್ಟೆಗಳಿಗೆ ಮುತ್ತುಗಳನ್ನು ಹಚ್ಚಿ ಹೊಲಿದು ಅವು ಅಂದವಾಗಿ ತೋರುವಂತೆ ಮಾಡುತ್ತಿದ್ದರು. ಬಂಗಾರದ ಎಳೆಗಳಿಂದ ಅಂದರೆ ಜರದಿಂದ,

ರೇಶಿಮೆಯಿಂದ ಕಸೂತಿ ತೆಗೆದು ಸೀರೆಗಳನ್ನು ಉಡುತ್ತಿದ್ದರು ಎಂದು ತಿಳಿಯುವುದು. ಇದರಿಂದ ಕನ್ನಡ ನಾಡಿನ ಮಹಿಳೆಯರು ಕಲಾಪ್ರಿಯರೂ ರಸಿಕರೂ ಆಗಿದ್ದರೆಂದು ಸ್ಪಷ್ಟವಾಗುತ್ತದೆ.

ರಾಜಸ್ಥಾನದ ಉಡಿಗೆ

೧೬ರಿಂದ ೧೮ನೆಯ ಶತಮಾನದವರೆಗಿನ ರಾಜಸ್ಥಾನದ ವರ್ಣಚಿತ್ರಗಳನ್ನು ನೋಡಿದರೆ ಆ ಕಾಲಕ್ಕೇ ವಸ್ತ್ರಗಳಲ್ಲಿ ವೈವಿಧ್ಯ ಬೆಳೆದು ಬಂದಂತೆ ತೋರುತ್ತದೆ. ಭಾರತದ ಕುಶಲ ನೇಕಾರರು ಮೊಗಲರ ಕಾಲಕ್ಕೆ ಬಟ್ಟೆಯ ನೇಯ್ಗೆಯಲ್ಲಿ ಹೆಚ್ಚಿನ ಕಲಾಕೌಶಲ್ಯವನ್ನು ತೋರಿದಂತೆ ಕಾಣುತ್ತದೆ. ರಾಜಸ್ಥಾನದ ಮಹಿಳೆಯರು ಸೊಂಟದಿಂದ ಪಾದದವರೆಗೆ ಬಹಳ ನಿರಿಗೆಗಳುಳ್ಳ ಗಗ್ಗರಿ ಹಾಕುತ್ತಿದ್ದರು. ಮೊಳಕೈವರೆಗೆ ತೋಳುಳ್ಳ ಕುಪ್ಪಸ ತೊಡುತ್ತಿದ್ದರು. ಕೆಲವರ ಕುಪ್ಪಸದ ತೋಳುಗಳು ಮುಂಗೈವರೆಗೂ ಇರುತ್ತಿದ್ದವು. ಮೇಲೊಂದು ಅಂದವಾದ ಉತ್ತರೀಯವನ್ನು ಮೈತುಂಬ ಹೊದೆಯುತ್ತಿದ್ದರು. ಮುಖ ಹಾಗೂ ಮುಂಗೈಗಳನ್ನುಳಿದ ದೇಹವೆಲ್ಲ ಬಟ್ಟೆಯಿಂದ ಆವೃತವಾಗಿರುತ್ತಿತ್ತು. ಹಳದಿ, ಹಸಿರು, ಕೆಂಪು, ನೀಲಿ ರೇಶಿಮೆ ಬಟ್ಟೆಗಳಲ್ಲಿ ಅಂದವಾಗಿ ಗಿಳಿ, ಹೂವು, ಪಕ್ಷಿ ಪ್ರಾಣಿಗಳ ಚಿತ್ರವನ್ನು ತೆಗೆಯುತ್ತಿದ್ದರು. ಚಿಕ್ಕಚಿಕ್ಕೆಗಳುಳ್ಳ ಮೇಲ್ತರಗತಿಯ ಕಲಾಕಸುರಿನ ಬಟ್ಟೆಯನ್ನುಡುತ್ತಿದ್ದರು. ಗುಜರಾತದ ಜನರೂ ಪಟೋಲಾ ಹಾಗೂ ನವರಂಗ ಒಂಬತ್ತು ಬಣ್ಣ ಸೌರಂಗ ನೂರು ಬಣ್ಣ ಎಂದು ನೂರಾರು ಬಣ್ಣಗಳುಳ್ಳ ಬಟ್ಟೆಗಳನ್ನು ಧರಿಸುತ್ತಿದ್ದರು. ಗುಜರಾತ, ರಾಜಸ್ಥಾನಗಳ ಬಟ್ಟೆಗಳನ್ನುಟ್ಟ ಮಹಿಳೆಯರು ವಿವಿಧ ಬಣ್ಣದ ರಾಣಿಯರಂತೆ ಕಂಗೊಳಿಸುತ್ತಿದ್ದರು. ಈಗಲೂ ಆ ದೇಶದಲ್ಲಿ ಸುಂದರವಾದ ಬಣ್ಣ ಬಣ್ಣದ ಅಚ್ಚಿನ ಬಟ್ಟೆಗಳನ್ನು ಉಪಯೋಗಿಸುತ್ತಾರೆ.

ಈವರೆಗೆ ಶಿಲ್ಪದಲ್ಲಿ ಕಲಾಕೃತಿಗಳಲ್ಲಿ ಉಡುಪಿನ ದಾರಿ ಸಾಗಿದ ಪರಿಯನ್ನು ಗುರುತಿಸಿದೆವು. ಸಂಸ್ಕೃತ ಸಾಹಿತ್ಯದಲ್ಲಿ ಮತ್ತು ಕನ್ನಡ ಕಾವ್ಯಗಳಲ್ಲಿ ಸಹ ಉಡುಪಿನ ಬಗೆಗೆ ವರ್ಣನೆಗಳು ಧಾರಾಳವಾಗಿ ಬಂದಿರುವವು. ಅಲ್ಲಿಯ ಉಡುಪಿನ ಬೆಡಗನ್ನಷ್ಟು ಇನ್ನು ನೋಡುವ.

ಸಾಹಿತ್ಯದಲ್ಲಿ ಉಡಿಗೆ

ವೇದ ಕಾಲದಲ್ಲಿ ಸ್ತ್ರೀಪುರುಷರು ಉಡುವ ಬಟ್ಟೆಗೆ 'ನೀವಿ' ಎನ್ನುತ್ತಿದ್ದರು. ಸ್ತ್ರೀಯರು ಒಂದೇ ಬಟ್ಟೆಯನ್ನು ಸಮಗ್ರ ದೇಹ ಮುಚ್ಚುವಂತೆ ಉಡುತ್ತಿದ್ದರು. ಆ ಬಟ್ಟೆ ಭುಜದಿಂದ ಪಾದದವರೆಗೆ ಇರುತ್ತಿತ್ತು. ಕಲಾದೃಷ್ಟಿಯಿಂದ ಮತ್ತು ದೇಹದ ಆರೋಗ್ಯದ ದೃಷ್ಟಿಯಿಂದ ಹೊಲಿಗೆಯಿಲ್ಲದ ಬಟ್ಟೆಗಳನ್ನು ಧರಿಸುವದು ಯೋಗ್ಯವೆಂಬ ಭಾವನೆ ವೇದಕಾಲದ ಜನರಲ್ಲಿ ಇತ್ತು. ಆ ಕಾಲದ ಜನರ ಬಟ್ಟೆಗಳು ನೂಲು, ಉಣ್ಣೆ, ರೇಶಿಮೆಗಳಿಂದ ನೇಯ್ದುವಾಗಿದ್ದುವು. ಆರ್ಯರು ಬಹು ಅಚ್ಚುಕಟ್ಟಾಗಿ ಬಟ್ಟೆ ಧರಿಸುತ್ತಿದ್ದರೆಂದು ಋಗ್ವೇದದಲ್ಲಿದೆ. ಅಥರ್ವಣ ವೇದದಲ್ಲಿ, ಸೀರೆಯ ಉಲ್ಲೇಖವಿದೆ. ಮರುತನು ಕಸೀದೆಯ ಬಟ್ಟೆ ಧರಿಸಿದನೆಂಬ ವರ್ಣನೆ ಬರುತ್ತದೆ. ವೇದಕಾಲದ ಮಹಿಳೆಯರು, ಬಣ್ಣ ಬಣ್ಣದ ಬಟ್ಟೆಯನ್ನೂ ಕಸೀದೆಯ ಬಟ್ಟೆಯನ್ನೂ ಅಂಚುಳ್ಳ ಬಟ್ಟೆಯನ್ನೂ ಉಪಯೋಗಿಸುತ್ತಿದ್ದರು. ಕೆಲವು ಕಾಲದ ಅನಂತರ ಉತ್ತರೀಯವನ್ನು ಹೊದೆಯಹತ್ತಿದರು. ಕನ್ಯೆ ವಿವಾಹದ ಕಾಲಕ್ಕೆ ಎದೆಕಟ್ಟನ್ನು ಕಟ್ಟಿಕೊಳ್ಳುತ್ತಿದ್ದಳಂತೆ.

ಸೀತೆಯು ನಾರಿನ ಸೀರೆಯನ್ನೂ, ಹಳದಿ ರೇಶಿಮೆಯ ಸೀರೆಯನ್ನೂ ಉಟ್ಟ ವರ್ಣನೆ ರಾಮಾಯಣದಲ್ಲಿದೆ. ಅನಸೂಯೆ ಹಾಗೂ ಸೀತೆ ಎದೆಕಟ್ಟನ್ನು ಕಟ್ಟಿಕೊಳ್ಳುತ್ತಿದ್ದರಂತೆ. ಅದರ ಮೇಲೆ ಅನೂಸೂಯೆಯ ಹೆಸರು ಹಾಕಲಾಗಿತ್ತಂತೆ. ದ್ರೌಪದಿಯನ್ನು ಕೌರವರು ರಾಜಸಭೆಗೆ ಬರಬೇಕೆಂದು ಹೇಳಿ ಕಳುಹಿಸಿದಾಗ 'ತಾನು ರಾಜಸಭೆಗೆ ಬರುವಂತಿಲ್ಲ. ಒಂದೇ ಬಟ್ಟೆಯನ್ನುಟ್ಟಿದ್ದೇನೆ' ಎಂದು ಹೇಳುತ್ತಾಳೆ. ಮಹಾಭಾರತದ ಕಾಲಕ್ಕೆ ಅರಸು ಮನೆತನದ ಮಹಿಳೆಯರು ಸೀರೆಯನ್ನುಟ್ಟು ಕುಪ್ಪಸ ತೊಡುತ್ತಿದ್ದರು. ಮೇಲೊಂದು ಉತ್ತರೀಯವನ್ನು ಹೊದೆಯುತ್ತಿದ್ದರು. ದಾಸಿಯರು ಕೇವಲ ಒಂದು ಸೀರೆ ಉಡುತ್ತಿದ್ದರು.

ಭವಭೂತಿಯ 'ಮಾಲತೀ ಮಾಧವ'ದಲ್ಲಿ ಮಾಲತಿ ಉಟ್ಟ ಚಿಕ್ಕೆ ಚಿಕ್ಕೆಯ ಬಟ್ಟೆ ಹಾವಿನ ಪೊರೆಗಿಂತ ಹಗುರಾಗಿತ್ತೆಂದು ಬಣ್ಣಿಸಿದೆ. ತಲೆಗೆ ವಜ್ರಾಭರಣಗಳನ್ನು ಧರಿಸಿದ್ದು ಸೊಂಟದಿಂದ ಮೊಳಕಾಲಿನವರೆಗೆ ಬಣ್ಣದ ಚಿತ್ರಗಳುಳ್ಳ ಬಟ್ಟೆಗಳನ್ನು

ಉಟ್ಟಿದ್ದಳಂತೆ. ಮಾಲತಿ ಮುಖಕ್ಕೆ ಹೊದ್ದುಕೊಂಡಿದ್ದ ತಿಳಿ ನೀಲಿಬಟ್ಟೆಯ ಜಾಳಿಗೆಯಲ್ಲಿ ಆಕೆಯ ಮುಖ ಕಮಲದಂತೆ ಕಂಡದ್ದರಿಂದ ಜೇನ್ನೊಣಗಳು ಆವಳ ಬೆನ್ನು ಹತ್ತಿದವಂತೆ.

ಓರ್ವ ಕವಿ ಸಾವಿತ್ರಿಯನ್ನು ಈ ರೀತಿ ವರ್ಣಿಸಿದ್ದಾನೆ. ಸಾವಿತ್ರಿ ಬ್ರಹ್ಮನ ಬಳಿ ನಿಂತಾಗ ಶುಭ್ರವಾದ, ನಯವಾದ, ಹೊಳಪುಳ್ಳ ಬಿಳಿಯ ಬಟ್ಟೆಯನ್ನು ಉಟ್ಟಿದ್ದಳು. ಆ ಬಟ್ಟೆಯನ್ನು ಗಿಡದ ತೊಗಟೆಯಿಂದ ತೆಗೆದ ನಾರಿನಿಂದ ಮಾಡಿದ್ದರು. ಕಮಲದ ದೇಟಿನ ನಾರಿನಿಂದ ನೇಯ್ದ ಬಟ್ಟೆಯನ್ನು ಎದೆಗೆ ಕಟ್ಟಿಕೊಂಡಿದ್ದಳು. ಆ ಎದೆಗಟ್ಟಿನ ಗಂಟು ಸ್ವಸ್ತಿಕ ಚಿಹ್ನದಂತಿತ್ತು. ಬಿಳಿಯ ರೇಶಿಮೆಯ ಉತ್ತರೀಯ ಜನಿವಾರದಂತೆ ಭುಜದಿಂದ ಕೆಳಗೆ ಇಳಿಬಿದ್ದಿತ್ತು.

ಶಕುಂತಲೆ ಗಂಡನ ಮನೆಗೆ ಹೋಗುವಾಗ ಮಂಗಳಕರವಾದ ಬಿಳಿಯ ರೇಶಿಮೆಯ ಎರಡು ಬಟ್ಟೆಗಳನ್ನು ಧರಿಸಿದ್ದಳೆಂದೂ ಆ ಬಟ್ಟೆಗಳನ್ನು ಅರಣ್ಯದ ಮರಗಳು ಅವಳಿಗೆ ಕಾಣಿಕೆ ಕೊಟ್ಟಿದ್ದುವೆಂದೂ ವರ್ಣಿಸಲಾಗಿದೆ. ವಸಂತಸೇನೆ ಮಳೆಯಲ್ಲಿ ತೋಯಿಸಿಕೊಂಡು ಚಾರುದತ್ತನ ಮನೆಗೆ ಬಂದಾಗ, ಆತನು ವಿದೂಷಕನಿಗೆ 'ಉತ್ತಮವಾದ ಎರಡು ಬಟ್ಟೆಗಳನ್ನು ತಂದುಕೊಡು'' ಎಂದು ಹೇಳುತ್ತಾನೆ. ಇದರಿಂದ ಆ ಕಾಲದ ಮಹಿಳೆಯರು ಎರಡು ಬಟ್ಟೆಗಳನ್ನುಡುತ್ತಿದ್ದರೆಂದು ತಿಳಿದುಬರುತ್ತದೆ.

ಬಾಣನು 'ಕಾದಂಬರಿ' ಯಲ್ಲಿ ಕಾದಂಬರಿ ತೆಳ್ಳಗಿನ ಬಿಳಿ ರೇಶಿಮೆ ಬಟ್ಟೆಯನ್ನು ಧರಿಸಿದ್ದಳೆಂದು ಬರೆಯುತ್ತಾನೆ. ಮಗುದೊಂದು ಸಂದರ್ಭದಲ್ಲಿ ಪಾದದವರೆಗೆ ನೀಲಿಬಣ್ಣದ ನಿಲುವಂಗಿಯನ್ನು ಧರಿಸಿದ್ದಳೆಂದೂ ಮೇಲೆ ಕೆಂಪು ಬಣ್ಣದ ಮುಸುಕನ್ನು ಹೊದ್ದಿದ್ದಳೆಂದೂ ಹೇಳಲಾಗಿದೆ. ಮಹಾಶ್ವೇತೆ ಬಿಳಿ ರೇಶ್ಮೆಯ ವಸ್ತ್ರವನ್ನು ಪಾದದವರೆಗೆ ಧರಿಸಿ ಮೇಲೆ ಮೇಖಲೆ ಧರಿಸಿದ್ದಳಂತೆ. ಹರ್ಷನ ರಾಣಿ ರತ್ನಾವಳಿ ಮದನಮಹೋತ್ಸವಕ್ಕೆ ಹೊರಟಾಗ ಕೇಸರಿ ಬಣ್ಣದ ಉಡುಪನ್ನು ಧರಿಸಿದ್ದಳಂತೆ. ಇನ್ನೊಂದೆಡೆಗೆ ಓರ್ವ ನಾರಿಯುಟ್ಟ ಚೀನದ ರೇಶ್ಮೆಯ ಬಟ್ಟೆ ಗಾಳಿಗೆ ಹಾರಾಡುತ್ತಿತ್ತೆಂದು ವರ್ಣಿಸಲಾಗಿದೆ. ಹರ್ಷನ ತಾಯಿ ಯಶೋಮತಿ ಗಂಡ ಸತ್ತನಂತರ ಕೇಸರಿ ಬಣ್ಣದ ಎರಡು ತುಂಡು ಬಟ್ಟೆಗಳನ್ನು ಧರಿಸುತ್ತಿದ್ದಳಂತೆ.

ಮೊದಲಿನ ಕಾಲದ ಮಹಿಳೆಯರು ಸಂದರ್ಭಕ್ಕೆ ತಕ್ಕಂತೆ ಬಟ್ಟೆಗಳನ್ನು ಧರಿಸುತ್ತಿದ್ದರು. ಧಾರ್ಮಿಕ ಸಮಾರಂಭಗಳಲ್ಲಿ ಕೆಲವೊಂದು ಬಣ್ಣದ ಸೀರೆಗಳನ್ನುಡುವ ಸಂಪ್ರದಾಯವಿತ್ತು. ಮತ್ತು ಋತುಮಾನಕ್ಕೆ ತಕ್ಕಂತೆ ಅವರ ವೇಷದಲ್ಲಿ ಬದಲಾವಣೆಯಾಗುತ್ತಿತ್ತು. ಮದುಮಕ್ಕಳು ಬಿಳಿಯ ಸೀರೆಯುಟ್ಟು ಕೆಂಪು ಬಣ್ಣದ ತೆಳುವಾದ ಮುಸುಕನ್ನು ಧರಿಸುತ್ತಿದ್ದರು.

ಧಾರ್ಮಿಕ ಕಾರ್ಯಗಳಲ್ಲಿ ಬಿಳಿ ರೇಶಿಮೆಯ ಬಟ್ಟೆಯನ್ನು ಧರಿಸುತ್ತಿದ್ದರು. 'ವಧೂದುಕೂಲಂ ಕಲಹಂಸಲಕ್ಷಣಂ'' ಎಂಬ ಮಾತು ಬರುತ್ತದೆ. ಹಂಸದಂತೆ ಬಿಳುಪಾದ ಬಟ್ಟೆಯನ್ನೂ ಹಂಸದ ಚಿತ್ರವುಳ್ಳ ಬಟ್ಟೆಯನ್ನೂ ಧರಿಸುತ್ತಿದ್ದರು. ಬಿಳಿಯ ಬಣ್ಣ ಯಾವಾಗಲೂ ಶುಭದ ಮತ್ತು ಪಾವಿತ್ರ್ಯದ ದ್ಯೋತಕವಾಗಿದೆ. ತಾಯಿಯಾದವಳು ಹಳದಿ ಬಟ್ಟೆ ಧರಿಸುವ ಸಂಪ್ರದಾಯವಿತ್ತು. ಚೊಚ್ಚಿಲ ಬಾಣಂತಿ 'ಹರಿದ್ರವಸನಧಾರಿಣಿ' ಯಾಗುತ್ತಿದ್ದಳು. ವಿಧವೆಯರು ಕುಸುಬೆಹೂವಿನ ಬಣ್ಣದ ಸೀರೆಯನ್ನು ಉಡುತ್ತಿದ್ದರು.

ವಸಂತ ಮಾಸದಲ್ಲಿ ಮಹಿಳೆಯರು ಕೆಂಪು ಇಲ್ಲವೆ ಕೇಸರಿ ಬಣ್ಣದ ಸೀರೆಯನ್ನು ಉಡುತ್ತಿದ್ದರು; ಕೇಶರ ಬಣ್ಣದ ಎದೆಕಟ್ಟನ್ನು ತೊಡುತ್ತಿದ್ದರು. ಸೃಷ್ಟಿಯೆಲ್ಲ ಬಗೆಬಗೆಯ ಬಣ್ಣದ ಹೂಗಳ ಆಗರವಾಗಿರುವಾಗ, ಹೆಣ್ಣು ಮಕ್ಕಳಿಗೂ ಬಣ್ಣಬಣ್ಣದ ಸೀರೆಗಳಿಂದ ಅಲಂಕೃತರಾಗುವ ಆಸೆಯಾಗುವುದು ಸ್ವಾಭಾವಿಕ. 'ರಕ್ತಮುಸುಕನ್ನು' ಮಹಿಳೆಯರು ಧರಿಸುತ್ತಿದ್ದರಂತೆ. ರಕ್ತ ಮುಸುಕು ಅಂದರೆ ಕೆಂಪು ಇಲ್ಲವೆ ಕೇಶರ ಬಣ್ಣದ ಬಟ್ಟೆ. ಚಳಿಗಾಲದಲ್ಲಿ ಕಿತ್ತಳೆ ಬಣ್ಣದ ಬಟ್ಟೆಗಳನ್ನೂ, ಮಳೆಗಾಲದಲ್ಲಿ ಕುಂಕುಮ ಇಲ್ಲವೆ ಕೇಶರ ಬಣ್ಣದ ವಸ್ತ್ರಗಳನ್ನೂ ಬೇಸಿಗೆ ಕಾಲದಲ್ಲಿ ತೆಳುವಾದ ಬಿಳಿ ಬಣ್ಣದ ಬಟ್ಟೆಯನ್ನೂ ಧರಿಸುತ್ತಿದ್ದರು. ಬೇಸಿಗೆಯಲ್ಲಿ ಉಡುವ ಬಟ್ಟೆಗೆ ಮುತ್ತನ್ನು ಹಚ್ಚಿರುತ್ತಿದ್ದರು. ಮುತ್ತು ಹಚ್ಚಿದ ಬಟ್ಟೆಯನ್ನು ಎದೆಕಟ್ಟಾಗಿ ಉಪಯೋಗಿಸುತ್ತಿದ್ದರು. ಅಭಿಸಾರಿಕೆಯರು ನೀಲಿ ಬಣ್ಣದ ಬಟ್ಟೆಗಳನ್ನು ಉಡುತ್ತಿದ್ದರಂತೆ. ಗೃಹಿಣಿಯರು ರಾತ್ರಿ ಕಾಲದಲ್ಲಿ ನೀಲಿ ಬಣ್ಣದ ಅರಿವೆಯನ್ನು ಹಾಕಿಕೊಳ್ಳುತ್ತಿದ್ದರಂತೆ.

ಸೊಂಟದಿಂದ ಪಾದದವರೆಗೆ ಧರಿಸುವ ಬಟ್ಟೆಗೆ ಅಂತರೀಯ, ಅಂಬರ ಜಘನಾಂಶುಕ, ವಸನ ವಸ್ತ್ರಂ, ಪರಿಧಾನ ಎನ್ನುತ್ತಿದ್ದರು. ಎದೆಕಟ್ಟಿಗೆ ಕಂಚುಕ,

ಕಂಚುಲಿಕ, ಕೂರ್ಪಾಸ, ಕೂರ್ಪಾಸಕ, ಸ್ತನಾಂಶುಕ ಎನ್ನುತ್ತಿದ್ದರು. ಕಂಚುಕ ಎಂದರೆ ದೇಹದ ಅಳತೆಗೆ ಸರಿಯಾಗಿ ಹೊಲಿದ ವಸ್ತ್ರ ಕೂರ್ಪಾಸ ಶಬ್ದದಿಂದ ಕುಪ್ಪಸ ಹುಟ್ಟಿದೆ.

ಉತ್ತರೀಯವನ್ನು ತಲೆಯ ಮೇಲೆ ಹೊದೆಯುತ್ತಿದ್ದರು. ಅದು ಬೆನ್ನ ಮೇಲಿಂದ ಹಾಯ್ದು ಎರಡು ಕೈಗಳ ಮೇಲಿಂದ ಪಾದದವರೆಗೆ ಇಳಿಬೀಳುತ್ತಿತ್ತು. ಆದಕ್ಕೆ ಅವಗುಂಠಣ, ಮುಖಪಟ, ಶಿರೋವಸ್ತ್ರ ಮತ್ತು ಉತ್ತರೀಯ ಎಂದು ಕರೆಯುತ್ತಿದ್ದರು. ಈ ಎಲ್ಲ ಆಧಾರಗಳಿಂದ ಮೊದಲಿನ ಮಹಿಳೆಯರು ಹವಾಮಾನಕ್ಕೆ ಮತ್ತು ಪ್ರಸಂಗ ವಿಶೇಷಕ್ಕೆ ತಕ್ಕಂತೆ ಬಟ್ಟೆ ಧರಿಸುತ್ತಿದ್ದರೆಂದು ತಿಳಿಯುತ್ತದೆ.

ಕನ್ನಡ ಕಾವ್ಯಗಳಲ್ಲಿ

ಕನ್ನಡ ಕಾವ್ಯಗಳಲ್ಲಿ ಆಭರಣಗಳ ವರ್ಣನೆ ಹೇರಳವಾಗಿ ದೊರೆಯುತ್ತದೆ. ಮೊದಲಿನ ಕಾಲದ ಜನರು ಬಟ್ಟೆಗಿಂತ ಆಭರಣಗಳಿಗೆ ಹೆಚ್ಚಿನ ಮಹತ್ತ್ವ ಕೊಡುತ್ತಿದ್ದರೆಂದು ಇದರಿಂದ ತೋರುತ್ತದೆ. ಕೆಲವೊಂದೆಡೆ ಬಟ್ಟೆಗಳ ವರ್ಣನೆ ದೊರೆಯುತ್ತದೆ. ಆದರೆ ಜನಪದಗೀತಗಳಲ್ಲಿ ಹೆಚ್ಚಾಗಿ ಸೀರೆಯ ವರ್ಣನೆ ನಮಗೆ ಸಿಗುತ್ತದೆ. ಕಾವ್ಯಗಳಲ್ಲಿ ದೊರೆತ ವರ್ಣನೆಗಳು ಇಂತಿವೆ:

'ಉತ್ತಮದ ಚಿತ್ರಾಂಬರಗಳ
ಕತ್ತುರಿಯ ನೆರೆನೊಸಲ ತಿಲಕದ
ಮತ್ತಗಜಗಮನೆಯರು ಬರುತಿರ್ದರು ವಿಳಾಸದಲಿ''

ಎಂಬ ಕವಿವಾಣಿಯಿಂದ ಪುರಾತನ ಮಹಿಳೆಯರು ಚಿತ್ರಾಂಬರಗಳನ್ನು ಎಂದರೆ ಚಿತ್ರ ಚಿತ್ರವಾದ ವಸ್ತ್ರಗಳನ್ನು ಧರಿಸುತ್ತಿದ್ದರೆಂದು ತಿಳಿದುಬರುತ್ತದೆ. 'ಧವಳಾಂಬರಗಳ ನಾರಿಯರು ನಡೆತಂದರಾಮಾಯೆಯ ಕೂಡ'' ಎಂಬ ವರ್ಣನೆ ಇದೆ. ಈ ಎರಡು ವರ್ಣನೆಗಳು ಚಾಮರಸನ''ಪ್ರಭುಲಿಂಗಲೀಲೆ' ಯಲ್ಲಿವೆ.

ರಾಜಶೇಖರ ವಿಳಾಸದಲ್ಲಿ 'ನಿರಿವಿಡಿದುಟ್ಟು ಚೀನ ಲಲಿತಾಂಬರಮಂ. ಪೊಸಮುತ್ತುದೊಟ್ಟು ಮೇಣೆಸೆಯುಗುವ ವಜ್ರದೋಲೆಗಳ ಪಾಲೆಗಳ್ತಳೆ

ದುಣ್ಪೆಗೆಯ್ದುವರ'' ಬಗೆಗೆ ಬಗೆಯಲಾಗಿದೆ. 'ತೊಳಪೆಳೆ ಮುತ್ತಿನ ತೆತ್ತಿಸಿದ ಬಲ್ಮೊಲೆಕಟ್ಟನ್ನು'' ಕಟ್ಟಿದವರೂ 'ಬಿಳಿಯಸಪುರಮನುಟ್ಟು ಪೊಳೆವಂದಿಗೆಯನ್ನಿಟ್ಟು ಸಡಗರಿಸಿ'' ಹೊರಟವರೂ ಇದ್ದಾರೆ. 'ಉಟ್ಟ ಧವಳಾಂಬರದ ಸುಲಿಪಲ್ಲ ಮೈಯೊಳಳವಟ್ಟ ಗಂಧದ, ಮುಡಿದ ಮಲ್ಲಿಗೆಯ, ನಗೆಮೊಗದ, ತೊಟ್ಟಮುತ್ತಿನ ತೊಡಿಗೆಗಳ ಬೆಳಗು ದೆಸೆಯ ಪಸರಿಸಿತ್ತು,'' ಎಂಬ ವರ್ಣನೆ ಸೋಮನಾಥ ಚಾರಿತ್ರ್ಯದಲ್ಲಿದೆ. 'ಮೋಹನತರಂಗಿಣಿ' ಯಲ್ಲಿ ವಿಜಯ ನಗರದ ಅರಸರ ಕಾಲದ ಮಹಿಳೆಯರು 'ಚಲ್ಲಣ, ಕಾಸೆ, ಕುಪ್ಪಸ, ಕರ್ಣಾಂತರದಲ್ಲಿ ಮೆರೆವ ಹೊನ್ನಹೂಗಳುಳ್ಳವರು' ಆಗಿದ್ದರೆಂದು ತಿಳಿಯುತ್ತದೆ.

'ವರಚಂದ್ರಿಕೆಯ ಪಾವುಡಕೆ ಶೋಭಿಸುವ ಪೊಂ
ಬರೆಹದ ಶುಭ್ರದೂಟವ
ಸ್ಮರಬಾಣಗರಿಯಂತೆ ನಿರಿವಿಡಿದುಡಿಸಿದರ್
ದರಹಾಸಮುಖಿಗೆ ಸಂಭ್ರಮದೆ''.....ಎಂಬ ವರ್ಣನೆಯೂ ಇದೆ.

ಇನ್ನೊಂದು ಕಾವ್ಯದಲ್ಲಿ ಹಾಲ್ನೊರೆಯಂತೆ ಶುಭ್ರವಾದ ಚೀನಾಂಬರವನ್ನು ಓರ್ವ ರಾಣಿಗೆ ಉಡಿಸಿದರೆಂಬ ಮಾತು ಬರುತ್ತದೆ.

ಜನಪದಗೀತಗಳಲ್ಲಿ ಕರಿಯ ಸೀರೆಯ ವರ್ಣನೆ ಬಹಳ ಸಲ ಬರುತ್ತದೆ. ೧೮ ಮತ್ತು ೧೯ ನೆಯ ಶತಮಾನದ ಮಹಿಳೆಯರು ಕಸೂತಿ ಸೀರೆಯನ್ನು ಮೆಚ್ಚುತ್ತಿದ್ದರು. ಕರಿಯ ಚಂದ್ರಕಾಳಿ ಸೀರೆಗಳನ್ನು ಕಸೂತಿ ಇಲ್ಲದೆ ಉಡುತ್ತಿರಲಿಲ್ಲ. 'ಕಾಡಿಗೆಗಣ್ಣಿನ ಸೀರಿ, ಕರಿಯ ಚಂದ್ರಕಾಳಿಸೀರಿ ನಾವಕ್ಕತಂಗೇರುಟ್ಟಿದ್ದೇವ''ಎಂಬುದಾಗಿಯೂ, 'ಕರಿಯ ಸೀರಿಯನ್ನುಟ್ಟು ಕೆರೆಯ ನೀರಿಗೆ ಹೋದೆ, ಬೆಲೆಯ ಕೇಳ್ಯಾರ ಬಲುಮಂದಿ''ಎಂಬುದಾಗಿಯೂ ಗರತಿಯರು ಹಾಡಿದ್ದಾರೆ. ಇದರಿಂದ ನಮ್ಮ ನಾಡಿನ ಜನಸಾಮಾನ್ಯ ಹೆಂಗಳೆಯರಿಗೆ ಕಪ್ಪು ಬಣ್ಣದ ಸೀರೆ ಹೆಚ್ಚು ಮೆಚ್ಚಿಕೆಯದಾಗಿತ್ತು ಎಂದು ತೋರುತ್ತದೆ.

ಇದಲ್ಲದೆ ಜನಪದಗೀತೆಯಾಗಿರುವ 'ಮಲ್ಲಸರ್ಜ ಕಾವ್ಯ'ದಲ್ಲಿ ಕಿತ್ತೂರ ಚೆನ್ನಮ್ಮ ರಾಣಿಯ ಅಲಂಕಾರದ ವಿಷಯದಲ್ಲಿ-

'ಮುತ್ತಿನ ಸೆರಗಿನ ಸೀರೆಯನುಟ್ಟು
ಹತ್ತು ಹೊನ್ನಿನ ಜರದ ಕುಪ್ಪಸ ತೊಟ್ಟು

ಕಸ್ತೂರಿ ತಿಲಕದ ಬಟ್ಟುಗಳಿಟ್ಟು

ವಸ್ತ್ರಾಭರಣವ ಜೋಡಿಸಿಯುಟ್ಟು

ಮುತ್ತಿನ ಸೆರಗಿನ ಸೀರಿ ಜರತಾರ

ರತ್ನ ಖಚಿತವಾದ ಹೆಳಲಬಂಗಾರ'

ಎಂಬ ವಿಷಯವು ಸುಂದರವಾಗಿ ಬರುತ್ತದೆ. ಇದರಿಂದ ಅಂದಿನ ನಮ್ಮ ತಾಯಂದಿರ, ಅಕ್ಕತಂಗಿಯರ ವೇಷ ವೈವಿಧ್ಯ, ಅದರ ಸೊಬಗು, ರೀತಿ ನಮಗೆ ತಿಳಿಯದೆ ಇರದು.

ಕರ್ನಾಟಕದ ಕಸೂತಿಕಲೆ ಭಾರತದಲ್ಲೆಲ್ಲ ಪ್ರಸಿದ್ಧವಾಗಿದೆ. ಮೊದಲಿನ ಕಾಲದ ರಸಿಕ ಮಹಿಳೆಯರು ಕಸೂತಿ ಹಾಕದೆ ಸೀರೆ, ಕುಪ್ಪಸಗಳನ್ನು ಉಡುತ್ತಿರಲಿಲ್ಲ. ಕರಿಯ ವರ್ಣದ ಸೀರೆಗೆ ಅದರ ತುಂಬೆಲ್ಲ ಕಸೂತಿ ಹಾಕುತ್ತಿದ್ದರು. ಉಳಿದ ಬಣ್ಣಗಳ ಸೀರೆಯ ಸೆರಗಿಗೆ ಸುಂದರವಾದ ಹೂಗಳ, ಪಕ್ಷಿಗಳ ಕಸೂತಿ ಹಾಕುತ್ತಿದ್ದರು. ಕರಿಯ ಸೀರೆಯ ಸೆರಗಿನ ತುದಿಗೆ, ಮೇಲ್ಗಡೆಯಲ್ಲಿ ಒಳಗಡೆಯಲ್ಲಿ ಕಸೂತಿಯೇ ತುಂಬಿರುತ್ತಿತ್ತು.

'ಮಗ್ಗಿ ತೆಗೆಸಿ ಒಗಸೇದ ಕುಬಸಾ'' ಎಂದೂ

'ಕಸೂತಿ ಕುಬಸಾ ಕೈಯಲ್ಲಿ ಕನ್ನಡಿ'' ಹಿಡಿದ ಹೆಂಗಳೆಯರ ವರ್ಣನೆಯೂ ಇವೆ.

'ಅರಸೇರುಡುವುದು ಅರಸಿನ ಪತ್ತಲು

ನಾರೇರುಡುವುದು ದಾರೀ ಪತ್ತಲು

ನಲ್ಲೇರುಡುವುದು ಮಲ್ಲೀಗೆ ಗರಿ''

ಎಂದು ನಮ್ಮ ನಾಡಿನ ಗರತಿಯರು ಬಗೆದುಂಬಿ ಹಕ್ಕಿಯಂತೆ ಹಾಡುವಾಗ ಸೀರೆಯ ವಿಷಯವಾಗಿ, ಅವುಗಳ ವರ್ಣ, ತರಗತಿಯ ವಿಷಯವಾಗಿ ಇರುವ ಜ್ಞಾನವನ್ನು ವ್ಯಕ್ತಪಡಿಸುವುದಿಲ್ಲವೇ?

ಜನಪದಗೀತೆಗಳಿಂದ ಸೀರೆಯ ಬಣ್ಣ, ಹೆಸರು ಮತ್ತು ಕೆಲವು ಕಡೆಗಳಲ್ಲಿ ಯಾವ ಊರ ಸೀರೆ ಪ್ರಸಿದ್ಧವಾಗಿವೆ, ಮತ್ತು ಏಕೆ ಎಂಬುದನ್ನೂ ತಿಳಿಯುತ್ತೇವೆ:

'ಥರದಿ ತೋರುವ ಪರಿಪರಿ ಸೀರಿ, ಉಡುತರ ಸೀರಿ, ಸೆರಗು ಜರತಾರಿ, ಪುಲಾಣಿ ಬಣ್ಣ, ಕಸಕಸಿ ಅಂಚಿನ ಸೀರಿ, ಮುರಿಗಿ ಕಡ್ಡಿ, ರೇಶಿಮೆ ಅಂಚಿನ ಸಾಸಿವೆ ಬಣ್ಣದ ಸಿಂಧುಪಟ್ಟಾವಳಿ ಕುಸುಂಬಿ ಸೀರಿ, ಮಂಗಳಗೀರು ಬಂಗಾರ ಬಳಿ,

ನಾಮಧಾರಿ ಸೀರಿ, ಪೀತಾಂಬರ ಜವುಳಿ, ಗಟ್ಟಿ ಪೀತಾಂಬರ ಲವಂಗ ಕಡ್ಡಿ, ರಂಗು ರಾಜ್ಯೇದ ಮ್ಯಾಗ ಚಂದಾಗಿ ತೋರುವ ಸೀರಿ, ನಾಡ ಗದಗಿನ ತಾಡಪತ್ತ್ರಿ ತಾಡಗಲ್ಲ ತಾಡಂಬೆ ಸೀರಿ, ಮೂಡಲ ದೇಶದ ಕಡಪಜೋತಿ ಕಂದಗಲ್ಲ ನಂದನಾಬಗೆಯು ಕುಂದಣ ಕೆಚ್ಚಿದ ಹೊಸ ಮುತ್ತಿನ ಸೀರಿ ಹರಿಚಿತ್ರವಿಚಿತ್ರದ ಮುತ್ತಿನ ಸೆರಗು ಕಲೆಬಂಧಕಟ್ಟು ಗುಳೇದಗುಡ್ಡದ ಗುಲಗಂಜಿ ಬಣ್ಣ ಹಮ್ಮಿಗನೂರು ಜನಿವಾರಗೀರು ತುಂಗತೀರದ ರಂಗರಾಜ್ಯದ ಮ್ಯಾಲೆ ರಂಗ ಪರಂಗು ಚಿತ್ರದ ಮಾಲಿ॥ ನೊಳು ಸುಳಿವ ಸೇವಂತಿಗೆ ಕಂಬಾವಳಿ, ಕವಳಿ ಹೂವು ಬಿಳಿ ಸ್ಯಾವಂತಿಗೆ, ಮಧುರಿಸೀರಿ, ಪದವಿಗಿ ದಿಕ್ಕಿಗಿ ಬಂದಾವು ನಾನಾ ಬಣ್ಣದ ಸೀರಿ। ಕದವು ಕನ್ನಡಿ ಬಣ್ಣದ, ತಳತಳಿ ಹೊಳೆಪ ಬಿಳಪನಾಗರ ಜಳಪಿಸಿ ತೋರ್ಯಾವು ಲಿಂಗಮುದ್ದರಿ। ಹೊಳಪಿಸಿ ತೋರ್ಯಾವು ಬಾಳೆಪಟ್ಟೇವು। ಚಂದಾಗಿ ತೋರ್ಯಾವು ಚಂದರಕಾಳಿ। ಗಟ್ಟಿ ಪೈಠಣಿ ಹಸಿರು ಬಣ್ಣ ಹಾವಿನ ಗೀರು ಹುಲ್ಲಗಿರು ಉಮನಾಬಾದಿ ಚಿತ್ರಚಿತ್ರ ಮುತ್ತಿನ ಸೆರಗು ನವಲಗರಿ ಲಿಂಬಿ ಬಣ್ಣದ ತೆಲಗಾರು ನೇದಸೀರಿ'' ಗಳು ಮೊದಲಿನ ಕಾಲಕ್ಕೆ ಪ್ರಸಿದ್ಧವಾಗಿದ್ದವೆಂದು ತೋರುತ್ತವೆ. ಸೀರೆಯ ಹೆಸರುಗಳಿಂದ ಇನ್ನೊಂದು ಜಾನಪದ ಗೀತೆಯಿದೆ. ಇದರಲ್ಲಿಯೂ ಅನೇಕ ಬಗೆಯ ಸೀರೆಯ ವರ್ಣನೆಗಳು ಬರುತ್ತಿವೆ. ಕಂಚಿ ಹೂವಿನ ಸೀರಿ, ಕಮಳದೂವಿನ ಸೀರಿ, ಅಚ್ಚಿನ ಸೀರಿ, ಹಾಂವ ಉಪ್ಪಾಡಿಸೀರೆ, ವರಹಾದ ಹೂವಿನ ಸೀರಿ। ಇರವಂತಿ ಹೂವಿನಸೀರಿ। ಜರತಾರಿ ಸೀರಿ। ಮಹೇಶ್ವರಿ ಸೀರಿ। ಹಾಗಲ ಚಿಕ್ಕಿ। ಮುಗಿಲ ಬಣ್ಣದ ಸೀರಿ। ಜರತಾರಿ ಸೀರಿ। ವೈಯ್ಯಾರಿ ದಿನದಲ್ಲಿ ನಿರಿಗಳು ಕಾಲಲ್ಲಿ ಚಿಮ್ಮುತ್ತಿದ್ದವು. ಜ್ಯೋತಿಯಂ ತೊಳೆಯುವುದ ಮೋತಿಚೂರಿನ ಸೀರಿ, ಹೊಳೆವಚಂದ್ರ ಸೀರಿ, ಬುಟ್ಟಿ ಜರತಾರಿ ಸೀರಿ, ಬುಗಡಿ ಜರತಾರಿ ಅಂಚು, ಪಟ್ಟಿಕೊಂಡಿಗೆ, ವಜ್ರ ಪದಕಚ್ಚಿದ ಸೀರಿ, ಪುತ್ತಳಿಸರ ಸೀರಿ, ವುರಾಣಿ ಪೈಠಣ ಸೀರಿ, ರತ್ನ ಮಾಣಿಕದ ಅಂಚು, ಪಟ್ಟಾವಳಿಯ ಸೆರಗು, ಕುತನೀಯ ಕುಬ್ಬಸ, ಕುಸಬಿ ಹೂವಿನ ಸೀರಿ, ಕಸಕಸಿ ಅಂಚಿನ ಸೀರಿ, ಮದ್ರಾಸ್ ಮಲಮಲ, ಮುಂಬೈ ಸೀರಿ, ಬೆಂಗಳೂರಿನಿಂದ ಮಾಡಿಸಿ ತರಸಿದ ಚಂದ್ರಶಯನ ಸೀರಿ। ಕೆಂಪು ಹೂವಿನ ಚೀಟು, ಕರಿಯ ಹೂವಿನ ಚೀಟು, ಕೊಂಡಿಪಪ್ಪಳಿ, ಗಂಗಾಜಮುನಾಕ್ಯಾದಿಗಿ ಗರಿಸೀರಿ, ಕವಳಿಹೂವಿನ ಸೀರಿ ಕುರುಡು

ಕಣ್ಣಿನ ಸೀರಿ, ನಾಗಪುರಿ ಸೀರಿ, ರಾಗಿ ಬಣ್ಣದ ಸೀರಿ, ಪುತ್ತಳಿ ದಡಿ, ದೇವನೂರ ಸೀರಿ, ಚಿತ್ರವಿಚಿತ್ರ ಸೀರಿ, ಬೆಳಗಾಂವಿ ಸೀರಿ, ನಾಸಿಕದ ಸೀರಿ, ಗೋವೆ ಕುಮಟಾದ ಸೀರಿ, ಗೋಕಾಕದ ಸೀರಿ, ರಬಕವಿ ಸೀರಿ, ಲಿಂಬಾವಳಿ ಬಿಂಗಹಚ್ಚಿದ ಸೀರಿ, ಅಬರಂಗದ ಕುಪಸ ತೊಟ್ಟು, ಗೊಡಂಬಿ ಪೈಠಣಿ ಆಕಳ ಕೊರಳ ಸೀರಿ''-ಹೀಗೆ ಬಗೆ ಬಗೆಯ ಸೀರೆಗಳ ವರ್ಣನೆಯಿದೆ.

ಈ ಹಾಡುಗಳಿಂದ ಯಾವ ಯಾವ ಊರಿನ ಸೀರೆಗಳು ಮೊದಲಿನ ಕಾಲದಲ್ಲಿ ಪ್ರಸಿದ್ಧವಾಗಿದ್ದುವೆಂದು ತಿಳಿದುಬರುತ್ತದೆ. ಇಂದಿಗೂ ಮಧುರಾ, ನಾಗಪುರ, ಬೆಂಗಳೂರು, ಗದಗ, ಗುಳೇದಗುಡ್ಡ, ರಬಕವಿ, ಇಳಕಲ್ಲು, ಖಂಭಾವತಿ ಮುಂತಾದ ಸ್ಥಳಗಳ ಸೀರೆಗಳು ಭಾರತದಲ್ಲೆಲ್ಲ ಹೆಸರು ಗಳಿಸಿವೆ. ಆಗಿನ ಕಾಲದ ಮಹಿಳೆಯರಿಗೆ ವಿವಿಧ ಬಣ್ಣದ ಚಿತ್ರವಿಚಿತ್ರ ಸೀರೆಗಳನ್ನು ಉಡುವ ಒಲವಿತ್ತೆಂದು ಕಂಡುಬರುತ್ತದೆ. ಸೀರೆಯ ಸೆರಗಿಗೆ ಮುತ್ತುಗಳನ್ನು ಹಚ್ಚುತ್ತಿದ್ದರೆಂದು ತಿಳಿದುಬರುತ್ತದೆ. ಕರಿಯ ಚಂದ್ರಕಾಳಿ ಸೀರೆಗಳನ್ನು ಕಸೂತಿ ಹಾಕಿಯೇ ಉಡುತ್ತಿದ್ದರು. ಕರಿಯ ಸೀರೆಯಲ್ಲಿ ಕನ್ನಡಿ ಕೂಡಿಸಿ ಹೆಣೆಯುತ್ತಿದ್ದರು. ಕದಪು ಕದಪು ಕನ್ನಡಿ ಸೀರೆಯ ವರ್ಣನೆ ಇದಕ್ಕೆ ಸಾಕ್ಷಿ. ಪುರಾತನಕಾಲದ ಕನ್ನಡಿ ಹಚ್ಚಿದ ಕರಿಯ ಸೀರೆ, ಕುಪ್ಪಸಗಳು ನೋಡಲು ಇಂದಿಗೂ ದೊರೆಯುತ್ತವೆ. ಬಿಳಿ ಹಳದಿ ರೇಶ್ಮೆಯ ಮಧ್ಯದಲ್ಲಿ ಹೊಳೆಯುವ ಕನ್ನಡಿಯಿಟ್ಟು ಕಸೂತಿ ಹಾಕಿದ ಕರಿಯ ಸೀರೆ ಸುಂದರವಾಗಿ ಕಾಣುತ್ತದೆ. ಹೀಗೆ ಪ್ರಾಚೀನ ಕಾವ್ಯಗಳಿಂದ, ಜನಪದಕಾವ್ಯಗಳಿಂದ ನಮ್ಮ ಮಹಿಳೆಯರ ಸೀರೆಗಳು ವೈವಿಧ್ಯಪೂರ್ಣವಾಗಿದ್ದವೆಂದು ತಿಳಿದು ಬರುತ್ತದೆ.

ಭಾರತದಲ್ಲಿಯ ಸೀರೆಗಳ ವೈಶಿಷ್ಟ್ಯ

೨೦ನೆಯ ಶತಮಾನದ ಪ್ರಾರಂಭ ಕಾಲದ ಸೀರೆಗಳನ್ನೂ, ಇಂದಿಗೂ ಬಳಕೆಯಲ್ಲಿರುವ ಸೀರೆ ಕುಪ್ಪಸಗಳನ್ನೂ ನೋಡಿ ಅವುಗಳ ಹೆಸರನ್ನು ತಿಳಿಯಬಹುದು. ಥಪ್ಪಳಾ ಸೀರೆ, ಸಣ್ಣ ಥಪ್ಪಳಾ ಸೀರೆ, ಕೊಂಡಿ ಕುಂಕುಮಗೆರೆ ಸೀರೆ, ಗುಲಾಲಚಿಕ್ಕಿ ಸೀರೆ, ದೂದಿ ಸೀರೆ, ಆರಿಹೂವಿನ ಸೀರೆ, ಕುಂಕುಮಗಣಿ ಸೀರೆ, ಗದ್ದಿಮಡಿ ಸೀರೆ, ಚಾರಕಣ್ಣಿನ ಸೀರೆ, ಬ್ರಹ್ಮಾಂಡ ಪಪ್ಪಳಿ ಮತ್ತು ಶ್ರೀಮಂತ ಪಪ್ಪಳಿ

ಸೀರೆ, ಚದುರಂಗ ಚಿಕ್ಕಿ ಸೀರೆ ಮುಂತಾದ ಹೆಸರಿನ ಸೀರೆಗಳಿರುತ್ತವೆ. ಚದುರಂಗ ಚಿಕ್ಕಿ ಸೀರೆಗೆ ಮುತ್ತಿನ ಬೊಟ್ಟಿನ ಸೀರೆಯೆಂದೂ ಕರೆಯುತ್ತಾರೆ. ಕೊಂಡಿಚಿಕ್ಕೆ, ರಾಸ್ತಾ ಚೌಕಡಿ, ಗುಲಾಬಿ ಕಣ್ಣಿನ ಸೀರೆ, ಕೇರಪಪ್ಪಳಿ ಸೀರೆ, ಕರಿಚಂದ್ರಕಾಳಿ ಸೀರೆ, ನಿಂಬಿಪಪ್ಪಳಿ ಸೀರೆ, ಬನೋಸಿ ಸೀರೆ, ಸೂಸಿ ಸೀರೆ, ಕದರಸೂಸಿ ಸೀರೆ, ಅಡಕಿ ಅಂಜೂರಿ ಸೀರೆ, ನವಿಲು ಕಣ್ಣಿನ ಸೀರೆ, ಕಾಡಿಗಿಗಣ್ಣಿನ ಸೀರೆ, ಅಡಕಿ ಅಂಜೂರಿ ಸೀರೆ, ನವಿಲು ಕಣ್ಣಿನ ಸೀರೆ, ಕಾಡಿಗಿಗಣ್ಣಿನ ಸೀರೆ, ಆನಂದಿ ಬಣ್ಣದ ಸೀರೆ, ದಾಳಿಂಬ ಬಣ್ಣದ ಸೀರೆ, ಗುಲಗಂಜಿ ಬಣ್ಣದ ಸೀರೆ, ವಡಿಕ್ಯಾಳಿ ಸೀರೆ, ಬದ್ನಿ ಬೀಜದ ಸೀರೆ, ಬಾರಿ ಬೀಜದ ಸೀರೆ, ಪೈಠಣಿ ಸೀರೆ, ನಿಂಬಾವಳಿಸೀರೆ, ಸಾಡಿಸೀರೆ, ರೇಶಿಮೆ ಕಡೇಲು, ಸಾಸಿವಿ ಬಣ್ಣದ ಸೀರೆ, ಎಳ್ಳು ಹೂವಿನ ಸೀರೆ, ಪಂಚರಂಗಿ ಸೀರೆ, ಕಬ್ಬಿನ ಗಣಕಿ ಸೀರೆ, ಹಸಿರ ಸೂಸಿ ಸೀರೆ, ಹಸಿರು ಅಂಜುರಿ, ಕೆಂಪ ಅಂಜೂರಿ, ನವಿಲು ಬಣ್ಣದಸೀರೆ, ಮುಗಿಲಬಣ್ಣದ ಕಂಚಿ ಹೂವಿನಸೀರೆ, ಮಾವಿನ ಚಿಕ್ಕಿಸೀರೆ, ಹುಲ್ಲಗೀರಿನಸೀರೆ, ಬಣ್ಣದ ಸೀರಿ, ಹಳದಿ, ಪುರಾಣಿ ಸೀರೆ, ರುದ್ರಗಂಟಿ ಸೀರೆ, ಹಳದಿ ಢಪ್ಪಳಾ, ಹಸಿರು ಢಪ್ಪಳಾ, ಹಸಿರು ಪುತ್ತಳಿ ಸೀರೆ, ಸಾರಾವಳಿ ಮತ್ತು ರಾಗಾವಳಿ ಸೀರೆ, ಚಿಟ್ಟೆ ರಾಗಾವಳಿ ಸೀರೆ, ನಾಮಾವಳಿ ಸೀರೆ, ಉದ್ದಿನ ಕಣ್ಣಿನ ಸೀರೆ, ಕಸ್ತೂರಿ ಕಡ್ಡಿ ಸೀರೆ, ಸಕ್ಕರಿ ಗಣ್ಣಿನ ಕಡ್ಡಿ, ಅತ್ತಿ ಹೂವಿನ ಸೀರೆ, ಕಂಚಿ ಸೀರೆ, ಮಧುರಾ ಸೀರೆ, ಗೋದಿ ಮಗ್ಗಿ ಸೀರೆ, ಅಂದರೆ ಅದರಲ್ಲಿ ಕಸೂತಿಯನ್ನು ಆ ರೀತಿ ಹಾಕಿರುತ್ತಾರೆ. ಆನಿಪಪ್ಪಳ ಸೀರೆ, ಕರವತ ಕಾಟಿ ಸೀರೆ, ಚಟ್ಟಿ ಹೂವಿನ ಚೌಕಕಣ್ಣಿನ ಸೀರೆ, ರೇಶಿಮೆಚಿಕ್ಕಿ ಸೀರೆ, ಕಂಬಳಿಗರದಿನಗೊಂಬಿ ಸೀರೆ, ದಾಸಾಳದ ಹೂವಿನ ಸೂಸಿ ಸೀರೆ, ಹವಳ ಪೈಠಣಿ ಸೀರೆ, ಬದನಿಕಣ್ಣಿನ ಸೀರೆ, ಹೊನ್ನಧಾರಿ ಸೀರೆ, ರತನ ಡಪ್ಪಳ, ರತನ ಪಪ್ಪಳಿ, ಜೋಳದ ಕಣ್ಣಿನ ಸೀರೆ ಇವುಗಳನ್ನು ಉಡುತ್ತಾರೆ. ಇವು ಇಂದಿಗೂ ವಿಜಾಪುರ, ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲಿ ಅಚ್ಚುಮೆಚ್ಚಿನವಾಗಿವೆ.

ವಿವಿಧ ಬಗೆಯ ಅಂಚುಗಳು

ಈ ಸೀರೆಗಳಿಗೆ ವಿವಿಧ ಬಗೆಯ ಅಂಚು - ಸೆರಗುಗಳಿರುತ್ತವೆ. ಪರಾಸಪೇಟೆ ಬದನಿ ಪರಾಸಪೇಟೆ, ಕಸಕಸಿ ಪರಾಸಪೇಟೆ, ಅಂಚುಗಳು ಅಂದವಾಗಿರುತ್ತವೆ. ಗಾಡೆದಡಿ, ತಸ್ಮಿದಡಿ, ಬುಗುಡಿದಡಿ, ರುದ್ರಾಕ್ಷಿದಡಿಗಳಿರುತ್ತವೆ. ದಡಿ ಎಂದರೆ

ದಂಡೆ, ಅಂಚು. ಗಂಗಾ - ಜಮುನಾ ಎಂಬ ಅಂಚು ಇರುತ್ತದೆ. ಸೀರೆಯ ಒಂದು ಬದಿಗೆ ಕೆಂಪು ಅಂಚು ಇನ್ನೊಂದು ಬದಿಗೆ ಹಸಿರು ಅಂಚು ಇದ್ದದನ್ನು ಗಂಗಾ - ಜಮುನಾ ಅಂಚು ಎನ್ನುವರು. ಕುಂಬಳ ದಡಿ, ಪಟಾಳ ಅಂಚಿನ ಸೀರೆ, ನಾಗಮುರಿದಡಿಸೀರೆ, ಪಟ್ಟೇದ ಅಂಚು, ಕವಡಿಕಿ ಅಂಚು, ಕರವತ್ತಕಾಟಿ ದಡಿ, ಸರಪಳಿ ಅಂಚುಗಳು - ಹೀಗೆ ಸೀರೆಯ ಮೈಬಣ್ಣಕ್ಕೆ ತಕ್ಕಂತೆ ವಿವಿಧ ಬಗೆಯ ಅಂಚುಗಳಿರುತ್ತವೆ.

ಅಂಚುಗಳಲ್ಲಿ ಹೇಗೋ ಹಾಗೆಯೆ ಸೆರಗಿನಲ್ಲಿಯೂ ಬೇರೆ ಬೇರೆ ಬಗೆಗಳಿರುತ್ತವೆ. ಪತ್ತಲ ಸೆರಗು, ಮುತ್ತಿನ ಸೆರಗು, ಗೊಂಡೆಮುತ್ತಿನ ಸೆರಗುಗಳು ಇರುತ್ತವೆ.

ಅಂಚು, ಸೆರಗು ಮತ್ತು ಒಳಮೈಗಳ ತ್ರಿವೇಣಿ ಸಂಗಮದಿಂದಲೇ ಸೀರೆಯ ಸೊಬಗು ಹೆಚ್ಚುತ್ತದೆ. ಕನ್ನಡ ನಾಡಿನ ನೇಕಾರರು ಇಷ್ಟೊಂದು ಬಗೆಯ ಅಂಚು ಸೆರಗುಗಳುಳ್ಳ ವಿವಿಧ ರೀತಿಯ ಮತ್ತು ಅನೇಕ ಬಣ್ಣದ ಸೀರೆಗಳನ್ನು ನೂರಾರು ವರ್ಷಗಳಿಂದ ನೇಯುತ್ತಿದ್ದಾರೆ. ಕರ್ನಾಟಕದ ಇಳಕಲ್ಲು, ಗದಗ ಮುಂತಾದ ಊರಿನ ಸೀರೆಗಳು ಭಾರತದಲ್ಲೆಲ್ಲ ಜನಪ್ರಿಯವಾಗಿವೆ. ಈ ಸೀರೆಯ ದೊಡ್ಡ ಅಂಚು, ಸೆರಗುಗಳು ಆಕರ್ಷಕವಾಗಿರುತ್ತವೆ. ಕಲಾಪೂರ್ಣವಾಗಿರುವ ಇಂಥ ಸೀರೆಗಳನ್ನು ಮಹಿಳೆಯರು ಮೆಚ್ಚುತ್ತಾರೆ.

ಕುಪ್ಪಸದ ಖಣದಲ್ಲಿಯೂ ಅನೇಕ ಬಗೆಗಳಿವೆ. ಅವು ಹಸರದೋಡೆ, ವರಾಹ ಹೂವು, ಅರಳಮಲ್ಲಿಗೆ, ಸೂಜಿಮಲ್ಲಿಗೆ, ಬದನಿ ಬೀಜ ಎಂದು ಹಲವಾರು ವಿಧವಾಗಿವೆ.

ಭಾರತದ ಸೀರೆಗಳು

ಒಂದೊಂದು ಪ್ರಾಂತದ ಸೀರೆಗೂ ತನ್ನದಾದ ಒಂದು ವೈಶಿಷ್ಟ್ಯವಿದೆ. ಸೀರೆಯನ್ನು ನೋಡಿ ಈ ಸೀರೆ ಇಂಥ ಪ್ರಾಂತಕ್ಕೆ ಸೇರಿದುದು ಎಂದು ಹೇಳಬಹುದಾಗಿದೆ. ಅವು ಅಲ್ಲಿಯ ನಿಪುಣ ನೇಕಾರರ ಕಲಾನಿಪುಣತೆಯನ್ನು ಸಾರುತ್ತವೆ ಮತ್ತು ಆಯಾ ಪ್ರಾಂತದ ಮಹಿಳೆಯರ ಒಲವನ್ನೂ ಸೂಚಿಸುತ್ತವೆ.

ಕರ್ನಾಟಕದ ಇಳಕಲ್ಲು ಮತ್ತು ಗದುಗಿನ ಸೀರೆಗಳು ನೂರಾರು ವರ್ಷಗಳಿಂದ ಭಾರತದಲ್ಲೆಲ್ಲ ಕರ್ನಾಟಕದ ಸೀರೆಗಳೆಂದು ಹೆಸರು ಪಡೆದಿವೆ. ಐದು

ಬೆರಳಗಲ ಅಂಚು, ಒಂದೂವರೆ ಮೊಳ ಉದ್ದವಾದ, ಸೆರಗುಳ್ಳ ಕರ್ನಾಟಕದ ಸೀರೆಗಳು ಸುಂದರವಾಗಿರುತ್ತವೆ. ಅಂಚು ಮತ್ತು ಸೆರಗಿಗೆ ಒಪ್ಪುವಂತೆ ಅನೇಕ ಬಣ್ಣದವಿರುತ್ತವೆ.

ಮೈಸೂರು, ಬೆಂಗಳೂರು ಆರ್ಟ್ ಸಿಲ್ಕ್, ಫಿಲೇಚರ್ ಸಿಲ್ಕ್, ಮೈಸೂರು ಕ್ರೇಪ್, ಜಾರ್ಜೆಟ್, ನೈಲಾನ್ ಸೀರೆಗಳಂತೂ ಜಗತ್ಪ್ರಸಿದ್ಧವಾಗಿವೆ. ಅವುಗಳ ಅಂದ ಚಂದದ ಬಣ್ಣ, ಅನೇಕ ಬಗೆಯ ಅಂಚು ಮತ್ತು ಸೆರಗುಗಳು ಆಕರ್ಷಕವಾಗಿವೆ. ಇತ್ತೀಚೆಗೆ ರೇಶಿಮೆಯ ಸೀರೆಗಳಲ್ಲಿ ರೇಶಿಮೆಯ ಹೂವುಗಳನ್ನೂ, ಜರದ ಹೂಗಳನ್ನೂ, ಸುಳುಹು ಹೊಳವುಗಳನ್ನೂ ನೇಯುತ್ತಿದ್ದಾರೆ. ಫ್ಯಾಶನೇಬಲ್ ಯುವತಿಯರಿಗೆ, ಗಂಭೀರ ಪ್ರಕೃತಿಯ ಗೃಹಿಣಿಯರಿಗೆ, ಅಜ್ಜಿಯರಿಗೆ ಒಪ್ಪಿಗೆಯಾಗುವಂತ ನೂರಾರು ಬಗೆಯ ಬಣ್ಣದ ಅಂದವಾದ ಸೀರೆಗಳು ಸಿದ್ಧವಾಗುತ್ತಿವೆ. ಮೈಸೂರು ಸೀರೆಗಳನ್ನು ಎಲ್ಲ ಪ್ರಾಂತಗಳ ಮಹಿಳೆಯರು ಮೆಚ್ಚುತ್ತಾರೆ; ಉಪಯೋಗಿಸುತ್ತಾರೆ.

ಧರ್ಮಾವರಂ, ಕಾಂಜೀವರಂ, ಕುಂಭಕೋಣಂ ಸೀರೆಗಳೂ ಪ್ರಸಿದ್ಧವಾಗಿವೆ. ನಾಜೂಕು ಬಣ್ಣದ ಹೊಳವು, ಜರದ ಮಿಂಚು, ನೆಯ್ಗೆಯ ಕುಶಲಕಲೆ ವಿಶಿಷ್ಟ ಬಗೆಯವಾಗಿದೆ. ಮಾವಿನಕಾಯಿ ಅಂಚಿನ ಕಂಚಿಸೀರೆ ಮಹಿಳೆಯರಿಗೆ ಅಚ್ಚುಮೆಚ್ಚಿನದಾಗಿದೆ. ಇತ್ತೀಚೆಗೆ ಈ ಸೀರೆಗಳಲ್ಲಿ ಸೂಕ್ಷ್ಮವಾದ ನವಿರಾದ ಚಿತ್ರಗಳನ್ನೂ ನೇಯುತ್ತಿದ್ದಾರೆ. ಬಣ್ಣಗಳ ರಾಣಿಯಂತಿರುವ ಬ್ರಹ್ಮಾವರಂ, ಕಾಂಜೀವರಂಗಳ ರೇಶಿಮೆಯ ಸೀರೆಗಳು ಬಹಳ ಹೆಸರಾಗಿವೆ. ನೀಲಿ ಬಣ್ಣದ ರೇಶಿಮೆ ಸೀರೆಗೆ ಹಳದಿ ಅಂಚು, ಕೆಂಪು ರೇಶ್ಮೆಯ ಸೀರೆಗೆ ಹಳದಿ ಅಂಚು, ಹಸಿರು ಹಾಗೂ ಕರಿಯ ಬಣ್ಣದ ಸೀರೆಗಳಿಗೆ ಕೆಂಪು ಅಂಚುಗಳಿರುತ್ತವೆ. ಕಾಂಚೀವರಮ್‌ದ ಕಿನ್‌ಕಾಪಿನ ಬಟ್ಟೆ ಶ್ರೇಷ್ಠವಾದುದು. ಇತ್ತೀಚೆಗೆ ಕಸೂತಿಯ ಸೀರೆಗಳೂ ಹುಟ್ಟುತ್ತಿವೆ.

ಮಧುರೆಯ ಸೀರೆಗಳು

ಒಂದು ಕಾಲಕ್ಕೆ ಮಧುರೆ ಪಾಂಡ್ಯರ ರಾಜಧಾನಿಯಾಗಿತ್ತು. ಆ ಕಾಲದಿಂದ ಮಧುರೆಯ ಸೀರೆಗಳು ಭಾರತದಲ್ಲೆಲ್ಲ ಪ್ರಸಿದ್ಧವಾಗಿವೆ. ಅಲ್ಲಿಯ ಮಹಿಳೆಯರು

ಪುಷ್ಪಾಲಂಕೃತವಾದ ಕೆಂಪು ರೇಷ್ಮೆಯ ಸೀರೆಗಳನ್ನು ಉಡುತ್ತಿದ್ದರೆಂದು ಪ್ರಾಚೀನ ಗ್ರಂಥಗಳಿಂದ ತಿಳಿದುಬರುತ್ತದೆ. ಮಧುರೆಯ ಕಲಾಪೂರ್ಣವಾದ ಸೀರೆಗಳು ೧೫೦೦ ವರ್ಷಗಳಿಂದ ಎಲ್ಲೆಡೆ ಪ್ರಚಾರದಲ್ಲಿವೆ. ಸಣ್ಣ ನೂಲಿನ ಅಂದವಾದ ಬಣ್ಣದ ಜರದಂಚಿನ ಮಧುರೆಯ ಸೀರೆಗಳು ಮಹಿಳೆಯರ ಮನವನ್ನು ಸೆಳೆಯುತ್ತವೆ. ತಂಜಾವೂರಿನ ಜರದೋಝಿ ಸೀರೆಗಳ ಕಲಾಕುಸುರಿನ ಕೆಲಸ ೧೭ನೆಯ ಶತಮಾನದಿಂದ ಪ್ರಖ್ಯಾತವಾಗಿದೆ.

ಗದ್ವಾಲ ಮತ್ತು ಹೈದರಬಾದಿನ ಸೀರೆಗಳೂ ಜನಪ್ರಿಯವಾಗಿವೆ ಗದ್ವಾಲ ಸೀರೆಗೆ ನೂಲಿನ ಒಳಮೈ, ಸಣ್ಣ ಜರದಂಚು, ದೊಡ್ಡ ಜರದ ಸೆರಗುಗಳಿರುತ್ತವೆ. ಸೆರಗಿನಲ್ಲಿ ಗೋಡಂಬಿ, ವಿವಿಧ ಬಗೆಯ ಹೂಗಳನ್ನು, ಪಕ್ಷಿಗಳನ್ನು ನೇಯುತ್ತಾರೆ. ಹೈದರಾಬಾದಿನ ಕಸೂತಿ ಮಾದರಿಯ ಕೈಮಗ್ಗದ ಸೀರೆ ಖಣಗಳು ಭಾರತಾದ್ಯಂತ ಪ್ರಸಿದ್ಧವಾಗಿವೆ. ಕೈಮಗ್ಗದ ಈ ಸೀರೆಗಳು ದೊಡ್ಡ ಅಂಚು, ಸಣ್ಣ ಅಂಚು ಮತ್ತು ದೊಡ್ಡ ಸೆರಗಿನವೆಂದು ವಿವಿಧ ಬಗೆಯವುಗಳಾಗಿವೆ. ಇತ್ತೀಚೆಗೆ ಸರ್ಕಾರದವರು ಹೊಸ ಹೊಸ ಮಾದರಿಗಳನ್ನು ಹುಡುಕಿ ನೇಕಾರರಿಗೆ ಒದಗಿಸುತ್ತಿದ್ದಾರೆ. ಅವರಿಗೆ ಆರ್ಥಿಕ ಸಹಾಯವನ್ನು ನೀಡುತ್ತಾರೆ. ಮೊದಲೇ ಕುಶಲಕಲಾಕಾರರಾದ ಭಾರತೀಯ ನೇಕಾರರು ಈ ರೀತಿಯ ಹೆಣಿಗೆಯ ಕಸೂತಿಯ ಚಿತ್ರಗಳನ್ನು ನೇಯ್ಗೆಯಲ್ಲಿ ಅಳವಡಿಸಿಕೊಂಡಿದ್ದಾರೆ. ತೆಲುಗಿನ ಮಹಿಳೆಯರು ಮಣಿಕೆಲಸ ಮಾಡಿದ ಕಲಾಪೂರ್ಣವಾದ ಕುಪ್ಪಸಗಳನ್ನು ಸಿದ್ಧಗೊಳಿಸುತ್ತಾರೆ.

ಆಂಧ್ರದ ಜಮದನಿ ಜರದ ಅಂಚಿನ ಸೀರೆ ಅಂದವಾಗಿರುತ್ತವೆ. ಅವುಗಳಲ್ಲಿ ನೀಲಿ, ಹಸಿರು, ಕೆಂಪು ಬಣ್ಣದ ಸೀರೆಗಳು ಪ್ರಸಿದ್ಧವಾಗಿವೆ. ಆಂಧ್ರದ ಮಹಿಳೆಯರು ಹೊಳಪುಳ್ಳ ರೇಷಿಮೆಯ ಹೆಚ್ಚು ಬಣ್ಣಗಳಿಂದ ತುಂಬಿದ ಸೀರೆಗಳನ್ನು ಮೆಚ್ಚುತ್ತಾರೆ. ಆಂಧ್ರದ ಕೊರವೈ ಅಂಚಿನ ಸೀರೆಯು ಕಲಾದೃಷ್ಟಿಯಿಂದ ವೈವಿಧ್ಯಪೂರ್ಣವಾಗಿದೆ. ಒಳಗಿನ ಮೈಗಿಂತ ಅದರ ಅಂಚು ವಿರೋಧ ಬಣ್ಣದಿಂದ ತುಂಬಿಕೊಂಡಿರುತ್ತದೆ. ನೀಲೀ ಬಣ್ಣದ ಸೀರೆಗೆ ಹಳದಿ ಅಂಚು ಇರುತ್ತದೆ. ಈ ರೀತಿಯ ಸೀರೆಗಳನ್ನು ನೇಯುವ ಕಲೆಯಲ್ಲಿ ಕನ್ನಡಿಗರು ಹಾಗೂ ತಮಿಳರು ನುರಿತವರಾಗಿದ್ದಾರೆ.

ಪುಣೆಯ ಪೀತಾಂಬರಗಳು

ಪುಣೆಯ ಪೀತಾಂಬರ ಮೊದಲ ಕಾಲದಲ್ಲಿ ಮದುವೆಯ ಸೀರೆಯಾಗಿತ್ತು. ದಪ್ಪ ರೇಶಿಮೆಯ ದೊಡ್ಡ ಪರಾಸ್ಪೇಟ ಜರದಂಚಿನ, ಕೆಂಪು ಇಲ್ಲವೆ ಗಿಳಿಹಸಿರು ಬಣ್ಣದ ಪೀತಾಂಬರಗಳಿಗೆ ದೊಡ್ಡ ಜರದ ಸೆರಗು ಇರುತ್ತಿತ್ತು. ಸೀರೆಯ ಒಳಮೈಗೆಲ್ಲ ಜರದ ದೊಡ್ಡ ದೊಡ್ಡ ಹೂಗಳಿರುತ್ತಿದ್ದವು. ಮಹಾರಾಷ್ಟ್ರದಲ್ಲಿ ನೂಲಿನ ಸಣ್ಣ ಚೌಕಡಿ ಮನೆಯ ಜರದಂಚಿನ ಸೀರೆಗಳು ಪ್ರಸಿದ್ಧವಾಗಿವೆ. ಈಚಲಕರಂಜಿ, ಭೇವುಂಡಿ, ನಾಗಪುರಗಳ ಜರದಂಚಿನ ಸೀರೆಗಳು ಸುಂದರವಾಗಿರುತ್ತವೆ.

ಗುಜರಾಥದ ಸೀರೆಗಳು

ಗುಜರಾಥದ ಪಟೋಲಾ ಮತ್ತು ಬಾಂಧಣಿ ಸೀರೆಗಳು ಕಲಾಪೂರ್ಣವಾಗಿವೆ. ಪಟೋಲಾದಲ್ಲಿ ಹೊಂದಿಕೆಯುಳ್ಳ ವಿವಿಧ ಬಣ್ಣಗಳಿರುತ್ತವೆ. ಹಸಿರು ಸೀರೆಯಲ್ಲಿ ಬಿಳಿ, ಕೆಂಪು ಮತ್ತು ಹಳದಿ ಬಣ್ಣಗಳ ಸುಂದರವಾದ ಚಿತ್ರಗಳಿರುತ್ತವೆ. ಕೆಂಪು ಬಣ್ಣದ ಸೀರೆಯಲ್ಲಿ ಬಿಳಿ, ಹಸಿರು, ಹಳದಿ ಬಣ್ಣಗಳನ್ನು ಹೊಂದಿಸಿರುತ್ತಾರೆ. ಬಿಳಿ ಚೌಕೋನಾಕೃತಿಯಲ್ಲಿ ಹಸಿರು ಬಣ್ಣದ ಗಿಳಿ, ಹಳದಿ ಬಣ್ಣದ ಹೂವು, ಪಕ್ಷಿ ಗಿಡ ಬಳ್ಳಿಗಳು ಎದ್ದು ಕಾಣುತ್ತವೆ. ಒಳಮೈ ನೀಲಿಬಣ್ಣದ್ದಿದ್ದರೆ, ಅದಕ್ಕೆ ಬಿಳಿಯ ದೊಡ್ಡ ಹೂವು, ಹೂವಿನ ಮಧ್ಯದಲ್ಲಿ ಹಳದಿ ಮತ್ತು ಕೆಂಪು ಬಣ್ಣ ಬಲು ಅಂದವಾಗಿ ತೋರುತ್ತದೆ. ಕಪ್ಪು ಮತ್ತು ಕೆಂಪು ಬಣ್ಣದ ಸೀರೆಗೆ ಕರಿ ಮತ್ತು ಬಿಳಿ ಬಣ್ಣದ ಗಿಡಬಳ್ಳಿಗಳಿರುತ್ತವೆ. ನಾರಿಕುಂಜದ ನೃತ್ಯಗಾರ್ತಿ ಹಾಗೂ ಆನೆಗಳ, ಎಲೆಹೂಗಳ, ಗಿಳಿ ನವಿಲುಗಳ ಚಿತ್ರಗಳನ್ನು ಪಟೋಲಾದಲ್ಲಿ ನೇಯುತ್ತಾರೆ. ಫುಲಭಾತ ಚಿತ್ರಗಳನ್ನು ಹೆಚ್ಚಾಗಿ ಪಟೋಲಾದಲ್ಲಿ ನೇಯುವುದುಂಟು.

ಬನಾರಸ, ಕಂಜೀವರಂ, ಚಂದೇರಿ ಸೀರೆಗಳಷ್ಟು ಗುಜರಾಥದ ಪಟೋಲಾ ಸೀರೆಗಳು ಪ್ರಚಾರದಲ್ಲಿಲ್ಲ. ಏಕೆಂದರೆ, ಈ ಕೆಲಸ ಬಲು ಶ್ರಮ ದಾಯಕವಾದುದಾಗಿ ಹೆಚ್ಚಿನ ಪ್ರಮಾಣದಲ್ಲಿ ಅವುಗಳ ಉತ್ಪತ್ತಿಯಾಗುತ್ತಿರಲಿಲ್ಲ. ಈಗ ಗೃಹಕೈಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ದೊರೆತಿದೆ. ಇತ್ತೀಚೆಗೆ ಯಂತ್ರದ ನೆರವು

ದೊರೆತು ಹೆಚ್ಚಿನ ಪ್ರಮಾಣದಲ್ಲಿ ಪಟೋಲಾ ಮಾದರಿಯ ಸೀರೆಗಳು ಸಿದ್ಧವಾಗುತ್ತಿವೆ. ಪಟೋಲಾದ ಕೇಂದ್ರ ಉತ್ತರ ಗುಜರಾಥದಲ್ಲಿದೆ. ಇವು ಇತ್ತೀಚೆಗೆ ಕ್ಯಾಂಬೆ, ಅಹಮದಾಬಾದ್, ಸೂರತ್‌ಗಳಲ್ಲಿಯೂ ಸಿದ್ಧವಾಗುತ್ತಿವೆ. ಹೈದರಾಬಾದ್, ಒರಿಸ್ಸಾ ಮತ್ತು ಬನಾರಸ್‌ಗಳಲ್ಲಿ ಪಟೋಲಾದ ಚಿತ್ರಗಳ ಅನುಕರಣೆ ಕಂಡುಬರುತ್ತದೆ. ಇವು ಹೆಚ್ಚಾಗಿ ಕರ್ನಾಟಕದ ಕಸೂತಿಯನ್ನು ಹೋಲುತ್ತವೆ. ಸಾವಿರಾರು ವರ್ಷಗಳಿಂದ ಪಟೋಲಾ ಮದುವೆಯ ಸೀರೆಯೆಂದು ಗುಜರಾಥದ ತುಂಬೆಲ್ಲ ಪ್ರಸಿದ್ಧವಾಗಿದೆ.

ಸೂರತ್‌ದ ಜರದ ಟಿಶ್ಯೂ ಸೀರೆಗಳು ಬಹಳ ಸುಂದರವಾಗಿರುತ್ತವೆ. ರಾಜಕೋಟೆ ಮತ್ತು ಕಾಠೆವಾಡಗಳ ಮಹಿಳೆಯರು ಸೀರೆಗೆ ಮತ್ತು ಲಂಗಕ್ಕೆ ಕನ್ನಡಿ ಕೂಡಿಸಿ, ಹೆಣೆದು ಉಡುತ್ತಾರೆ. ಗುಜರಾಥ ಕಾಠೇವಾಡದ ಮಹಿಳೆಯರು ನೌರಂಗ್ ಮತ್ತು ಸೌರಂಗಗಳ ಸೀರೆಯನ್ನುಡುತ್ತಾರೆ. ಬಣ್ಣ ಬಣ್ಣಗಳ ಬಟ್ಟೆ ಅವರಿಗೆ ಹೆಚ್ಚಾಗಿ ಸೇರುತ್ತವೆ.

ಇಂದೂರಿನ ಚಂದೇರಿ ಸೀರೆಗಳು, ಮಹೇಶ್ವರಿ ಸೀರೆಗಳು ಅಂದದಲ್ಲಿ ಹಿರಿದಾಗಿವೆ. ನಯನಾಜೂಕಿಗಾಗಿ ಈ ಸೀರೆಗಳು ಹೆಸರಾಗಿವೆ. ಈ ಸೀರೆಗಳ ಒಳಮೈಯನ್ನು, ನೂಲು ಮತ್ತು ರೇಶಿಮೆಗಳನ್ನು ಕೂಡಿಸಿ ನೇಯುತ್ತಾರೆ. ನೂಲು ಮತ್ತು ರೇಶಿಮೆ ಎಳೆಗಳು ಅತಿ ಜಿನುಗಾಗಿರುತ್ತವೆ. ಪಾರದರ್ಶಕವಾದ ಈ ಸೀರೆಗೆ ಕುಸುರಿಗೆಲಸದ ಜರದಂಚು ಇರುತ್ತದೆ. ಮಹೇಶ್ವರಿ ಮತ್ತು ಚಂದೇರಿ ಸೀರೆಗಳ ಒಳಮೈಗೆಲ್ಲ ಜರದ ಚಿಕ್ಕೆಗಳಿರುತ್ತವೆ. ಈ ಜರದ ಚಿಕ್ಕೆಗಳಿಗೆ ಮೋತಿಚೂರ ಎನ್ನುತ್ತಾರೆ. ಇವುಗಳಲ್ಲಿ ನಾನಾ ಬಣ್ಣದ ನಯ ಜಿನುಗಿನ ಸೀರೆಗಳು ದೊರೆಯುತ್ತವೆ. ಭಾರತದ ಮಹಿಳೆಯರಿಗೆ ಚಂದೇರಿ ಸೀರೆಗಳ ಮೇಲೆ ಬಲು ಪ್ರೀತಿ.

ಕಾಶ್ಮೀರದ ರೇಷ್ಮೆ ಸೀರೆಗಳು

ಕಾಶ್ಮೀರದ ರೇಶಿಮೆ ಸೀರೆಗಳು, ಹೆಣಿಗೆಯ ಸೀರೆಗಳು, ಹೆಣಿಗೆಯ ಶಾಲುಗಳು ಮೊಗಲರ ಕಾಲದಿಂದ ದೇಶವಿದೇಶಗಳಲ್ಲಿ ಪ್ರಖ್ಯಾತವಾಗಿವೆ. ಕಲಾಪೂರ್ಣವಾದ ಶಾಲಿನ ನೇಯ್ಗೆಯ ಕಲೆ ೧೫ನೆಯ ಶತಮಾನದಲ್ಲಿ ತುರ್ಕಸ್ಥಾನದಿಂದ ಕಾಶ್ಮೀರಕ್ಕೆ ಬಂದಿತಂತೆ. ಕಾಶ್ಮೀರದ ಜಂವಾರ ಶಾಲುಗಳು

ಆಮ್ಲ ಮತ್ತು ಕೈಕಸೂತಿಯ ಶಾಲುಗಳು ವೈಶಿಷ್ಟ್ಯಪೂರ್ಣವಾಗಿವೆ. ಈ ಶಾಲುಗಳು ಜಗತ್ತಿನ ಮಹಿಳೆಯರನ್ನೆಲ್ಲ ಮುಗ್ಧಗೊಳಿಸಿವೆ. ಮಹಿಳೆಯರಿಗೆ ಸಾಯಂಕಾಲದ ಮೇಲುಡುಪಿಗಾಗಿ ಈ ಶಾಲುಗಳು ಉಪಯೋಗವಾಗುತ್ತವೆ. ವಿವಿಧ ಬಣ್ಣದ ವಿವಿಧ ಮಾದರಿಯ ಕಲಾಕುಸರಿನ ಕೈಕೆಲಸದ ಶಾಲುಗಳನ್ನು ಕಂಡರೆ ನಮಗೆ ಹರ್ಷವೆನಿಸುತ್ತದೆ. ಕಾಶ್ಮೀರದ ಜರದ ಕೈಕೆಲಸ ಅಪೂರ್ವವಾದುದು. ಸೃಷ್ಟಿ ಸೌಂದರ್ಯದ ಮಡಿಲಲ್ಲಿ ಬೆಳೆದ ಕಾಶ್ಮೀರ ದೇಶದ ಜನರಿಗೆ ಈ ಕುಶಲ ಕಲೆ ಜನ್ಮದಾರಂಭದಿಂದಲೇ ಬಂದಿದೆ.

ಆಕರ್ಷಕಬಣ್ಣದ ಕಾಶ್ಮೀರದ ರೇಶಿಮೆಯ ಸೀರೆಗಳನ್ನು ಮೆಚ್ಚದವರಾರು! ಕಾಶ್ಮೀರದ ಸೀರೆಗಳಲ್ಲಿ ಕಾಮನಬಿಲ್ಲಿನ ಏಳು ಬಣ್ಣಗಳು ಹೊಂದಿಕೊಂಡಿರುತ್ತವೆ. ಮಾವಿನಕಾಯಿ ಇಲ್ಲವೆ ಶಂಕುವಿನಾಕಾರದ ಚಿತ್ರಣ, ಕಾಶ್ಮೀರದ ಸೀರೆಗಳ ಅಚ್ಚಿನಲ್ಲಿ, ಹೆಣಿಗೆಯ ಸೀರೆಗಳಲ್ಲಿ, ಶಾಲಿನಲ್ಲಿ ಕಂಗೊಳಿಸುತ್ತದೆ. ಕಾಶ್ಮೀರದ ಅಂದವಾದ ರೇಶಿಮೆಯ ಸೀರೆಗಳು ಬಹಳ ಹಗುರಾಗಿರುತ್ತವೆ; ನಾಜೂಕಾಗಿರುತ್ತವೆ. ವೈವಿಧ್ಯಪೂರ್ಣವಾಗಿರುವ ಬಣ್ಣ ಬಣ್ಣದ ಸೀರೆಗಳು ಆಕರ್ಷಕವಾಗಿರುತ್ತವೆ. ಕಾಶ್ಮೀರದ ಚಿಕನ್ ಕೆಲಸ, ಜರದ ಹೆಣಿಗೆ ಬಹಳ ಮುಂದುವರಿದ ಕಲೆಯಾಗಿದೆ. ನಿಪುಣ ಕಲಾಕಾರರು ಹಾಕುವ ಅಚ್ಚು, ಹೆಣೆಯುವ ಕಸೂತಿ ಮತ್ತು ಬಣ್ಣಗಳ ಹೊಂದಿಕೆಯೇ ಕಾಶ್ಮೀರದ ಸೀರೆಗಳು ಜನಪ್ರಿಯವಾಗಲು ಕಾರಣವಾಗಿವೆ.

ಕಲ್ಕತ್ತಾ ಸೀರೆಗಳು

ಬಂಗಾಲ ಮತ್ತು ಅಸ್ಸಾಂ ರೇಶಿಮೆ ಸೀರೆಗಳು, ನೂಲಿನ ಕೈಮಗ್ಗದ ಸೀರೆಗಳು ಪುರಾತನ ಕಾಲದಿಂದ ಪ್ರಸಿದ್ಧವಾಗಿವೆ. ಚೋಳರ ರಾಜಧಾನಿಯಾಗಿದ್ದ ಕಾವೇರಿ ಪಟ್ಟಣಕ್ಕೆ ಬಂಗಾಲ ಮತ್ತು ಅಸ್ಸಾಮಗಳ ರೇಶಿಮೆಯ ವಸ್ತ್ರಗಳು ಬರುತ್ತಿದ್ದವಂತೆ. ಬಂಗಾಲದ ಢಾಕಾ ಸೀರೆಗಳು, ಮುರ್ಶಿದಾಬಾದ್ ರೇಶಿಮೆ ಸೀರೆಗಳು ಶಾಂತಿಪುರದ ನೂಲಿನ ಕೈಮಗ್ಗದ ಅಂದಚಂದದ ಸೀರೆಗಳು ಭಾರತದಲ್ಲೆಲ್ಲ ಹೆಸರಾಗಿವೆ. ಮುರ್ಶಿದಾಬಾದ್‌ದ ಬಣ್ಣ ಬಣ್ಣದ ಅಚ್ಚಿನ ಸೀರೆಗಳು, 'ಅಲ್ಪನ' ರಂಗೋಲಿಯಂತೆ ಚಿತ್ರವುಳ್ಳ ಅಂಚಿನ ಸೀರೆಗಳು ಆಕರ್ಷಕವಾಗಿರುತ್ತವೆ. ತಿಳಿ ಬಣ್ಣದಲ್ಲಿ ನಾಜೂಕಾದ ಕುಸುರಿನ ಚಿತ್ರಗಳುಳ್ಳ ಅಚ್ಚಿನ ರೇಶಿಮೆ ಸೀರೆಗೆ ಮುರ್ಶಿದಾಬಾದ ಹೆಸರಾಗಿದೆ. ಸಣ್ಣ ನೂಲಿನಲ್ಲಿ

ಜರದಿಂದ ಸುಳುವು ಹೊಳವುಗಳನ್ನು, ಅಂದವಾದ ಜರದ ಅಂಚು ಸೆರಗುಗಳನ್ನು ನೇಯುವುದರಲ್ಲಿ ಢಾಕಾ ಬಹುಕಾಲದಿಂದ ಪ್ರಸಿದ್ಧವಾಗಿದೆ. ಅಲ್ಲಿಯ ಮಸ್‌ಲಿನ್‌ದ ಜರದ ಸೀರೆಗಳು ಮಹಿಳೆಯರಿಗೆ ಅಚ್ಚು ಮೆಚ್ಚಿನವಾಗಿರುತ್ತವೆ. ಎಲ್ಲ ಬಣ್ಣದ ನೂಲಿನ ಸೀರೆಗೆ ಸಣ್ಣ ಮತ್ತು ದೊಡ್ಡ ಜರದಂಚುಗಳನ್ನು ಹಾಕಿ ನೇಯುವ ಶಾಂತಿಪುರದ ಸೀರೆಗಳು ಹೆಸರಾಗಿವೆ. ಅಸ್ಸಾಮದ ಕೈಮಗ್ಗದ ಸೀರೆಗಳು ವಿಶಿಷ್ಟ ಬಗೆಯವಾಗಿವೆ. ಅಲ್ಲಿ ಹೆಚ್ಚಾಗಿ ಪ್ರತಿಯೊಬ್ಬರೂ ನೇಯ್ಗೆಯ ಕಲೆಯಲ್ಲಿ ಪ್ರವೀಣರಾಗಿರುತ್ತಾರೆ. ಮೊದಲಿನ ಕಾಲದಲ್ಲಿ ಮದುವೆಯ ಕಾಲಕ್ಕೆ ಮದುಮಗಳಿಗೆ ತಾಯಿ ಮನೆಯವರು ನೇಯ್ಗೆಯ ಸಲಕರಣೆಗಳನ್ನು ಕೊಡುವ ಸಂಪ್ರದಾಯ ಅಲ್ಲಿತ್ತಂತೆ. ಹೆಣ್ಣು ಮಕ್ಕಳು ತಮ್ಮ ತಮ್ಮ ಸೀರೆಗಳನ್ನು ತಾವೇ ನೇಯ್ದುಕೊಂಡು ಉಡುತ್ತಿದ್ದರಂತೆ. ವಿಷ್ಣುಪುರದ ಹೊಳೆಯುವ ಜಾಕಾರ್ಡ್ ಸೀರೆಗಳು ಮತ್ತು ಸುಳುವು ಹೊಳವಿನ ಜರದ ಸೀರೆಗಳು ಪ್ರಖ್ಯಾತವಾಗಿವೆ. ಸಂಬಲಾಪುರ, ಪೋಚಂಪಲ್ಲಿ, ಒರಿಸ್ಸಾ ಮತ್ತು ತಿರುಪುರಗಳ ಕೈಮಗ್ಗದ ಸೀರೆಗಳು ಸೌಂದರ್ಯದಲ್ಲಿ ಮೇಲಾಗಿವೆ.

ಬನಾರಸದ ಸೀರೆಗಳು

ಬನಾರಸದ ಸೀರೆಗಳು ನೂರಾರುವರ್ಷಗಳಿಂದ ಜಗತ್ಪ್ರಸಿದ್ಧವಾಗಿವೆ. ಅಲ್ಲಿಯವರು ರೇಶಿಮೆ ಜರ ಕೂಡಿಸಿ ನೇಯುತ್ತಾರೆ. ಸುಳುವು ಹೊಳವಿನ ಸುಂದರವಾದ ಅಂಚುಪಕ್ಷಿಗಳ ಸಾಲಿನ ಅಂದವಾದ ಸೀರೆಗಳು, ವಿವಿಧ ಬಣ್ಣದ ವಿವಿಧ ಬಗೆಯ ಹೂಬಳ್ಳಿಗಳುಳ್ಳ ಬನಾರಸದ ಸೀರೆಗಳು ತಮ್ಮ ವಿಶಿಷ್ಟತೆಯಿಂದ ಜನಮನವನ್ನು ಗೆದ್ದಿವೆ. ಕಿನ್‌ಕಾಪಿನ ಸೀರೆಗಳು ಬನಾರಸದ ಟಿಶ್ಯೂ ಸೀರೆಗಳು ಸುಂದರವಾಗಿರುತ್ತವೆ. ಈ ಸೀರೆಗಳ ಅಪೂರ್ವವಾದ ಮಾದರಿಗಳು ಬಣ್ಣದ ಸಂಯೋಜನೆಯಿಂದ ಜರದ ಕುಸುರಿನ ಕೆಲಸದಿಂದ ಕೂಡಿರುತ್ತವೆ. ಭಾರತದ ಎಲ್ಲ ಪ್ರಾಂತಗಳಲ್ಲಿ ಮದುಮಗಳಿಗೆ ಬನಾರಸದ ಪೀತಾಂಬರವನ್ನು ಕೊಡುವ ಸಂಪ್ರದಾಯವುಂಟು. ಬನಾರಸದ ಮೀನಾಕರಿ ಕೆಲಸ ಹೆಂಗಳೆಯರಿಗೆ ಅಚ್ಚುಮೆಚ್ಚಿನದಾಗಿವೆ. ನಯನಮನೋಹರವಾದ ಆಕರ್ಷಕ ಬಣ್ಣದ ಜರದ ಸೀರೆಗಳನ್ನು ಪರದೇಶದ ಜನರೂ ಮೆಚ್ಚುತ್ತಾರೆ.

ವೇಷವೈವಿಧ್ಯ ಭಾರತಿ

ವಿಶಾಲವಾದ ಭಾರತದೇಶವನ್ನು ವೇಷವೈವಿಧ್ಯಭಾರತಿ ಎಂದೆನ್ನಬಹುದು. ಭಾರತದಲ್ಲಿ ಅನೇಕ ಭಾಷೆಗಳಿದ್ದಂತೆ, ಅನೇಕ ಬಗೆಯ ಉಡಿಗೆ ತೊಡಿಗೆಯನ್ನೂ ಕಾಣಬಹುದಾಗಿದೆ. ಒಂದೊಂದು ಪ್ರಾಂತದ ಜನ, ಒಂದೊಂದು ಜಾತಿಯ ಜನ, ಒಂದೊಂದು ಬಗೆಯಾಗಿ ಸೀರೆಯುಡುತ್ತಾರೆ. ಅಲ್ಲಲ್ಲಿಯ ಸೀರೆಯುಡುವ ಪದ್ಧತಿಯೂ ಸೀರೆ ನೇಯುವ ಪದ್ಧತಿಯೂ ಅಲ್ಲಲ್ಲಿಯ ಹವಾಮಾನವನ್ನೂ, ಸೃಷ್ಟಿ ಸೌಂದರ್ಯವನ್ನೂ, ಜನತೆಯ ಅಭಿರುಚಿಯನ್ನೂ ಅವಲಂಬಿಸಿ ಬೆಳೆದು ಬಂದಿವೆ. ದಕ್ಷಿಣದ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗಿನ ಅನಂತ ವೇಷ ಭೂಷಣಗಳನ್ನು ನಿರೀಕ್ಷಿಸಿದರೆ ನಮಗೆ ವೇಷವೈವಿಧ್ಯ ಭಾರತಿಯ ದರ್ಶನವಾಗುತ್ತದೆ.

ದಕ್ಷಿಣದ ಕೇರಳ ತಿರುವಾಂಕೂರುಗಳಲ್ಲಿ ಬಿಸಿಲು ಹೆಚ್ಚು. ಆದಕಾರಣ ಅಲ್ಲಿಯ ಮಹಿಳೆಯರು ಯಾವಾಗಲೂ ಬಿಳಿಯ ಸೀರೆಯನ್ನೇ ಉಡುತ್ತಾರೆ. ಕೆಲವರು ಸೀರೆಯ ಸೆರಗನ್ನು ಹೊದೆಯುವುದಿಲ್ಲ. ಸೊಂಟದಿಂದ ಪಾದದವರೆಗೆ ಸೀರೆಯುಟ್ಟು ಎದೆಕಟ್ಟನ್ನು ಕಟ್ಟಿಕೊಳ್ಳುತ್ತಾರೆ. ಕೆಲವರು ಮೈತುಂಬ ಸೀರೆಯುಟ್ಟು ಸೆರಗು ಹೊದೆಯುತ್ತಾರೆ.

ತಮಿಳು ತೆಲಗು ಮಹಿಳೆಯರು ಬಣ್ಣ ಬಣ್ಣದ ರೇಶಿಮೆ ಸೀರೆಗಳನ್ನು ಉಡುತ್ತಾರೆ. ಕೆಲವರು ನಿರಿಗೆ ಮಾಡಿ ಸೀರೆಯುಟ್ಟು, ಹೆಗಲಮೇಲೆ ಸೆರಗನ್ನು ಹೊದೆಯುತ್ತಾರೆ. ಈ ಭಾಗದಲ್ಲಿ ಬಿಸಿಲು ಹೆಚ್ಚಾಗಿರುವುದರಿಂದ ದೇಹಕ್ಕೆ ತಂಪನ್ನೀಯುವ ರೇಶಿಮೆ ಸೀರೆಗಳನ್ನೇ ಇಲ್ಲಿಯ ಮಹಿಳೆಯರು ಉಡುವುದು ಹೆಚ್ಚು.

ಕರ್ನಾಟಕದ ಹವೆಯು ಸಮಶೀತೋಷ್ಣ. ಆದಕಾರಣ ಇಲ್ಲಿಯ ಮಹಿಳೆಯರು ನೂಲು ರೇಶಿಮೆಯನ್ನು ಕೂಡಿಸಿ ನೆಯ್ದ ಇಳಕಲ್ಲು ಮತ್ತು ಗದುಗಿನ ಸೀರೆಗಳನ್ನು ನಿರಿಗೆ ಮಾಡಿ ಉಟ್ಟುಕೊಂಡು ತಲೆಯ ಮೇಲೆ ಸೆರಗು ಹೊದೆಯುತ್ತಾರೆ. ಕೆಲವರು ಹದಿನೆಂಟು ಮೊಳದ ಸೀರೆಗಳನ್ನು ಕಚ್ಚೆ ಹಾಕಿ ಉಟ್ಟುಕೊಂಡು ಹೆಗಲ ಮೇಲೆ, ಇಲ್ಲವೆ ತಲೆಯ ಮೇಲೆ ಸೆರಗನ್ನು ಹೊದೆಯುತ್ತಾರೆ.

ಗುಜರಾಥದ ಮಹಿಳೆಯರು ವಾಯಿಲ್ ಸೀರೆಗಳನ್ನು ಹೆಚ್ಚಾಗಿ ಉಡುತ್ತಾರೆ. ಕೆಲವರು ನಿರಿಗೆ ಮಾಡಿ ಉಟ್ಟುಕೊಂಡು ಎಡಭಾಗಕ್ಕೆ ಸೆರಗು ಹೊದೆಯುತ್ತಾರೆ. ಎಲ್ಲರೂ ಎಡಭಾಗಕ್ಕೇ ಸೆರಗು ಹೊದೆಯುವುದೇ ಇಲ್ಲಿಯ ರೂಢಿ. ಸಂಯುಕ್ತ ಪ್ರಾಂತದಲ್ಲಿ ನಿರಿಗೆ ಮಾಡಿ ಸೀರೆಯನ್ನುಟ್ಟು ತಲೆಯ ಮೇಲೆ ಸೆರಗನ್ನು ಹೊರುತ್ತಾರೆ. ಬಿಳಿ ರೇಶಿಮೆಯಿಂದ ಹೆಣೆದ ಬಿಳಿ ಸೀರೆಗಳು ಹೆಚ್ಚಾಗಿ ಬಳಕೆಯಲ್ಲಿವೆ.

ಉತ್ತರ ಭಾರತದಲ್ಲಿ ಮುಸಲ್ಮಾನರ ಪ್ರಭಾವದಿಂದಲೂ ಅಲ್ಲಿ ಹೆಚ್ಚು ಚಳಿ ಇರುವುದರಿಂದಲೂ ಸೀರೆಗಿಂತ ಪಾಯಿಜಾಮ, ಸಲವಾರ ಕಮೀಜಗಳನ್ನು ಧರಿಸಿ ಮೇಲೊಂದು ದುಪ್ಪಟ್ಟಿಯನ್ನು ಹೊದೆಯುವರು. ನೇಪಾಳ, ಭೂತಾನ ಹಾಗೂ ಹಿಮಾಲಯದ ಪರ್ವತಾವಳಿಯ ಮಹಿಳೆಯರು ತಮ್ಮ ಉಡುಪಿನ ಮೇಲೆ ಉದ್ದವಾದ ಕೋಟನ್ನು ಧರಿಸುವರು.

ಬಂಗಾಲದ ಮಹಿಳೆಯರು ನಿರಿಗೆಯನ್ನು ಮಾಡದೆ ಎಡಕ್ಕೊಮ್ಮೆ ಬಲಕೊಮ್ಮೆ ಸೀರೆಯ ಅಂಚನ್ನು ಸಿಕ್ಕಿಸಿ ಬಲಗೈ ಕೆಳಭಾಗದಿಂದ ಎಡಗಡೆಯ ಭುಜದ ಮೇಲೆ ಸೆರಗನ್ನು ಹೊದೆಯುತ್ತಾರೆ. ಆ ಸೆರಗು ಕೆಳಗೆ ಸರಿಯಬಾರದೆಂದು ದೊಡ್ಡ ದೊಡ್ಡ ಕೀಲಿಯಕೈ-ಗೊಂಚಲನ್ನು ಸೆರಗಿನ ತುದಿಗೆ ಕಟ್ಟಿಕೊಳ್ಳುವ ರೂಢಿ ಬಂಗಾಲದ ಮಹಿಳೆಯರಲ್ಲುಂಟು. ಅಲ್ಲಿಯ ಹವೆ ಹೆಚ್ಚು ಉಷ್ಣವಾಗಿರುವುದರಿಂದ ಬಿಳಿಯ ಸೀರೆಗಳನ್ನೇ ಹೆಚ್ಚಾಗಿ ಉಡುತ್ತಾರೆ.

ರಾಜಸ್ಥಾನದ ಮಹಿಳೆಯರು ಬಹಳ ನಿರಿಗೆಯುಳ್ಳ ಗಗ್ಗರಿಗಳನ್ನು ತೊಟ್ಟು, ಬಣ್ಣ ಬಣ್ಣದ ಕುಪ್ಪಸ ತೊಟ್ಟುಕೊಂಡು, ಮೇಲೊಂದು ದುಪ್ಪಟಿಯನ್ನು ಹೊದೆಯುತ್ತಾರೆ. ರೇಶಿಮೆಯ ಹೆಣಿಗೆಯ ಬಟ್ಟೆಗಳನ್ನು ಕನ್ನಡಿ ಕೂಡಿಸಿ ಹೆಣೆದ ಗಗ್ಗರಿಗಳನ್ನೂ ಧರಿಸುತ್ತಾರೆ. ಭಾರತದಲ್ಲಿಯೇ ಹೆಚ್ಚು ಬಣ್ಣ ಬಣ್ಣದ ಬಟ್ಟೆಗಳನ್ನು ಧರಿಸುವವರೆಂದರೆ ರಾಜಸ್ಥಾನದ ಮಹಿಳೆಯರು.

ಅಸಾಮ, ಮಲಬಾರ, ನೀಲಗಿರಿಗಳ ಮಹಿಳೆಯರು ಒಂದೇ ಬಟ್ಟೆಯನ್ನು ಕುತ್ತಿಗೆಯಿಂದ ಪಾದದವರೆಗೆ ಉಡುತ್ತಾರೆ. ಮಲಬಾರ, ನೀಲಗಿರಿಗಳ ಜನರು ನೂಲಿನ ಬಿಳಿ ಸೀರೆಗಳನ್ನೂ, ಅಸ್ಸಾಮದ ಮಹಿಳೆಯರು ರೇಶಿಮೆ ಸೀರೆಗಳನ್ನೂ ಉಡುವುದುಂಟು. ಕುಪ್ಪಸತೊಡುವ ರೂಢಿ ಕಡಿಮೆ. ಇತ್ತೀಚಿಗೆ ಎಲ್ಲ ಮಹಿಳೆಯರೂ ಕುಪ್ಪಸ ತೊಡುತ್ತಿದ್ದಾರೆ.

ಸೀರೆಯ ಸೊಬಗು

ವಿಶಾಲ ಭಾರತದಲ್ಲಿ ಅನೇಕ ಶತಮಾನಗಳಿಂದ ವೇಷವೈವಿಧ್ಯವು ಕಂಡು ಬಂದಿದೆ. ಸ್ವತಂತ್ರ ಭಾರತದಲ್ಲಿ ವೇಷವೈವಿಧ್ಯ ಕಡಿಮೆಯಾಗಿ ಭಾರತದ ಮಹಿಳೆಯರ ರಾಷ್ಟ್ರೀಯ ಉಡುಪು ಬಿಳಿಯ ಸೀರೆಯೇನೋ ಎನ್ನುವಂತಾಗಿದೆ. ಇಂದು ಅಖಂಡ ಭಾರತದ ಮಹಿಳೆಯರು ಹತ್ತು ಇಲ್ಲವೆ ಹನ್ನೆರಡು ಮೊಳದ ಸೀರೆಗಳನ್ನು ನಿರಿಗೆ ಮಾಡಿ ಉಟ್ಟುಕೊಂಡು ಹೆಗಲ ಮೇಲೆ ಸೆರಗನ್ನು ಹೊದೆಯುತ್ತಾರೆ. ಇದುವರೆಗೆ ಮಹಿಳೆಯರು ಉಡುತ್ತಿದ್ದ ಸೀರೆಗಳು ಅವರ ಪ್ರಾಂತ ಅವರ ಮತಗಳನ್ನು ಎತ್ತಿ ತೋರುತ್ತಿದ್ದವು. ಭಾರತ ಸ್ವತಂತ್ರವಾದ ಮೇಲೆ ಆ ಭೇದಗಳೆಲ್ಲ ಮರೆಯಾಗುತ್ತಲಿವೆ. ಎಲ್ಲ ಪ್ರಾಂತದ ಮಹಿಳೆಯರು ಒಂದೇ ಬಗೆಯಾಗಿ ಸೀರೆಗಳನ್ನು ಉಡುವುದು ಸರ್ವಸಾಮಾನ್ಯವಾಗುತ್ತಿದೆ.

ಭಾರತೀಯ ಮಹಿಳೆಯರಿಗೆ ನಿತ್ಯದ ಉಪಯೋಗಕ್ಕೆ ಹಾಗೂ ವಿಶೇಷ ಸಂದರ್ಭಗಳಿಗೆ ಅನೇಕ ಬಗೆಯ ಬಟ್ಟೆಗಳು ಬೇಕಾಗುತ್ತವೆ. ಬೇಸಿಗೆ ಕಾಲದಲ್ಲಿ, ಮಳೆಗಾಲದಲ್ಲಿ, ಚಳಿಗಾಲದಲ್ಲಿ ಬೇರೆ ಬೇರೆ ತರಹದ ಬಟ್ಟೆಗಳ ಅವಶ್ಯಕತೆಯಿದೆ. ಮೊದಲಿನ ಕಾಲದಲ್ಲಿ ಯಂತ್ರಸಾಮಗ್ರಿಗಳಿಂದ ಬಟ್ಟೆಗಳು ಸಿದ್ಧವಾಗುತ್ತಿರಲಿಲ್ಲ. ಆಗಿನ ಮಹಿಳೆಯರು ಮನೆಯಲ್ಲಿಯೇ ನೂಲುತ್ತಿದ್ದರು. ನೂತ ನೂಲಿನಿಂದಲೇ ಮನೆಯ ಜನರಿಗೆ ಆವಶ್ಯಕವಾದ ಬಟ್ಟೆಗಳು ಸಿದ್ಧಗೊಳ್ಳುತ್ತಲಿದ್ದವು. ಆದರಿಂದಾಗಿ ಅವರು ವಸ್ತ್ರ ಸ್ವಾವಲಂಬಿಗಳಾಗಿದ್ದಂತೆ, ಮಿತವಸ್ತ್ರಧಾರಿಗಳೂ ಆಗಿದ್ದರು.

ದಿನ ಬಳಕೆಯ ಸೀರೆಗಳು

ಇತ್ತೀಚೆಗೆ ಭಾರತದಲ್ಲಿ ಸಾವಿರಾರು ಬಗೆಯ ಸೀರೆಗಳು ಸಿದ್ಧವಾಗುತ್ತಲಿವೆ. ದಿನ ಬಳಕೆಯ ಸೀರೆಗಳು, ವಿಶೇಷ ಸಂದರ್ಭಗಳಲ್ಲಿ ಉಟ್ಟುಕೊಳ್ಳುವ ಹೆಚ್ಚಿನ ಬೆಲೆಯ ಸೀರೆಗಳು ನಮ್ಮ ರೂಢಿಯಲ್ಲಿವೆ. ದೇಶದ ಹವಾಮಾನ, ಆ ಭಾಗದಲ್ಲಿ ದೊರೆಯಬಹುದಾದಂಥ ನೂಲು, ರೇಶಿಮೆಯ ಸೀರೆಗಳನ್ನು ಮಹಿಳೆಯರು ಉಪಯೋಗಿಸಬೇಕಾಗುತ್ತದೆ. ಸಂದರ್ಭಾನುಸಾರವಾಗಿ ಕಾಲಕ್ಕೆ ತಕ್ಕಂತಹ ಬಟ್ಟೆ ಧರಿಸುವುದೂ ಒಂದು ಕಲೆಯಾಗಿದೆ.

ಮಳೆಗಾಲ - ಚಳಿಗಾಲಗಳಲ್ಲಿ ನೂಲಿನ ಕೈಮಗ್ಗದ ಸೀರೆಗಳು, ಇಳಕಲ್ಲ, ಗದಗಿನ ಸೀರೆಗಳು ಹಿತಕರವೆನಿಸುತ್ತವೆ. ನೂಲಿನ, ದಪ್ಪ ಸೀರೆಗಳಿಂದ ಚಳಿಯನ್ನು ತಡೆದುಕೊಳ್ಳಬಹುದು. ಕರಿಯ ಬಣ್ಣ ಹಾಗೂ ಕೆಂಪು, ನೀಲಿ ಬಣ್ಣಗಳು ಯಾವಾಗಲೂ ಬೆಚ್ಚಗೆನಿಸುತ್ತವೆ. ಮಳೆಗಾಲ ಚಳಿಗಾಲಗಳಲ್ಲಿ ಬಣ್ಣದ ಸೀರೆಗಳನ್ನು ಉಡುವುದು ಯೋಗ್ಯ. ಬೇಸಿಗೆ ಕಾಲದಲ್ಲಿ ತಂಪನ್ನೀಯುವ ಬಿಳಿಯ ಬಣ್ಣದ ಸೀರೆಗಳೂ ತಿಳಿಬಣ್ಣದ ಸೀರೆಗಳೂ ಯೋಗ್ಯ.

ಇಂದಿನ ಮಹಿಳೆಯರಿಗೆ ದಿನ ಬಳಕೆಯ ಸೀರೆಗಳು ಆಕರ್ಷಕವಾಗಿದ್ದು ಬಾಳಿಕೆ ಬರುವಂತಹವಿರಬೇಕು ಎಂದು ಅನಿಸುತ್ತದೆ. ದಿನ ಬಳಕೆಗೆ ಹೈದರಾಬಾದ್ ಮಥುರಾ, ನಾಗಪುರ, ಶಹಪುರ, ಇಳಕಲ್ಲ, ವೆಂಕಟಗಿರಿ, ಶಾಂತಿಪುರಿ ಸೀರೆಗಳು ಯೋಗ್ಯವೆನಿಸುತ್ತವೆ.

ವಿಶೇಷ ಸಂದರ್ಭಗಳಲ್ಲಿ ಉಟ್ಟುಕೊಳ್ಳಲು, ಕಾಶ್ಮೀರ ರೇಷ್ಮೆ, ಮುರ್ಶಿದಾಬಾದ್ ರೇಷ್ಮೆ, ಬನಾರಸದ ಜರದ ಸೀರೆಗಳು, ಗುಜರಾಥದ ಪಟೋಲಾ, ಚಂದೇರಿ, ಮಹೇಶ್ವರಿ ಸೀರೆಗಳು, ಮೈಸೂರು ಕ್ರೇಪ್‌ಸಿಲ್ಕ್, ಜಾರ್ಜೆಟ್, ಕಾಂಜೀವರಂ ಸೀರೆಗಳು ಒಪ್ಪುತ್ತವೆ. ಈ ಸೀರೆಗಳು ಕಲಾಪೂರ್ಣವಾಗಿರುತ್ತವೆ, ಹೆಚ್ಚಿನ ಬೆಲೆಯವಾಗಿವೆ.

ಆಧುನಿಕ ಯುವತಿಯು ಹೆಚ್ಚಿನ ಬೆಲೆಯ ಸೀರೆಯ ಪ್ರದರ್ಶನವನ್ನು ಇಚ್ಛಿಸುವುದಿಲ್ಲ. ಕಡಿಮೆ ಬೆಲೆಯ ಸೀರೆಗಳನ್ನು ಆಕರ್ಷಕವಾಗಿ ಉಡಬಹುದೆಂದು ಅಭಿಮಾನಪಟ್ಟುಕೊಳ್ಳುತ್ತಾಳೆ. ಹೆಚ್ಚಿನ ಬೆಲೆಯ ಸೀರೆ ಉಡುವುದರಿಂದ ಸೌಂದರ್ಯವರ್ಧನೆಯಾಗುವುದಿಲ್ಲ. ಬಣ್ಣಕ್ಕೆ ಗಾತ್ರಕ್ಕೆ ವಯಸ್ಸಿಗೆ ಒಪ್ಪುವಂತಹ ಸೀರೆಗಳನ್ನುಟ್ಟು ದೇಹದ ಅಳತೆಗೆ ಸರಿಯಾಗುವ ಕುಪ್ಪಸ ತೊಟ್ಟರೆ ಸುಂದರವಾಗಿ ಕಾಣಿಸುತ್ತದೆ.

ಸೀರೆಗಳ ಆಯ್ಕೆ

ಬಟ್ಟೆಗಳನ್ನು ಕೊಳ್ಳುವಾಗ ಮೂರು ಹೊತ್ತಿಗೆ ಒಪ್ಪುವಂತೆ ಬಟ್ಟೆಗಳನ್ನು ಆರಿಸಬೇಕು. ಅವುಗಳಲ್ಲಿ ಬೆಳಗ್ಗೆ, ಮಧ್ಯಾಹ್ನ ಹಾಗು ಸಾಯಂಕಾಲ, ರಾತ್ರಿ

ಧರಿಸುವ ಬಟ್ಟೆಗಳ ವಿಭಾಗ ಮಾಡಬೇಕು. ಬೆಳಗಿನ ಹೊತ್ತಿಗೆ ಬಿಳಿ ಬಣ್ಣ ತಿಳಿಬಣ್ಣಗಳ ನೂಲಿನ ಹಾಗೂ ರೇಶಿಮೆ ಸೀರೆಗಳು ಸೂರ್ಯೋದಯದ ಎಳೆ ಬಿಸಿಲಿಗೆ ಅಂದವಾಗಿ ಕಾಣಿಸುತ್ತವೆ. ಮಧ್ಯಾಹ್ನದ ವೇಳೆಗೆ ರೇಶಿಮೆ, ಜಾರ್ಜೆಟ್, ಇಳಕಲ್ಲ, ಸೀರೆಗಳು ಒಪ್ಪುತ್ತವೆ. ಸಾಯಂಕಾಲ ಹಾಗು ರಾತ್ರಿಯ ವೇಳೆಗೆ ಶಿಫಾನ್, ನೈಲಾನ್ ಸೀರೆಗಳೂ ಹೆಚ್ಚು ಬಣ್ಣದ ದೊಡ್ಡ ಜರದಂಚಿನ ಇಲ್ಲವೆ ಜರದ ಚೌಕಮನೆಯ ಸೀರೆಗಳು ಸುಂದರವಾಗಿ ಕಾಣಿಸುತ್ತವೆ.

ದೇಹದ ಬಣ್ಣಕ್ಕೆ ಒಪ್ಪುವ ಸೀರೆಗಳನ್ನಾಯ್ದುಕೊಳ್ಳುವದೂ ಒಂದು ಕಲೆಯಾಗಿದೆ. ದೇಹದ ಬಣ್ಣ ಕಪ್ಪಗಿದ್ದವರು ಶುಭ್ರವಾದ ಬಿಳಿಯ ಸೀರೆಗಳನ್ನುಟ್ಟರೆ ಒಪ್ಪಲಾರದು. ಬಿಳಿಯ ಸೀರೆಯಿಂದ ದೇಹದ ಕಪ್ಪು ಬಣ್ಣ ಇನ್ನಿಷ್ಟು ಎದ್ದುಕಾಣಿಸುತ್ತದೆ. ಬಹಳ ಕಪ್ಪುಬಣ್ಣದವರು ಕಪ್ಪು ಬಣ್ಣದ ಸೀರೆಗಳನ್ನು ಉಡಬಾರದು. ಕಪ್ಪುಬಣ್ಣದವರಿಗೆ ಆಕಾಶಬಣ್ಣ, ಲಿಂಬಿ ಹಣ್ಣಿನ ಬಣ್ಣ, ಬಿಳಿಬಣ್ಣದವರಿಗೆ ಕಪ್ಪುಬಣ್ಣದ ಸೀರೆಗಳೂ ಕೆಂಪು, ನೀಲಿ, ಹಸಿರು, ಹಳದಿ ಮೊದಲಾದ ದಟ್ಟಬಣ್ಣದ ಸೀರೆಗಳೂ ಶೋಭಿಸುತ್ತವೆ. ಗೋಧಿಕೆಂಪು ಬಣ್ಣದವರು ಬಿಳಿ ಸೀರೆಗಳನ್ನೂ ತಿಳಿಬಣ್ಣದ ಸೀರೆಗಳನ್ನು ಉಟ್ಟುಕೊಳ್ಳುವದು ಯೋಗ್ಯ. ಅಂಥವರಿಗೆ ತಿಳಿ ಜಾಂಬಳಿ ಬಣ್ಣದ ಸೀರೆಗಳೂ ಎಲ್ಲ ತಿಳಿಬಣ್ಣದ ಸೀರೆಗಳೂ ಚೆಂದಕಾಣುತ್ತವೆ.

ಫ್ಯಾಶನ್ನುಗಳ ಬದಲಾವಣೆ

ಇತ್ತೀಚೆಗೆ ನಮ್ಮ ಮಹಿಳೆಯರ ಸೀರೆ, ಕುಪ್ಪುಸಗಳ ಪ್ಯಾಶನ್ನಿನಲ್ಲಿ ಬಹಳ ಬದಲಾವಣೆಯಾಗುತ್ತಲಿದೆ. ಬಣ್ಣಗಳ ಹೊಂದಿಕೆಯಲ್ಲಿ, ಸೀರೆಯ ನಿರಿಗೆಯಲ್ಲಿ, ಸೆರಗಿನ ಉದ್ದಳತೆಯಲ್ಲಿ, ಕುಪ್ಪಸಗಳ ತೋಳು, ಕುತ್ತಿಗೆಗಳಲ್ಲಿ ಬಹಳ ಬದಲಾವಣೆ ನಡೆದಿದೆ.

ಮೂವತ್ತು ವರ್ಷಗಳ ಹಿಂದೆ ಸಣ್ಣ ಅಂಚಿನ ಸೀರೆ ಫ್ಯಾಷನ್ ಆಗಿತ್ತು. ಕುಪ್ಪಸದ ತೋಳು ಮೊಳಕೈವರೆಗೆ, ಮುಂಗೈವರೆಗೆ ಇರುತ್ತಿದ್ದವು. ಕುತ್ತಿಗೆಯ ಸುತ್ತಲೂ ಲೇಸನ್ನು ಇಲ್ಲವೆ ನಿರಿಗೆಯನ್ನು ಹಚ್ಚುವದು ಫ್ಯಾಶನ್ ಆಗಿತ್ತು. ಇಪ್ಪತ್ತು ವರ್ಷಗಳ ಹಿಂದೆ ದೊಡ್ಡ ದೊಡ್ಡ ಜರದ ಅಂಚಿನ ಸೀರೆಗಳು, ಬನಾರಸದ ಸುಳಹು

ಹೊಳಹಿನ ಸೀರೆಗಳು, ಇಂದೂರ ಸೀರೆಗಳು, ವಿವಿಧ ಬಗೆಯ ಲೇಸ್‌ಗಳನ್ನು ಹಚ್ಚಿದ ಸೀರೆಗಳು, ತೋಳಿಲ್ಲದ ಕುಪ್ಪಸದ ಫ್ಯಾಷನ್ ಇತ್ತು. ಅಂಚು ದೊಡ್ಡದಿದ್ದಷ್ಟು, ಜರಿ ಹೆಚ್ಚಗಿದ್ದಷ್ಟು ಸೀರೆಗಳು ಅಂದವಾಗಿ ಕಾಣುತ್ತವೆಂಬ ಭಾವನೆ ಅಂದಿನ ಯುವತಿಯರಿಗಿತ್ತು. ಕುಸರಿನ ಕೆಲಸದ ದೊಡ್ಡ ಸೆರಗು ಬಹಳ ಜನಪ್ರಿಯವಾಗಿತ್ತು. ಆದರೆ ಫ್ಯಾಶನ್ ತ್ವರಿತಗತಿಯಿಂದ ಬದಲಾಗುತ್ತಲಿದೆ. ಇಂದು ಕಣ್ಣಿಗೆ ಅಂದ ಕಂಡದ್ದು ನಾಳೆ ಕಾಣಲಾರದು. ಇದರಿಂದಾಗಿ ದಿನಕ್ಕೊಂದು ಬಗೆಯ ಸೀರೆಗಳು ಪ್ರಚಾರದಲ್ಲಿ ಬರುತ್ತಲಿವೆ.

ನಮ್ಮ ಸೋದರಿಯರು ನಾಲ್ಕಾರು ವರ್ಷಗಳಿಂದ ಯಾವ ಬಣ್ಣದ ಸೀರೆಯನ್ನುಡುತ್ತಿದ್ದರೋ ಅದೇ ಬಣ್ಣದ ಕುಪ್ಪಸ ತೊಡುವುದು ಫ್ಯಾಶನ್ ಎಂದು ತಿಳಿದಿದ್ದರು. ಅಂಚು, ಸೆರಗುಗಳಿಂದ ಸಾದಾ ಸೀರೆಗಳೇ ಫ್ಯಾಶನ್ ಆಗಿದ್ದವು. ಉಡಿಗೆಯಲ್ಲಿ ಆಸ್ಥೆಯುಳ್ಳ ಮಹಿಳೆಯರು ಒಂದೇ ಬಣ್ಣದ ಸೀರೆ, ಕುಪ್ಪಸವನ್ನು ಧರಿಸುತ್ತಿದ್ದರು. ಇತ್ತೀಚೆಗೆ ಪರಸ್ಪರ ವಿರೋಧ ಬಣ್ಣಗಳ ಸೀರೆ ಕುಪ್ಪಸಗಳನ್ನು ಧರಿಸುವ ಫ್ಯಾಶನ್ ಮೆಚ್ಚಿಕೆ ಪಡೆಯುತ್ತಿದೆ. ಬಣ್ಣಗಳ ಹೊಂದಿಕೆಯಲ್ಲಿ ಸಾಮರಸ್ಯವನ್ನು ತೋರುವ ಕಲೆಯಲ್ಲಿ ಭಾರತೀಯರು ಬಲ್ಲಿದರಾಗಿದ್ದಾರೆ.

ದೊಡ್ಡ ಸೆರಗು, ಸುಳುಹು ಹೊಳಹಿನ ಸೆರಗುಗಳುಳ್ಳ, ದೊಡ್ಡ ದೊಡ್ಡ ಅಂಚಿನ ಸೀರೆಗಳು ಈಗ ಮಹಿಳೆಯರ ಮನವನ್ನಾಕರ್ಷಿಸಿವೆ. ಪರಸ್ಪರ ವಿರೋಧ ಬಣ್ಣಗಳುಳ್ಳ ಸೀರೆ ಕುಪ್ಪಸಗಳನ್ನು ಇಂದಿನ ಸೋದರಿಯರು ಉಪಯೋಗಿಸುತ್ತಾರೆ. ಕೆಂಪು ಅಂಚು ಕೆಂಪು ಸೆರಗುಳ್ಳ ಬಿಳೀ ಸೀರೆಯನ್ನುಟ್ಟರೆ, ಕೆಂಪು ಬಣ್ಣದ ಕುಪ್ಪಸ ತೊಡುವುದು ಈಗ ವಾಡಿಕೆಯಾಗಿದೆ. ಬಿಳಿಯ ಸೀರೆಗೆ ಹಸಿರು ಬಣ್ಣದ ಅಂಚು ಸೆರಗುಗಳಿದ್ದರೆ, ಹಸಿರು ಕುಪ್ಪಸ ತೊಡುವುದುಂಟು. ಸೀರೆಗೆ ಒಳಮೈ ಕೆಂಪು ಬಣ್ಣದಿದ್ದರೆ, ಹಳದಿ ಕುಪ್ಪಸವನ್ನೂ ಜಾಂಬಳಿ ಬಣ್ಣದ ಸೀರೆಗೆ ಬಿಳಿ ಬಣ್ಣದ ಕುಪ್ಪಸವನ್ನೂ ತೊಡುತ್ತಾರೆ. ಕೆಂಪು ಹಳದಿ, ಹಸಿರು ಹಳದಿ, ಬಿಳಿ ಕೆಂಪು, ನೀಲಿ ಹಸಿರು, ಬಿಳಿ ಹಸಿರು, ಬಿಳಿನೀಲಿ, ಬದಾಮಬಣ್ಣ, ಕಪ್ಪುಬಣ್ಣ - ಈ ರೀತಿಯಾದ ವಿರೋಧ ಬಣ್ಣಗಳನ್ನು ಒಟ್ಟುಗೂಡಿಸುವುದು ಇಂದಿನ ಕಲೆಯಾಗಿದೆ. ಬಿಳಿ ಬಣ್ಣದ ಸೀರೆಗೆ ಎಲ್ಲ ಬಗೆಯ ದಟ್ಟ ಬಣ್ಣದ ಕುಪ್ಪಸಗಳು ಹೊಂದಿಕೆಯಾಗುತ್ತವೆ. ಬಿಳಿಬಣ್ಣದ ನೂಲಿನ ಸೀರೆಗೆ ಗುಳೇದಗುಡ್ಡದ ದೊಡ್ಡ ಅಂಚಿನ ಖಣದ ಕುಪ್ಪಸ ಒಪ್ಪುತ್ತದೆ. ಬಿಳಿ ರೇಶಿಮೆ ಸೀರೆಗೆ ದೊಡ್ಡ ಜರದಂಚಿನ ಜರದ ಚೌಕಮನೆಗಳಿರುವ

ರಮಾಮಣಿ ಖಣ ಒಪ್ಪುತ್ತದೆ. ಬಿಳಿ ಬಣ್ಣದ ಕುಪ್ಪಸ ಎಲ್ಲ ಬಣ್ಣದ ಸೀರೆಗಳಿಗೂ ಹೊಂದಿಕೆಯಾಗುತ್ತದೆ.

ಕೈಮಗ್ಗದ ಸೀರೆಗಳ ಜನಪ್ರಿಯತೆ

ಇತ್ತೀಚೆಗೆ ನಮ್ಮ ಮಹಿಳೆಯರು ಐದು ಇಲ್ಲವೆ ಆರು ಗಜದ ಸೀರೆಗಳನ್ನು ಉಡುತ್ತಿದ್ದಾರೆ. ಸಾದಾ ಸೀರೆಗಳು, ಕೈಮಗ್ಗದ ಕಸೂತಿ ಮಾದರಿಯ ಸೀರೆಗಳು ಜನಪ್ರಿಯವಾಗಿವೆ. ಸಾದಾ ಸೀರೆಗಳು ಇಂದು ಜನಸಾಮಾನ್ಯರ ಮನವನ್ನು ಸೆಳೆದಿರುವಾಗ, ತಾಯಿಯ ಅಜ್ಜಿಯ ದೊಡ್ಡ ಜರದಂಚಿನ ಭಾರಿ ಸೀರೆಗಳು, ಲೇಸಿನ ಸೀರೆಗಳು ಪೆಟ್ಟಿಗೆಯಲ್ಲಿ ಹಾಗೇ ಉಳಿಯುವ ಕಾಲ ಬಂದಂತಾಗಿದೆ. ಇಂದಿನ ಯುವತಿಯರು ಆ ರೀತಿ ಹಳೇ ಸೀರೆಗಳನ್ನು ಪೆಟ್ಟಿಗೆಯಲ್ಲಿಟ್ಟು ಹುಳ ತಿನ್ನಲು ಬಿಡಲಾರರು. ಅಜ್ಜಿಯ ಸೀರೆಯ ಸುಂದರವಾದ ಜರದ ಅಂಚುಗಳನ್ನೂ ತಾಯಿಯ ಸೀರೆಯ ಲೇಸುಗಳನ್ನೂ ಕುಪ್ಪಸದ ತೋಳಿಗೆ ಹಚ್ಚಬಹುದು. ಅಂದವಾದ ಜರದ ಅಂಚುಗಳನ್ನು ತಿಳಿಬಣ್ಣದ ಜಾರ್ಜೆಟ್ ಸೀರೆಗೆ ಉದ್ದದ ಪಟ್ಟಿಯನ್ನು ನಿರಿಗೆಯ ಭಾಗದಲ್ಲಿ ಬರುವಂತೆ ಹಚ್ಚಿದರೆ ಶೋಭಿಸುತ್ತದೆ. ಕುಪ್ಪಸದ ಕೊರಳು ಇಂಗ್ಲೀಷ್ V ಆಕಾರದ್ದನ್ನಾಗಿ ಮಾಡಿ ಜರದಂಚನ್ನು ಕೊರಳಿಗೆ ಹಚ್ಚಬಹುದಾಗಿದೆ.

ಸಾದಾ ರೇಶಿಮೆ ಸೀರೆಗಳನ್ನು ಸಾಂಪ್ರದಾಯಿಕ ರೀತಿಯಲ್ಲಿ ಅಲಂಕರಿಸಬಹುದಾಗಿದೆ. ರೇಶಿಮೆ ಸೀರೆಯ ಒಂದು ಬದಿಗೆ ಒಂದೂವರೆ ಇಂಚಿನಷ್ಟು ಎಳೆ ತೆಗೆಯಬೇಕು. ಈ ಎಳೆ ತೆಗೆದ ಭಾಗದಲ್ಲಿ ನಾಲ್ಕಾರು ಎಳೆಗಳನ್ನು ಕೂಡಿಸಿ ಗಂಟುಹಾಕಬೇಕು. ಸಾಂಪ್ರದಾಯಿಕ ಚಿತ್ರವಾದ ಗೋಡಂಬಿ ಇಲ್ಲವೆ ನವಿಲು ಮೊದಲಾದವುಗಳನ್ನು ಸೆರಗಿನ ಎರಡೂ ಬದಿಗೆ ಹೊಂದಿಕೆಯಾಗುವ ರೇಶಿಮೆ ದಾರದಿಂದ ತುಂಬಿ, ಸಾದಾ ಸುಂದರವಾದ ಸೀರೆಯನ್ನು ಬಿಡುವಿನ ವೇಳೆಯಲ್ಲಿ ಸಿದ್ಧಗೊಳಿಸಬಹುದಾಗಿದೆ.

ಸೀರೆಗಳ ಕಸೂತಿ

ತಿಳಿಬಣ್ಣದ ಜಾರ್ಜೆಟ್, ಶಿಫಾನ್ ಸೀರೆಗಳಿಗೆ ಕೈಯಿಂದ ಅಂದವಾಗಿ ಪೇಂಟ್ ಮಾಡಬಹುದು. ಎಲೆ, ಹೂಬಳ್ಳಿಗಳನ್ನು ಬಣ್ಣ ಬಣ್ಣದ ಪಾತರಗಿತ್ತಿಗಳನ್ನೂ ಸೀರೆಯ ಅಂಚಿಗೆ ಪೇಂಟ್ ಮಾಡಿ ನೋಡಬೇಕು. ಅದರ ಅಂದವನ್ನು ಬಿಳಿ ಬಣ್ಣದ ವಾಯಿಲ್ ಹಾಗೂ ಆರ್‌ಗಂಡಿ ಬಟ್ಟೆಗೆ ಹೆಣೆಗೆಯಿಂದ

ಅಂಚು, ಸೆರಗುಗಳನ್ನು ಸಿದ್ಧಗೊಳಿಸಬಹುದು. ಒಂದು ಇಲ್ಲವೆ ಒಂದೂವರೆ ಮೊಳ ಕೆಂಪು, ಹಸಿರು ಇಲ್ಲವೆ ನೀಲಿ ಬಣ್ಣದ ಸಾದಾ ರೇಶಿಮೆ ಬಟ್ಟೆಯನ್ನು ತೆಗೆದುಕೊಳ್ಳಬೇಕು. ಅದಕ್ಕೆ ಎರಡೂ ಬದಿಗೆ ನಯವಾದ ಹೆಣಿಗೆಯ ಹೂಬಳ್ಳಿಯನ್ನು ಸಿದ್ಧಗೊಳಿಸಿ ಮಧ್ಯದಲ್ಲಿ ಅಂದವಾದ ಗೋಡಂಬಿ ಇಲ್ಲವೆ ಸುಂದರವಾದ ರೇಖಾಚಿತ್ರಗಳನ್ನು ಕನ್ನಡಿ ಕೂಡಿಸಿ ಬಣ್ಣ ಬಣ್ಣದ ದಾರಗಳಿಂದ ಹೆಣೆಯಬೇಕು. ಕೆಳಭಾಗದಲ್ಲಿ ಒಂದೂವರೆ ಇಂಚಿನಷ್ಟು ಎಳೆ ತೆಗೆದು ಗಂಟುಹಾಕಿ ಸೆರಗನ್ನು ಸಿದ್ಧಗೊಳಿಸಬೇಕು. ತಮಗೆ ಬೇಕಾದ ತಿಳಿ ಬಣ್ಣದ ಜಾರ್ಜೆಟ್ ರೇಶ್ಮೆ ನೈಲಾನ್‌ಗಳಿಗೆ ಸಿದ್ಧಗೊಳಿಸಿದ ಸೆರಗನ್ನು ಹಚ್ಚಿದರೆ ಕಲಾಪೂರ್ಣವಾದ ಸೀರೆಯಾಗುತ್ತದೆ. ವಾಯಿಲ್ ಇಲ್ಲವೆ ಆರ್‌ಗಂಡಿ ಬಟ್ಟೆಗೆ ಅಂದವಾದ ಕರ್ನಾಟಕ ಕಸೂತಿಯನ್ನು ಹಾಕಿ ಸುಂದರವಾದ ಸೀರೆಗಳನ್ನು ಸಿದ್ಧಗೊಳಿಸಬಹುದು. ತಿಳಿಬಣ್ಣದ ಜಾರ್ಜೆಟ್ ಇಲ್ಲವೆ ನೈಲಾನ್, ಶಿಫಾನ್ ಬಟ್ಟೆಗಳಿಗೆ ಒಂದು ಇಲ್ಲವೆ ಒಂದೂವರೆ ಮೊಳ ಬನಾರಸದ ಸುಳುಹು ಹೊಳಹಿನ ಜರದ ಬಟ್ಟೆಯ ಸೆರಗನ್ನು ಹಚ್ಚಿದರೆ ಬಹಳ ಅಂದವಾಗಿ ಕಾಣಿಸುತ್ತದೆ.

ತಮ್ಮ ತಮ್ಮ ಮೈಯ ಬಣ್ಣಕ್ಕೆ, ಗಾತ್ರಕ್ಕೆ, ವಯಸ್ಸಿಗೆ ಸಂದರ್ಭಗಳಿಗೆ ಸರಿಯಾಗುವಂತೆ ಸೀರೆಯನ್ನುಟ್ಟರೆ ಸೀರೆಯ ಸೊಬಗು ತೋರಿಬರುತ್ತದೆ. ಉಡುವ ಸೀರೆ ಹೆಚ್ಚಿನ ಬೆಲೆಯವಿದ್ದರೆ ಸೌಂದರ್ಯವರ್ಧನೆಯಾಗಲಾರದು. ಸೌಂದರ್ಯಾಭಿವೃದ್ಧಿಯಾಗಬೇಕಾದರೆ ನಮ್ಮ ಉಡಿಗೆ ಯಾವಾಗಲೂ ಸ್ವಚ್ಛವಾಗಿರಬೇಕು. ತೆಳ್ಳಗಿನ ಸೀರೆಗಳಿದ್ದರೆ ಗಂಜಿ ಹಾಕುವ ಕಲೆಯನ್ನು ಅರಿತಿರಬೇಕು. ಎಲ್ಲ ಬಟ್ಟೆಗಳನ್ನು ಇಸ್ತ್ರೀ ತಿಕ್ಕಿ ಓರಣವಾಗಿ ಇಡಬೇಕು. ದೇಹದ ಕಾಂತಿಗೆ ಸೀರೆಯು ಸೊಬಗನ್ನೀಯಬೇಕಾದರೆ ಸೀರೆಗಳು ಅಂದವಾಗಿ ಸ್ವಚ್ಛವಾಗಿ ಓರಣವಾಗಿರಬೇಕು. ಅಲ್ಲದೆ "ಸಾದಾತನದಲ್ಲಿಯೆ, ಸೌಂದರ್ಯವಿದೆ" ಎಂಬ ಮಾತನ್ನು ಮರೆಯುವಂತಿಲ್ಲ. ಬಟ್ಟೆಗಳಿಂದ ಕುರೂಪಿ ಸುರೂಪಿಯಾಗಲಾರಳು. ಆದರೆ ಕುರೂಪಕ್ಕೆ ಒಂದು ಬಗೆಯ ಕಾಂತಿಯನ್ನು ತರಬಲ್ಲ ಶಕ್ತಿ ಸೀರೆಯ ಸೊಬಗಿನಲ್ಲಿದೆ.

ದೇಹರಕ್ಷಣೆಗೆ ಅವಶ್ಯಕವಾಗಿರುವ ಸೀರೆಯನ್ನು ಮಹಿಳೆಯರ ಅಭಿರುಚಿ ಹಾಗೂ ಕಲಾವಿದರ ಜಾಣ್ಮೆ ಇವುಗಳು ಹೇಗೆ ವೈವಿಧ್ಯವಾಗಿ ಸುಂದರವಾಗಿ ರೂಪುಗೊಳಿಸಿವೆಯೆಂಬುದನ್ನು ಇದುವರೆಗಿನ ವಿವೇಚನೆಯಿಂದ ಅರಿಯಬಹುದಾಗಿದೆ. ಬಹು ಪ್ರಾಚೀನ ಕಾಲದ ಸಂಪ್ರದಾಯವನ್ನು ಹೊಸಕಾಲದ ಒಲವಿಗನುಗುಣವಾಗಿ ಮಾರ್ಪಡಿಸಿಕೊಂಡ ಒಂದು ಉತ್ತಮ ನಿದರ್ಶನವು ಮಹಿಳೆಯರ ಉಡಿಗೆಯಲ್ಲಿ ನಮಗೆ ದೊರೆಯುತ್ತದೆ. ಮಹಿಳೆ ಹಳೆಯ ಸಂಪ್ರದಾಯವನ್ನು ಸಾಧಿಸಿ ಇಡಿಯ ಜಗತ್ತಿನ ಮಹಿಳೆಯರ ಗಮನವನ್ನು ಸೆಳೆಯುವಂಥ ಪ್ರಭಾವ ಭಾರತೀಯ ಸೀರೆಗೆ ದೊರೆತಿದೆಯೆಂಬುದು ನಿರ್ವಿವಾದದ ಮಾತಾಗಿದೆ. ಈ ದಿಸೆಯಲ್ಲಿ ಕರ್ನಾಟಕವು ಉತ್ತಮ ಕಾಣಿಕೆಯನ್ನು ಸಲ್ಲಿಸಿದೆ. ಸೀರೆಯಸೊಬಗು, ಆಭರಣಗಳ ಅಂದ, ಕೇಶಾಲಂಕಾರಗಳು ಮಹಿಳೆಯರ ಕಲಾಭಿರುಚಿಯ ದ್ಯೋತಕಗಳಾಗಿವೆ ಎಂಬ ಮಾತು ನಿಜ, ಆದರೆ ಮಹಿಳೆಯರ ಜೀವನದಲ್ಲಿ ಸೀರೆ, ಆಭರಣ, ಮುಡಿಯ ಅಲಂಕಾರಗಳೇ ಮುಖ್ಯವಲ್ಲ. 'ನಾರಿಗೆ ಗುಣವೇ ಶೃಂಗಾರ'' ಎಂಬ ಮಾತು ಗಮನಾರ್ಹವಾಗಿದೆ. ಈ ಮಾತನ್ನು ಮನಗಂಡು ಮಹಿಳೆ ಅಂತಹ ಗುಣಗಳನ್ನು ಬೆಳೆಸಿಕೊಳ್ಳಬೇಕಾದುದು ಆವಶ್ಯಕವಾಗಿದೆ.

ಕನ್ನಡದಲ್ಲಿ ಲೇಖಕ-ಪ್ರಕಾಶಕ-ಮಾರಾಟಗಾರ-ಓದುಗರ ನಡುವೆ ಗಾಢ ಸಂಬಂಧವನ್ನು ಏರ್ಪಡಿಸಿ, ಓದುಗರಲ್ಲಿ ಉತ್ತಮ ವಾಚನಾಭಿರುಚಿಯನ್ನು ಬೆಳೆಸಿ, ಓದುಗರಿಗೆ ಒಳ್ಳೆಯ ಪುಸ್ತಕಗಳು ಸುಲಭ ಬೆಲೆಯಲ್ಲಿ ದೊರೆಯುವಂತೆ ಮಾಡುವುದು, ಕನ್ನಡ ಪುಸ್ತಕೋದ್ಯಮವನ್ನು ಜನಪರವಾಗಿ ಬೆಳೆಸುವುದು-ಇದು ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಮುಖ ಧ್ಯೇಯೋದ್ದೇಶಗಳಲ್ಲಿ ಒಂದು. ಈಗಾಗಲೇ ಪ್ರಕಟವಾಗಿ ಮನ್ನಣೆಗಳಿಸಿ, ಈಗ ಲಭ್ಯವಿಲ್ಲದಿರುವ ಪುಸ್ತಕಗಳನ್ನು 'ಜನಪ್ರಿಯ ಪುಸ್ತಕ ಮಾಲೆ'ಯಲ್ಲಿ ಪ್ರಕಟಿಸಿ ಸುಲಭ ಬೆಲೆಗೆ ಪ್ರಾಧಿಕಾರವು ಓದುಗರ ಕೈಯಲ್ಲಿಡುತ್ತಿದೆ. ನಿನ್ನೆ-ಇಂದುಗಳ ನಡುವಣ ಒಂದು ಸೇತುವೆ 'ಜನಪ್ರಿಯ ಪುಸ್ತಕ ಮಾಲೆ'.